# ಯಂಡಮೂರಿ ವೀರೇಂದ್ರನಾಥ್

# ರಾಧಾ-ಕುಂತಿ



894-814 3
RAJ N88
ಗ್ರಂಥ ಸ್ವಾಮ್ಯ ವಿಭಾಗ

ಹದಿನೆಂಟನೇ ಪ್ರಕಟನೆ:

ಯಂಡಮೂರಿ ವೀರೇಂದ್ರನಾಥರ ಕಾದಂಬರಿ

# ಬೇಡ ಕೃಷ್ಣ ರಂಗಿನಾಟ

ಅನುವಾದ :

**ರಾಜಾ ಚೆಂಡೂರ್**

**ಸಾಹಿತ್ಯ ಪ್ರಕಾಶನ**

ಸಿಟಿ ಕ್ಲಿನಿಕ್ ಸಂಕೀರ್ಣ, ದಾಜೀಬಾನ್ ಪೇಟೆ

**ಹುಬ್ಬಳ್ಳಿ: ೫೮೦ ೦೨೮**

**ಸಾಹಿತ್ಯ ಪ್ರಕಾಶನ**
ಸಿಟಿ ಕ್ಲಿನಿಕ್ ಸಂಕೀರ್ಣ: **ದಾಜೀಬಾನ್ ಪೇಟೆ**
ಹುಬ್ಬಳ್ಳಿ: ೫೮೦ ೦೨೮

**ಸಂಪಾದನ-ಪ್ರಕಾಶನ:**
ಎಂ. ಎ. ಸುಬ್ರಹ್ಮಣ್ಯ

**ವಿಮರ್ಶೆ-ಮಾರ್ಗದರ್ಶನ:**
ಸರ್ವಶ್ರೀ ಮಲ್ಲೇಪುರಂ ಜಿ. ವೆಂಕಟೇಶ, ಬೆಂಗಳೂರು
" ಜಿ. ಜ್ಞಾನಾನಂದ, ಕೆ ಜ ಎಫ್
" ಎಂ. ಪದ್ಮನಾಭಯ್ಯ, ಧಾರವಾಡ

BEDA KRISHNA RANGINATA: Kannada Translation of Sri Yen
Veerendranath's Telugu novel Kongu Babu Krishnudu, by
Chendur; Published by Sahithya Prakashana, City Clinic C
Dajibanpet, Hubli 580 028

© ಶ್ರೀ ರಾಜಾ ಚೆಂಡೂರ್
ಮೊದಲನೆ ಮುದ್ರಣ: 1988 ಪುಟ: iv + 184 ಬೆಲೆ:
ಮುದ್ರಣ: ತ್ವರಿತ ಮುದ್ರಣ, ಗಂಗಾಪೂರ ಪೇಟೆ, ಗದಗ: 582 101

# ಮುನ್ನುಡಿ

ಶೇಕ್ಸ್‌ಪಿಯರ್ ಕಾಲದಿಂದ ಪ್ರಾರಂಭವಾದ ದ್ವಿಪಾತ್ರಕ್ಕೆ ವಿರಾಮ ನೀಡಿ, ಒಂದೇ ರೂಪದ ಮೂವರಿದ್ದರೆ– ಎಂಬ ಹೊಸ ಯೋಚನೆಗೆ ಶ್ರೀಕಾರ ಸುತ್ತಿ, ಆಗ ಎದುರಾಗುವ ಸನ್ನಿವೇಶಗಳು, ಹಾಸ್ಯ–ಗಾಂಭೀರ್ಯಗಳು, ಮುಜುಗರ, ಸರಸ–ವಿರಸಗಳು ಹೇಗೆ ಉದ್ಭವಿಸುತ್ತವೆಂದು ಊಹಿಸಿದ ಕಲ್ಪನಾ ಲೋಕವಿದು.

ಹೊಸತನ, ಹೊಸ ಪ್ರಯೋಗ, ಹೊಸ ಯೋಚನೆ, ಓದುಗರನ್ನು ಪ್ರತಿಕ್ಷಣವೂ ಕಚಗುಳಿಯಿರಿಸಿ ನಗುವಂತೆ ಮಾಡಿ ಜೊತೆಗೆ ಗಗನಸೀಮೆಗಳಲ್ಲಿ ವಿಹರಿಸುವಂತೆ ಮಾಡುವ ಒಂದು ಮಧುರ ಅನುಭವ.

ಯಂಡಮೂರಿ ವೀರೇಂದ್ರನಾಥರ ಈ ಹಾಸ್ಯ–ರಸಿಕತೆಯ ಕಾದಂಬರಿಯನ್ನು ಕನ್ನಡದ ಓದುಗರಿಗೆ ನೀಡಲು ಹೆಮ್ಮೆಯೆನಿಸುತ್ತದೆ. ಸಾಹಿತ್ಯ ಪ್ರಕಾಶನದ ಉತ್ಸಾಹಿ ತರುಣ ಶ್ರೀ ಸುಬ್ರಹ್ಮಣ್ಯರಿಗೆ, ಪುಸ್ತಕ ಹೊರ ಬರಲು ಶ್ರಮಿಸಿದ ಮುದ್ರಕರಿಗೆ, ಮುಖಪುಟದ ಸೃಷ್ಟಿಕರ್ತರಿಗೆ ಹಾಗೂ ನನ್ನ ಅಭಿಮಾನಿ ಓದುಗರಿಗೆ.

ಕೃತಜ್ಞ.

ರಾಜಾ ಚೆಂಡೂರ್
35, 6ನೇ ತಿರುವು
ಹನುಮಂತ ನಗರ
ಬೆಂಗಳೂರು: 560 019

# ರಾಜಾ ಚೆಂಡೂರರ ಕೃತಿಗಳು

**ಸ್ವಂತ ಕೃತಿ :**

ನೀಲಿಚಿತ್ರಗಳು

**ಮಲ್ಲಾದಿ ವೆಂಕಟಕೃಷ್ಣ ಮೂರ್ತಿಯವರ ಅನುವಾದಗಳು:**

ಮಂದಾಕಿನಿ
ಹಣ ಯಾರಿಗೆ ಕಹಿ?
ಲಿಟಲ್ ರಾಸ್ಕಲ್
ನಾತಿ ಚರಾಮಿ
ಪರ್ ಹೋಸ್ಟೈಸ್
ಮಿಸ್ಟರ್ 'ಪಿ'
ವೆಡ್ಡಿಂಗ್ ಬೆಲ್ಸ್
ಬಾಡಿಗೆ ಹೃದಯಗಳು
ಸಾಕು ಮಗ

**ಯಂಡಮೂರಿ ವೀರೇಂದ್ರನಾಥರ ಅನುವಾದಗಳು:**

ಸ್ನೇಹ-ಪ್ರೇಮ
ಸತ್ಯಂ ಶಿವಂ ಸುಂದರಂ
ಪಾಕ್ಮೋರಾ
ಹುಡುಗಿಯರಿಗೆ ಮಾತ್ರ
ದೇವರೇ ನಿನ್ನ ಕುಲ ಯಾವುದು'
ಭಾರ್ಯಾಗುಣವತಿ ಶತ್ರು
ಬೆಳದಿಂಗಳ ಗೋದಾವರಿ
ರಕ್ತ ಸಿಂಧೂರ
ಅಂಧಕಾರದಲ್ಲಿ ಸೂರ್ಯ–I
ಕಪ್ಪಂಚು ಬಿಳಿಸೀರೆ
ಬೇಡ ಕೃಷ್ಣ ರಂಗಿನಾಟ
ಅಂತಿಮ ಹೋರಾಟ
ಹಿಮ ಪರ್ವತ
ಅಂಧಕಾರದಲ್ಲಿ ಸೂರ್ಯ–II
ಲೇಡೀಸ್ ಹಾಸ್ಟೆಲ್

## ಅಂದು "ಮೇಡ್ ಫಾರ್ ಈಚ್ ಅದರ್ ಡೇ"

ದೇವಲೋಕವೆಲ್ಲಾ ಸಂಭ್ರಮದಿಂದ ವಿಜೃಂಭಿಸುತ್ತಿತ್ತು. ರಂಭೆ, ಊರ್ವಶಿ, ತಿಲೋತ್ತಮೆಯರು ಸೇರಿ ಪ್ರಾರಂಭಿಸಿದ್ದ "ಮೆನ್ಸ್ ಬ್ಯೂಟಿ ಪಾರ್ಲರ್" ಸದಾ ಹೌಸ್‌ಫುಲ್ ಇರುತ್ತಿತ್ತು. ವಿಶ್ವಾಮಿತ್ರ ಮಾತ್ರ ಆಗಾಗ ತನ್ನ ತಪಸ್ಸನ್ನು ನಿಲ್ಲಿಸಿ ಮೇನಕೆಯ ಮೇಲೆ ಒಂದು ಕಣ್ಣಿಡುತ್ತಿದ್ದ. ಅವಳು ಕೂಡಾ ಬ್ಯೂಟಿ ಕ್ಲಿನಿಕ್ ಪ್ರಾರಂಭಿಸುತ್ತಾಳೇನೋ ಎಂಬ ಭಯದಿಂದ.

ಹೆಸರಾಂತ ಮೊದಲನೆ ದರ್ಜೆಯ ದೇವರುಗಳು, 'ಬಿ' ಕ್ಲಾಸ್ ದೇವರುಗಳು, ಇತರೆ ಚಿಲ್ಲರೆ ದೇವತೆಗಳು ಬ್ಯೂಟಿ ಪಾರ್ಲರ್ ಎದುರು ಕ್ಯೂನಲ್ಲಿ ನಿಂತಿದ್ದರು.

"ಏನ್ರೀ... ನಮ್ಮ ಜೋಡೀನೇ ಗೆಲ್ಲುತ್ತಾ ಈ ಸ್ಪರ್ಧೆಯಲ್ಲಿ?" ಕೇಳಿದಳು ಒಬ್ಬ ಗಂಧರ್ವನ ಹೆಂಡತಿ ಆಸೆಯಿಂದ.

ಗಂಧರ್ವ ನಕ್ಕು ಹೇಳಿದ, "ಹುಚ್ಚಿ! ಇನ್ನೂ ಅನುಮಾನವೇ? ಆದರೂ ನನಗೊಂದು ಸಂಶಯ..."

"ಏನ್ರೀ ಅದು?"

"ಅದೇ ದೇವಿ– ನಾವು ಮದುವೆ-ಗಿದುವೆ ಇಲ್ಲದೇನೇ ಸಂಸಾರ ಮಾಡ್ತಿದೇವಿ ಅಂತ ಯಾರಾದರೂ ಆಬ್ಜೆಕ್ಷನ್ ತರಬಹುದು."

"ಮದುವೆ-ಗಿದುವೆ ಯಾಕಾಗಿಲ್ಲಾರೀ? ನಾವು ಇಂದ್ರಲೋಕದ 'ಇಂದ್ರಾವನ್ ಗಾರ್ಡನ್ಸ್'ನಲ್ಲಿ ಗಾಂಧರ್ವ ವಿವಾಹ ಮಾಡಿಕೊಂಡಿದ್ದೇವಲ್ಲಾ?" ಮುಗ್ಧತೆಯಿಂದ ಕೇಳಿದಳು.

"ನಿಜ ಅಂದುಕೋ! ಆ ಮದುವೆಗೆ ಸಾಕ್ಷಿಗಳೇ ಇಲ್ಲವಲ್ಲಾ ಗಿಡ, ಗಿಳಿಗಳನ್ನು ಬಿಟ್ಟು—"

"ಅದೇನ್ರೀ! ಗಿಡ, ಗಿಳಿಗಳು ಸಾಕ್ಷಿ ಅಲ್ಲಾಂತ ಯಾರು ಹೇಳ್ತಾರೆ? ಗಿಡಗಳಿಗಿರುವ ನೀತಿ, ಗಿಳಿಗಳಿಗಿರುವ ಕೀರ್ತಿ ಮತ್ಯಾರಿಗಿದೆ?"

"ಆದರೂ ನಿಮ್ಮ ಗಾಂಧರ್ವ ಕನ್ಯೆಯರೆಲ್ಲಾ ಸೇರಿ ಒಂದು ಅನಧಿಕೃತ ತೀರ್ಮಾನ ಕೈಗೊಂಡಿದ್ದಾರಲ್ಲಾ ಈ ನಡುವೆ– ಗಾಂಧರ್ವ ವಿವಾಹಗಳು ಸಲ್ಲುವುದಿಲ್ಲವೆಂದು—"

"ಅವರಿಗೆ ಬುದ್ಧಿ ಇಲ್ಲಬಿಡಿ. ಅದೇಕೆ ಸಲ್ಲೋದಿಲ್ಲ? ಅದೂ ಅಲ್ಲದೆ ನಾವಿಬ್ಬರೂ ಮದುವೆಯಾಗಿರುವುದಕ್ಕೆ ಸಾಕ್ಷಿಯಾಗಿ ನಮ್ಮ ಮಗುವಿದೆಯಲ್ಲಾ –"

ಗಂಧರ್ವನ ಮುಖ ಕೆಂಪಗಾಯಿತು.

"ಮಗು– ಎಂಬುವುದು ನಿನ್ನ ಮಾತೃತ್ವಕ್ಕೇ ವಿನಃ ಮತ್ಯಾವುದಕ್ಕೂ ಸಾಕ್ಷಿ ಅಲ್ಲ ದೇವಿ, ಈ ಸೂತ್ರವನ್ನು ಎಂದಿಗೂ ಮರೆಯಬೇಡ."

"ಅಂದರೆ–ನಾವು ಈ ಸ್ಪರ್ಧೆಯಲ್ಲಿ ಭಾಗವಹಿಸುವುದು ಸರಿಯಲ್ಲನೆನ್ನುತ್ತೀರಾ?"

"ಹಾಗಲ್ಲ! ನನ್ನ ಎರಡನೇ ಹೆಂಡತಿಯೂ ಸ್ಪರ್ಧೆಗೆ ಬರಬೇಕೆಂದು ಎಲ್ಲಿ ಹಠ ಹಿಡಿಯುತ್ತಾಳೋ—"

"ಆ! ಎರಡನೆ ಹೆಂಡತಿಯಾ? ಯಾರವಳು? ಎಲ್ಲಿಂದ ಬಂದಳು? ಯಾವಾಗ ಬಂದಳು?" ದುಃಖದಿಂದ ಕೇಳಿದಳು.

"ನಿನಗೆ ಹೇಳುವುದನ್ನು ಮರೆತಿದ್ದೆ ದೇವಿ! ನಿನ್ನೆ ಪಕ್ಕದ ಮನೆಯ ಗಂಧರ್ವ ಕನ್ಯೆ ಇಂದ್ರಾವನ್ ಗಾರ್ಡನ್ಸ್‌ನಲ್ಲಿ ಡ್ಯಾನ್ಸ್ ಮಾಡುತ್ತಿದ್ದಾಗ ಅವಳನ್ನು ಕಂಡು ಮೋಹಿಸಿದೆ! ಆಗಿಂದಾಗ್ಗೇ ನಾವಿಬ್ಬರೂ ಗಾಂಧರ್ವ ವಿವಾಹ ಮಾಡಿಕೊಂಡೆವು—"

ಅವಳಿಗೆ ವಿಪರೀತ ಸಿಟ್ಟು ಬಂತು.

"ಊ—! ನನಗಿಷ್ಟು ದ್ರೋಹ ಮಾಡುತ್ತೀರಾ? ನಾನು ಒಪ್ಪಿಕೊಳ್ಳುವುದಿಲ್ಲ. ನಿಮ್ಮ ಗಾಂಧರ್ವ ವಿವಾಹ ಸರಿಯಾದುದಲ್ಲ—"

ಗಂಧರ್ವ ಆಶ್ಚರ್ಯಪಟ್ಟ.

"ಏಕೆ?"

"ಏಕೆಂದರೆ ನಾವು– ಗಂಧರ್ವ ಕನ್ಯೆಯರೆಲ್ಲಾ ಸೇರಿ ಇನ್ನು ಮುಂದೆ ಗಾಂಧರ್ವ ವಿವಾಹಗಳು ಸಲ್ಲುವುದಿಲ್ಲವೆಂದು ತೀರ್ಮಾನಿಸಿದ್ದೇವಾದ್ದರಿಂದ—"

"ಆದರೆ ಆ ಗಾಂಧರ್ವ ವಿವಾಹವೆಂಬುದು ತುಂಬಾ ಪವಿತ್ರವಾದುದು ದೇವಿ! ಈ ಮುಂಚೆ ನೀನೇ ಒಪ್ಪಿಕೊಂಡೆಯಲ್ಲ."

"ಹಾಗೆ ಒಪ್ಪಿಕೊಂಡಿದ್ದು ನನ್ನ ತಪ್ಪು. ಗಾಂಧರ್ವ ವಿವಾಹ ಪ್ರಪಂಚ

ದಲ್ಲೇ ಅತ್ಯಂತ ಅಪವಿತ್ರ ಪದ್ಧತಿ. ಅದಕ್ಕೆ ಸರಿಯಾದ ಸಾಕ್ಷಿಗಳೇ ಇರುವುದಿಲ್ಲ."

"ಆದರೆ ಅವಳು ಗರ್ಭವತಿ—"

"ಅದು ಮಾತೃತ್ವಕ್ಕೆ ಸಾಕ್ಷಿಯಾಗಲೀ; ವಿವಾಹಕ್ಕಲ್ಲ—"

"ಅದೂ ಅಲ್ಲದೆ 'ಮೇಡ್ ಫಾರ್ ಈಚ್ ಅದರ್'ಗೆ ನಮ್ಮಿಬ್ಬರ ಫೋಟೋ ಕಳುಹಿಸಿದ್ದೇನೆ—"

ಅವಳಿಗಿನ್ನು ಸಿಟ್ಟನ್ನು ತಡೆದುಕೊಳ್ಳಲು ಆಗಲಿಲ್ಲ. ತನ್ನ ಕತ್ತಿನಲ್ಲಿದ್ದ ಚಂದ್ರಹಾರವನ್ನು ಕಿತ್ತೆಸೆದಳು.

"ಹೋಗಿ! ಆ ಮಿಟಕಲಾಡಿಯೊಡನೆಯೇ ಸಾಯಿರಿ. ನಿಮ್ಮ ಜೋಡಿ ಯಾವತ್ತೂ ಸರಿಹೋಗುವುದಿಲ್ಲಾ. 'ನಾಟ್ ಮೇಡ್ ಫಾರ್ ಈಚ್ ಅದರ್' ಸ್ಪರ್ಧೇಲಿ ಫಸ್ಟ್ ಬರ್ತೀರಿ. ಇದು ನನ್ನ ಶಾಪ...'' ಎಂದು ತನ್ನ ಶಯನಗೃಹದೊಳಗೆ ಓಡಿಬಿಟ್ಟಳು.

ಗಂಧರ್ವ ಮುಸಿಮುಸಿ ನಕ್ಕುಬಿಟ್ಟ.

ಇದೇ ಉಪಾಯವನ್ನು ಪಯೋಗಿಸಿ ಇಬ್ಬರು ಹೆಂಡತಿಯರನ್ನು ಈ ಮೊದಲೇ ಬಿಟ್ಟಿದ್ದ. ಈಗ ತನ್ನ ಬಲೆಯಲ್ಲಿ ಬಿದ್ದಿದ್ದ ಗಂಧರ್ವ ಕನ್ಯೆಯನ್ನು ಅರ್ಜೆಂಟಾಗಿ ಗಾಂಧರ್ವ ವಿವಾಹ ಮಾಡಿಕೊಂಡು, ಕೂಡಲೇ ಸ್ಪರ್ಧೆಯಲ್ಲಿಳಿವರೆ ಗೆಲುವು ಸಿಕ್ಕೇಸಿಗುತ್ತೆ. ಹೊಸಬಳು ಮುಂಚಿನ ಹೆಂಡತಿಯರಂತೆ ಮುದಿಮುಖದವಳಲ್ಲ. ತಾಜಾ ಹೆಣ್ಣು—ಮಿರುಗುತ್ತಿದ್ದಳು. ಸಂತೋಷದಿಂದ ಇಂದ್ರಾವನ್ ಗಾರ್ಡನ್ಸ್‌ಗೆ ಹಿಂತಿರುಗಿದ ಗಂಧರ್ವ.

"ಇನ್ನೂ ಏಕೆ ಈ ಶಿವತಾಂಡವ? 'ಮೇಡ್ ಫಾರ್ ಈಚ್ ಅದರ್' ಸ್ಪರ್ಧೆಗೆ ಸಮಯವಾಗುತ್ತಿದೆ'' ಪಾರ್ವತಿ ಹೇಳಿದಳು...ಶಿವನನ್ನು ಕಂಡು, "ನನ್ನದೇನಿದೆ, ನಾನು ರೆಡಿ!'' ಶಿವತಾಂಡವವನ್ನು ನಿಲ್ಲಿಸಿ ಹೇಳಿದ. ಪಾರ್ವತಿಗೆ ಮೈಯೆಲ್ಲಾ ಉರಿಯಲು ಪ್ರಾರಂಭಿಸಿತು.

"ರೆಡಿಯಂತೆ, ರೆಡಿ! ಹೋಗ್ತಿರೋದು ಮೇಡ್ ಫಾರ್ ಈಚ್ ಅದರ್ ಸ್ಪರ್ಧೇಗೆ ಆದರೂ ಇನ್ನೂ ಕತ್ತಿಗೆ ಈ ಹಾವು, ಕೈಯ್ಯಲ್ಲಿ ತ್ರಿಶೂಲ, ಹುಲಿ ಚರ್ಮ ಏನವತಾರ? ಇವತ್ತಾದರೂ ಸ್ವಲ್ಪ ಒಳ್ಳೇ ವಸ್ತ್ರಗಳನ್ನು ತೊಟ್ಟು ತಲೆಯನ್ನು ಶುಭ್ರವಾಗಿ ಬಾಚಿಕೊಳ್ಳಬಾರದಾ?" ಸಿಟ್ಟಿನಿಂದ ಹೇಳಿದಳು.

ಶಿವನಿಗೂ ಕೋಪ ಬಂತು. ತನ್ನನ್ನು ಯಾರೇನಂದರೂ ಪರವಾಗಿಲ್ಲ; ಆದರೆ ತನ್ನ ಡ್ರೆಸ್ಸನ್ನು, ಹೇಯರ್ ಸ್ಟೈಲನ್ನು ಮಾತ್ರ ವಿಮರ್ಶಿಸುವುದನ್ನು ಕೇಳಿದರೆ ಸಿಟ್ಟಾಗುತ್ತಾನೆ.

"ನೋಡು ಪಾರ್ವತಿ! ನಿನಗೆ ಒಂದು ಸಾವಿರ ಸಲ ಹೇಳಿದ್ದೇನೆ. ನನ್ನ ಡ್ರೆಸ್ಸನ್ನು, ತಲೆಯನ್ನು ವಿಮರ್ಶಿಸಬೇಡವೆಂದು!'' ಮುಖ ಊದಿಸಿಕೊಂಡು ಹೇಳಿದ.

"ಅಬ್ಬಾ...ಗೊತ್ತುಬಿಡಿ ನಿಮ್ಮ ತಲೆ ಶೋಕಿ. ಅದ್ಯಾವೊಳೋ ಗಂಗೇ ನಂತೆ...ಅವಳನ್ನು ಬೇರೆ ತಲೇಲಿ ಮೆರಿಸ್ತಾ...ನಿಮ್ಮನ್ನು ಅಂದು ಏನು ಪ್ರಯೋಜನ? ನಿಮ್ಮ ಗಂಡು ಜಾತೀನೇ ಅಷ್ಟು! ದುಂಡು, ದುಂಡುಗೆ ಕೆಂಪಗೆ ಇನ್ನೊಂದು ಹೆಣ್ಣು ಕಾಣಸ್ತೂಂದ್ರೆ ಸಾಕು ಮೊದಲನೇಯವಳನ್ನು ಮರೆತು ಬಿಡ್ತೀರಿ" ಎಂದು ಸಿಡಿಮಿಡಿಗೊಂಡಳು.

ಶಿವ ಎದುರು ಬಿದ್ದ.

"ಹೌದೇ! ಗಂಗೆ ಅಂದ್ರೆ ನಂಗಿಷ್ಟ. ನನ್ನ ತಲೇಲಿ ಅವಳಿಗೆ ಸ್ಥಾನಕೊಟ್ಟಿದೀನಿ. ಮೈ ಉರೀತೂಂದ್ರೆ ಇನ್ನೊಬ್ಬ ತುಂಗೇನೂ ತಂದು ಕತ್ತಿನಲ್ಲಿ ಇರಿಸಿ ಕೊಳ್ತೀನಿ. ನಿಂಗ್ಯಾಕೆ ಅದೆಲ್ಲಾ ಉಸಾಬರಿ?" ಅಂದುಬಿಟ್ಟ.

ಪಾರ್ವತಿ ಕೆಂಡವಾದಳು. ಆ ಕೋಪವನ್ನು ಸಹಿಸಲಾರದವಳಂತೆ 'ತಾಂಡವ' ನೃತ್ಯ ಪ್ರಾರಂಭಿಸಿದಳು.

"ಅಯ್ಯೊ...ಅಯ್ಯೊ ..! ಶಿವತಾಂಡವ ಮಾಡಬೇಕಾದದ್ದು ನಾನು ಕಣೇ ನೀನಲ್ಲ" ಶಿವ ಹೇಳಿದ.

"ನಾನು ಮಾಡುತ್ತಿರುವುದು ಶಿವತಾಂಡವವಲ್ಲ...ಪಾರ್ವತೀ ತಾಂಡವ! ಇಂದೇ ಅದಕ್ಕೆ ಪ್ರಾರಂಭ!" ಅಂದಳು ಕುಣಿಯುತ್ತಲೇ.

ಶಿವ ಬೆಚ್ಚಿಬಿದ್ದ.

''ಪಾರ್ವತೀ ದಯವಿಟ್ಟು ನಿಲ್ಲಿಸು. ಶಿವತಾಂಡವವೆಂಬುದು ಮೂರು ಲೋಕಗಳಲ್ಲೂ ಪ್ರಸಿದ್ಧಿ ಹೊಂದಿರುವಂತಹದ್ದು. ಈಗ ಹಠಾತ್ತನೇ ನೀನು 'ಪಾರ್ವತೀ ತಾಂಡವ' ಎಂದು ಮತ್ತೊಂದು ನೃತ್ಯವನ್ನು ಪ್ರಾರಂಭಿಸಿದರೆ ನನಗೆ ಪೆಟ್ಟುಬೀಳುತ್ತದೆ'' ವಿನಂತಿಸಿಕೊಳ್ಳುವವನಂತೆ ಹೇಳಿದ.

"ಸಾಧ್ಯವಿಲ್ಲ! ನೀವು ಗಂಗೆಯ ಮುಂದೆಯೇ ನನಗೆ ಅವಮಾನಗೊಳಿಸಿದ್ದೀರಿ. ಎರಡರಲ್ಲೊಂದನ್ನು ಇಂದೇ ತೀರ್ಮಾನಿಸಿಬಿಡಬೇಕು" ಸಿಟ್ಟಿನಿಂದ ಹೇಳಿದಳು.

"ಪಾರ್ವತೀ ಈಗಾಗಲೇ ನಮ್ಮ ದೇವರುಗಳ ಮಧ್ಯೆ ನಂಬರ್ ಒನ್‌ಗಾಗಿ

ಕಾದಾಟ ನಡೆಯುತ್ತಲೇ ಇದೆ. ಇಂತಹ ಸಮಯದಲ್ಲಿ ನೀನು ಬೇರೆ ಹೀಗಾದರೆ ನನಗೆ ಕಷ್ಟ. ದಯವಿಟ್ಟು ನಿಲ್ಲಿಸಿಬಿಡು," ಅವಳ ಕೈ ಹಿಡಿದು ಕೇಳಿಕೊಂಡ.

ಪಾರ್ವತಿ ನೃತ್ಯವನ್ನು ನಿಲ್ಲಿಸಿಬಿಟ್ಟಳು.

"ಸರಿ ನಿಲ್ಲಿಸುತ್ತೀನಿ. ಆದರೆ...ಒಂದು ಷರತ್ತಿನ ಮೇಲೆ" ಅಂದಳು.

''ಏನದು?'' ಗಾಬರಿಯಿಂದ ಕೇಳಿದ ಶಿವ.

"ಗಂಗೆಯ ಎದುರು ನನಗೆ ಅವಮಾನ ಪಡಿಸಕೂಡದು.''

ಶಿವ ಸಂತೋಷದಿಂದ ಹಿಗ್ಗಿದ.

"ಓಹೋ! ಅಷ್ಟೇನಾ?" ಉತ್ಸಾಹದಿಂದ ಕೇಳಿದ.

''ಅಷ್ಟೇ ಅಲ್ಲ! ನನ್ನ ಎದುರಿನಲ್ಲಿ ಗಂಗೆಯನ್ನು ಅವಮಾನಗೊಳಿಸಬೇಕು."

ಅದಕ್ಕೂ ಒಪ್ಪಿಕೊಂಡ ಶಿವ.

ಪಾರ್ವತಿಯ ಮುಖದಲ್ಲಿ ಮತ್ತೆ ಸಂತೋಷ ಕಂಡಿತು.

"ಹಾಗಾದರೆ ನಡೆಯಿರಿ! ಸ್ವಲ್ಪ ಮೇಕಪ್ಪನ್ನಾದರೂ ಹಾಕಿಕೊಳ್ಳುವಿರಂತೆ. ಅಲ್ಲಿ ಸ್ಪರ್ಧೆಗೆ ಸಮಯವಾಯಿತು." ಶಿವನನ್ನು ಡ್ರೆಸ್ಸಿಂಗ್ ಟೇಬಲ್ ಬಳಿಗೆ ಎಳೆದೊಯ್ಯುತ್ತಾ ಹೇಳಿದಳು.

ಸರಸ್ವತಿ ಬ್ರಹ್ಮನ ನಾಲ್ಕೂ ತಲೆಗಳಿಗೆ ತಾನೇ ಸ್ವತಃ ಅಲಂಕರಿಸಿದಳು.

"ಮೊನ್ನೆ ಗಂಧರ್ವ ಕನ್ಯೆಯೊಬ್ಬಳಿಗೆ ಎರಡು ತಲೆಯ ಶಿಶುವ ಜನ್ಮವಾಯಿತಂತೆ.''

"ಹೌದಂತೆ! ನಾನೂ ಕೇಳಿದೆ," ಲೌಕಿಕವಾಗಿಯೇ ಹೇಳಿದ ಬ್ರಹ್ಮ.

"ಹಾಗಾ ಪಾಪ! ಕೇವಲ ಕೇಳಿದ್ದು ಮಾತ್ರವೇನಾ? ಅದರ ಬಗ್ಗೆ ನಿಮಗೆ ಇನ್ನೂ ಹೆಚ್ಚು ತಿಳಿದಿದೆಯೇನೋ ಎಂದುಕೊಂಡಿದ್ದೆ." ಎಂದಳು ಓರೆನೋಟ ಬೀರುತ್ತ.

"ನಂಗೆ ಹೇಗೆ ತಿಳಿಯಬೇಕು?" ಆಶ್ಚರ್ಯದಿಂದ ಪ್ರಶ್ನಿಸಿದ ಬ್ರಹ್ಮ.

"ಅಬ್ಬಾ! ಏನೂ ತಿಳಿಯದ ಮುಗ್ಧರಂತೆ ಮಾತನಾಡುತ್ತಿದ್ದೀರಿ. ಆ ಮಗುವಿಗೆ ಬೇರೆ ಯಾವ ತಂದೆಯಾದರೆ ಎರಡು ಮುಖ ಬರುತ್ತೆ? ಎಲ್ಲಾ ನಿಮ್ಮದೇ ಹೋಲಿಕೆಯಂತೆ!"

ಬ್ರಹ್ಮ ಕಂಗಾಲಾದ.

"ಶಿವಶಿವಾ" ಎಂದುಬಿಟ್ಟ ಕಿವಿಗಳೆರಡನ್ನೂ ಮುಚ್ಚಿ ಕೊಂಡು.

"ಆ ಶಿವನ ಹೆಸರೇಕೆ ಈಗ? ಆ ಮನುಷ್ಯ ಏನೂ ಕಡಿಮೆ ಇಲ್ಲ ಈ ವಿಷಯದಲ್ಲಿ. ಎರಡನೆಯವಳನ್ನು ತಲೆಯ ಮೇಲೆ ಹೊತ್ತು ರಾಜಾರೋಷವಾಗಿ ತಿರುಗುತ್ತಿರುತ್ತಾನೆ," ಕೋಪವನ್ನು ತಡೆದುಕೊಳ್ಳುತ್ತಾ ಹೇಳಿದಳು.

ಬ್ರಹ್ಮ ಮತ್ತೇನನ್ನೂ ಮಾತನಾಡಲಾರದೆ ಹೋದ. "ನಿನಗೆ ಈ ನಡುವೆ ತುಂಬಾ ಅನುಮಾನಗಳು ಹೆಚ್ಚಾಗಿವೆ," ಎಂದು ಗೊಣಗಿಕೊಂಡ ಅಷ್ಟೇ.

"ಅನುಮಾನವೋ, ನಿಜವೋ...ಎಲ್ಲಾ ನಾಳೆ ಆ ಹುಡುಗನ ವಿದ್ಯಾಭ್ಯಾಸ ಮಾಡಿಸುವಾಗ ತಿಳಿಯುತ್ತದೆ ಬಿಡಿ! ತಂದೆಯ ಹೆಸರು ಬರೆಯಬೇಕಾದ ಕಡೆ ಯಾರ ಹೆಸರು ಬರೆಸುತ್ತಾರೋ ನೋಡೋಣ,'' ಹಠದಿಂದ ಹೇಳಿದಳು.

ಬ್ರಹ್ಮನಿಗೆ ಧೈರ್ಯ ಸಂಪೂರ್ಣವಾಗಿ ಹೋಯಿತು.

"ಅವರ ವಿಷಯ ನಮಗೇಕೆ ಬಿಡು ಪಾಠಶಾಲೆಗೇ ಹಾಕುತ್ತಾರೋ, ಅಂಚೆ ಶಿಕ್ಷಣಕ್ಕೇ ಸೇರಿಸುತ್ತಾರೋ," ಬ್ರಹ್ಮ ಹೇಳಿದ. ಸೂರ್ಯನ ಕಡೆಗೆ ನೋಡಿ, "ಅಯ್ಯೋ! ಟೈಮಾಯಿತು ಬೇಗ ನಡಿ" ಮಾತು ಬದಲಾಯಿಸುತ್ತಾ ಹೇಳಿದ. ಸರಸ್ವತಿ ಇನ್ನು ಮಾಡಲು ಏನೂ ಉಳಿದಿಲ್ಲವೆಂಬಂತೆ ಹೊಸ ವಿಷಯಕ್ಕೆ ಬಂದುಬಿಟ್ಟಳು.

**ಬೇ**ಗ ಏಳಿ ಸಮಯ ಆಯ್ತು!" ಲಕ್ಷ್ಮೀದೇವಿ ಶೇಷಶಯನನಾಗಿದ್ದ ವಿಷ್ಣುವಿಗೆ ಹೇಳಿದಳು.

ವಿಷ್ಣು ಮೇಲೆದ್ದು ನಿಂತ.

"ಈ ಹಾಸಿಗೆಯನ್ನು ತೆಗೆದುಕೊಂಡು ಹೋಗೋಣವಾ?" ಹಾವಿನೆಡೆಗೆ ನೋಡುತ್ತಾ ಕೇಳಿದ ವಿಷ್ಣು.

"ಅದೇಕೆ ಬೇಕು ಈಗ...ನಿಮ್ಮದು ಬರೀ ಚೇಷ್ಟೆ! ಅಲ್ಲಿ ನಾವು ಮಲಕ್ಕೊಳ್ಳೋದಿಕ್ಕಲ್ಲ ಹೋಗೋದು. ಚುರುಕಾಗಿ, ಸರಸವಾಗಿ ಒಬ್ಬರಿಗಾಗಿ ಮತ್ತೊಬ್ಬರು ಹುಟ್ಟಿರುವುದು ಎಂಬುದನ್ನು ನಿರೂಪಿಸಲು," ಲಕ್ಷ್ಮೀ ಹೇಳಿದಳು. ಇಬ್ಬರೂ ಕೂಡಲೇ ಇಂದ್ರಸಭೆಗೆ ಹೊರಡಲು ಸಿದ್ಧರಾದರು.

**ಮೇಡ್** ಫಾರ್ ಈಚ್ ಅದರ್ ಸ್ಪರ್ಧೆ ಪ್ರಾರಂಭವಾಯಿತು, ಜಡ್ಜ್ ಆಗಿ ಬೃಹಸ್ಪತಿ ವೇದಿಕೆಯ ಮೇಲಿನಿಂದ ಒಂದಿಷ್ಟತ್ತು ಇಂಚು ಮೇಲೆ ಗಾಳಿಯಲ್ಲಿ ನಿಂತ. ಸಭೆಯೆಲ್ಲಾ ಕೆಲವು ನೂರಾರು ಜೊತೆಗಳಿಂದ ತುಂಬಿದೆ. ಪ್ರತಿ ಜೊತೆಯೂ ತಾವೇ ಪ್ರಪಂಚದೊಳಗೆಲ್ಲಾ ಅತ್ಯಂತ ಅನ್ಯೋನ್ಯವಾದ ಜೋಡಿಗಳೆಂಬಂತೆ ಒಬ್ಬರ ಕಣ್ಣಳಲ್ಲಿ ಮತ್ತೊಬ್ಬರು ತನ್ಮಯತೆಯಿಂದ ನೋಡುತ್ತಾ ಕಿರುನಗೆ ಸೂಸುತ್ತಾ ಬೃಹಸ್ಪತಿಯ ಕಣ್ಣಿಗೆ ಬೀಳಲು ಪ್ರಯತ್ನಿಸುತ್ತಿದ್ದರು.

ಬೃಹಸ್ಪತಿ ಎಲ್ಲಾ ಜೋಡಿಗಳನ್ನೂ ವಿವಿಧ ಕೋನಗಳಿಂದ ಪರಿಶೀಲಿಸುತ್ತಾ, ಅವರೊಡನೆ ಮಾತನಾಡುತ್ತಾ, ಅವರ ಹಿಂದೆ ಮುಂದೆ ಸುತ್ತುತ್ತಾ ಅಂಕಗಳನ್ನು ಹಾಕಿಕೊಳ್ಳುತ್ತಾ ಒಂದು ಪಟ್ಟಿಯನ್ನು ತಯಾರುಮಾಡುತ್ತಿದ್ದ. ಕೊನೆಗೆ ಎಲ್ಲವನ್ನು ಕೂಲಂಕಷವಾಗಿ ಪರಿಶೀಲಿಸಿ, ತನ್ನ ತೀರ್ಪನ್ನು ನೀಡಿದ.

"ಸ್ಪರ್ಧೆ ತುಂಬಾ ತೀವ್ರವಾಗಿರುವುದರಿಂದ ಕೊನೆಯ ವರೆಗೂ ಸ್ಪರ್ಧೆಯಲ್ಲಿ ಉಳಿದ ಐದು ಜೋಡಿಗಳ ಹೆಸರುಗಳನ್ನು ಪ್ರಕಟಿಸುತ್ತೇನೆ..." ಎಲ್ಲರೂ ನಿಶ್ಶಬ್ದವಾಗಿಯೂ ಕುತೂಹಲದಿಂದಲೂ ಕೇಳಲು ಉತ್ಸುಕರಾದರು. "ಬ್ರಹ್ಮ – ಸರಸ್ವತಿ, ವಿಷ್ಣುಮೂರ್ತಿ – ಲಕ್ಷ್ಮೀದೇವಿ, ಶಿವ – ಪಾರ್ವತಿಯರು, ಇಂದ್ರ – ಶಚೀದೇವಿ, ಗಂಧರ್ವ–ಆತನ ಹೆಂಡತಿ . "

"ಈಗ ಇವರೆಲ್ಲರ ಎಂಟ್ರಿ ಫಾರಂಗಳನ್ನು ಮತ್ತೊಮ್ಮೆ ಪರಿಶೀಲಿಸಿ ವಿಜೇತರ ಹೆಸರನ್ನು ಪ್ರಕಟಿಸುತ್ತೇನೆ," ಬೃಹಸ್ಪತಿ ಹೇಳಿದ.

ಮೊದಲ ಕರೆ ಗಂಧರ್ವನಿಗೇ ಬಂತು. ಹಿಂಜರಿಯುತ್ತಲೇ ಒಳಗೆ ಹೋದ ಗಂಧರ್ವ.

"ಗಂಧರ್ವಾ! ನಿನ್ನೆ ಸಂಜೆ ನಿನ್ನೊಡನೆ, ಸುರಾಪಾನ ಶಾಲೆಯಲ್ಲಿ ಇನ್ನೊಬ್ಬ ಹುಡುಗಿ ಕಂಡಳು. ಅವಳು ನಿನಗೆ ಹೆಂಡತಿಯೆಂದು ಪರಿಚಯಿಸಿದ್ದಿ ನನಗೆ! ಆದರೆ ಸ್ಪರ್ಧೆಗೆ ಇನ್ನೊಬ್ಬಳನ್ನು ಕರೆದು ತಂದಿದ್ದೀಯಲ್ಲಾ, ಏನು ವಿಷಯ?" ಬೃಹಸ್ಪತಿ ಕೇಳಿದ. ಗಂಧರ್ವ ನಾಚಿಕೊಂಡ.

"ಪರ್ವಾಗಿಲ್ಲ ಹೇಳು. ನಮ್ಮ ಬದುಕಿನಲ್ಲಿ ಇದು ಸಾಮಾನ್ಯ ತಾನೇ? ಪ್ರತಿಯೊಬ್ಬರೂ ಯಾವುದೋ ಬಲಹೀನ ಕ್ಷಣವಲ್ಲಿ ಮತ್ತೊಂದು ಹೆಣ್ಣನ್ನು ಹೆಂಡತಿಯಾಗಿ ಸ್ವೀಕರಿಸುತ್ತಿರುತ್ತಾರೆ! ಹಾಗಾಗಿ ನೀನೇನೂ ನಾಚಿಕೊಳ್ಳಬೇಕಾ

ಗಿಲ್ಲ. ಹೇಳು...ಇವಳು ನಿನ್ನ ಎರಡನೆ ಹೆಂಡತಿಯಾ?''

''ಅಲ್ಲಾರೀ ನನ್ನ ಮೂರನೆ ಹೆಂಡತಿ..." ಗಂಧರ್ವ ಹೇಳಿದ.

ಬೃಹಸ್ಪತಿ ಷಾಕ್ ತಗುಲಿದವನಂತೆ ನೋಡಿದ.

"ಮೂರನೆ ಹೆಂಡತಿ...ಎಷ್ಟು ದಿನಗಳಾದವು ಈ ಮದುವೆಯಾಗಿ?

"ಸರಿಯಾಗಿ ನಲವತ್ತು ನಿಮಿಷಗಳಾದವು!"

ಬೃಹಸ್ಪತಿ ಬೆಚ್ಚಿಬಿದ್ದ.

''ಈ ಮದುವೆ ಸಲ್ಲುವುದಿಲ್ಲ'' ಕಿರುಚಿದ ಜೋರಾಗಿ.

"ಏಕೆ?'' ಆಶ್ಚರ್ಯದಿಂದ ಕೇಳಿದ ಗಂಧರ್ವ.

"ಕೇವಲ ಈ ಸ್ಪರ್ಧೆಯಲ್ಲಿ ಗೆಲ್ಲುವ ದುರುದ್ದೇಶದಿಂದ ನೀನು ಈ ಮದುವೆ ಮಾಡಿಕೊಂಡಿದ್ದೀಯಾದ್ದರಿಂದ..."

ಆ ಮಾತು ಕೇಳುತ್ತಿದ್ದಂತೆಯೇ ಆ ನಲವತ್ತು ನಿಮಿಷದ ಹಿಂದೆಯಷ್ಟೇ ಹೆಂಡತಿಯಾಗಿದ್ದವಳು ಎಚ್ಚರತಪ್ಪಿದಳು. ಗಂಧರ್ವ ಕೂಡಲೇ ತನ್ನ ಕೈಯಲ್ಲಿದ್ದ ಅಮೃತವನ್ನು ತೆಗೆದುಕೊಂಡು ಅವಳ ಮುಖಕ್ಕೆ ಸಿಂಪಡಿಸಿದ ಕೂಡಲೇ ಅವಳು ಎದ್ದು ಕುಳಿತಳು.

"ಅಯ್ಯೋ! 'ಮೇಡ್ ಫಾರ್ ಈಚ್ ಅದರ್' ಸ್ಪರ್ಧೆಯಲ್ಲಿ ನಾವೇ ಗೆಲ್ಲುತ್ತೇವೆಂದು ನಿಮ್ಮನ್ನು ಮದುವೆಯಾದೆ...ಈಗ ನನ್ನಗತಿ?" ಅಳುವನ್ನು ತಡೆದುಕೊಳ್ಳುತ್ತಾ ಹೇಳಿದಳು.

"ಒಮ್ಮೊಮ್ಮೆ ಇಂತಹ ಊಹೆಗೂ ನಿಲುಕದ ಘಟನೆಗಳು ನಡೆಯುತ್ತಿರುತ್ತವೆ ದೇವಿ. ನೀನೇನೂ ಚಿಂತಿಸಬೇಡ!" ಸಮಾಧಾನಪಡಿಸಿದ ಗಂಧರ್ವ. "ನಾವಿನ್ನು ನಮ್ಮನಮ್ಮ ದಾರಿಯಲ್ಲಿ ಹೊರಟು ಹೋಗೋಣ! ಆಗ ಯಾವ ಸಮಸ್ಯೆಯೂ ಇರುವುದಿಲ್ಲ" ಅವನು ನಿರ್ಧರಿಸಿದ.

ಅವಳು ಬೆಚ್ಚಿಬಿದ್ದು ''ಹಾಗಾದರೆ ನನ್ನ ಗರ್ಭದಲ್ಲಿ ಬೆಳೆಯುತ್ತಿರುವ ಊಹೆಗೆ ನಿಲುಕದ ಘಟನೆಯನ್ನು ಏನು ಮಾಡೋಣ?" ಗಾಬರಿಯಿಂದ ಕೇಳಿದಳು.

ಗಂಧರ್ವ ಬೆಚ್ಚಿದ.

''ಆ! ಇಷ್ಟು ಬೇಗವೇ? ಸರಿ ಇನ್ನೇನು ಮಾಡುವುದು. ಬಾ ನನ್ನೊಡನೆ ತ್ರಿಬಲ್ ಬೆಡ್‌ರೂಂ ಇರೋ ಮನೇಗೆ ಬದಲಾಯಿಸೋಣ ನಮ್ಮ ಸಂಸಾರಾನ..." ನೀರಸವಾಗಿ ಹೇಳಿದ.

ಅನಂತರ ವಿಷ್ಣುಮೂರ್ತಿಯನ್ನು ಸ್ಪರ್ಧೆಯಿಂದ ಹೊರಹಾಕಿದ ಬೃಹಸ್ಪತಿ.

"ಅದೇಕೆ? ನಮ್ಮ ಜೋಡಿಯಲ್ಲಿ ಯಾವ ಲೋಪವಿದೆಯೆಂದು ನಮ್ಮನ್ನು ಸ್ಪರ್ಧೆಯಿಂದ ಹೊರಹಾಕಿದಿ?'' ಕೋಪದಿಂದ ಕೇಳಿದ ವಿಷ್ಣು.

''ನೋಡಿ ವಿಷ್ಣುಮೂರ್ತಿಯವರೇ! ನೀವಿಬ್ಬರೂ ಉತ್ತಮ ಜೋಡಿಯಾಗಿ ಆಯ್ಕೆಯೇನೋ ಆಗುತ್ತಿದ್ದಿರಿ. ಆದರೆ ನೀವು ಆಗ ಹಾವಿನ ಮೇಲೆ ಮಲಗಿಕೊಂಡಿರಲಿಲ್ಲವಲ್ಲಾ ?"

"ಅಂದರೆ ನಾನು ಜೀವಿತಾಂತವೂ ಆ ಸಮುದ್ರದಲ್ಲಿ ಹಾವಿನ ಮೇಲೆ ಒಂದೇ ಸೈಡಿಗೆ ತಿರುಗಿ ಮಲಗಿರಬೇಕಾ?'' ಕೋಪದಿಂದ ಕೇಳಿದ ವಿಷ್ಣು.

"ಬೇಕಾಗಿಲ್ಲವೆಂದಿಟ್ಟುಕೊಳ್ಳಿ! ಆದರೆ ನೀವು ಶೇಷಶಯನರಾಗಿ ಆರಾಮವಾಗಿ ಮಲಗಿರುವುದು. ನಿಮ್ಮ ಶ್ರೀಮತಿ ನಿಮ್ಮ ಸೇವೆಮಾಡುತ್ತಾ ಕುಳಿತಿರುವ ದೃಶ್ಯವೇ ಎಲ್ಲಾ ಲೋಕಗಳಲ್ಲೂ ಸುಪ್ರಸಿದ್ಧಿ ಪಡೆದಿರುವ ನೋಟ! ಯಾವ ಕ್ಯಾಲೆಂಡರ್ ಮೇಲೆನೋಡಿದರೂ, ಯಾವ ಫೋಟೋಗಳಲ್ಲಿ ನೋಡಿದರೂ ಅದೇ ದೃಶ್ಯವನ್ನು ಪ್ರಚಾರ ಪಡಿಸುತ್ತಿರುತ್ತಾರೆ. ಹಾಗಾಗಿ ನೀವು ಈ ರೀತಿ ಸ್ಪರ್ಧೆಗೆ ಬಂದಿರುವುದರಿಂದ ನೀವು ಅನರ್ಹರು."

"ಬೇಗ ಹೋಗಿ ಆ ಶೇಷತಲ್ಪವನ್ನು ತೆಗೆದುಕೊಂಡು ಬನ್ನೀ" ಲಕ್ಷ್ಮೀ ಆತುರಪಡಿಸಿದಳು.

"ಉಹ್ಞು! ಸಾಧ್ಯವಿಲ್ಲ ಲಕ್ಷ್ಮೀದೇವಿ. ನಿನ್ನೆ ರಾತ್ರಿಯಿಂದ ನನಗೆ ಸ್ವಲ್ಪ ನಡುವು ನೋವು ಕಾಡುತ್ತಿದೆ. ಹಾಗಾಗಿ ಇನ್ನು ಸ್ವಲ್ಪದಿನ ನನ್ನ ಒರಿಜನಲ್ ಭಂಗಿಯಲ್ಲಿ ಮಲಗಲಾರೆ.''

ಲಕ್ಷ್ಮೀಯ ಮುಖವೆಲ್ಲಾ ಕೆಂಪಗೆ ಕೆಂಡದಂತಾಯಿತು ಆ ಉತ್ತರದಿಂದ. ''ನಿಜ ಹೇಳ್ರೀ! ಹೀಗೆ ಹಠಾತ್ತನೆ ಒಂದೇ ರಾತ್ರಿಯಲ್ಲಿ ಅದು ಹೇಗೆ ನಡುವು ನೋವು ಬಂತು? ನಿನ್ನೆ ರಾತ್ರಿ ಏನು ಮಾಡಿದಿರಿ?" ಆಕ್ರೋಶದಿಂದ ಕೇಳಿದಳು. ವಿಷ್ಣು ತನ್ನೆರಡು ಕೈಗಳನ್ನು ತಲೆಮೇಲಿರಿಸಿಕೊಂಡ.

ಕೊನೆಯ ಕ್ಷಣದಲ್ಲಿ ತಲೆಯಮೇಲೆ ಗಂಗೆಯನ್ನು ಹೊತ್ತುಕೊಂಡಿದ್ದರಿಂದ ಶಿವನನ್ನು, ಬೃಹಸ್ಪತಿ ಸ್ಪರ್ಧೆಯಿಂದ ಹೊರಹಾಕಿದ.

"ಹೀಗೆ ಇಬ್ಬರು ಹೆಂಡತಿಯರನ್ನು ಸ್ಪರ್ಧೆಗೆ ಕರೆತಂದರೆ ಹೇಗೆ ಶಿವಾ? 'ಮೇಡ್ ಫಾರ್ ಈಚ್ ಅದರ್' ಅಂದರೆ ಒಬ್ಬರಿಗಾಗಿ ಮತ್ತೊಬ್ಬರು ಸೃಷ್ಟಿಯಾಗಿರುವ ಸವತಿಯರು ಅಂತಲ್ಲವಲ್ಲಾ! ಒಬ್ಬಳೇ ಹೆಂಡತಿಯನ್ನು ಕರೆತರಬೇಕು..."

ಶಿವ ನಿರಾಸೆಯಿಂದ ಹೊರಟುಹೋದ ಪಾರ್ವತಿಯೊಡನೆ.

**ಕೊ**ನೆಗೆ ಬ್ರಹ್ಮ-ಸರಸ್ವತಿ, ಇಂದ್ರ-ಶಚೀದೇವಿ ಮಾತ್ರ ಉಳಿದರು ಸ್ಪರ್ಧೆಯಲ್ಲಿ. ಎರಡು ಜೋಡಿಗಳಿಗೂ ವಿವಿಧ ರೀತಿಯ ಪರೀಕ್ಷೆಗಳನ್ನೊಡ್ಡಿದ ಬೃಹಸ್ಪತಿ. ಎಲ್ಲದರಲ್ಲಿಯೂ ಇಬ್ಬರೂ ಸಮ ಸಮ.

ಕೊನೆಗೆ ಇನು ಪ್ರಯೋಜನವಿಲ್ಲವೆಂದು ಹಳೆಯ ತಂತ್ರವೊಂದನ್ನು ಉಪಯೋಗಿಸಿದ ಬೃಹಸ್ಪತಿ. ಒಬ್ಬ ಸುಂದರ ಗಂಧರ್ವ ಕನ್ಯೆಯನ್ನು ಹೊಸ ಗೆಟಪ್‌ನಿಂದ ಸೆಕ್ಸಿಯಾಗಿ ತಯಾರುಮಾಡಿ ಅವರ ಮುಂದೆ ನಾಲ್ಕಾರು ಸಲ ಅತ್ತಿಂದಿತ್ತ ಓಡಾಡಿಸಿದ. ಮೊದಲ ಮೂರು ರೌಂಡುಗಳಲ್ಲೂ ಯಾರೂ ಆ ಕನ್ಯೆಯ ಕಡೆ ನೋಡಲಿಲ್ಲವಾದರೂ ಕೊನೆಯ ರೌಂಡ್‌ನಲ್ಲಿ ಮಾತ್ರ ಇಂದ್ರ ತಡೆಯಲಾರದೆ ಅವಳೆಡೆಗೆ ಕುಡಿನೋಟ ಬೀರಿ ಸಿಕ್ಕಿಬಿದ್ದ. ಹಾಗಾಗಿ ಬ್ರಹ್ಮ-ಸರಸ್ವತಿ 'ಮೇಡ್ ಫಾರ್ ಈಚ್ ಅದರ್' ಜೋಡಿಯೆಂದು ನಿರ್ಧರಿಸಲಾಯಿತು. ಅದರಿಂದ ಶಚೀದೇವಿಗೆ ಮೈಯ್ಯೆಲ್ಲಾ ಉರಿದುಬಿಟ್ಟಿತು.

"ಇದು ಅನ್ಯಾಯ. ನಮ್ಮವರೇ ಏನು! ಆ ಸರಸ್ವತಿಯ ಯಜಮಾನರೂ ಆ ಗಂಧರ್ವ ಕನ್ಯೆಯ ಕಡೆ ನೋಡಿದರು." ಸಿಟ್ಟಿನಿಂದ ಹೇಳಿದಳು.

"ಸುಳ್ಳು. ನಾವು ಗೆದ್ದೆವೆಂಬ ಅಸೂಯೆಯಿಂದ ನಮ್ಮವರ ಮೇಲೆ ಆರೋಪ ಹೊರೆಸುತ್ತಿದ್ದೀಯಾ" ಸರಸ್ವತಿಯೂ ತಿರುಗಿಬಿದ್ದಳು.

"ಓಹೋಹೋ...ನಿಮ್ಮವರೇನೂ ದೊಡ್ಡ ಏಕಪತ್ನೀವ್ರತನೆಂಬಂತೆ ಮಾತನಾಡುತ್ತಿದ್ದೀಯಾ. ನೀನು ಸದಾ ಒಂದು ತಲೆಯ ಕಡೆಮಾತ್ರ ನೋಡುತ್ತಿರುತ್ತಿ. ಉಳಿದ ಮೂರು ತಲೆಗಳು ಏನು ಚೇಷ್ಟೆ ಮಾಡುತ್ತವೆಂದು ಗಮನಿಸುವುದೇ ಇಲ್ಲ .ಬೃಹಸ್ಪತಿಯದು ಪಕ್ಷಪಾತ ಬುದ್ಧಿಯಲ್ಲದಿದ್ದರೆ ಮೇಡ್ ಫಾರ್ ಈಚ್ ಅದರ್ ಯಾವ ತಲೆಯನ್ನು ಜೊತೆಮಾಡಿ ತೀರ್ಪನ್ನಿತ್ತ?" ವ್ಯಂಗ್ಯವಾಗಿ ಕೇಳಿದಳು ಶಚೀದೇವಿ.

"ನಮ್ಮವರು ನಿಮ್ಮವರಂತೆ ಕೆಟ್ಟ ಕೆಲಸಗಳನ್ನು ಮಾಡೋದೇ ಇಲ್ಲ. ಛೀ! ಹಾಳುಬುದ್ಧಿ ಮನುಷ್ಯನ್ನ ಕಟ್ಕೊಂಡು ಅದೆಷ್ಟು ಮಾತಾಡ್ತಿ..." ಸರಸ್ವತಿ ಜಗಳ ಮುಂದುವರೆಸಿದಳು.

"ಏನು? ನಮ್ಮವರಿಗೆ ಕೆಟ್ಟಬುದ್ಧಿಯಾ?" ಉಗ್ರರೂಪ ತಾಳಿದಳು ಶಚೀದೇವಿ.

"ಮತ್ತೇನು? ಕೋಳೀ ಹುಂಜದ ರೂಪದಲ್ಲಿ ಹೋಗಿ ಪಾಪ ಆ ಅಹಲ್ಯೆಯನ್ನು ಮೋಸಮಾಡಿ. ಅನುಭವಿಸಿದ್ದನ್ನು ಯಾರು ತಿಳಿಯರು? ಹೀಗೆ ಪ್ರಾಣಿ ಪಕ್ಷಿಗಳ ರೂಪದಲ್ಲಿ ಹೋಗಿ ಹಾಳು ಕೆಲಸ ಮಾಡೋದು ಶ್ರೇಷ್ಠವೇನೋ" ಆ ಮಾತಿನಿಂದ ಶಚೀದೇವಿಗೆ ಅಳು ಬಂತು.

"ಅದು ನಮ್ಮ ಜಮಾನರ ಉದ್ಯೋಗಧರ್ಮ! ಉದ್ಯೋಗಧರ್ಮವನ್ನು ನಿರ್ವಹಿಸುವಾಗ ಇಂತಹವುಗಳು ದೋಷವಲ್ಲವೆಂದು ನೀತಿಶಾಸ್ತ್ರವೇ ಹೇಳುತ್ತದೆ.

"ಚೆನ್ನಾಗಿದೆ. ನೀವು ಮಾಡೋ ಉದ್ಯೋಗಕ್ಕೆ ನೀತಿಶಾಸ್ತ್ರದ ಕವಚ ಬೇರೆ..."

"ಓಹೋಹೋ ಸಾಕು ಸುಮ್ನಿರು...ನಿಮ್ಮ ಜಮಾನ್ರು ಮಹಾದೊಡ್ಡ ಉದ್ಯೋಗ ಮಾಡ್ತಿದಾರೆ! ಇಷ್ಟ ಬಂದಹಾಗೆ ಹಿಂದೂ-ಮುಂದೂ ನೋಡದೆ ಮನುಷ್ಯರನ್ನ ಸೃಷ್ಟಿ ಮಾಡೋದು ಶ್ರೇಷ್ಠ ಉದ್ಯೋಗ..."

''ಹಾಗೆ ಸೃಷ್ಟಿ ಅನ್ನೋದು ಅಷ್ಟು ಸುಲಭವಾದ ಕೆಲಸವಾದರೆ ನೀನು ಸೃಷ್ಟಿಮಾಡು ನೋಡೋಣ" ವ್ಯಂಗ್ಯವಾಗಿ ಹೇಳಿದಳು ಸರಸ್ವತಿ.

"ಸೃಷ್ಟಿಕರ್ತನ ಹೆಂಡತಿಯಾಗಿ ನೀನೇ ಇದ್ದೀಯಲ್ಲಾ. ನೀನು ಮಾಡು ಆ ಕೆಲಸ ನೋಡೋಣ."

''ನಾನಾ? ಈಗಲೇ ಸೃಷ್ಟಿಸುತ್ತೇನೆ! ನಾನು ನಿನ್ನಂತೆ ಭಯಬಿದ್ದು ಓಡಿಹೋಗೋಳೂ ಅಂದ್ಕೋಡಿದೀಯ?''

"ಸೃಷ್ಟಿ ಅಂದರೆ ಹಳೇ ವೀಣೆ ತಂತಿಗಳನ್ನು ಮೀಟೋ ಅಷ್ಟು ಸುಲಭ ಅಲ್ಲ,'' ಆ ಮಾತಿನಿಂದ ಸರಸ್ವತಿಗೆ ಸಿಟ್ಟನ್ನು ತಡೆಯಲಾಗಲಿಲ್ಲ.

"ನನ್ನ ಶಕ್ತಿಯೇನೆಂದು ಈಗಲೇ ತೋರಿಸುತ್ತೇನೆ," ಅಂದು ಬಿಟ್ಟಳು.

"ನಿನ್ನ ಸೃಷ್ಟಿ ಎಷ್ಟು ಲಕ್ಷಣವಾಗಿರುತ್ತೋ ನಾನೂ ನೋಡ್ತೀನಿ" ಶಚೀದೇವಿ ಹೇಳಿದಳು.

"ಹಾಗಾದರೆ ನೋಡೇ . " ಎಂದಳು ಬ್ರಹ್ಮನ ಬಳಿಗೆ ನಡೆಯುತ್ತಾ.

"ನಿಲ್ಲಿಸಿ! ನಾನು ಸೃಷ್ಟಿಮಾಡಿ ಆ ಶಚೀದೇವಿಯ ಬಾಯಿ ಮುಚ್ಚಿಸು

ತ್ತೇನೆ" ಅಂದಳು ಕೋಪದಿಂದ. ಬ್ರಹ್ಮ ಏನೋ ಹೇಳಲು ಪ್ರಯತ್ನಿಸಿದನಾ ಗಲೀ ಅವಳ ಕೋಪವನ್ನು ಕಂಡು ಮರುಮಾತನಾಡದೆ ಪಕ್ಕಕ್ಕೆ ಸರಿದ.

ಸರಸ್ವತಿ ಅವನ ಸ್ಥಾನದಲ್ಲಿ ಕುಳಿತು ಸೃಷ್ಟಿಯನ್ನು ಪ್ರಾರಂಭಿಸಿದಳು. ಮೊದಲನೆ ಬೊಂಬೆಯನ್ನು ಪೂರ್ತಿಮಾಡಿ ಪ್ರಾಣಕೊಟ್ಟು ಭೂಲೋಕಕ್ಕೆ ಕಳುಹಿ ಸಿದಳು. ಆ ಬೊಂಬೆ ಭೂಲೋಕದಲ್ಲಿ ದಂಪತಿಗಳೊಬ್ಬರಿಗೆ ಜನ್ಮವಾಯಿತು.

ಎರಡನೆಯದನ್ನು, ಮೂರನೆಯವನ್ನೂ ಸೃಷ್ಟಿಸಿದ ನಂತರ ಅವಳ ಈ ಕೆಲಸವನ್ನೇ ಸಾವಿರ ಕಣ್ಣುಗಳಿಂದ ಗಮನಿಸುತ್ತಿದ್ದ ಶಚೀದೇವಿ ಗೊಳ್ಳೆಂದು ನಕ್ಕಳು.

"ಅದೇಕೆ ಆ ನಗು?" ಸಿಟ್ಟಿನಿಂದ ಕೇಳಿದಳು ಸರಸ್ವತೀದೇವಿ.

"ನಿನ್ನ ಸೃಷ್ಟಿಯನ್ನು ನೋಡುತ್ತಿದ್ದರೆ ನಗುವುದನ್ನು ಬಿಟ್ಟು ಬೇರೇನು ಮಾಡಲಿ?"

"ಯಾಕೆ ನನ್ನ ಸೃಷ್ಟಿಯಲ್ಲಿ ಏನು ಲೋಪ ಕಂಡಿತು?"

"ಎಲ್ಲಾ ಗಂಡುಗಳನ್ನೇ ಸೃಷ್ಟಿಸಿದರೆ ಅದಕ್ಕೆ ಜೋಡಿಯಾದ ಹೆಣ್ಣು ಗಳನ್ನು ಯಾವಾಗ ಸೃಷ್ಟಿಸುತ್ತಿ? ಗಂಡಿಗೆ ಜೋಡಿಯಾಗಿ ಹೆಣ್ಣನ್ನು ಸೃಷ್ಟಿಸ ಬೇಕೆಂದು ತಿಳಿಯದಿದ್ದರೂ 'ಮೇಡ್ ಫಾರ್ ಈಚ್ ಅದರ್' ಸ್ಪರ್ಧೆಯಲ್ಲಿ ಗೆದ್ದಳಂತೆ!" ಜೋರಾಗಿ ನಗುತ್ತಾ ಹೇಳಿದಳು.

ಸರಸ್ವತಿ ತನ್ನ ತಪ್ಪನ್ನು ಮುಚ್ಚಿಕೊಳ್ಳುತ್ತಾ ಚಕಚಕನೆ ಎರಡು ಹೆಣ್ಣು ಗಳನ್ನು ಸೃಷ್ಟಿಸಿದಳು.

"ನೋಡಿದೆಯಾ ಈ ಇಬ್ಬರು ಗಂಡುಗಳಿಗೆ. ಇಬ್ಬರು ಹೆಣ್ಣುಗಳನ್ನು ಸೃಷ್ಟಿಸಿದೆ. ಈ ಎರಡು ಜೋಡಿಗಳನ್ನು ಕೂಡಾ ಮೇಡ್ ಫಾರ್ ಈಚ್ ಅದರ್ ಜೋಡಿಗಳಾಗೇ ಮಾಡುತ್ತೇನೆ. ಇನ್ನು ಈ ಮೂರನೆಯವನಿಗೆ ಕೂಡಾ ಎಲ್ಲಾ ರೀತಿಯಿಂದಲೂ ಸರಿಹೊಂದುವ ಹುಡುಗಿಯನ್ನು ಸೃಷ್ಟಿಸುತ್ತೇನೆ." ಎನ್ನುತ್ತಾ ಮತ್ತೊಂದು ಹೆಣ್ಣು ಬೊಂಬೆಯನ್ನು ಸೃಷ್ಟಿಸುತ್ತಿದ್ದಾಗ ..ಅದು ವರೆವಿಗೂ ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದ ಬ್ರಹ್ಮ ಓರೆಗಣ್ಣಿನಿಂದ ಅವಳ ಸೃಷ್ಟಿ ಯನ್ನು ನೋಡಿ ಬೆಚ್ಚಿಬಿದ್ದು ಕಟಾರನೆ ಕಿರುಚಿ ಸೃಷ್ಟಿಯನ್ನು ಮುಂದುವರೆಯ ದಂತೆ ತಡೆದ.

"ಅಯ್ಯೋ! ಎಂತಹ ಕೆಲಸಮಾಡಿದೆ ಸರಸ್ವತಿ! ಅದಕ್ಕೇ ಹೇಳುವುದು ಹೆಣ್ಣಿಗೆ ದೊಡ್ಡಸ್ತಿಕೆ ಕೊಟ್ಟರೆ ಪ್ರಳಯ ಅಂತ. ಈಗ ನೋಡು ನನ್ನ ಮನೇನೇ ಮುಳುಗಿತು." ಗಾಬರಿಯಿಂದ ಹೇಳಿದ.

"ಏನ್ರೀ! ಏನು ತಪ್ಪು ಮಾಡಿದ್ದೀನಿ?" ಅಳುಮುಖಮಾಡಿ ಕೇಳಿದಳು

ಸರಸ್ವತಿ.

"ಏನು ತಪ್ಪೆ? ನನ್ನ ಮುಖ! ಆ ಮೂವರು ಗಂಡುಗಳನ್ನೂ ಒಂದೇ ರೂಪಕೊಟ್ಟು ಸೃಷ್ಟಿಸಿದ್ದೀಯಲ್ಲಾ..."

"ಒಂದೇ ರೂಪ ಇದ್ದರೇನಂತೆ?"

"ಇದ್ದರೇನಂತೆ ಅಂತೀಯಲ್ಲಾ...? ಇಬ್ಬರು ಒಂದೇ ರೀತಿ ಇದ್ದರೇನೇ ಭೂಲೋಕದಲ್ಲಿ ನಾನಾ ಅವಸ್ಥೆಗಳು ನಡೆಯುತ್ತಿರುತ್ತವೆ. ಅಂತಹುದರಲ್ಲಿ ಮೂವರು ಒಂದೇ ರೂಪ ಪಡೆದರೆ...ಅನಾಹುತ ಸಂಭವಿಸಿ...ಅದರಲ್ಲಿಯೂ ಇದು ಕಲಿಗಾಲ..."

ಸರಸ್ವತಿಗೆ ಕೋಪ ಬಂದುಬಿಟ್ಟಿತು

"ನೀವು ಆ ಸಿನೆಮಾಗಳನ್ನು ನೋಡಿ ಹಾಗಂದುಕೊಳ್ಳುತ್ತಿದ್ದೀರಷ್ಟೆ! ನಿಜ ಜೀವನದಲ್ಲಿ ಅಂತಹ ಘಟನೆಗಳೇನೂ ನಡೆಯುವುದಿಲ್ಲ" ಮೂತಿ ಊದಿಸಿಕೊಂಡು ಹೇಳಿದಳು.

ಬ್ರಹ್ಮ ಆಗ ನೋಡಿದ ಸರಸ್ವತಿ ಸೃಷ್ಟಿಸಿದ ಎರಡು ಹೆಣ್ಣುಗಳನ್ನು ಕೂಡಾ! ಕೂಡಲೇ ಎಚ್ಚರತಪ್ಪಿದಂತಾಯ್ತು. "ಅಯ್ಯೋ! ಪ್ರಳಯ ಆಯ್ತು. ಮೂವರು ಗಂಡುಗಳನ್ನು ಮಾತ್ರವೇ ಒಂದೇ ರೂಪದಿಂದ ಸೃಷ್ಟಿಸಿದೆಯೆಂದು ಕೊಂಡರೆ, ಅವರಿಗೆ ಜೋಡಿಯಾಗಿ ಹೆಣ್ಣುಗಳನ್ನೂ ಒಂದೇ ರೂಪಕೊಟ್ಟು ಸೃಷ್ಟಿಸಿದೀಯಲ್ಲಾ! ಶಿವ ಶಿವಾ ಎನ್ನುತ್ತ ನಾಲ್ಕು ತಲೆಗಳಲ್ಲಿ ಒಂದರ ಮೇಲೆ ಕೈಹೊತ್ತುಕೊಂಡು ಕುಳಿತ.

ಸರಸ್ವತಿ ಕೋಪದಿಂದ ಅಲ್ಲಿಂದ ಹೊರಟಳು.

''ಅವರಿಗೇನು ಸಮಸ್ಯೆಗಳು ಬಂದರೂ ನಾನು ಪರಿಹರಿಸುತ್ತೇನೆ'' ರೋಷದಿಂದ ಹೇಳಿದಳು.

"ಹೇಗೆ ಪರಿಹರಿಸ್ತುತ್ತೀಯೋ ನಾನೂ ನೋಡುತ್ತಾ...ಅವರ ನಡುವೆ ಕನ್‌ಫ್ಯೂಸ್ ಮಾಡುತ್ತಾ ನೀರುಕುಡಿಸುತ್ತೇನೆ ನೋಡು" ಛಾಲೆಂಜ್ ಮಾಡಿದಳು ಶಚೀದೇವಿ.

"ನೋಡೋಣ!'' ಎನ್ನುತ್ತಾ ಪಾರ್ವತಿ ಅಲ್ಲಿಂದ ಹೊರಟುಹೋದಳು.

"ನೋಡೇ ಬಿಡೋಣ!" ಎನ್ನುತ್ತಾ ಶಚೀದೇವಿಯೂ ಅಲ್ಲಿಂದ ಹೊರಟಳು.

* * *

## ಕಾದಂಬರಿ ಪ್ರಾರಂಭ........

ಸರಸ್ವತಿ ಸೃಷ್ಟಿಸಿದ ಮೊದಲನೆ ವ್ಯಕ್ತಿ.

ಮುನಿಸಿಪಲ್ ಹೈಸ್ಕೂಲ್ ತುಂಬಾ ನಿಶ್ಶಬ್ದವಾಗಿತ್ತು. ಸ್ಕೂಲ್ ಬಿಟ್ಟು ಅರ್ಧ ಗಂಟೆಯಾಗಿತ್ತಷ್ಟೆ. ಇನ್ನೂ ಜವಾನ ಬಷೀರ ಒಂದೊಂದೇ ರೂಮಿಗೆ ಬೀಗ ಹಾಕುತ್ತಾ ಬರುತ್ತಿದ್ದಾನೆ. ಬೀಗ ಹಾಕುವುದು ಪೂರ್ತಿಯಾದರೆ ಕೀಗಳನ್ನು ವಾಚ್‌ಮನ್‌ಗೆ ಒಪ್ಪಿಸಿ ಮನೆಗೆ ಹೋಗಬಹುದು. ಆ ದಿನ ಬೇಗನೆ ಮನೆಗೆ ಬರಲು ಬೇರೆ ತಿಳಿಸಿದ್ದಳು ಅವನ ಹೆಂಡತಿ! ಎಷ್ಟೋ ವರ್ಷಗಳಿಂದ ಮನೆಗೆ ಬೇಗನೆ ಬರುತ್ತಿದ್ದ. ಆದರೆ ಮನೆಗೆ ಏಕೆ ಬೇಗಬರಬೇಕೆಂದು ಮೊದ್ದು ಬಷೀರ್‌ಗೆ ಎಷ್ಟು ಯೋಚಿಸಿದರೂ ಅರ್ಥವಾಗುತ್ತಿರಲಿಲ್ಲ. ಆದರೂ ಅವನ ಹೆಂಡತಿಯ ಮಾತನ್ನು ಮೀರಲು ಅವನಿಗೆ ಇಷ್ಟವಿರಲಿಲ್ಲ. ಕೆಮಿಸ್ಟ್ರಿ ಲ್ಯಾಬ್ ಬಳಿಗೆ ಬರುವ ವೇಳೆಗೆ ಅವನಿಗೆ ತುಂಬಾ ಬೇಸರವಾಯಿತು. ಒಳಗೆ ಸೈನ್ಸ್ ಟೀಚರ್ ಚಂದ್ರ ಬೋಸ್ ಇನ್ನೂ ಏನೇನೋ ಪ್ರಯೋಗಗಳನ್ನು ಮಾಡುತ್ತಲೇ ಇದ್ದ. ಅದೇನೂ ಬಷೀರ್‌ಗೆ ಹೊಸದಲ್ಲ. ಈಗ ಎಂಟು ವರ್ಷಗಳಿಂದಲೂ ಅಷ್ಟೆ. ಸ್ಕೂಲು ಬಿಟ್ಟ ಕೂಡಲೇ ತನ್ನ ಸ್ವಂತ ಪ್ರಯೋಗಗಳನ್ನು ಮಾಡಿಕೊಳ್ಳುತ್ತಿರುತ್ತಾನೆ. ಮಾರ ನೆಯ ಬೆಳಿಗ್ಗೆ ನೋಡಿದರೆ ಕೆಮಿಸ್ಟ್ರಿಲ್ಯಾಬ್‌ನಲ್ಲಿ ಒಡೆದ ಟೆಸ್ಟ್ಯೂಬ್‌ಗಳು, ಚೆಲ್ಲಿದ ದ್ರಾವಣಗಳು ಕಾಣುತ್ತಿರುತ್ತವೆ. ಅವನು ಚಂದ್ರಬೋಸ್‌ನನ್ನು ಬೈದು ಕೊಳ್ಳುತ್ತಾ ಅದನ್ನೆಲ್ಲಾ ಕ್ಲೀನ್ ಮಾಡುತ್ತಾನೆ. ಆದರೆ ಎಂದಿಗೂ ಬಷೀರ್ ಇದರ ಬಗ್ಗೆ ಹೆಡ್ ಮಿಸ್ಟ್ರೆಸ್ ವಸಂತರಿಗೆ ದೂರುತ್ತಿರಲಿಲ್ಲ. ಅದಕ್ಕೆ ಕಾರಣ ಪ್ರತಿದಿನವೂ ಚಂದ್ರಬೋಸ್‌ನಿಂದ ಬಷೀರ್‌ಗೆ ಒಂದು ಪುಕ್ಕಟೆ ಟೀ ಸಿಗು ತ್ತಿತ್ತು. ಬಷೀರ್ ಲ್ಯಾಬ್‌ಗೆ ಬಂದು ಚಂದ್ರಬೋಸ್ ಎದುರಿನಲ್ಲಿ ನಿಂತ.

''ದಿನವೂ ಇದೇನು ಸಾರ್? ಅಕಸ್ಮಾತ್ ಹೆಡ್ ಮಿಸ್ಟ್ರೆಸ್ ಅಥವಾ ಛೇರ್ಮನ್ ರಾತ್ರಿಯ ವೇಳೆ ಚೆಕ್ ಮಾಡುವುದಕ್ಕೇನಾದರೂ ಬಂದರೆ ನನ್ನ ಕೆಲಸ ಹೋಗುತ್ತೆ'' ಅಭ್ಯಾಸದಂತೆ ಹೇಳಿದ.

ಹೀಗೇ ದಿನವೂ ಆಗಿದ್ದರೆ ಚಂದ್ರಬೋಸ್ ಆ ಕೂಡಲೇ ಅವನ ಭುಜ ತಟ್ಟಿ ''ನೀನೇನೂ ಭಯಪಡಬೇಡ ಬಷೀರ್! ನನ್ನ ಪ್ರಯೋಗಗಳಲ್ಲಿ ವಿಜಯ ಲಭಿಸಿದೆ! ಯಾವ ಕ್ಷಣದಲ್ಲಾದರೂ ನನಗೆ ಪ್ರಧಾನ ಮಂತ್ರಿಯವರಿಂದ ಕರೆ

ಬರಬಹುದು...ಆಗ ನಿನಗೆ ಒಳ್ಳೆಯ ಬಹುಮಾನ ಕೊಡುತ್ತೇನೆ. ನಿನ್ನ ಬದುಕಿನಲ್ಲೇ ನೀನು ಊಹಿಸಿರದಷ್ಟು ದೊಡ್ಡ ಬಹುಮಾನ'' ಅನ್ನುತ್ತಿದ್ದ.

ಆದರೆ ಆ ದಿನ ಅವನು ಆ ಮಾತು ಆಡಲಿಲ್ಲ. ಹಾಗೆ ನೋಡಿದರೆ ಅವನಿಗೆ ಬಷೀರನ ಮಾತುಗಳೇ ಕೇಳಿಸಲಿಲ್ಲ. ತನ್ನ ಸುತ್ತಲೂ ಹೊಗೆ ಕಾರಿಸುತ್ತಿದ್ದ ಗ್ಯಾಸ್ ಜಾರ್‌ಗಳೆಡೆಗೇ ನೆಟ್ಟದೃಷ್ಟಿಯಿಂದ ನೋಡುತ್ತಿದ್ದ.

ಹಠಾತ್ತನೆ ಪ್ರನಾಳವೊಂದರಲ್ಲಿದ್ದ ದ್ರಾವಣವೊಂದು ಬಿಳಿಯ ಬಣ್ಣದಿಂದ ಕೆಂಪು ಬಣ್ಣವಾಗಿ ಬದಲಾಯಿತು. ಇದ್ದಕ್ಕಿದ್ದಂತೆಯೇ ಅದರೊಳಗಿಂದ ಉರಿ ಪ್ರಾರಂಭವಾಯಿತು.

ಚಂದ್ರಬೋಸ್ ಮುಖ ಅದನ್ನು ಗಮನಿಸಿ ಆಶ್ಚರ್ಯದಿಂದ ತುಂಬಿದೆ. ಬಷೀರ್ ಇದನ್ನೆಲ್ಲಾ ನೋಡುತ್ತಾ ಲ್ಯಾಬಿನ ಬಾಗಿಲಿನ ಬಳಿಯೇ ನಿಂತ,

"ಸಾರ್!'' ವಿನಯದಿಂದ ಕರೆದ.

ಚಂದ್ರಬೋಸ್‌ಗೆ ಆ ಮಾತುಗಳು ಕೇಳಿಸಲಿಲ್ಲ. ತದೇಕಚಿತ್ತದಿಂದ ಆ ದ್ರಾವಣದಲ್ಲಿ ಉಂಟಾಗುತ್ತಿದ್ದ ಬದಲಾವಣೆಗಳನ್ನೇ ಗಮನಿಸುತ್ತಿದ. ಈಗ ಆ ದ್ರಾವಣದಿಂದ ಉರಿ ಬರುವುದು ನಿಂತಿತು. ಕೂಡಲೇ ಅದಕ್ಕೆ ಮತ್ತ್ಯಾವುದೋ ದ್ರಾವಣವನ್ನು ಬೆರೆಸಿದ. ಮರುಕ್ಷಣವೇ ಬಿಳಿ ಹೊಗೆ ಬರಲು ಪ್ರಾರಂಭವಾಯಿತು.

ಆ ಹೊಗೆಯ ವಾಸನೆಯನ್ನು ಸ್ವಲ್ಪ ಎಳೆದುಕೊಂಡರೂ ಎಚ್ಚರತಪ್ಪಿ ಬಿದ್ದುಹೋಗುವುದು ಖಂಡಿತವೆಂದು ಬಷೀರನಿಗೆ ಅನುಭವಪೂರ್ವಕವಾಗಿ ಗೊತ್ತು. ಹಿಂದಿನ ವರ್ಷ ತಾನು ಹೀಗೆಯೇ ಚಂದ್ರಬೋಸ್ ಪಕ್ಕದಲ್ಲಿ ನಿಂತು ಆ ವಾಸನೆಯನ್ನು ಎಳೆದುಕೊಂಡಂತೆಯೇ ನಲವತ್ತೆಂಟು ಗಂಟೆಗಳ ಕಾಲ ಎಚ್ಚರ ತಪ್ಪಿ ಬಿದ್ದಿದ್ದ. ನಂತರ ಚಂದ್ರಬೋಸ್ ತನಗೆ ಹೇಳಿದ್ದ...ಆ ಹೊಗೆ ಬರುವಾಗ ಮತ್ತೊಂದು ದ್ರಾವಣದಲ್ಲಿ ಅದ್ದಿದ್ದ ಬಟ್ಟೆಯೊಂದನ್ನು ಮೂಗಿಗೆ ಕಟ್ಟಿಕೊಳ್ಳಬೇಕೆಂದು. ಅಂದಿನಿಂದ ಬಷೀರ್ ಪ್ರಯೋಗದ ಸ್ಥಳದಿಂದ ಸ್ವಲ್ಪ ದೂರವೇ ಇರುತ್ತಿದ್ದ.

ಚಂದ್ರಬೋಸ್ ತನ್ನ ಕೋಟಿನ ಜೇಬಿನಿಂದ ಕಾಲುಗಳನ್ನು ಕಟ್ಟಿಹಾಕಿದ್ದ ಇಲಿಯನ್ನು ಹೊರತೆಗೆದ. ಅದರ ಕಟ್ಟುಗಳನ್ನು ಬಿಚ್ಚಿ ಆ ಹೊಗೆಯಲ್ಲಿ ಅದನ್ನು ತೂಗಾಡಿಸಿದ. ಅದು ಎಚ್ಚರತಪ್ಪಿತು. ಕೂಡಲೆ ಆದನ್ನು ಪ್ರತ್ಯೇಕವಾದ ಮತ್ತೊಂದು ಪೆಟ್ಟಿಗೆಯಲ್ಲಿ ಹಾಕಿದ. ದ್ರಾವಣದಿಂದ ಹೊಗೆ ಬರುವುದು ನಿಂತಿತು. ಅದರೆಡೆಗೇ ನೋಡುತ್ತಾ ಇದ್ದುಬಿಟ್ಟ. ಅವನ ಮುಖದಲ್ಲಿ ಅದುವರೆಗೂ ಕಾಣುತ್ತಿದ್ದ ಕಾತುರತೆ, ಆತುರ ಎಲ್ಲಾ ಮಾಯವಾಗಿತ್ತು. ಇದ್ದಕ್ಕಿ

ದ್ದಂತೆಯೇ ವಿಷಾದದ ಛಾಯೆ ಪ್ರವೇಶಿಸಿತು.

ಬಷೀರ್ ನಿಧಾನವಾಗಿ ಚಂದ್ರಬೋಸ್ ಬಳಿಗೆ ಬಂದು, 'ಸಾರ್' ಎಂದ.

''ಊ...'' ತಲೆಎತ್ತದೇ ಬೋಸ್ ಹೇಳಿದ.

''ಆದೇಕೆ ಸಾರ್ . ದಿನಾಮಾಡುವ ಪ್ರಯೋಗವನ್ನೇ ಮಾಡುತ್ತಾ, ಆ ಇಲಿಯೊಡನೆ ನನಗೂ ಚಿತ್ರಹಿಂಸೆ ಕೊಡುತ್ತಿದ್ದೀರಿ. ನನ್ನ ಹೆಂಡತಿ ಬೇಗನೆ ಮನೆಗೆ ಬರಲು ಎಷ್ಟು ಸಲ ಹೇಳಿದರೂ ನಿಮ್ಮಿಂದ ಲೇಟಾಗಿಬಿಡುತ್ತೆ ಸಾರ್!" ಸ್ವಲ್ಪ ಕೋಪದಿಂದ ಹೇಳಿದ ಬಷೀರ್.

ಕೂಡಲೇ ಚಂದ್ರಬೋಸ್ ಟೇಬಲಿನ ಮೇಲೆ ತಲೆಯನ್ನು ಇಟ್ಟು ಬಿಕ್ಕಿ ಬಿಕ್ಕಿ ಅಳಲು ಪ್ರಾರಂಭಿಸಿದ.

ಬಷೀರ್ ಅವನ ವರ್ತನೆಗೆ ನಿಶ್ಚೇಷ್ಟಿತನಾದ.

''ಸಾರ್ ಏನುಸಾರ್...ಏನು ನಡೆಯಿತು ಸಾರ್?'' ಚಂದ್ರಬೋಸನ ಭುಜ ತಟ್ಟುತ್ತಾ ಕೇಳಿದ.

ತುಂಬಾ ಸಮಯದ ನಂತರ ಆ ದುಃಖದಿಂದ ಚೇತರಿಸಿಕೊಂಡ ಚಂದ್ರ ಬೋಸ್ ''ಬಷೀರ್ ನಾನು ಚಿಕ್ಕಂದಿನಿಂದಲೂ ಏನೆಂದು ಕನಸು ಕಾಣುತ್ತಿದ್ದ ಗೊತ್ತಾ? ಎಂದಿಗಾದರೂ ನಾನು ಜಗದೀಶಚಂದ್ರ ಬೋಸ್ ನಂತಹ ಪ್ರಖ್ಯಾತ ವಿಜ್ಞಾನಿಯಾಗಬೇಕೆಂದು. ನಮ್ಮ ದೇಶ ಬ್ರಿಟೀಷರ ಆಳ್ವಿಕೆಯಲ್ಲೇ ಇದ್ದಿದ್ದರೆ ಆಗಿಬಿಡುತ್ತಿದ್ದೆನೋ ಏನೋ! ಆದರೆ ದುರದೃಷ್ಟವಶಾತ್ ನಮ್ಮ ವರು ನಿಜವಾದ ಪ್ರತಿಭೆಯನ್ನು ಗುರುತಿಸುವುದೇ ಇಲ್ಲ. ನಾನು ಕಂಡುಹಿಡಿದ 'ಬೋಸ್ ಕಾನ್‌ಸಂಟ್ರೇಟೆಡ್ ಏಯರ್ ಗ್ಯಾಸ್' ಪ್ರಪಂಚದಲ್ಲೇ ಇದುವರೆ ವಿಗೂ ಯಾರೂ ಕಂಡುಹಿಂಡಿದಿಲ್ಲ. ಈ ಗ್ಯಾಸ್‌ನಿಂದ ನಮ್ಮ ರಕ್ಷಣಾದಳಕ್ಕೆ ಎಷ್ಟು ಉಪಯೋಗವಾಗುತ್ತದೆ ಗೊತ್ತಾ?"

"ಗೊತ್ತು ಸಾರ್."

ಚಂದ್ರಬೋಸ್ ಆಶ್ಚರ್ಯದಿಂದ "ನಿನಗೆ ಹೇಗೆ ಗೊತ್ತು?" ಎಂದ.

''ನೀವೇ ಹೇಳಿದ್ದಿರಲ್ಲ ಸಾರ್.''

''ನಾನು ಹೇಳಿದೆನಾ? ನನಗೇ ನೆನಪಿಲ್ಲವಲ್ಲ. ಇನ್ನೊಂದು ಸಲ ಹೇಳ್ತೀನಿ ಕೇಳು. ಈ ಗ್ಯಾಸನ್ನು ಒಂದು ಬಾಟಲಿನಲ್ಲಿ ತೆಗೆದುಕೊಂಡುಹೋಗಿ ಶತ್ರು ದೇಶಗಳ ರಕ್ಷಣಾದಳಗಳ ಮಧ್ಯೆ ಹಾಕಿದರೆ ..ಎರಡು ಕಿಲೋಮಿಟರ್‌ಗಳ ದೂರದಲ್ಲಿರುವ ಮನುಷ್ಯರು, ಪ್ರಾಣಿಗಳೂ ಎಲ್ಲಾ ಎಚ್ಚರತಪ್ಪಿ ಬಿದ್ದು ಹೋಗುತ್ತವೆ...ಎಂತಹ ಉಪಯುಕ್ತ ಆಯುಧ ಕಂಡುಹಿಡಿದಿದ್ದೇನೆ ನೋಡಿ ದೆಯಾ!"

''ಹೌದು ಸಾರ್''

''ಆದರೆ ಈ ವಿಷಯದ ಬಗ್ಗೆ ನಾನು ನಮ್ಮ ರಕ್ಷಣಾ ಮಂತ್ರಿಗಳಿಗೆ, ಪ್ರಧಾನ ಮಂತ್ರಿಗಳಿಗೆ ನೂರಾರು ಕಾಗದಗಳನ್ನು ಬರೆದಿದ್ದೇನೆ. ಕೆಲವಕ್ಕೆ ಸ್ಟಾಂಪನ್ನು ಇಡದೇ ಕೂಡಾ ಕಳುಹಿಸಿದ್ದೆ. ಆದರೂ ಅವರು ನನ್ನನ್ನು ಇದು ವರೆವಿಗೂ ಆಹ್ವಾನಿಸಲೇ ಇಲ್ಲ. ಆ ಗ್ಯಾಸ್ ಬಗ್ಗೆಯಾಗಲೀ ಅದರ ಫಾರ್ಮುಲಾ ಬಗ್ಗೆಯಾಗಲೀ ವಿವರಗಳನ್ನು ಕೇಳಲೇ ಇಲ್ಲ. ಇನ್ನು ನಾನು ಸಹಿಸಲಾರೆ ಬಷೀರ್! ಇವತ್ತೇ ಕೊನೆದಿನ ನಾನು ಆತ್ಮಹತ್ಯೆ ಮಾಡಿಕೊಳ್ಳಲು ನಿರ್ಧರಿಸಿ ದ್ದೇನೆ. ಅದಕ್ಕೆ ನಾಲ್ಕೂವರೆಗೆ ಬರುವ ಪೋಸ್ಟಿಗೆ ಕಾಯುತ್ತಿದ್ದೇನೆ. ಏನೂ ಬರದಿದ್ದರೆ . "

ಎನ್ನುತ್ತಿದ್ದಂತೆಯೇ ಪೋಸ್ಟಮನ್ ಬಂದು ಏನೂ ಇಲ್ಲವೆಂದು ಹೇಳಿ ಹೋದ. ಒಂದು ಕ್ಷಣ ಮೌನವಾಗಿದ್ದ ಚಂದ್ರಬೋಸ್ ಕನ್ನಡಕವನ್ನು ತೆಗೆದು ಕಣ್ಣೊರೆಸಿಕೊಂಡು ಮತ್ತೆ ಹಾಕಿಕೊಂಡ.

''ಹಾಗಾದರೆ ಇವತ್ತಿಗೆ ನನ್ನ ಬದುಕು ಮುಗಿದಂತೆ. ಬಷೀರ್, ನನ್ನ ಪ್ರಯೋಗಗಳಿಗೆಲ್ಲಾ ಎಷ್ಟೋ ಸಹನೆಯಿಂದ, ನೊಂದುಕೊಳ್ಳುತ್ತಲೇ, ಕಿರುನಗೆ ಯಿಂದ ಸಹಕರಿಸಿದ ನಿನಗೂ, ಇಲಿಗೂ ಕೃತಜ್ಞತೆ ಅರ್ಪಿಸುತ್ತಿದ್ದೇನೆ. ನಿಮ್ಮಿ ಬ್ಬರ ಹೆಸರೂ ನನ್ನ ಹೆಸರಿನೊಡನೆ ಸೈನ್ಸ್ ಚರಿತ್ರೆಯಲ್ಲಿ ನಿಂತು ಬಿಡುತ್ತದೆಂದು ಆಶಿಸುತ್ತಿದ್ದೇನೆ. ನಿಮಗಾಗಿ ಇನ್ನೇನೂ ಮಾಡಲಾರದೆ ಹೋದೆ. ಐಯಾಮ್ ರಿಯಲಿ ಸಾರಿ ಬಷೀರ್ .."

''ಏನೂ ಪರವಾಗಿಲ್ಲ ಬಿಡಿ ಸಾರ್...ಮುಂದಿನ ಜನ್ಮದಲ್ಲಿ ಸಹಾಯ ಮಾಡುವಿರಂತೆ .."

"ಥ್ಯಾಂಕ್ಯೂ...ಬಷೀರ್! ಕನಿಷ್ಟ ನನ್ನ ಹೆಂಡತಿ ನಿನ್ನಷ್ಟು ಅರ್ಥ ಮಾಡಿ ಕೊಂಡಿದ್ದರೆ ಎಷ್ಟೋ ಸಂತೋಷವಾಗುತ್ತಿತ್ತು. ಆದರೆ ಅವಳೊಬ್ಬ ರಾಕ್ಷಸಿ ಬಷೀರ್! ಪ್ರತಿಕ್ಷಣ ನನ್ನನ್ನು ಕಿತ್ತು ತಿನ್ನುತ್ತಿರುತ್ತಾಳೆ. ಸದಾ ಅವಳಿಗೆ ಸೀರೆ, ಮೇಕಪ್, ಟ್ರಿಪ್, ಸಿನಿಮಾ ಇಷ್ಟೇ...ಇದನ್ನೆ ಬದುಕೆಂದುಕೊಂಡಿದ್ದಾಳೆ. ಇವೆಲ್ಲಾ ಮನುಷ್ಯರೊಡನೆ ಹೋಗುವ ತಾತ್ಕಾಲಿಕವಾದುವೆಂದು ಅವಳಿಗೆ ಗೊತ್ತಿಲ್ಲ. ಅದಕ್ಕೆ ಅವಳಿಗೆ ತಿಳಿಸದೆ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದೇನೆ."

ಬಷೀರ್ ಸಂತೋಷಗೊಂಡ. ಅಂದರೆ ಆ ದಿನ ತಾನು ಕೆಮಿಸ್ಟ್ರಿ ಲ್ಯಾಬಿನ ಬೀಗವನ್ನು ಹಾಕಿಕೊಂಡು ಹೋಗಬಹುದೆಂದಂತಾಯಿತು. ಪ್ರತಿದಿನ ಬೀಗದ ಕೈಯನ್ನು ವಾಚ್‌ಮನ್‌ಗೆ ಕೊಡುತ್ತಿದ್ದ. ಅವನು ಲ್ಯಾಬಿನಲ್ಲಿದ್ದ ಸ್ಪಿರಿಟನ್ನೆಲ್ಲಾ ಕುಡಿದುಬಿಡುತ್ತಿದ್ದ.

"ಇನ್ನು ಹೊರಡೋಣವಾ ಸಾರ್ ಹಾಗಾದರೆ...''

ಚಂದ್ರಬೋಸ್ ಎದ್ದು ಲ್ಯಾಬಿನ ಹೊರಬಂದು ನಿಂತ. ಬಷೀರ್ ಕೂಡಲೇ ಬಾಗಿಲನ್ನು ಮುಚ್ಚಿ ಬೀಗ ಹಾಕಿದ.

"ಬಷೀರ್.. " ಕಿರುಚಿದ ಚಂದ್ರಬೋಸ್.

''ಯಸ್ಸಾರ್..."

"ನನಗೊಂದು ಸಹಾಯ ಮಾಡ್ತೀಯಾ..."

"ಹೇಳಿ ಸಾರ್..."

"ಇಲಿ ನಲವತ್ತೆಂಟು ಗಂಟೆಗಳ ಕಾಲ ಎಚ್ಚರ ತಪ್ಪಿರುತ್ತೆ ಅಷ್ಟೆ. ನಂತರ ಅದನ್ನು ತೆಗೆದುಕೊಂಡುಹೋಗಿ ನನ್ನ ಹೆಂಡತಿಗೆ ಕಾಣದಂತೆ ನಮ್ಮ ಮನೆಯಲ್ಲಿ ಬಿಟ್ಟುಬಿಡು."

''ನಿಮ್ಮ ಮನೆಯಲ್ಲೇಕೆ ಬಿಡಬೇಕು ಸಾರ್?" ಬಷೀರ್ ಆಶ್ಚರ್ಯಪಟ್ಟು. ಎಂದ.

''ನನ್ನ ಹೆಂಡತಿಯನ್ನು ಅದೊಂದು ಮಾತ್ರ ಆಟ ಆಡಿಸಬಲ್ಲದು! ನಾನು ಪ್ರತ್ಯಕ್ಷ ನೋಡಿದ್ದೇನೆ ಬಷೀರ್...ನನ್ನ ಹೆಂಡತಿಯ ಬಟ್ಟೆಗಳನ್ನು ಕಡಿದು ಹಾಕುವುದು, ಅಡಿಗೆ ಮನೆಯಲ್ಲಿ ಅವಳು ಮಾಡಿಟ್ಟಿದ್ದ ತಿಂಡಿಗಳನ್ನೆಲ್ಲಾ ತಿಂದು ಬಿಡುವುದು, ನಿದ್ರಿಸಲು ಬಿಡದೆ ಅವಳ ಮೇಲೆ ಓಡಾಡುವುದು...ನಿಜಕ್ಕೂ ಅವಳಿಗೆ ನರಕ ದರ್ಶನ ಮಾಡಿಸಿಬಿಡುತ್ತೆ. ನನ್ನ ಆತ್ಮಕ್ಕೆ ಶಾಂತಿ ಸಿಗಬೇಕಾದರೆ ಆ ಇಲಿ ಮತ್ತೆ ನಮ್ಮ ಮನೆ ಸೇರಬೇಕು."

''ತಪ್ಪದೆ ನಿಮ್ಮ ಅಂತಿಮ ಕೋರಿಕೆಯನ್ನು ನೆರವೇರಿಸುತ್ತೇನೆ ಸಾರ್..." ಬಷೀರ್ ಕೈಯ್ಯನ್ನು ತನ್ನ ಕೈಯ್ಯಲಿ ತೆಗೆದುಕೊಂಡು ಆಪ್ಯಾಯತೆಯಿಂದ ಒತ್ತಿದ ಚಂದ್ರಬೋಸ್.

''ಹೋಗ್ತೀನಿ ಬಷೀರ್...ಇವತ್ತಿನಿಂದ ನೀನು ಬೇಗನೆ ಮನೆಗೆ ಹೋಗಿ ನಿನ್ನ ಹೆಂಡತಿಗೆ ಸಂತೋಷಕೊಡಬಹುದು," ಎಂದು ಚಕಚಕನೆ ನಡೆದು ಜನರ ಮಧ್ಯೆ ಸೇರಿಕೊಂಡ. ವೇಗವಾಗಿ ಹೆಜ್ಜೆ ಹಾಕುತ್ತಾ ಊರಿನ ಕೊನೆಯಲ್ಲಿದ್ದ ನಿರ್ಜನ ಜಾಗಕ್ಕೆ ಹೋದ.

"ಈ ಅದ್ಭುತ ಮೇಧಾವಿಯ ಬಗ್ಗೆ ಪ್ರಪಂಚಕ್ಕೆ ನಾಳೆ ತಿಳಿಯುತ್ತದೆ. ಆಗ ಅಳುತ್ತಾರೆ,'' ಸಿಟ್ಟಿನಿಂದ ಅಂದುಕೊಂಡ.

ಮುವ್ವತ್ತು ವರ್ಷ ದಾಟದೇನೇ ಆತ್ಮಹತ್ಯೆ ಮಾಡಿಕೊಳ್ಳಬೇಕಾಗಿ ಬಂದ ಪರಿಸ್ಥಿತಿಗೆ ನೊಂದುಕೊಂಡ.

ಆದರೂ ವಿಧಿಯಿಲ್ಲ.

ಒಂದು ಕಾಗದವನ್ನು ತೆಗೆದು ಬರೆದ:

"ನನ್ನ ಆತ್ಮಹತ್ಯೆಗೆ ಕಾರಣ.''

1. ನನ್ನ ಹೆಂಡತಿ 2. ನನ್ನ ಹೆಡ್ ಮಾಸ್ಟರ್ 3. ಪ್ರಧಾನ ಮಂತ್ರಿ."

ಬರೆಯುವುದನ್ನು ನಿಲ್ಲಿಸಿ ಅವನು ಆಳವಾದ ಕಂದಕದೆಡೆಗೆ ನಡೆದ.

ಮೇಲಿನಿಂದ ಅವನನ್ನೇ ಸಂತೋಷದಿಂದ ಗಮನಿಸುತ್ತಿದ್ದ ಶಚೀದೇವಿ ಮುಸಿಮುಸಿ ನಕ್ಕಳು. ಈ ಚಂದ್ರಬೋಸ್ ಆತ್ಮಹತ್ಯೆ ಮಾಡಿಕೊಂಡರೆ ತನಗೆ ಸರಸ್ವತಿಯ ಮೇಲೆ ಮತ್ತೊಂದು ವಿಜಯ ಲಭಿಸುತ್ತದೆ.

ಚಂದ್ರಬೋಸ್ ಹೆಂಡತಿಯನ್ನು ಗಯ್ಯಾಳಿಯನ್ನಾಗಿ ಮಾಡುವ ಮೂಲಕ ಆ ಜೋಡಿಯನ್ನು 'ಮೇಡ್ ಫಾರ್ ಈಚ್ ಅದರ್'ಗೆ ಅನರ್ಹಳನ್ನಾಗಿ ಮಾಡಿದ್ದಳು.

ಈಗ ಚಂದ್ರಬೋಸ್‌ನನ್ನು ಈ ಲೋಕದಿಂದಲೇ ಕಳಿಸಿಬಿಡುವಂತಹ ಪರಿಸ್ಥಿತಿಯನ್ನು ನಿರ್ಮಿಸಿಬಿಟ್ಟಿದ್ದಳು.

ಸರಿಯಾಗಿ ಅದೇ ಸಮಯದಲ್ಲೇ ಸರಸ್ವತಿ ಬೆಚ್ಚಿಬಿದ್ದು ನಿದ್ರೆಯಿಂದ ಎದ್ದು ಕುಳಿತಳು. ಕೆಟ್ಟ ಕನಸು...ಶಚೀದೇವಿ ವಿಕಟಾಟ್ಟಹಾಸ ಮಾಡುತ್ತಾ ತನ್ನೆಡೆಗೇ ನೋಡುತ್ತಿರುವಂತೆ...ಚಕ್ಕನೆ ತಾನು ಸೃಷ್ಟಿಸಿದ ಮನುಷ್ಯರ ನೆನಪಾಯಿತು. ಶಚೀದೇವಿ ಅವರ ಸಹವಾಸಕ್ಕೆ ಹೋಗಲಿಲ್ಲವಲ್ಲಾ ?

ದಿವ್ಯದೃಷ್ಟಿಯಲ್ಲಿ ಟಿ. ವಿ. ಫಿಲಂ ನೋಡಿದಂತೆ ಚಂದ್ರಬೋಸ್‌ನನ್ನು ಹುಡುಕಿ ನೋಡಿದಳು. ಆಗಲೇ ಆಳಕ್ಕೆ ಧುಮುಕಿ ಆತ್ಮಹತ್ಯೆ ಮಾಡಿಕೊಳ್ಳಲು ಸಿದ್ಧನಾಗುತ್ತಿದ್ದಾನೆ ಅವನು. ಅವಳಿಗೆ ತಲೆ ಕೆಟ್ಟಂತಾಯಿತು. ಏನು ನಡೆದಿದೆಯೋ, ಅವನೇಕೆ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾನೋ ಎಂಬುದು ಮುಂದಿನ ವಿಷಯ!

ಮೊದಲು ಚಂದ್ರಬೋಸ್‌ನನ್ನು ತಾನು ರಕ್ಷಿಸಬೇಕು. ಇಲ್ಲದಿದ್ದರೆ ಶಚೀದೇವಿಯ ಮುಂದೆ ಅವಮಾನ ಅನುಭವಿಸಬೇಕಾಗುತ್ತದೆ.

ಕೂಡಲೇ ಚಂದ್ರಬೋಸ್ ಬಳಿಗೆ ಒಬ್ಬ ವ್ಯಕ್ತಿಯನ್ನು ಕಳುಹಿಸಿದಳು.

"ನಿಲ್ಲಿ ಗುರುಗಳೇ" ಎಂಬ ಕರೆಯನ್ನು ಕೇಳಿ, ಬೆಚ್ಚಿಬಿದ್ದು ಅತ್ತಕಡೆಗೆ ನೋಡಿದ ಚಂದ್ರಬೋಸ್. ಕಿರುನಗೆಯಿಂದ ಬೀಡಿ ಸೇದುತ್ತಾ ಹತ್ತಿರಕ್ಕೆ ಬಂದ ಆ ಯುವಕ.

''ನನ್ನ ಹೆಸರು ಜೀರೋ. ಜೀರೋ, ಜೀರೋ. ಪಾಕಿಸ್ತಾನದ ಸೀಕ್ರೆಟ್ ಏಜೆಂಟ್. ಇಹೀ...ಇಹೀ...'' ಅಂದ ಅವನು.

ಮೊದಲು ಚಂದ್ರಬೋಸ್‌ಗೆ ಅವನ ಮಾತು ಅರ್ಥವಾಗಲಿಲ್ಲ.

"ಏನು ನೀನು ಹೇಳುತ್ತಿರುವುದು?" ಕೇಳಿದ ಅವನು.

"ಅದೇ ಸಾರ್ ಇಹೀ...ನೀವು ಕಂಡುಹಿಡಿದ ಬೋಸ್ ಕಾನ್‌ಸಂಟ್ರೇಟೆಡ್ ಗ್ಯಾಸ್ ಬಗ್ಗೆ ನನಗೆ ಗೊತ್ತು...ಅದನ್ನು ನೀವು ಪಾಕೀಸ್ಥಾನ್‌ಗೆ ಮಾರಿದಿರೆಂದರೆ ಸಿಕ್ಕಾಪಟ್ಟೆ ಹಣ...ಅಮೇರಿಕನ್ ಡಾಲರ್‌ನಲ್ಲಿ...''

ಚಂದ್ರಬೋಸ್‌ಗೆ ತುಂಬಾ ಸಿಟ್ಟು ಬಂತು.

''ನನ್ನ ಪ್ರಾಣ ಇರುವವರೆಗೆ ಫಾರ್ಮುಲಾವನ್ನು ಶತ್ರು ದೇಶಗಳಿಗೆ ಮಾರುವುದಿಲ್ಲ. ನನ್ನ ಬದುಕನ್ನೇ ಧಾರೆ ಎರೆದು ಪ್ರಯೋಗಮಾಡಿ ಕಂಡು ಹಿಡಿದಿದ್ದೇನೆ ಅದನ್ನು.''

ತ್ರಿಬಲ್ ಜೀರೋ ಜೋರಾಗಿ ನಕ್ಕು ಹೇಳಿದ.

"ನಿಮ್ಮ ಪ್ರಾಣ ಹೇಗೂ ಹೋಗುತ್ತಲ್ಲಾ ಗುರೂಜಿ...ಆನಂತರವೇ ನಾವು ಅದನ್ನು ಉಪಯೋಗಿಸಿಕೊಳ್ಳುತ್ತೇವೆ. ಆ ಫಾರ್ಮುಲಾ ಕೊಟ್ಟರೆ ನಿಮಗೆ ಲಕ್ಷಾಂತರ ಅಮೇರಿಕನ್ ಡಾಲರ್‌ಗಳು ಸಿಗುತ್ತವೆ.''

ಚಂದ್ರಬೋಸ್ ಕೋಪದಿಂದ ನೋಡಿದ ಅವನೆಡೆಗೆ.

''ದುರ್ಮಾರ್ಗಿ, ದೇಶದ್ರೋಹಿ...ನಮ್ಮ ಸೈಂಟಿಸ್ಟ್‌ಗಳು ಆತ್ಮಹತ್ಯೆಯನ್ನು ಮಾಡಿಕೊಳ್ಳಲು ಬೇಕಾದರೆ ಸಿದ್ಧರಿರುತ್ತಾರಾಗಲೀ ಹೀಗೆ ಫಾರ್ಮುಲಾಗಳನ್ನು ಮಾರಿಕೊಳ್ಳುವುದಿಲ್ಲ. ಒನ್...ಟು...ಥ್ರೀ ಎನ್ನುವುದರೊಳಗಾಗಿ ಇಲ್ಲಿಂದ ಹೊರಟು ಹೋಗದಿದ್ದರೆ ಪೋಲೀಸರಿಗೆ ಟೆಲಿಫೋನ್ ಮಾಡುತ್ತೇನೆ."

ತ್ರಿಬಲ್ ಜೀರೋ ಸೆಟೆದು ನಿಂತ.

''ಅಷ್ಟು ಕೋಪ ಏಕೆ ಸಾರ್...ನೀವಲ್ಲದಿದ್ದರೆ ಇನ್ನೊಬ್ಬ ಸೈಂಟಿಸ್ಟನ್ನು ಹಿಡಿಯುತ್ತೇವೆ. ಅವರಿಗೆ ಲಕ್ಷಾಂತರ ಡಾಲರ್ ಕೊಡಿಸುತ್ತೇವೆ. ಬೈ ದಿ ಬೈ

ಒಂದೈವತ್ತು ಪೈಸೆಯಿದ್ದರೆ ಕೊಡ್ತೀರಾ? ಪಾಕೀಸ್ಥಾನದಿಂದ ಫಂಡ್ಸ್ ಬಂದ ಕೂಡಲೇ ಕೊಟ್ಟುಬಿಡುತ್ತೇನೆ."

"ಕೊಡುವುದಿಲ್ಲ.''

''ಓ.ಕೆ ..ಇಹೀಹೀ...ನೋ ಪ್ರಾಬ್ಲಮ್...ಮತ್ತೆ ಭೇಟಿಯಾಗೋಣ... ಹೋಗಲಿ ಇಪತ್ತು ಪೈಸೆ ಇದೆಯಾ?"

''ಇಲ್ಲ..."

''ಬ್ಯಾಡ್‌ಲಕ್.'' ಅವನು ಹೋರಟುಹೋದ.

ಚಂದ್ರಬೋಸ್ ಮತ್ತೆ ಧುಮುಕಲು ಪ್ರಯತ್ನಿಸುವಾಗ ಏಕೋ ಮನಸ್ಸು ಬದಲಾಯಿತು.

ತಾನು ಕಂಡು ಹಿಡಿದ ಫಾರ್ಮುಲಾಗಾಗಿ ಪ್ರಪಂಚವೆಲ್ಲಾ ಇಷ್ಟು ಜನ ತ್ರಿಬ್ಬಲ್ ಜೀರೋಗಳನ್ನು ಕಳುಹಿಸಿ, ಅದನ್ನು ಕೊಳ್ಳಲು ಪ್ರಯತ್ನಿಸುತ್ತಿದ್ದರೆ ತಾನೇಕೆ ಸಾಯಬೇಕು?

ಈಗಲಾದರೂ ತಾನು ತನ್ನ ಫಾರ್ಮುಲಾವನ್ನು ಭಾರತ ದೇಶಕ್ಕಾಗಿಯೇ ಉಪಯೋಗಿಸುವಂತೆ ಮಾಡಿ ತನ್ನ ಹೆಸರನ್ನು ಸೈನ್ಸ್ ಮ್ಯಾಗಜೀನ್‌ನಲ್ಲಿ ಬರುವಂತೆ ಮಾಡಬೇಕು.

ತನ್ನ ಗಯ್ಯಾಳಿ ಹೆಂಡತಿ ಲಲಿತಾದೇವಿಗೆ ತನ್ನ ಪ್ರತಿಭೆಯ ಬಗ್ಗೆ ಅರ್ಥ ಮಾಡಿಸಬೇಕು.

ತನ್ನ ಹೆಡ್ ಮಿಸ್ಟ್ರೆಸ್ ವಸಂತಳಿಗೆ ನಾನೊಬ್ಬ ಸಾಮಾನ್ಯ ಮೇಷ್ಟ್ರಲ್ಲವೆಂದು ಮನದಟ್ಟು ಮಾಡಬೇಕು.

ಜವಾನ ಬಷೀರ್ ತನ್ನ ಮೇಲೆ ಆಗಾಗ ತೋರುವ ಅಸಡ್ಡೆಯನ್ನು ಪಶ್ಚಾತ್ತಾಪ ಪಡುವಂತೆ ಮಾಡಬೇಕು.

ಕೂಡಲೇ ಹಿಂತಿರುಗಿ ಮನೆಯ ಕಡೆಗೆ ಹೊರಟ.

ಅದೇ ಸಮಯಕ್ಕೆ ಬಷೀರ್, ತ್ರಿಬ್ಬಲ್ ಜೀರೋ ನಿಟ್ಟಿಸಿರುಬಿಟ್ಟರು.

"ಹಣಕ್ಕೆ ಆಸೆ ಪಡುತ್ತಾನೆಂದುಕೊಂಡಿದ್ದೆ ಬಾಸ್. ಅವನ ಹೆಂಡತಿ ದಿನಾಲೂ ಹಣಕ್ಕಾಗಿ ಕಾದಾಡುತ್ತಿರುತ್ತಾಳಲ್ಲಾ! ಹೆಂಡತಿಗಾಗಿಯಾದರೂ ಒಪ್ಪಿಕೊಳ್ಳುತ್ತಾನೆ ಅಂದುಕೊಂಡಿದ್ದೆ,'' ಬಷೀರ್ ಹೇಳಿದ.

ತ್ರಿಬ್ಬಲ್ ಜೀರೋ ಮತ್ತೊಂದು ಬೀಡಿ ಅಂಟಿಸಿದ.

"ಇಹೀ...ಈಗೇನು ಮಾಡುವುದು?'' ಯೋಚಿಸುತ್ತಾ ಕೇಳಿದ.

ಆಗ ಬಷೀರನ ಜೇಬಿನಲ್ಲಿದ್ದ ಪಾಕೆಟ್ ಟ್ರಾನ್ಸಿಸ್ಟರ್ ಬರಬರ ಶಬ್ದ ಮಾಡಿತು. ಇಬ್ಬರೂ ಆ ಶಬ್ದ ಕೇಳಿ ಬೆಚ್ಚಿಬಿದ್ದರು,

"ನಮ್ಮ ಬಾಸ್ ಕರೆಯುತ್ತಿದ್ದಾರೆ!'' ಅಂದ ತ್ರಿಬ್ಬಲ್ ಜೀರೋ.

ಇಬ್ಬರೂ ಗಿಡ-ಕಲ್ಲುಗಳನ್ನು ಲೆಕ್ಕಿಸದೆ ಓಡೋಡಿ ಮುಖ್ಯ ಬೀದಿಗೆ ಬಂದರು. ಅಲ್ಲಿ ನಿಂತಿದ್ದ ವೆಂಕಟೇಶ್ವರನನ್ನು ಕಂಡು ಶಿಸ್ತಿನಿಂದ ನಿಂತರು.

"ಈಗ ತಾನೇ ಪಾಕೀಸ್ಥಾನದಿಂದ ಇನ್‌ಲ್ಯಾಂಡ್ ಲೆಟರ್ ಬಂದಿದೆ... ನಿಮ್ಮ ಚಂದ್ರಬೋಸ್ ಕಂಡುಹಿಡಿದ ಗ್ಯಾಸ್ ಅಮೇರಿಕಾದಲ್ಲಿ ಇಪ್ಪತ್ತೈದು ವರ್ಷಗಳ ಹಿಂದೆಯೇ ಕಂಡುಹಿಡಿದಿದ್ದರಂತೆ, ಈಗ ಅದನ್ನು ಯಾರೂ ಉಪ ಯೋಗಿಸುವುದಿಲ್ಲವಂತೆ...''

ತ್ರಿಬ್ಬಲ್ ಜೀರೋ ಬಷೀರ್ ಮುಖಗಳು ಬಾಡಿಹೋದವು.

''ಎಂತಹ ಕೆಲಸವಾಯಿತು ಬಷೀರ್! ನಿನ್ನ ಮಾತು ಕೇಳಿ ನಿಜವಾಗಿಯೂ ಆ ಚಂದ್ರಬೋಸ್ ಯಾವುದೋ ಹೊಸ ವಿಷಪೂರಿತ ಗ್ಯಾಸ್ ಕಂಡುಹಿಡಿದಿದ್ದಾನೆಂದುಕೊಂಡೆ. ಅದನ್ನು ನಾವು ಪಾಕೀಸ್ಥಾನಕ್ಕೆ ಕಳಿಸಿದ್ದರೆ ಲಕ್ಷಾಂತರ ರೂಪಾಯಿ ಸಂಪಾದಿಸಬಹುದಿತ್ತೆಂದು ಆಸೆಪಟ್ಟಿದ್ದೆ."

''ಊ್ಹ...ಹೋಗಿ. ಇನ್ನೂ ಅದೇಕೆ ಈ ಪೆದ್ದ ಮುಖಗಳನ್ನು ತೋರಿಸುತ್ತಿದ್ದೀರಿ? ಇನ್ನೆಲ್ಲಾದರೂ ಬೇರೆ ಸೈಂಟಿಸ್ಟ್‌ಗಳು ಏನಾದರೂ ಕಂಡುಹಿಡಿದಿದ್ದಾರೇನೋ ನೋಡಿಹೋಗಿ'' ಗದರಿಸಿದ ವೆಂಕಟೇಶ್ವರ್.

''ಬಾಸ್'' ಗೊಣಗಿದ ತ್ರಿಬ್ಬಲ್ ಜೀರೋ.

"ಏನು?''

''ನಮ್ಮ ಖರ್ಚಿಗೆ ಒಂದಿಪ್ಪತ್ತೈದು ರೂಪಾಯಿಗಳನ್ನಾದರೂ ಕೊಟ್ಟರೆ''

ವೆಂಕಟೇಶ್ವರ್ ರೇಗಿದ "ಏನು? ಇಪ್ಪತ್ತೈದು ರೂಪಾಯಿಗಳಾ! ನೀವೇನು ಅಮೇರಿಕನ್ ಸೀಕ್ರೆಟ್ ಏಜೆಂಟ್‌ಗಳೆಂದುಕೊಂಡಿದ್ದೀರಾ...ಇಲ್ಲವೇ ರಷ್ಯನ್ ಪತ್ತೇದಾರರೆಂದುಕೊಂಡಿದ್ದೀರಾ? ನೀವು ಕೆಲಸ ಮಾಡುವುದು ಪಾಕೀಸ್ಥಾನಕ್ಕೋಸ್ಕರ ಎಂಬುದನ್ನು ನೆನಪಿಸಿಕೊಳ್ಳಿ! ಅದೇನೂ ಸಮೃದ್ಧ ದೇಶವಲ್ಲ.. ತಗೊಳ್ಳಿ ಈ ಎರಡು ರೂಪಾಯಿ ಇಟ್ಕೊಂಡಿರಿ ಬಸ್ ಚಾರ್ಜಿಗೆ...ಹೊರಡಿ''

ಇಬ್ಬರೂ ಎರಡು ರೂಪಾಯಿ ತೆಗೆದುಕೊಂಡು ಅಲ್ಲಿಂದ ಹೊರಟುಹೋದರು.

ಬಷೀರ್ ಬಸ್ಸನ್ನಿಳಿದು ನಡೆಯುತ್ತಿದ್ದಂತೆ ಜೇಬಿನಲ್ಲಿ ಯಾವುದೋ ಭಾರವಾದ ವಸ್ತು ಅಲ್ಲಾಡಿದಂತೆ ಅನಿಸಿತು.

ಕೂಡಲೇ ನಿಂತು ಜೇಬಿಗೆ ಕೈ ಹಾಕಿದ. ನಿದ್ರಿಸುತ್ತಿದ್ದ ಇಲಿ ನಿಧಾನವಾಗಿ ಹೊರಬಂತು. ಆಶ್ಚರ್ಯದಿಂದ ''ಇದೇನು? ಇದು ಲೆಕ್ಕದ ಪ್ರಕಾರ ನಲವತ್ತೆಂಟು ಗಂಟೆಗಳ ಕಾಲ ನಿದ್ರೆ ಮಾಡಬೇಕಲ್ಲಾ?" ಎಂದುಕೊಂಡ. ''ಅಂದರೆ ಚಂದ ಬೋಸ್ ಕಂಡುಹಿಡಿದ ಈ ಪ್ರಯೋಗ ಕೂಡಾ ವಿಫಲ

ಆದಂತೆಯೇನಾ "

ಆ ಇಲಿಯನ್ನು ಸಿಟ್ಟಿನಿಂದ ಬಿಸಾಡಲು ನೋಡಿದ.

ಆದರೆ ಅಷ್ಟರಲ್ಲೇ ಚಂದ್ರಬೋಸ್ ಮೇಲೆ ಕನಿಕರ ಮೂಡಿತು. ಅವನ ಮಾತುಗಳು ನೆನಪಾದವು.

"ಈ ಇಲಿಯೆಂದರೆ ನನಗೆ ಪ್ರಾಣ ಬಷೀರ್! ಪ್ರಪಂಚದಲ್ಲಿರುವ ಎಲ್ಲಾ ಜೀವರಾಶಿಗಳಲ್ಲಿ ಇದೊಂದೇ ನನ್ನ ಹೆಂಡತಿಯನ್ನು ಹೆದರಿಸಬಲ್ಲದು."

ಚಂದ್ರಬೋಸನ ಮನೆಯಲ್ಲಿ ಇಲಿಯನ್ನು ಬಿಡಲು ನಿರ್ಧರಿಸಿ ಬೇಗನೆ ಚಂದ್ರಬೋಸ್ ಮನೆಯಬಳಿಗೆ ಹೋಗಿ ಕಿಟಕಿಯಿಂದ ಅದನ್ನು ಒಳಗೆ ಹಾಕಿದ. ಆಗತಾನೇ ನಿದ್ರಿಸಲು ಸಿದ್ಧಳಾಗುತ್ತಿದ್ದ ಲಲಿತಾದೇವಿ ಹಾಸಿಗೆಯ ಮೇಲೆ 'ದಬ್' ಎಂದು ಬಿದ್ದುದನ್ನು ಕಂಡು ಚಕ್ಕನೆ ಎದ್ದುಕುಳಿತು ಬೆಡ್ ಸ್ವಿಚ್ ಒತ್ತಿದಳು. ಆ ಬೆಳಕಿನಲ್ಲಿ ಇಲಿ ಕಂಡಿತು.

ಒಮ್ಮೆಗೇ ಕೋಪ, ಸಂತೋಷ ಉಕ್ಕಿಬಂತು ಅವಳಲ್ಲಿ. ಆ ಇಲಿಯನ್ನು ಸಾಯಿಸಬೇಕೆಂದು ಎಷ್ಟೋ ದಿನದಿಂದ ಹೊಂಚು ಹಾಕುತ್ತಿದ್ದಳು. ಅದು ತನ್ನನ್ನು ಹಿಂಸಿಸುತ್ತಿದ್ದುದು ಒಂದೇ ಕಾರಣವಲ್ಲ. ಅದನ್ನು ಚಂದ್ರಬೋಸ್ ಕೆಲಸಕ್ಕೆ ಬಾರದ ಪ್ರಯೋಗಕ್ಕೆ ಉಪಯೋಗಿಸುತ್ತಿದ್ದ ಎಂಬ ಅಂಶವೂ ಸೇರಿತ್ತು. ತನ್ನ ಗಂಡ ಆ ಪ್ರಯೋಗಗಳ ಸಹವಾಸಕ್ಕೆ ಹೋಗಕೂಡದೆಂದರೆ ಇದನ್ನು ಸಾಯಿಸದೆ ಬೇರೆ ಮಾರ್ಗವಿಲ್ಲ. ಟೇಬಲ್ ಮೇಲೆ ಕೈಗೆ ಸಿಕ್ಕಿದ ಹಿತ್ತಾಳೆಯ ಫ್ಲವರ್ ವಾಜನ್ನು ಎಚ್ಚರಿಕೆಯಿಂದ ತೆಗೆದುಕೊಂಡು ಗುರಿಯಿಟ್ಟು ಜೋರಾಗಿ ಬೀಸಿ ಹೊಡೆದಳು. ಅದು ನೇರವಾಗಿ ಇಲಿಯಿದ್ದ ಜಾಗಕ್ಕೆ ಬಿದ್ದದ್ದು; ಇಲಿ ತಪ್ಪಿಸಿಕೊಂಡು ಓಡಿದ್ದು; ಬೀಸಿ ಒಗೆದಿದ್ದ ಫ್ಲವರ್ ವಾಜ್ ಅದೇ ವೇಗದಲ್ಲಿ ಬೌನ್ಸ್ ಆಗಿ ಮತ್ತೆ ಅವಳ ಕೈಗೇ ಬಿದ್ದುದು, ಒಂದು ಕ್ಷಣದಲ್ಲೇ ಸಂಭವಿಸಿತು. ಕೈ ಮುರಿದುಹೋದಷ್ಟು ನೋವಾಯಿತು. ಕೆಲ ಕ್ಷಣ ಅವಳು ನಿಶ್ಚೇಷ್ಟಿತಳಾಗಿಬಿಟ್ಟಳು. ಇಲಿ ನಿರ್ಭಯದಿಂದ, ಸ್ವಲ್ಪವೂ ಪೆಟ್ಟು ತಗುಲದೆ ಅವಳೆಡೆಗೇ ನೋಡುತ್ತಿರುವಂತೆ ಅವಳಿಗೆ ಭಾಸವಾಯಿತು.

ಲಲಿತಾದೇವಿಯ ಮೆದುಳು ವೇಗವಾಗಿ ಕೆಲಸ ಮಾಡಲು ಪ್ರಾರಂಭಿಸಿತು. ಮತ್ತೆ ಗುರಿಯಿಟ್ಟು ಇಲಿಗೆ ಬೀಸಿ ಹೊಡೆದಳು. ಇಲಿಗೆ ಬಿದ್ದಂತಾದರೂ ಅದಕ್ಕೇನೂ ಆಗದೆ ಮತ್ತೆ ಅದೇ ರೀತಿ ಅದು ವಾಪಸ್ಸಾಗಿ ಭುಜಕ್ಕೆ ತಾಕಿತು.

ಈ ಸಲ ಲಲಿತಾದೇವಿಗೆ ಭಯವಾಗಲು ಪ್ರಾರಂಭವಾಯಿತು, ಇದು ಏನೋ ಅಸಾಧಾರಣವಾಗಿ ಕಾಣುತ್ತಿದೆ, ಇಲಿ ಮಾತ್ರ ಧೈರ್ಯದಿಂದ ಅವಳ ಮುಂದೆಯೇ ತಲೆಯೆತ್ತಿ ಕುಳಿತಂತಿದೆ.

ಕಿಟಾರನೆ ಕಿರುಚಿದಳು.

ಅವಳ ಕೂಗು ಕೇಳಿಸುತ್ತಿದ್ದಂತೆ ಅತ್ತ–ಇತ್ತ ಮನೆಯವರೆಲ್ಲಾ ಓಡೋಡಿ ಬಂದು ಬಾಗಿಲು ತಟ್ಟಿದರು.

ಅವರು ಬಾಗಿಲು ಬಡಿಯುತ್ತಿದ್ದರೆ ಲಲಿತಾದೇವಿಗೆ ಮತ್ತಷ್ಟು ಭಯ ವಾಯಿತು. ಹೇಗಾದರೂ ಬಾಗಿಲು ತೆರೆಯದಿದ್ದರೆ ತನಗೆ ಈ ಇಲಿಯಿಂದ ರಕ್ಷಣೆ ಸಿಗುವುದಿಲ್ಲವೆಂದುಕೊಂಡಳು.

ಉಸಿರು ಬಿಗಿಹಿಡಿದು ಮಂಚದಿಂದಿಳಿದು, ಇಲಿಯ ಕಡೆಗೇ ಬೆದರುಗಣ್ಣಿನಿಂದ ನೋಡುತ್ತಾ ಬಾಗಿಲಿನ ವರೆಗೂ ಬಂದಳು.

ಇಲಿ ಅವಳು ಸರಿದತ್ತಲೇ ನೋಡುತ್ತಾ ಕುಳಿತಿತ್ತು. ಬಾಗಿಲಿನ ಬಳಿ ಹೋದ ಕೂಡಲೇ ಅವಳು ಚಿಲಕ ತೆಗೆದಳು.

''ಏನು? ಏನಾಯ್ತು?" ಐದಾರು ಜನ ಹೆಂಗಸರು ಗಂಡಸರು ಒಳಗೆ ನುಗ್ಗುತ್ತಾ ಕೇಳಿದರು.

ಅವಳು ನಡುಗುತ್ತಾ ಒಳಗೆ ಕಾಣುತ್ತಿದ್ದ ಇಲಿಯ ಕಡೆಗೆ ಕೈ ತೋರಿಸಿದಳು.

ಅವರಿಗೇನೂ ಅರ್ಥವಾಗಲಿಲ್ಲ.

''ಕಳ್ಳರು ಬಂದಿದ್ದಾರಾ?" ತನ್ನ ಕೈಯ್ಯಲ್ಲಿ ಸೌದೆಯ ತುಂಡನ್ನು ತಿರುಗಿಸುತ್ತಾ ಕೇಳಿದ ಒಬ್ಬ.

''ಅ...ಅಲ್ಲ...ಇ...ಇಲಿ...'' ತೊದಲಿದಳು. ಎಲ್ಲರೂ ಗೊಳ್ಳನೇ ನಕ್ಕರು.

"ಇಲಿಯನ್ನು ಕಂಡು ಇಷ್ಟು ಭಯಪಡುತ್ತಿದ್ದೀರಾ?'' ಪಕ್ಕದ ಮನೆಯಾಕೆ ನಗುತ್ತಾ ಕೇಳಿದಳು,

"ಒಬ್ಬೊಬ್ಬರಿಗೆ ಹಾಗೇ ಬಿಡಿ. ಒಂದೊಂದು ಪ್ರಾಣೀನ ನೋಡಿದರೆ ತುಂಬಾ ಭಯಪಡ್ತಾರೆ. ನಮ್ಮ ಹುಡ್ಗೀಗೂ ಅಷ್ಟೇ ..ಜಿರಳೀನ ನೋಡಿದ್ರೆ ಪ್ರಾಣಹೋದ್ಹಾಗೆ ಕಿರುಚಿಕೊಳ್ಳುತ್ತಾಳೆ,'' ಮತ್ತೊಬ್ಬರು ಹೇಳಿದರು.

ಸೌದೆಯನ್ನು ಹಿಡಿದಿದ್ದ ಹೀರೋ ಮುನ್ನುಗ್ಗಿ ಇಲಿಗೆ ಗುರಿಯಿಟ್ಟು ಸೌದೆಯಿಂದ ಅದರ ತಲೆಯ ಮೇಲೆ ಬಡಿದ. ಅವನು ಸೌದೆಯೊಡನೆ ಎಲೆಕ್ಟ್ರಿಕ್ ಷಾಕ್ ತಗಲಿದವನಂತೆ ಹಿಂದಕ್ಕೆ ಬಿದ್ದ. ಕೆಲ ಕ್ಷಣ ಎಲ್ಲರೂ ಹೆದರಿದರು.

ಸರಿಯಾಗಿ ಅದೇ ಸಮಯಕ್ಕೆ ಬಷೀರ್ ತನ್ನ ಬಾಸ್‌ಗೆ ಫೋನ್ ಮಾಡಿದ.

''ಬಾಸ್ ಆ ಕಾಲನಿಯಲ್ಲಿರುವ ನಮ್ಮ ಇನ್‌ಫಾರ್ಮರ್ ಅಲ್ಲೇನೋ ಇಲಿ ಗಲಭೆ ಮಾಡ್ತಿದೆಯೆಂದು ತಿಳಿಸುತ್ತಿದ್ದಾನೆ. ಬಹುಶಃ ನಮ್ಮ ಚಂದ್ರ

ಬೋಸನ ಇಲಿಯೇ ಇರಬೇಕು ನನಗೇನೋ ಅನುಮಾನ.''

''ಟ್ಯಾಕ್ಸಿ ಮಾಡಿಕೊಂಡು ಕೂಡಲೇ ಅಲ್ಲಿಗೆ ಬಂದುಬಿಡು,'' ಬಾಸ್ ಅಜ್ಞಾಪಿಸಿದ.

"ಹಣ ಇಲ್ಲಾ ಸಾರ್–" ಬಷೀರ್ ರಾಗ ಎಳೆದ.

"ಹಾಗಾದರೆ ಸೈಕಲ್ ಮೇಲೇನೇ ಬಾ"

............

ಇಬ್ಬರೂ ಅಲ್ಲಿಗೆ ಬರುವ ವೇಳೆಗೆ ಇಲಿ ವೀರವಿಹಾರ ಮಾಡುತ್ತಿತ್ತು. ಕಾಲನಿಯ ಜನರೆಲ್ಲಾ ರೂಮಿನಲ್ಲಿ– ಬೋನಿನಲ್ಲಿರುವಂತೆ ಇದ್ದಾರೆ. ಇಲಿ ಬಾಗಿಲ ಬಳಿ ವಿಜೃಂಭಿಸುತ್ತಿತ್ತು.

ಒಳಗೆ ಜನ ಹೆದರಿಕೆಯಿಂದ ನಡಗುತ್ತಾ ಅದರೆಡೆಗೇ ನೋಡುತ್ತಿದ್ದರು. "ಸೂಪರ್ ರ್‍ಯಾಟ್" ಬಷೀರ್ ಕಿರುಚಿದ– ಸೂಪರ್ ಮ್ಯಾನ್ ಎನ್ನುವ ರೀತಿಯಲ್ಲಿ...

"ಬಾಯ್ಮುಚ್ಚು! ಚಂದ್ರಬೋಸ್‌ನ ಪ್ರಯೋಗ ಯಶಸ್ವಿಯಾಗಿದೆಯೆಂದು ಇಲ್ಲಿಯ ಜನಕ್ಕೆ ತಿಳಿಯಕೂಡದು. ಆ ಚಂದ್ರಬೋಸ್ ಹೇಗೂ ಬಂದಿದ್ದಾನೆ. ಆ ವಿಷಯ ಇವರಿಗೆ ತಿಳಿಯುವುದಕ್ಕೆ ಮುಂಚೆಯೇ ನಾವು ಫಾರ್ಮುಲಾವನ್ನು ಕಂಡುಕೊಂಡರೆ ಪಾಕೀಸ್ಥಾನಕ್ಕೆ ಹೊರಟುಹೋಗಬಹುದು. ಆರ್ಮಿ ಕಮಾಂಡರ್ ಆಗಬಹುದು," ತ್ರಿಬ್ಬಲ್ ಜೀರೊ ಹೇಳಿದ.

"ಹೌದು ಬಾಸ್. ಭಾರತ ಸರ್ಕಾರವೇ ಆ ಫಾರ್ಮುಲಾವನ್ನು ಕಂಡು ಕೊಂಡರೆ ನಾವು ಭಿಕ್ಷುಕರಾಗಿಬಿಡುತ್ತೇವೆ" ಬಷೀರ್ ಹೇಳಿದ.

"ಅದನ್ನು ಚಂದ್ರಬೋಸ್ ಎಲ್ಲಿಟ್ಟಿರುತ್ತಾನೆ?"

"ಸೈನ್ಸ್ ಲ್ಯಾಬಿನ ತನ್ನ ಡ್ರಾಯರಿನಲ್ಲಿ–" ಯೋಚಿಸುತ್ತಾ ಹೇಳಿದ ಬಷೀರ್, "ಆದರೆ ಆ ಡ್ರಾಯರ್‌ನ ಬೀಗದ ಕೈ–" ಚಿಂತಿಸಿದ.

"ಏನು? ಕಂಪ್ಯೂಟರ್ ಸಿಸ್ಟಮ್ಮಾ? ಅಷ್ಟು ಸುಲಭವಾಗಿ ಬರುವುದಿಲ್ಲವಾ?"

"ಅಲ್ಲ ಬಾಸ್. ತುಕ್ಕು ಹಿಡಿದಿದೆ. ಬೋಸ್ ಕೂಡಾ ದಿನ ಅರ್ಧ ಗಂಟೆ ಪ್ರಯತ್ನಿಸುತ್ತಿದ್ದರು."

''ಅರ್ಧ ಗಂಟೆ ನಾವದರ ಬಳಿ ಕುಸ್ತಿ ಮಾಡುತ್ತಿದ್ದರೆ ನೋಡುವವರು ಸುಮ್ಮನಿರುತ್ತಾರಾ?"

''ಸುಮ್ಮನಿರುವುದಿಲ್ಲ."

"ಮತ್ತೇನು ಮಾಡೋಣ?"

ಬಷೀರ್ ಅರ್ಧ ಗಂಟೆ ಯೋಚಿಸಿ "ಐಡಿಯಾ'' ಎಂದು ಕಿರುಚಿದ......
"ಮೊನ್ನೆ ಗಾಂಧಿ ಬಜಾರಿನಲ್ಲಿ ಬೋಸ್‌ರವರಂತೆಯೇ ಹೋಲಿಕೆಯಿರುವ ಒಬ್ಬರನ್ನು ನೋಡಿದ್ದೆ. ಬೋಸ್‌ರವರ ತಮ್ಮನೋ ಜವಳಿಯೋ ಎಂಬಂತಿತ್ತು ಆ ವ್ಯಕ್ತಿಯ ರೂಪ."

''ನೇರವಾಗಿ ವಿಷಯಕ್ಕೆ ಬಾ''

"ಅವನು ನಮಗಿಂತಲೂ ಬೇವಾರ್ಸಿ. ಎರಡು ರೂಪಾಯಿಗೆ ಯಾವ ಕೆಲಸವನ್ನು ಹೇಳಿದರೂ ಮಾಡುತ್ತಾನೆ. ಅವನನ್ನು ಕರೆತಂದು ಬೀಗ ತೆಗೆಸಿದರೆ."

''ಗುಡ್ ಐಡಿಯಾ. ಅವನ ಹೆಸರು?"

"ಆನಂದರಾವ್"

ಸರಸ್ವತಿ ಸೃಷ್ಟಿಸಿದ ಎರಡನೆ ಬೊಂಬೆ ಆನಂದರಾವ್. ತನ್ನ ರೂಮಿನಲ್ಲಿ ಅಂಗಾತ ಮಲಗಿ ಸಿಗರೇಟುಗಳನ್ನು ಸುಟ್ಟು ಬಿಸಾಕುತ್ತಿದ್ದ.

ಕೂಡಲೇ ರೂಮನ್ನು ಖಾಲಿ ಮಾಡಬೇಕು. ಅದು ಅವನ ಸಮಸ್ಯೆ.

ರೂಮುಗಳನ್ನು ಖಾಲಿ ಮಾಡುವಂತೆ ಸಾಮಾನ್ಯವಾಗಿ ಮನೆ ಮಾಲಿಕರುಗಳು ಹೇಳುತ್ತಲೇ ಇರುತ್ತಾರೆ. ಆದರೆ ಇಲ್ಲಿ– ಇವನ ವಿಷಯದಲ್ಲಿ ಅವನನ್ನು ಆ ಬೀದಿಯಿಂದಲೇ ಹೋಗುವಂತೆ ಹೇಳುತ್ತಿದ್ದರು ಜನ.

ಕಾರಣ?

ಆನಂದರಾವ್ ಅಂದಗಾರ.

ಅವನ ರೂಪಕ್ಕೆ ಆ ಬೀದಿಯ ಐಎಎಸ್ ಆಫೀಸರ್‌ನ ಹೆಂಡತಿಯಿಂದ ಮೊದಲ್ಗೊಂಡು, ಮನೆಯ ಕೆಲಸದವಳ ವರೆಗೂ ಕನಸು ಕಾಣುತ್ತಿದ್ದರು.

ಅದೇ ಬೀದಿಯಲ್ಲಿ ಎಮ್.ಎ (ಸಂಖ್ಯಾಶಾಸ್ತ್ರ) ಓದುತ್ತಿದ್ದ ಒಬ್ಬ ವಿದ್ಯಾರ್ಥಿ ಶೇಖರಿಸಿದ ಲೆಕ್ಕದ ಪ್ರಕಾರ ಆ ಬೀದಿಯಲ್ಲಿದ್ದ ಸ್ತ್ರೀಯರಲ್ಲಿ ಶೇ. 96.457 ರಷ್ಟು ಸ್ತ್ರೀಯರು, ಹುಡುಗಿಯರು ಅವನೊಡನೆ ಸಂಬಂಧ ಹೊಂದಿದ್ದರು. ಉಳಿದ ಶೇ. 3.543 ರಷ್ಟು ಸ್ತ್ರೀಯರು ತಮ್ಮ ಮನೆಯವರೆಂದು ಸಮಾಧಾನ ಪಟ್ಟುಕೊಳ್ಳುತ್ತಿದ್ದರು ಎಲ್ಲಾ ಗಂಡಸರು, ಇನ್ನು ಸ್ವಲ್ಪ ಕಾಲ ಇದು ಹೀಗೆಯೇ ಮುಂದುವರೆದರೆ ಆ ಸಂಖ್ಯೆ ಶೇ. 100 ಆಗಿ ಸಂಸಾರಗಳು ನಿರ್ನಾಮವಾಗುತ್ತಿದ್ದವು.

ಆನಂದರಾಯನ ಹಿಂದೆ ಚಿಕ್ಕ ಸೈಜಿನ ಸ್ಟೂಡೆಂಟ್ ಫೋರ್ಸ್+ರೌಡಿಗಳು

ಇದ್ದಿದ್ದರಿಂದ ಬೀದಿಯ ಜನ ಅವನನ್ನು ಹೊಡೆಯದೆ, ದೈನ್ಯದಿಂದ ಬೀದಿಯಿಂದಲೇ ಖಾಲಿ ಮಾಡುವಂತೆ ಪ್ರಾರ್ಥಿಸುತ್ತಿದ್ದರು.

ಆನಂದರಾವ್ ಸ್ವತ. ಒಳ್ಳೆಯವನು. ಹಾಗಾಗಿ ತನ್ನ ವಾಸ್ತವವನ್ನು ಬದಲಾಯಿಸುವ ಬಗ್ಗೆ ಸಹಾನುಭೂತಿಯಿಂದ ಪರಿಶೀಲಿಸುತ್ತಿದ್ದ ಕಸ್ತೂರ್‌ಬಾ ಕಾಲೇಜ್ ಏರಿಯಾದಲ್ಲಿ ರೂಮು ಸಿಗುವ ಅವಕಾಶವಿತ್ತು. ರೂಮು ಹುಡುಗಿಯರ ಕಾಲೇಜಿನ ಪಕ್ಕದಲ್ಲಿದ್ದುದರಿಂದ ಅಡ್ವಾನ್ಸ್ ಇನ್ನೂ ಐದುನೂರು ಹೆಚ್ಚಾಗಿತ್ತು.

ಸರಸ್ವತಿ ಯೋಚನಾಕ್ರಾಂತಳಾಗಿದ್ದುದನ್ನು ಕಂಡು ಬ್ರಹ್ಮ ಆತಂಕದಿಂದ ಕೇಳಿದ.

''ಏನಾಯ್ತು ಸರಸ್ವತಿ?"

''ಮೇಡ್ ಫಾರ್ ಈಚ್ ಅದರ್‌ಗಾಗಿ ಐವರನ್ನು ಸೃಷ್ಟಿಸಿಬಿಟ್ಟೆನಲ್ಲಾರೀ, ಅದರಲ್ಲಿ ತುಂಬಾ ಬುದ್ಧಿವಂತನಾದವ ಪ್ರೊಫೆಸರ್ ಆಗಿ ಕುಳಿತ. ಯೌವನದಲ್ಲಿಯೇ ಬೋಳುತಲೆ. ಆ ಶಚೀದೇವಿ ಆಡಿದ ಕ್ಷುದ್ರ ನಾಟಕದಿಂದ ಅವನ ಹೆಂಡತಿ ಲಲಿತಾದೇವಿ ಪರಮ ಗಯ್ಯಾಳಿಯಾಗಿ ಮೆರೆಯುತ್ತಿದ್ದಾಳೆ.

''ಆದರೇನು? ಇಬ್ಬರು...ಲಲಿತಳ ಹೋಲಿಕೆಗಳಿರುವ ಮತ್ತೊಬ್ಬಳಿದ್ದಾಳಲ್ಲಾ?" ಬ್ರಹ್ಮ ಸಮಾದಾನಪಡಿಸಲು ಪ್ರಯತ್ನಿಸಿದ.

''ಆ ಇಬ್ಬರಲ್ಲಿ ಒಬ್ಬ ಯುವಕನನ್ನು ಅಪರೂಪವಾದ ಅಂದ ಕೊಟ್ಟು ಸೃಷ್ಟಿಸಿದೆ. ಅವನು ಬೀದಿಬೀದಿಗಳಲ್ಲೂ ಹೆಣ್ಣುಗಳನ್ನು ಅನುಭವಿಸಿ ಬಿಸಾಕುತ್ತಿದ್ದಾನೆ,'' ಎಂದಳು ಯೋಚನಾಕ್ರಾಂತಳಾಗಿ.

"ಮತ್ತೆ ಮೂರನೆಯವನು?"

''ಮಹಾ ಸಾತ್ವಿಕ ಅವನ ಮೇಲೇ ನನ್ನ ಭರವಸೆಯೆಲ್ಲಾ.''

''ಎರಡನೆ ಹುಡುಗಿ ಏನು ಮಾಡ್ತಿದ್ದಾಳೆ?''

"ಕಸ್ತೂರ್‌ಬಾ ಗರ್ಲ್ಸ್ ಕಾಲೇಜಿನಲ್ಲಿ ಬಿಯಸ್ಸಿ ಕೊನೆಯ ವರ್ಷ ಓದ್ತಿದಾಳೆ'' ಸರಸ್ವತಿ ಹೇಳಿದಳು.

"ಮತ್ತೇಕೆ ತಡ. ಆ ಹುಡುಗಿಯನ್ನು ಸಾತ್ವಿಕನನ್ನೂ ಸೇರಿಸು!

"ಅದಷ್ಟು ಸುಲಭದ ಕೆಲಸವಲ್ಲಾರಿ'' ಆತಂಕದಿಂದ ಪಾರ್ವತಿ ಹೇಳಿದಳು.

"ಆನಂದರಾವ್ ಅದೇ ಬೀದಿಯಲ್ಲಿ ರೂಮನ್ನು ತೆಗೆದುಕೊಳ್ಳುತ್ತಿದ್ದಾನೆ!"

ಸಾತ್ವಿಕರಾವ್ ಬ್ಯಾಂಕಿನೊಳಗೆ ಬರುತ್ತಿದ್ದಂತೆಯೇ ಲೇಡಿ ಕ್ಲಾರ್ಕ್‌ಗಳೆಲ್ಲಾ ಒಬ್ಬರ ಮುಖ ಒಬ್ಬರು ನೋಡಿಕೊಂಡು ಮುಸಿಮುಸಿ ನಕ್ಕರು.

"ಈ ಮಹಾನುಭಾವನನ್ನು ಅದ್ಯಾವೋಳು ಮದ್ವೆ ಆಗ್ತಾಳೋ ತುಂಬಾ ಲಕ್ಕಿ ಹೆಣ್ಣು'' ಮಂಜುಳ ಹೇಳಿದಳು.

''ಏಕೋ?" ಸುಧಾ ಕೇಳಿದಳು.

"ಏಕೆ ಏನೇ? ಎಲ್ಲಾ ರಿವರ್ಸ್ ಅಲ್ವೇನೇ–''

ಎಲ್ಲರೂ ಗಲಗಲನೆ ನಕ್ಕರು.

ಸಾತ್ವಿಕರಾಯನ ಮುಖ ಕೆಂಪಗಾಯಿತು. ಅವರೆಲ್ಲಾ ತನ್ನನ್ನು ಕಂಡೇ ಮಾತನಾಡಿಕೊಂಡು ನಗುತ್ತಿದ್ದಾರೆಂದು ಅವನಿಗೆ ಗೊತ್ತು.

ಆದರೂ ತಾನು ಏನೂ ಮಾಡಲಾರೆ. ರೂಢಿಯಂತೆ ತನ್ನ ಮೇಲೆ ತನಗೇ ಕೋಪ ಬಂತು. ಹೀಗೆ ಹೆಣ್ಣು ಮಕ್ಕಳೊಡನೆ ಮಾತನಾಡಲು ಏಕಿಷ್ಟು ಭಯ ಗಲಿಬಿಲಿ ಉಂಟಾಗುತ್ತದೋ ತನಗೇ ತಿಳಿಯುತ್ತಿಲ್ಲ. ಒಂದು ವೇಳೆ ತನ್ನ ಚಿಕ್ಕಂದಿನಲ್ಲಿ ಪಕ್ಕದ ಮನೆಯ ರೋಜಾರಮಣಿ ಮಾಡಿದ ಚೇಷ್ಟೆಯ ಪರಿಣಾಮವೋ? ಏನೋ! ಅದೇ ಕಾರಣ ಇರಬಹುದು.

ಸೇವಿಂಗ್ಸ್ ಬ್ಯಾಂಕ್ ಕೌಂಟರಿನಲ್ಲಿ ಕುಳಿತಿದ್ದ ಅವನು ಇನ್ನೂ ಯಾವ ಕಸ್ಟಮರ್‌ಗಳೂ ಬ್ಯಾಂಕಿಗೆ ಬಂದಿರಲಿಲ್ಲ.

ನಿಧಾನವಾಗಿ ತನ್ನ ಪಕ್ಕದಲ್ಲಿ ಹರಿಣಿ ಬಂದು ಕುಳಿತುಕೊಳ್ಳುತ್ತಿದ್ದಂತೆಯೇ ಅವನಿಗೆ ಪ್ರಾಣವೇ ಹೋದ ಹಾಗನ್ನಿಸಿತು. ಬ್ಯಾಂಕಿನಲ್ಲಿ ತನ್ನನ್ನು ಆಟ ಆಡಿಸುವುದು ಅವಳು ಮಾತ್ರ.

"ಹಲೋ ಗುಡ್‌ಮಾರ್ನಿಂಗ್—" ಅವಳೆಂದಳು.

"ಗುಡ್ ಮಾನಿಂಗ್. ಗುಡ್ ಮಾನಿಂಗ್'' ತಡವರಸಿದ.

"ನೀವಿವತ್ತು ತುಂಬಾ ಸ್ಮಾರ್ಟಾಗಿ ಕಾಣ್ತಿದೀರ'' ನಗುತ್ತಾ ಹೇಳಿದಳು.

''ಓ! ಹಾಗಾ–'' ನಾಚುತ್ತಾ ಕೇಳಿದ.

"ಇಷ್ಟು ದಿನ ನಿಮ್ಮ ಬಗ್ಗೆ ಕೆಟ್ಟ ಅಭಿಪ್ರಾಯವಿತ್ತು. ನಿಮಗೆ ಹುಡುಗಿಯರೆಂದರೆ ಭಯವೆಂದೂ, ಒಂದು ವೇಳೆ ಅವರಾಗೇ ಬಂದರೆ ನೀವು ದೂರ ಓಡುತ್ತೀರೆಂದೂ—''

ಯಾರಾದರೂ ತಮ್ಮ ಮಾತು ಕೇಳುತ್ತಿದ್ದಾರೇನೋ ಎಂದು ಸುತ್ತಲೂ ನೋಡಿದ.

ಆದರೆ ನಿನ್ನೆ ರಾತ್ರಿ ನೀವು ಕೊಟ್ಟ ಅನುಭವ— ಅಬ್ಬಾ! ಮಾರ್ವೇಲಸ್ ನೀವು ಬೂದಿ ಮುಚ್ಚಿದ ಕೆಂಡದಂತೆ, ಮುಗ್ಧತೆ ಮುಚ್ಚಿದ ರಸಿಕರು–''

ಸಾತ್ವಿಕರಾವ್ ಬೆಚ್ಚಿಬಿದ್ದ.

"ನಿನ್ನೆ ರಾತ್ರಿಯಾ?'' ಗಲಿಬಿಲಿಯಿಂದ ಕೇಳಿದ.

''ಹಾಗೇಕೆ ಹೆದರುತ್ತೀರಿ? ಆಗಲೇ ಮರೆತುಬಿಟ್ಟಿರಾ? ನಿಮ್ಮ ಮನೆ ರಾಜಾಜಿನಗರದಲ್ಲಿ ತಾನೇ? ಆದರೂ ಅದೇಕೆ ಅದ್ಯಾವುದೋ ರೂಮಿಗೆ ಕರೆದು ಕೊಂಡು ಹೋಗಿದ್ದಿರಿ? ಆ ರೂಮ್ ಇಂತಹ ವ್ಯವಹಾರಕ್ಕೇನಾ?"

''ರೂಮಾ? ಯಾವ ರೂಮ್ರಿ? ನೀವೇನು ಹೇಳ್ತಿದೀರಿ?'' ಅವಳು ಅವನಿಗೆ ಮತ್ತಷ್ಟು ಹತ್ತಿರಕ್ಕೆ ಸರಿದಳು.

''ನನ್ನ ತುಟಿಗಳನ್ನು ಅಷ್ಟು ಜೋರಾಗಾ ಕಡಿಯುವದು? ನಮ್ಮಮ್ಮ ನನ್ನ ತಂಗಿ ಅದೇನು ಗುರುತೆಂದು ಕೇಳಿದರು ಗೊತ್ತಾ?"

ಸಾತ್ವಿಕರಾಯನ ಶರೀರ ನಡುಗಲಾರಂಭಿಸಿತು.

''ನೀವೇನು ಮಾತಾಡ್ತಿದೀರೋ ನಂಗೇ ಅರ್ಥವಾಗ್ತಾಯಿಲ್ಲ-"

''ಅಯ್ಯೊ! ಪಾಪ ಚೆನ್ನಾಗಿ ನಾಟ್ಕ ಆಡ್ತೀರ ಅದಕ್ಕೆ ನೆನ್ನೆ ಸಂಜೆ ಸ್ವಲ್ಪ ಹೊತ್ತು ರೂಂನಲ್ಲಿ ಕಳೆಯೋಣ ಅಂತ ಕರ್ಕೊಂಡ್ಹೋಗಿ ಅರ್ಧರಾತ್ರಿತನಕ–"

ಸಾತ್ವಿಕರಾವ್‌ಗೆ ಬೆವರು ಸುರಿಯಲಾರಂಭಿಸಿತು. ಇವಳು ತನ್ನನ್ನು ಆಟ ಆಡಿಸುತ್ತಿದ್ದಾಳಾ? ಇಲ್ಲದಿದ್ದರೆ ರೂಮು, ಅರ್ಧರಾತ್ರಿ...ಛೀ!ಕೌಂಟರಿನೊಳಗೆ ಕಸ್ಟಮರ್ಸ್ ಬರುವುದನ್ನು ಕಂಡು ಅವಳು ಮಾತನಾಡುವುದನ್ನು ನಿಲ್ಲಿಸಿ ಕೆಲಸದಲ್ಲಿ ಮಗ್ನಳಾದಳು. ಆದರೂ ಮದ್ಯೆಮದ್ಯೆ ಕುಡಿನೋಟ ಬೀರುತ್ತಾ ಮುಸಿ ಮುಸಿ ನಗುತ್ತಿದ್ದಳು ಏನನ್ನೋ ನೆನೆಸಿಕೊಳ್ಳುತ್ತಾ.

ಅವಳು ನೋಡುತ್ತಿದ್ದಂತೆಯೇ ಸಾತ್ವಿಕರಾಯನ ಭಯ ಹೆಚ್ಚಾಗುತ್ತಿತ್ತು. ಸ್ವಲ್ಪ ಹೊತ್ತಿನ ನಂತರ ಅವಳಿಗೆ ಮತ್ತೆ ವಿರಾಮ ಸಿಕ್ಕಿತು. ಕೂಡಲೇ ಅವನ ಸಮೀಪ ಸರಿದಳು.

''ಇವತ್ತು ರಾತ್ರಿ ಕೂಡಾ–"

ಸಾತ್ವಿಕರಾವ್ ಬೆಚ್ಚಿಬಿದ್ದು ''ಎಲ್ಲಿಗೆ?" ಎಂದು ಕೇಳಿದ.

''ಸಾಕ್ರಿ ಜೋಕ್ಸ್–ನನಗಿನ್ನೂ ತೃಪ್ತಿಯಾಗಿಲ್ಲ–ನಿನ್ನೆಯೆಲ್ಲಾ ಆ ಅನುಭವ ಕನಸಿನಲ್ಲಿ ಅನುಭವಿಸಿದಂತಿದೆ. ನೀವು ಅಷ್ಟು ರಸಿಕರಾಗಿ ಯಾವಾಗ ಬದಲಾದಿರಿ ಎಂಬುದೇ ಆಶ್ಚರ್ಯ. ಆದ್ದರಿಂದ ಇವತ್ತು ನನಗೆ ನಿಜವಾದ ಅನುಭವ

ಹೊಂದಬೇಕೆನ್ನಿಸಿದೆ ಬರ್ತೀರಾ''

'' ನೋಡಿ ನೀವು ಬಾಯಿಗೆ ಬಂದ ಹಾಗೆ ಮಾತಾಡ್ತಿದೀರ. ನೆನ್ನೆ ಸಂಜೆ ಟೇಬಲ್ ಟೆನ್ನಿಸ್ ಆಡ್ತಿದ್ದೆ ನಮ್ಮನೆ ಹತ್ತಿರ–''

ಅವಳು ನಾಚಿಕೆಯಿಂದ ನಕ್ಕಳು.

''ಅಬ್ಬ! ನೀವಿಷ್ಟು ರಸಿಕರೆಂದುಕೊಂಡಿರಲಿಲ್ಲ ಬಿಡಿ ನಾನು. ನೆನ್ನೆ ಟೇಬಲ್ ಮೇಲೆ ಸ್ವಲ್ಪ ಹೊತ್ತು ಕಳೆದೆವಲ್ಲಾ– ಅದಕ್ಕೆ ನೀವು ಟೇಬಲ್ ಟೆನ್ನಿಸ್ ಅಂತ ಹೆಸರಿಟ್ಟಿದೀರಲ್ಲಾ–"

ಸಾತ್ವಿಕರಾವ್‌ಗೆ ಏನು ಮಾತನಾಡಬೇಕೆಂದೇ ತೋಚಲಿಲ್ಲ.

"ಟೇಬಲ್ ಮೇಲೆ ಕಳೆದೆವಾ?''

''ಅಷ್ಟೊಂದು ಮುಗ್ಧರ ಹಾಗೆ ನಟಿಸಬೇಡೀಪ್ಪಾ! ಸರಿಬಿಡಿ– ಇವತ್ತು ಸಂಜೆ ಕೂಡಾ ನನಗೆ ಆ ಸಿಹಿ ಅನುಭವ ಬೇಕು, ಏನು?" ಎಂದು ಮತ್ತೆ ತನ್ನ ಕೆಲಸದಲ್ಲಿ ನಿರತಳಾದಳು.

ಸಾತ್ವಿಕರಾವ್ ಸ್ವಲ್ಪ ಹೊತ್ತು ನಿಶ್ಚೇಷ್ಟಿತನಾಗಿದ್ದುಬಿಟ್ಟ. ಹರಿಣಿ ತನ್ನನ್ನು ಚುಡಾಯಿಸುತ್ತಿದ್ದರೂ ಎಂದೂ ಇಷ್ಟು ಮಾತನಾಡಿರಲಿಲ್ಲ. ನೆನ್ನೆ ರಾತ್ರಿ ನಡೆದ ಘಟನೆಯ ಬಗ್ಗೆ ಹೇಳುವಾಗ ಅವಳ ಮುಖದಲ್ಲಿ ಕಾಣುತ್ತಿದ್ದ ನಾಚಿಕೆ, ತುಂಟ ತನ, ಕಣ್ಣಿನಲ್ಲಿ ಕಾಣುತ್ತಿದ್ದ ಮಿಂಚು ಒಂದು ವೇಳೆ–

ಚಕ್ಕನೆ ಅವನಿಗೆ ಯಾವುದೋ ವಾರಪತ್ರಿಕೆಯಲ್ಲಿ ಓದಿದ್ದ ಧಾರಾವಾಹಿ ಕಾದಂಬರಿ ''ಒಬ್ಬ ರಾಧೆ ಇಬ್ಬರು ಕೃಷ್ಣರು'' ನೆನಪಾಯಿತು.

ಹೌದು. ಅದರಲ್ಲಿ ಕೂಡಾ ಇಂಚಿಂಚೂ ಹೀಗೆಯೇ ನಡೆಯುತ್ತದೆ. ಹೀರೋಯಿನ್‌ಗೆ ಗೋಳಾಡಿಸುವವನು ಒಬ್ಬನಾದರೆ, ಅವಳು ತನ್ನ ಗೋಳನ್ನು ತೋಡಿಕೊಳ್ಳುವುದು ಮತ್ತೊಬ್ಬನೊಡನೆ. ಕೊನೆಗೆ ಇಬ್ಬರೂ ಒಬ್ಬರೇ ಎಂದು ತಿಳಿಯುತ್ತದೆ ಬಿಡಿ–ಅದು ಬೇರೆ ವಿಷಯ,

"ಸಾತ್ವಿಕರಾಯರೇ–'' ಹರಿಣಿ ಮತ್ತೆ ಬಳಿಗೆ ಸರಿದು ಮಾತನ್ನು ಪ್ರಾರಂಭಿಸಿದಳು.

"ಏನ್ರಿ?''

''ನಿಜವಾಗಿಯೂ ನುವು ಮುಂದಿನ ತಿಂಗಳು ತಿರುಪತಿಯಲ್ಲಿ ಮದುವೆ ಯಾಗೋಣವಾ?"

ಬೆಚ್ಚಿಬಿದ್ದ ಸಾತ್ವಿಕರಾಯನ ಕೈಯ್ಯಲ್ಲಿದ್ದ ಟೋಕನ್‌ಗಳೆಲ್ಲಾ ಠಳ್ಳನೇ ಕೆಳಗೆ ಬಿದ್ದವು.

"ಏನು? ಮದುವೆಯಾ?" ಬೆವರನ್ನು ಕರ್ಚೀಫಿನಿಂದ ಒರೆಸಿಕೊಳ್ಳುತ್ತ

ಕೇಳಿದ.

"ಅದನ್ನೂ ಮರೆತುಬಿಟ್ಟಿರಾ?'' ನಸುಗೋಪದಿಂದ ಕೇಳಿದಳು.

''ಮರೆತು ಹೋಗುವುದೇನು? ನಿಜವಾಗ್ಲೂ ನೀವು ನನ್ನ ಗೋಳು ಹೋಯ್ಕೊಳ್ತಿದೀರ–'' ಅಳುಮುಖದಿಂದ ಹೇಳಿದ.

''ಇದು ಚೆನ್ನಾಗಿದೆ–ನಿಮ್ಮನ್ನು ಅಳಿಸೋಕೆ ನಿನ್ನೆ ರಾತ್ರಿ ನಿಮ್ಮ ಜೊತೆ ಕಳೀತಿದ್ನಾ? ತುಂಬಾ ಲೈಟಾಗಿ ತಗೋತಿದೀರಾ 'ಶೀಲ' ಅಂದ್ರೆ ಏನೂಂತ ತಿಳ್ಕೊಂಡಿದೀರಿ? ಮದುವೇನೇ ಕ್ಯಾನ್ಸಲ್ ಮಾಡೋಣಾಂತಾನ?" ಅವಳ ಮಾತುಗಳನ್ನು ಯಾರಾದರೂ ಕೇಳುತ್ತಿದ್ದಾರೇನೋ ಎಂದು ಸುತ್ತಲೂ ನೋಡಿದ. ಮಾಧವಿ, ಕಿರಣ್ಮಯಿ ತನ್ನತ್ತಲೇ ನೋಡುತ್ತಿದ್ದರು. ಅವನ ಎದೆಗೆ ಕಲ್ಲು ಹೊಡೆದಂತಾಯ್ತು.

"ಆದರೆ– ನಾನು ನಿಜವಾಗಲೂ–''

"ನೋಡ್ರೀ, ಮದುವೆಯ ವಿಷಯವನ್ನು ನೀವೇ ಪ್ರಾರಂಭಿಸಿದ್ದರಿಂದ, ತಿರುಪತಿಯಲ್ಲಿ ಆಗೋಣವೆಂದೆ. ಒಪ್ಪಿಕೊಂಡಿದ್ದಿರಿ. ಒಂದು ವೇಳೆ ಮದುವೆ ಆಗಲು ಸಾಧ್ಯವಿಲ್ಲದಿದ್ದರೆ ಹೇಳಿ ಬಿಡಿ. ಏನೂ ಪರವಾಗಿಲ್ಲ ಬರೀ ಟೇಬಲ್ ಟೆನ್ನಿಸ್‌ನಿಂದಲೇ ತೃಪ್ತಿಪಡೋಣ. ಮದುವೆಯ ಬಗ್ಗೆ ನನಗೇನೂ ಅಷ್ಟು ಹುಚ್ಚಿಲ್ಲ, ಸರೀತಾನೇ?'' ನಗುತ್ತಾ ಕೇಳಿದಳು.

ಸಾತ್ವಿಕರಾವ್ ಅವಳೆಡೆಗೆ ಕಣ್ರೆಪ್ಪೆ ಬಡಿಯದೆ ನೋಡುತ್ತಾ ಇದ್ದುಬಿಟ್ಟ.

"ಐಯಾಮ್ ಲಕ್ಕಿ, ನಿಮ್ಮಂಥ ಮನ್ಮಥನ ಸುಖ ಅನುಭವಿಸಿದ್ದೇನೆ. ಅಷ್ಟೇ ಸಾಕು,'' ಎಂದು ಮತ್ತೆ ತನ್ನ ಕೆಲಸದಲ್ಲಿ ಮಗ್ನಳಾದಳು.

"ಸಾತ್ವಿಕರಾವ್–'' ಆಫೀಸರ್ ಕರೆದ.

''ಯಸ್‌ಸಾರ್–"

''ಎಂಟ್ರಿ ತಪ್ಪಾಗಿ ಬಿದ್ದಿದೆ. ಬೀ ಕೇರ್‌ಫುಲ್" ಎನ್ನುತ್ತಾ ಲೆಡ್ಜರನ್ನು ಅವನ ಮುಂದಕ್ಕೆ ತಳ್ಳಿದ.

ಸಾತ್ವಿಕರಾವ್ ಮತ್ತಷ್ಟು ಕಂಗಾಲಾಗಿ ರಾಂಗ್ ಎಂಟ್ರಿಯನ್ನು ಸರಿಪಡಿಸುತ್ತಿದ್ದಾಗ ಯಾರದೋ ಮೃದುವಾದ ಕೈಗಳು ಅವನ ಕಾಲರನ್ನು ಹಿಡಿದು ಮೇಲೆತ್ತಿದ್ದವು.

ತಲೆಎತ್ತಿ ನೋಡುವ ವೇಳೆಗೆ ಕೌಂಟರಿನ ಅತ್ತಕಡೆ ಒಬ್ಬ ಸುಂದರವಾದ ಹುಡುಗಿ, ಜೊತೆಗೊಬ್ಬ ಪೋಲೀಸ್ ಇನ್ಸ್‌ಪೆಕ್ಟರ್, ಇಬ್ಬರು ಕಾನ್ಸ್‌ಟೇಬಲ್‌ಗಳು ನಿಂತಿದ್ದರು.

ಬ್ಯಾಂಕಿನಲ್ಲಿ ಎಲ್ಲರೂ ಬಿಳಿಚಿಕೊಂಡು ಸಿನೆಮಾ ನೋಡುವಂತೆ ನೋಡುತ್ತಾ ಇದ್ದುಬಿಟ್ಟರು.

''ಇಗೋ– ಇವನೇ! ಇವನೇ! ರಾತ್ರಿ ನಮ್ಮ ಮನೆಯೊಳಗೆ ನುಗ್ಗಿ ನನ್ನನ್ನು–"

ಇನ್ಸ್‌ಪೆಕ್ಟರ್ ಕೌಂಟರಿನ ಮೇಲೆ ಕೈಯಿಟ್ಟು ಮುಂದಕ್ಕೆ ಬಾಗಿದ.

"ನಿಜವೇನು?" ಕರ್ಕಶವಾಗಿ ಕೇಳಿದ.

ಸಾತ್ವಿಕರಾವ್‌ಗೆ ಬುದ್ಧಿಯೇ ಕೆಟ್ಟಿತು.

"ಏ ಹುಡುಗೀ– ಏನಿದು? ನನ್ನ ಕಾಲರ್ ಬಿಡು'' ನಡುಗುವ ಸ್ವರದಲ್ಲೇ ಹೇಳಿದ.

''ಅಷ್ಟು ಸುಲಭವಾಗಿ ಬಿಡುವುದಿಲ್ಲಾ–ನಿನ್ನ ಅಂತ್ಯ ನೋಡುವ ವರೆಗೂ ಬಿಡುವುದಿಲ್ಲ,'' ಹಠ ಹಿಡಿದವಳಂತೆ ಹೇಳಿದಳು.

ಈ ಗಲಭೆಯನ್ನು ಕಂಡ ಕೂಡಲೇ ಆ ಬ್ರ್ಯಾಂಚಿನ ಯೂನಿಯನ್ ಲೀಡರ್ ಗಡಿಬಿಡಿಯಿಂದ ಅಲ್ಲಿಗೆ ಬಂದ.

''ಏನಮ್ಮಾ– ಏನಿದು? ಮೊದಲು ಆತನ ಕಾಲರ್ ಬಿಡು.''

ಆ ಯುವತಿ ಕೂಡಲೇ ಸಾತ್ವಿಕರಾಯನ ಕಾಲರನ್ನು ಬಿಟ್ಟು ಚಕ್ಕನೇ ಆ ಯೂನಿಯನ್ ಲೀಡರನ ಕಾಲರನ್ನು ಹಿಡಿದಳು.

'ಈಗೇನು ಹೇಳ್ತೀಯೋ ಹೇಳು' ಎಂಬಂತೆ ಅವನನ್ನು ನೋಡಿದಳು. ಯೂನಿಯನ್ ಲೀಡರ್ ಬೆಚ್ಚಿದ. ಇಷ್ಟು ದಿನ ತಾನು ಮ್ಯಾನೇಜ್‌ಮೆಂಟ್‌ನವರ ಕಾಲರ್ ಹಿಡಿದು ಅಲ್ಲಾಡಿಸಿದ್ದನಾಗಲೀ, ಈ ಅನುಭವ ಇಷ್ಟೊಂದು ಉಸಿರು ಗಟ್ಟಿಸುವಂತಿರುತ್ತದೆಂದು ಈಗ ತಿಳಿಯುತ್ತಿದೆ.

ಈಗ ಅಲ್ಲಿನ ಜನರೆಲ್ಲಾ ಎರಡು ಗುಂಪುಗಳಾಗಿ ಬದಲಾದರು. ಆ ಹುಡುಗಿಯನ್ನು ಸಪೋರ್ಟ್ ಮಾಡುವ ಕಸ್ಟಮರ್‌ಗಳು– ಸಾತ್ವಿಕರಾಯನನ್ನು ಸಪೋರ್ಟ್ ಮಾಡುವ ಸಿಬ್ಬಂದಿ ವರ್ಗ.

''ಅರೇ– ಏನಿದು? ಈ ದೌರ್ಜನ್ಯ ಇನ್ಸ್‌ಪೆಕ್ಟರ್ ನೀವಿಲ್ಲಿದ್ದೂ– ಅವಳು ಡ್ಯೂಟಿಯಲ್ಲಿರುವ ಉದ್ಯೋಗಿಯ ಕಾಲರ್‌ಹಿಡಿದಿದ್ದರೂ ಸುಮ್ಮನಿದ್ದೀರಲ್ಲಾ?" ಕೋಪದಿಂದ ಕೇಳಿದ ಯೂನಿಯನ್ ಲೀಡರ್.

''ಅವನು ಮಾಡಿರೋ ಹಲ್ಕಾ ಕೆಲಸ...'' ಇನ್ಸ್‌ಪೆಕ್ಟರ್ ಕೂಗಾಡಿದ.

''ಏನು ಮಾಡಿದಾನೆ?''

"ನಿನ್ನೆ ರಾತ್ರಿ ಹನ್ನೆರಡು ಗಂಟೇಲಿ ಈಕೆಯ ಮನೆಗೆ ನುಗ್ಗಿ ಅಸಭ್ಯಕರವಾಗಿ ವರ್ತಿಸಿದ್ದಾನೆ?"

"ನಾನಾ? ಇಂಪಾಸಿಬಲ್–" ಸಾತ್ವಿಕರಾವ್ ಹೇಳುತ್ತಿದ್ದ.

''ಓಹೋ– ಹಾಗಾದರೆ ನಿಮಗೆ ಒಂದೇ ರಾತ್ರಿ ಇಬ್ಬರು ಹುಡುಗಿಯರು

ಬೇಕೇನೋ. ಸಂಜೆ ಆರರಿಂದ ರಾತ್ರಿ ಹನ್ನೆರಡರ ವರೆಗೂ ಒಂದು ಷಿಫ್ಟು, ರಾತ್ರಿ ಹನ್ನೆರಡರಿಂದ ಬೆಳಿಗ್ಗೆ ಆರರ ವರೆಗೂ ಇನ್ನೊಂದು ಷಿಫ್ಟು–" ಹರಿಣಿ ಕೋಪದಿಂದಲೂ, ಮತ್ಸರದಿಂದಲೂ ಕೇಳಿದಳು.

ಜನರ ದೃಷ್ಟಿಯೆಲ್ಲಾ ಈಗ ಹರಿಣಿಯ ಕಡೆ ಹರಿಯಿತು.

"ಇವನು ಮಹಾರಸಿಕನಂತಿದ್ದಾನೆ'' ಜನರಲ್ಲಿ ಒಬ್ಬರು ಹೇಳಿದರು.

"ಇಲ್ಲದಿದ್ದರೆ ಈ ರೀತಿ ಷಿಫ್ಟುಗಳ ಪದ್ಧತಿ ಅದೇಕೆ ಪ್ರಾರಂಭಿಸುತ್ತಾನೆ? ಸಂಶೋಧನೆ ಮಾಡ್ತಾ ಇರಬೇಕು ಈ ವಿಷಯದಲ್ಲಿ.''

ಎಲ್ಲರೂ ಗೊಳ್ಳೆಂದು ನಕ್ಕರು.

ಸಾತ್ವಿಕರಾವ್ ಬೆವರೊರೆಸಿಕೊಂಡ.

''ನಂಗೇನೂ ತಿಳೀತಿಲ್ಲಾರೀ. ಈ ಹುಡುಗಿ ಯಾರೋ ನನಗೇ ಗೊತ್ತಿಲ್ಲ. ಇವಳ ಮುಖಾನೇ ನೋಡಿಲ್ಲ ..'' ನಡುಗುವ ಸ್ವರದಲ್ಲಿ ಹೇಳಿದ.

"ನೋಡಿದಿರಾ ನಾನು ಹೇಳಲಿಲ್ಲವೇ? ಇವನು ಮುಖಾನೇ ನೋಡ್ದೆ ವ್ಯವಹಾರ ಮಾಡ್ತಿದಾನೆ..." ಇನ್ಯಾರೋ ಹೇಳಿದರು, ಮತ್ತೆ ಎಲ್ಲರೂ ನಕ್ಕರು.

ಆ ಯುವತಿ ಚಕ್ಕನೆ ಯುನಿಯನ್ ಲೀಡರ್‌ನ ಕಾಲರ್ ಬಿಟ್ಟು ಸಾತ್ವಿಕರಾಯನ ಕಾಲರ್ ಹಿಡಿದಳು.

"ಏನು? ನನ್ನ ಮುಖವನ್ನು ನೀನು ಇದುವರೆವಿಗೂ ನೋಡಿರಲಿಲ್ಲವೇ? ಅಂದರೆ ನಿನಗೆ ಬೇಕಾಗಿದ್ದುದು ಕೇವಲ ಹೆಣ್ಣಿನ ಶರೀರ ಮಾತ್ರ ಅಂದ ಹಾಗಾಯಿತು. ಅದಕ್ಕೆ ತಲೆ ಇಲ್ಲದಿದ್ದರೂ ಪರವಾಗಿಲ್ಲ...ತಾನೇ? ಇನ್ಸ್‌ಪೆಕ್ಟರ್ ಸಂತೋಷಗೊಂಡ ಅವಳ ಪ್ರಶ್ನೆಗೆ.

"ಒಳ್ಳೆಯ ಪ್ರಶ್ನೆ...ಅರ್ಥಪೂರ್ಣ ಪ್ರಶ್ನೆ" ಸಂತೃಪ್ತಿಯಿಂದ ಹೇಳಿದ.

"ಎಕ್ಸ್‌ಕ್ಯೂಸ್ ಮಿ..." ಎನ್ನುತ್ತಾ ಓಡೋಡಿ ಬಂದ ಮ್ಯಾನೇಜರ್, "ನನ್ನಿಂದ ನಿಮಗೇನಾದರೂ ಸಹಾಯ ಬೇಕಾ?'' ಎಂದು ಕೇಳಿದ.

ಆ ಯುವತಿ ತನ್ನ ಮತ್ತೊಂದು ಕೈಯಿಂದ ಮ್ಯಾನೇಜರನ ಕತ್ತಿನಪಟ್ಟಿ ಹಿಡಿದಳು.

''ಮೊದಲು ಮರ್ಯಾದೆಯಿಂದ ಇವನನ್ನು ಹೊರಗೆ ಕಳಿಸುತ್ತೀರಾ ಇಲ್ಲವಾ?''

"ಸಾಧ್ಯವಿಲ್ಲ" ಯೂನಿಯನ್ ಲೀಡರ್ ಕಿರುಚಿದ.

"ತ್ರೀ-ನಾಟ್-ತ್ರೀ ಇವನನ್ನು ವ್ಯಾನಿನಲ್ಲಿ ಎತ್ತಿಹಾಕು" ಇನ್ಸ್‌ಪೆಕ್ಟರ್ ಆಜ್ಞಾಪಿಸಿದ.

ಕೂಡಲೇ ಇಬ್ಬರು ಕಾನ್ಸ್‌ಟೇಬಲ್‌ಗಳು ಒಳಗೆ ಬಂದು ಲೀಡರನನ್ನು

ಹೊರಗೆಳೆದುಕೊಂಡು ಹೋದರು.

"ಅಖಿಲ ಭಾರತ ಬ್ಯಾಂಕ್‌ಗಳನ್ನೆಲ್ಲಾ ಬಂದ್ ಮಾಡಿಸಿ. ಪೋಲೀಸ್ ದೌರ್ಜನ್ಯ ಡೌನ್ ಡೌನ್" ಎನ್ನುತ್ತಾ ಹೊರಗೆ ಹೊರಟುಹೋದ.

"ನಿಜಕ್ಕೂ ಏನು ನಡೀತಮ್ಮ?" ಮ್ಯಾನೇಜರ್ ಕೇಳಿದ.

"ಇವನು ನೆನ್ನೆರಾತ್ರಿ ಹನ್ನೆರಡು ಗಂಟೆಯ ಸಮಯದಲ್ಲಿ ಈಕೆಯ ಮನೆಯೊಳಗೆ ನುಗ್ಗಿ ಇವಳ ಮೇಲೆ ಅತ್ಯಾಚಾರವೆಸಗಲು ಪ್ರಯತ್ನಿಸಿದ," ಇನ್ಸ್‌ಪೆಕ್ಟರೇ ಹೇಳಿದ.

"ವೆರಿಬ್ಯಾಡ್" ಅಂದ ಸಾತ್ವಿಕರಾವ್ ಕಡೆಗೆ ನೋಡುತ್ತಾ.

"ಎಲ್ಲಾ ಸುಳ್ಳು ಸಾರ್...ನಿಜವಾಗಿಯೂ ನಾನು..."

"ಷಟಪ್" ಅಂದಳು ಆ ಯುವತಿ, "ನೀನು ಹೀಗೆ ಹೇಳ್ತಿ ಅಂತ್ಲೇ ನಾನು ಸಾಕ್ಷಿಗಳನ್ನು ತಂದಿದ್ದೇನೆ," ಎನ್ನುತ್ತಾ "ಏ ರಾಮಾ, ನಾಗಾ..." ಎಂದು ಕೂಗಿದಳು.

ಜನರ ನಡುವಿನಿಂದ ತಳ್ಳಿಕೊಂಡು ರಾಮು, ನಾಗ ಎಂಬುವರು ಓಡಿ ಬಂದರು.

"ಅಮ್ಮಾವ್ರು ಹೇಳಿದ್ದು ನಿಜವೇ, ನೆನ್ನೆರಾತ್ರಿ ಹನ್ನೆರಡು ಗಂಟೆಗೆ ಹೋಟೆಲ್ ಮುಚ್ಚಿ ನಾವು...ಅಮ್ಮಾವ್ರನ್ನು ಅವರ ಮನೆಗೆ ಬಿಡಲು ಹೋಗಿದ್ದೆವು. ಇವ್ರು ಒಳಗೆ ಹೋದಕೂಡಲೇ ಈ ವ್ಯಕ್ತಿ ಮನೆಯೊಳಗೆ ನುಗ್ಗಿದ. ಅಮ್ಮಾವ್ರ ಕಿರುಚಾಟ ಕೇಳಿಸಿದ ಕೂಡಲೇ ನಾವು ಮತ್ತೆ ಅಲ್ಲಿಗೆ ಹೋದೆವು, ಇವನು ಓಡಿಹೋದ" ಸಾತ್ವಿಕರಾವ್ ಕುರ್ಚಿಯಲ್ಲಿ ಕುಸಿದು ಕುಳಿತ.

ಅವನ ಕಣ್ಮುಂದೆ ಈಗ 'ಒಬ್ಬ ರಾಧೆ ಇಬ್ಬರು ಕೃಷ್ಣರು' ಕಾದಂಬರಿಯ ಬದಲು ಸಿನೆಮಾ ಕಾಣಲು ಪ್ರಾರಂಭವಾಯಿತು,

"ಇವರೇನು ಹೋಟೆಲ್ ಅನ್ನುತ್ತಿದ್ದಾರಲ್ಲಾ..." ಮ್ಯಾನೇಜರ್ ಕೇಳಿದ.

"ನಾನು ಹೋಟೆಲ್ ಪ್ರೊಪ್ರೈಟರ್. ಸೆಲ್ಫ್ ಎಂಪ್ಲಾಯ್‌ಮೆಂಟ್ ಸ್ಕೀಮಿನಡಿಯಲ್ಲಿ ನೀವು ಕೊಟ್ಟ ಲೋನ್‌ನಿಂದ್ಲೇ ಹೋಟೆಲಿಟ್ಟಿದ್ದೇನೆ."

"ಓ...ಐ...ಸೀ" ಮ್ಯಾನೇಜರ್ ಹೇಳಿದ, "ಆದರೆ ನನ್ನ ಸರ್ವೀಸಿನಲ್ಲಿ ನಾನಿದುವರೆಗೂ ಯಾರಿಗೂ ಲೋನ್ ಕೊಟ್ಟ ನೆನಪೇ ಇಲ್ಲವಲ್ಲ."

"ನಿಮ್ಮ ಮುಖ! ನೀವೆಂದರೆ ನೀವಲ್ಲ, ನಿಮ್ಮ ಬ್ಯಾಂಕ್."

"ಐಸೀ...ಇಷ್ಟಕ್ಕೂ ಈಗೇನು ಮಾಡೂಂತೀರಿ?"

"ಅವನನ್ನು ನಮಗೆ ಒಪ್ಪಿಸಿದರೆ ನಾವೇ ಫಿನಿಷ್ ಮಾಡ್ತೀವಿ."

"ಸಾಧ್ಯವಿಲ್ಲ...ಆತ ಡ್ಯೂಟಿಯಲ್ಲಿದ್ದಾನೆ."

"ಹಾಗಾದರೆ ಮ್ಯಾನೇಜರನನ್ನೇ ಒಳಗೆ ತಳ್ರೋ,"

ಇಬ್ಬರು ಕಾನ್ಸ್‌ಟೇಬಲ್‌ಗಳು ಮ್ಯಾನೇಜರನನ್ನೇ ಎಳೆದುಕೊಂಡುಹೋಗಿ ವ್ಯಾನಿನೊಳಗೆ ಹಾಕಿದರು.

ಮ್ಯಾನೇಜರೆಂದರೆ ಆಗದ ಅಕೌಂಟೆಂಟ್ ಕೂಡಲೇ 'ಟೀ ಪಾರ್ಟಿ' ಮಾಡಲು ಸಿದ್ಧತೆ ಮಾಡತೊಡಗಿದ.

"ಇದು ಅನ್ಯಾಯ ಸಾರ್. ಇದು ಅಕ್ರಮ ಸಾರ್...ಅವನ್ಯಾರೋ ಡೂಪ್ಲಿಕೇಟ್‌ನಿಂದ ಇದೆಲ್ಲಾ ಆಗ್ತಿದೆಯೆಂದು ನನ್ನ ಅನುಮಾನ..." ಅಳು ಮುಖದಿಂದ ಹೇಳಿದ ಸಾತ್ವಿಕರಾವ್.

'ಒಬ್ಬ ರಾಧೆ ಇಬ್ಬರು ಕೃಷ್ಣರು' ಎಂದೇನೋ ಹೇಳಲು ಪ್ರಾರಂಭಿಸಿದ.

ಅಷ್ಟರಲ್ಲಿ ಆ ಯುವತಿ ನಡುವೆ ಬಾಯಿಹಾಕಿ, "ಆ ಸಿನೆಮಾ ನಾನು ಕೂಡಾ ನೋಡಿದ್ದೇನೆ, ಕೊನೆಗೆ ಒಬ್ಬನೇ ಎರಡು ವೇಷ ಹಾಕಿದಂತೆ ತಿಳಿಯುತ್ತದೆ."

"ಈ ದೇಶವನ್ನು ಸಿನೆಮಾಗಳು, ಕಾದಂಬರಿಗಳು ಹಾಳು ಮಾಡುತ್ತಿವೆ. ಕಮಾನ್ ಮಿಸ್ಟರ್ ಸಾತ್ವಿಕರಾವ್..."

"ಕಮಾನ್...ಕಮಾನ್" ಇನ್ಸ್‌ಪೆಕ್ಟರ್ ಸಾತ್ವಿಕರಾವ್‌ಗೆ ಹೇಳಿದ.

ಸಾತ್ವಿಕರಾವ್ ದೀನನಾಗಿ ಮೇಲೆದ್ದು ನಿಂತ.

"ನೀವಿಬ್ಬರೂ ಮದುವೆಯಾಗಿಬಿಡಿ. ಪ್ರಾಬ್ಲಮ್ ಸಾಲ್ವ್ ಆಗಿಬಿಡುತ್ತೆ. ನಾವು ಈ ನಡುವೆ ಬೇರೆ ಕೆಲಸಗಳನ್ನೆಲ್ಲಾ ಬಿಟ್ಟು ಸ್ಟೇಷನ್ನಿಗೆ ಬಂದವರಿಗೆಲ್ಲಾ ಮದುವೆ ಮಾಡುತ್ತಿದ್ದೇವೆ," ಇನ್ಸ್‌ಪೆಕ್ಟರ್ ಹೇಳಿದ.

"ಏನು? ಮದುವೆಯಾ" ಆಶ್ಚರ್ಯದಿಂದ ಕೇಳಿದ ಸಾತ್ವಿಕರಾವ್.

"ಹೌದು! ಎಂತಹ ತಪ್ಪು ಮಾಡಿದವನಿಗೂ ಮದುವೆಯೇ ಸರಿಯಾದ ಶಿಕ್ಷೆಯೆಂದು ನಾನು ದೃಢವಾಗಿ ನಂಬುತ್ತೇನೆ. ಅದಕ್ಕೆ ನಮ್ಮ ಪೋಲೀಸ್ ಸ್ಟೇಷನ್‌ನಲ್ಲಿ ದಿನಕ್ಕೊಂದು ಮದುವೆಯ ಗುರಿಯಿಟ್ಟುಕೊಂಡಿದ್ದೇವೆ. ನಾಳೆ ಬೇರೆ ಯಾವ ಮದುವೆಯೂ ಇಲ್ಲ, ನಿಮ್ಮ ಮದುವೆ ಮಾಡಿಬಿಡೋಣ."

"ಬೇಕಾಗಿಲ್ಲ..." ಹೇಳಿದಳು ಆ ಯುವತಿ ಕೋಪದಿಂದ. "ಓಹೋ! ಇಂತಹ ಮನ್ಮಥನನ್ನೇ ಮದುವೆ ಆಗ್ಬೇಕು! ಒಳ್ಳೇ ರೌಡಿ ಥರ ಇದಾನೆ,"

"ನೋಡು ನನ್ನನ್ನು ರೌಡಿ ಅಂದ್ರೆ ಸರಿಯಾಗಿರೋಲ್ಲ. ನನ್ನಂಥಹ ಸಭ್ಯ ನಿಲ್ಲವೆಂದು ಬ್ಯಾಂಕಿನಲ್ಲೆಲ್ಲಾ ಹೇಳುತ್ತಿರುತ್ತಾರೆ," ಪೌರುಷದಿಂದ ಹೇಳಿದ ಸಾತ್ವಿಕರಾವ್.

"ನನ್ನ ಮಾತು ಕೇಳಿ ಮದುವೆಗೆ ಒಪ್ಪಿಕೊಳ್ಳಿ. ನಮ್ಮ ಕಮಿಷನರ್

ಕೂಡಾ ತಪ್ಪದೇ ಬರುತ್ತಾರೆ ಎಲ್ಲಾ ಮದುವೆಗಳಿಗೂ..."

"ಸಾಧ್ಯವಿಲ್ಲ...ಮೊದಲು ಅವನನ್ನು ಅರೆಸ್ಟ್ ಮಾಡುತ್ತೀರೋ ಇಲ್ಲವೋ?" ಕೋಪದಿಂದ ಕೇಳಿದಳು ಅವಳು.

ಇನ್ಸ್‌ಪೆಕ್ಟರ್ ತಲೆ ಕೆರೆಯುತ್ತಾ ನಿಂತ.

"ಇವತ್ತು ಬೆಳಿಗ್ಗೆ ಎದ್ದು ಯಾರ ಮುಖ ನೋಡಿದೆನೋ ಏನೋ! ಒಂದಾದ್ರೂ ಮದ್ವೆ ಕೇಸ್ ಸಿಗಲಿಲ್ಲ. ಏ ತ್ರೀನಾಟ್‌ತ್ರೀ ಈ ಸಾತ್ವಿಕರಾಯನನ್ನು ಎಳೆದುಕೊಂಡು ಹೋಗಿ ಲಾಕಪ್‌ಗೆ ತಳ್ಳು..." ಎಂದು ಯುವತಿಯ ಕಡೆ ತಿರುಗಿ..."ಓಕೆ ಮಿಸ್ ರಾಧಾ! ನಾನು ಹೇಳಿದ ವಿಷಯದ ಬಗ್ಗೆ ಇನ್ನೊಮ್ಮೆ ಯೋಚಿಸಿ, ಒಪ್ಪಿಗೆ ಆದರೆ ನನಗೆ ಫೋನ್ ಮಾಡಿ'' ಎಂದು ಹೊರಟುಹೋದ.

ಸರಸ್ವತಿ ತಲೆಯ ಮೇಲೆ ಕೈ ಹೊತ್ತು ಕುಳಿತಳು.

"ಅವರಿಬ್ಬರ ಜೋಡಿ ಸುಂದರವಾಗಿರುತ್ತದೆಂದು ಎಷ್ಟೋ ಆಸೆಪಟ್ಟಿದ್ದೆ. ಅವರೇ 'ಮೇಡ್ ಫಾರ್ ಈಚ್ ಅದರ್' ಜೋಡಿಯಾಗುತ್ತಾರೆಂದುಕೊಂಡಿದ್ದೆ. ಆ ಶಚೀದೇವಿಯ ಕೊಬ್ಬನ್ನು ಇಳಿಸಬಹುದೆಂಬ ಲೆಕ್ಕಾಚಾರ ತಪ್ಪುತ್ತಿದೆಯಲ್ಲಾ. ಆನಂದರಾವ್‌ನಿಂದ ಸಾತ್ವಿಕರಾವ್, ರಾಧಾ ನಡುವೆ ಕಲಹ ಉಂಟಾಗಿದೆ. ಈಗ ಹೇಗೆ?" ನೋಟುಗಳನ್ನು ಪ್ರಿಂಟ್ ಮಾಡಿ ಬಿಸಾಡುವಂತೆ ಮನುಷ್ಯರನ್ನು ತಯಾರಿಸುತ್ತಿದ್ದ ಬ್ರಹ್ಮನನ್ನು ಕೇಳಿದಳು.

ಬ್ರಹ್ಮ ಅವಳೆಡೆಗೆ ಕರುಣಾದೃಷ್ಟಿ ಬೀರಿದ.

"ಒಂದೇ ಒಂದು ಮಾರ್ಗವಿದೆ "ಸೃಷ್ಟಿ ಕಾರ್ಯವನ್ನು ನಿಲ್ಲಿಸದೆಯೇ ಹೇಳಿದ.

"ಏನದು?" ಆತುರದಿಂದ ಕೇಳಿದಳು.

"ನಾವು ಸ್ವತಃ ಭೂಲೋಕಕ್ಕೆ ಹೋಗಿ, ಅವರನ್ನು ಯಾವುದೋ ಒಂದು ಉಪಾಯ ಹೂಡಿ ಒಂದು ಮಾಡಬೇಕು."

ಸರಸ್ವತಿ ಸಂತೋಷದಿಂದ "ಹಾಗಾದರೆ ಈಗಲೇ ನಡಿಯಿರಿ .." ಎಂದಳು.

"ನನ್ನ ಸೃಷ್ಟಿ ಕಾರ್ಯದ ಗತಿ?"

"ಸ್ವಲ್ಪ ಹೊತ್ತು ನಿಮ್ಮ ಸೃಷ್ಟಿ ನಿಂತರೆ ಪ್ರಳಯವೇನೂ ಆಗುವುದಿಲ್ಲ ಬಿಡಿ. ಈಗಲೇ ಅತೀಸಷ್ಟಿ ಆಗಿದೆ. ಜನಸಂಖ್ಯೆ ಹೆಚ್ಚಾಗಿ ಫ್ಯಾಮಿಲಿ ಪ್ಲಾನಿಂಗ್

ಹಾಳೂ–ಮೂಳು ಅಂತ ಒದ್ದಾಡ್ತಿದಾರೆ ಜನ'' ನಸುಗೋಪದಿಂದ ಹೇಳಿದಳು.

ಬೇರೆ ದಾರಿಯಿಲ್ಲದೆ ಸೃಷ್ಟಿ ಕಾರ್ಯವನ್ನು ನಿಲ್ಲಿಸಿ ಬ್ರಹ್ಮ, ಸರಸ್ವತಿಯೊಡನೆ ಭೂಲೋಕಕ್ಕೆ ಬಂದನು.

ಶಚೀದೇವಿ ಬೆಚ್ಚಿಬಿದ್ದು ನಿದ್ರೆಯಿಂದ ಎದ್ದಳು. ಬ್ರಹ್ಮ ಸರಸ್ವತಿ ಭೂಲೋಕಕ್ಕೆ ಹೋಗುತ್ತಿರುವಂತೆ ಕನಸು ಕಂಡಳು.

ಅಷ್ಟರಲ್ಲಿ ಇಂದ್ರ ನಿದ್ರೆಯಲ್ಲೇ 'ಹಾ ಪ್ರಿಯೇ...ಹಾ ಪ್ರಿಯೇ' ಎಂದು ಕನವರಿಸಿಕೊಳ್ಳುತ್ತಿದ್ದ. ಅವಳ ಹೃದಯಕ್ಕೆ ಕಲ್ಲು ಬಿದ್ದಂತಾಯಿತು ಅದನ್ನು ಕೇಳಿ. ಇಂದ್ರನ ತಲೆಗೆ ಒಂದು ಪೆಟ್ಟುಕೊಟ್ಟಳು. ಬೆಚ್ಚಿ ಮೇಲೆದ್ದ ಇಂದ್ರ. "ಏನಾಯಿತು ಶಚೀ?" ತಲೆ ನೇವರಿಸಿಕೊಳ್ಳುತ್ತಾ ಕೇಳಿದ.

"ಯಾರನ್ನಾರೀ ಪ್ರಿಯೇ, ಪ್ರಿಯೇ ಅಂತಿದ್ದು? ಈಗ ಇರೋರು ಸಾಲ್ದೆ ಇನ್ನೊಬ್ಬಳನ್ನು ಕನಸಿನಲ್ಲಿ ಕನವರಿಸಿಕೊಳ್ತಿದ್ದಿರೇನೊ!"

ಇಂದ್ರ ಒಂದು ಕ್ಷಣ ಯೋಚಿಸಿ, ಜೋರಾಗಿ ನಕ್ಕುಬಿಟ್ಟ.

"ಹುಚ್ಚೀ ..ನೀನೆ ನನ್ನ ಕನಸಿನಲ್ಲಿ ಬಂದಿದ್ದೆ ಕಣೇ."

"ಸುಳ್ಳು ಹೇಳ್ಬೇಡಿ . ನನ್ನನ್ನು ಪ್ರಿಯೇ ಎಂದೇಕೆ ಕರೆಯುತ್ತೀರಿ. 'ಹೆಂಡತಿ' ಎಂದಿಗಾದರೂ 'ಪ್ರಿಯೆ' ಆಗುತ್ತಾಳಾ?" ರೋಷದಿಂದ ಕೇಳಿದಳು.

"ನಿನ್ನ ಮೇಲೆ ಆಣೆ ಮಾಡಿ ಹೇಳುತ್ತಿದ್ದೇನೆ— ನಿನ್ನ ಮಾತು ಸಾಮಾನ್ಯವಾಗಿ ನಿಜವಾದರೂ ನನ್ನೊಬ್ಬನ ವಿಷಯದಲ್ಲಿ ಹೆಂಡತಿ ಪ್ರಿಯೆಯಾಗಿದ್ದಾಳೆ," ದೀನನಾಗಿ ಹೇಳಿದ.

ಅವಳಿಗೆ ಅವನ ಮಾತಿನ ಮೇಲೆ ನಂಬಿಕೆ ಉಂಟಾಯಿತು.

"ಸರಿ–ನಡೆಯಿರಿ– ನಾವು ಬೇಗ ಹೋಗಬೇಕು''

"ಎಲ್ಲಿಗೆ?'' ಆಶ್ಚರ್ಯದಿಂದ ಕೇಳಿದ.

''ಭೂಲೋಕಕ್ಕೆ! ಈ ಕೂಡಲೇ ಹೋಗಿ ಸರಸ್ವತಿಯ ಗರ್ವಭಂಗ ಮಾಡದಿದ್ದರೆ ಇಲ್ಲಿ ನನ್ನ ಅಂತಸ್ತು–ಪ್ರತಿಷ್ಠೆಗಳು ಮಣ್ಣಾಗುತ್ತವೆ. ಸರಸ್ವತಿ ತಯಾರು ಮಾಡುತ್ತಿರುವ ಆ 'ಮೇಡ್ ಫಾರ್ ಈಚ್ ಅದರ್' ಜೋಡಿಯನ್ನು ಹೇಗಾದರೂ ನಾವು ಬೇರ್ಪಡಿಸಬೇಕು.''

ಇಂದ್ರ ತಲೆ ಕೆರೆದುಕೊಂಡ.

"ಹೋಗಲಿ ಬಿಡು ಚಿನ್ನ–ಅವಳೇ ಗೆಲ್ಲಲಿ ಬಿಡು–ನಾವು ಸುಮ್ಮನಿದ್ದು-ಬಿಟ್ಟರೆ ಆಯಿತು–ಬ್ರಹ್ಮನೇನೋ ನನಗೆ ಒಳ್ಳೆ ಸ್ನೇಹಿತ–''

"ನಾಚಿಕೆ ಇಲ್ಲದಿದ್ದರೆ ಸರಿ–ನಡೆಯಿರಿ ಮೊದಲು" ಜೋರಾಗಿ ಕಿರುಚಿದಳು ಅವಳು.

ಇಂದ್ರ ನಿದಾನವಾಗಿ ಎದ್ದು ನಿಂತ.

"ಹೋಗಲಿ ನಾನಿಲ್ಲೇ ಇರುತ್ತೇನೆ– ನೀನು ಹೋಗಿಬಾ"

''ಆ...ಆ–ನಂಗೂ ಗೊತ್ತು ನೀವಿಲ್ಲಿದ್ದು ಎಂಥಾ ವೇಷ ಹಾಕ್ತೀರೀಂತ ಮತ್ತೆ ಆ ಹಳೇ ಪ್ರೇಯಸಿಯರನ್ನು ಭೇಟಿಮಾಡಬೇಕೇನೋ? ನಡೀರಿ ಸಾಕು–'' ಬೇರೆ ದಾರಿಕಾಣದವನಂತೆ ಅವಳನ್ನು ಹಿಂಬಾಲಿಸಿದ ದೇವೇಂದ್ರ.

**ಸಾ**ತ್ವಿಕರಾಯನ ಮನಸ್ಸೆಲ್ಲಾ ಕೆಟ್ಟುಹೋಗಿತ್ತು.

ರಾತ್ರಿಯೆಲ್ಲಾ ನಿದ್ರೆ ಬರಲಿಲ್ಲ.

ಒಂದು ದಿನವೆಲ್ಲಾ ಪೋಲೀಸರು ಅವನನ್ನು ಲಾಕಪ್ಪಿನಲ್ಲಿ ಕೂಡಿಹಾಕಿದ್ದು, ನಂತರ ತಾನು ರಾಧಾಳಿಗೆ ಅಪಾಲಜಿ ಬರೆದುಕೊಟ್ಟದ್ದು, ತಾನು ನಿಜವನ್ನು ಹೇಳಿದರೂ ಯಾರೂ ನಂಬದೇ ಹೋದದ್ದು–

ಬೆಳಗ್ಗೆ ಎಳುತ್ತಲೇ ಸ್ನಾನ ವಗೈರೆ ಮುಗಿಸಿ ದೇವಸ್ಥಾನಕ್ಕೆ ಹೊರಟ ಅವನು. ದೇವರಿಗೆ ತಾನೇನೋ ಅಪಚಾರ ಮಾಡಿದ್ದರಿಂದಲೇ ಆಂಜನೇಯ ಸ್ವಾಮಿ ತನಗೆ ಶಿಕ್ಷೆ ಕೊಟ್ಟಿದ್ದಾನೆ. ಆಂಜನೇಯಸ್ವಾಮಿಗೆ ತಾನೇನು ಅಪಚಾರ ಮಾಡಿದ್ದೆ? ದಾರಿಯಲ್ಲಿ ನಡೆಯುತ್ತಾ ತೀವ್ರವಾಗಿ ಯೋಚಿಸುತ್ತಿದ್ದ.

ಹಠಾತ್ತನೇ ನೆನಪಾಯಿತು–ತಾನು ಆಂಜನೇಯಸ್ವಾಮಿಗೆ ಪ್ರಾಮಿಸ್ ಮಾಡಿದ್ದು...ಬಾಳೆಲ್ಲಾ ಬ್ರಹ್ಮಚಾರಿಯಾಗಿರುತ್ತೇನೆಂದೂ, ಹೆಣ್ಣುಗಳನ್ನು ನೋಡಿದಾಗ ಚಂಚಲಗೊಳ್ಳುವುದಿಲ್ಲವೆಂದೂ, ಆದರೆ ರಾಧಳ ಸೌಂದರ್ಯವನ್ನು ಕಂಡಾಗ ಅವನ ಮನಸ್ಸು ಕೆಲವು ಕ್ಷಣಗಳ ಕಾಲ ಚಂಚಲಗೊಂಡಿತ್ತು. ಅಲ್ಲೇ ಆಂಜನೇಯಸ್ವಾಮಿಗೆ ತನ್ನ ಮೇಲೆ ಸಿಟ್ಟು ಬಂದಿರುವುದು ಮತ್ತು ತನ್ನನ್ನು ಪೋಲಿಸರಿಗೆ ಹ್ಯಾಂಡೋವರ್ ಮಾಡಿರುವುದು.

ದೇವಸ್ಥಾನದ ಪ್ರಾಂಗಣದಲ್ಲಿ ಕಾಲಿಟ್ಟ ಅವನು. ಅವನ ಮನಸ್ಸೆಲ್ಲಾ ಆಂಜನೇಯಸ್ವಾಮಿಯ ಮೇಲೆ ಭಕ್ತಿಭಾವದಿಂದ ತುಂಬಿದೆ. ಸ್ವಾಮಿ ತುಂಬಾ

ಕೋಪಗೊಂಡಿರುವವನಂತೆ ಕಂಡ.

"ಅಪಚಾರ ನಡೆದುಬಿಟ್ಟಿದೆ ಸ್ವಾಮಿ! ನನ್ನನ್ನು ಕ್ಷಮಿಸು!"

''ಸ್ವಾಮಿ ಆ ರಾಧಾ ಯಾರೋ ತುಂಬಾ ಚನ್ನಾಗಿದ್ಲು. ಹಾಗಾಗಿ ಸ್ವಲ್ಪ 'ಇದು' ಅನ್ನಿಸಿತು. ಇನ್ನೊಮ್ಮೆ ಆ ರಾಧಾ ಕಂಡರೆ ಅವಳೆಡೆಗೇ ನೋಡುವುದಿಲ್ಲ" ಎನ್ನುತ್ತಾ ನಮಸ್ಕಾರ ಮಾಡುತ್ತಾ ಕೆನ್ನೆಗೆ ಹೊಡೆದುಕೊಂಡ. ಆದರೂ ಆಂಜನೇಯಸ್ವಾಮಿಯ ಮುಖದಲ್ಲಿ ಇನ್ನೂ ಕೋಪ ತಾಂಡವವಾಡುತ್ತಿತ್ತು. "ಸ್ವಾಮಿ–ನನ್ನನ್ನು ಕ್ಷಮಿಸಲಾರೆಯಾ? ಹಾಗಾದರೆ ಬಿಡು–"ಎನ್ನುತ್ತಾ ಕೋಪ ಗೊಂಡು, ಗಂಟೆಗಳನ್ನು ಬಾರಿಸುತ್ತಾ ಹಾಡಲು ಪ್ರಾರಂಭಿಸಿದ.

"ನಾನೇ ನಿನ್ನ ಭಕ್ತನಾದರೆ–ನಿನ್ನಲ್ಲಿ ಮಹಾತ್ಮೆಯಿದ್ದರೆ–

"ಸಪ್ತ ಸಮುದ್ರಗಳು ಉಕ್ಕಲೀ

"ಭೂಮಿ ಕಂಪಿಸಿಬಿಡಲೀ

"ಮೂರೂ ಲೋಕಗಳೂ ಐಕ್ಯವಾಗಲೀ"

ಎಂದು ಹಾಡನ್ನು ನಿಲ್ಲಿಸಿ ಸುತ್ತಲೂ ನೋಡಿದ. ಪ್ರಪಂಚವೆಲ್ಲಾ ಹಾಡನ್ನು ಪ್ರಾರಂಭಿಸುವುದಕ್ಕೆ ಮುಂಚೆ ಹೇಗಿತ್ತೋ ಹಾಗೆಯೇ ಇತ್ತು. ಮತ್ತೆ ಎರಡನೆ ಸಲ ಹಾಡಲು ಪ್ರಾರಂಭಿಸಿದ.

ಆ ಪಕ್ಕದಲ್ಲೇ ರಾಮ ದೇವಾಲಯಲದ ಮಂಟಪದಲ್ಲಿ ಕುಳಿತು ಪ್ರಸಾದ ತಿನ್ನುತ್ತಿದ್ದ ಸರಸ್ವತಿ ಕಂಗಾಲಾಗಿ ಗಂಡನ ಕಡೆಗೆ ನೋಡಿದಳು.

"ಇದೆಂತಹ ಗ್ರಹಚಾರ–ಇಷ್ಟು ಮುಗ್ಧನನ್ನು ಹೇಗೆ ಸೃಷ್ಟಿಸಿದೆಯೋ" ಎಂದು ಕೇಳಿದ ಬ್ರಹ್ಮ.

"ನಂಗೇನು ಗೊತ್ತೂರೀ–ಒಬ್ಬ ಮೇಧಾವಿ; ಎರಡನೆಯವನು ಒಳ್ಳೆಯವ; ಮೂರನೆಯವ ಅಂದಗಾರನಾಗಿದ್ದರೆ, ಆ ಮೂವರಲ್ಲಿ ಯಾರೊಬ್ಬ ಜೋಡಿ ಯಾದರೂ 'ಮೇಡ್ ಫಾರ್ ಈಚ್ ಅದರ್' ಜೋಡಿಯಾಗುತ್ತದೆಂದು ಅಂದು ಕೊಂಡಿದ್ದೆ. ಈಗ ನೋಡಿದರೆ ಮೇಧಾವಿಗೆ ಇಪ್ಪತ್ತೈದು ವರ್ಷಕ್ಕೆ ತಲೆಯೆಲ್ಲಾ ಬೋಳಾಗಿದೆ. ಈ ಒಳ್ಳೆಯವನನ್ನು ನೋಡಿದರೆ ಇಷ್ಟು ಪೆದ್ದನಂತೆ ಸಪ್ತ ಸಮುದ್ರಗಳು ಉಕ್ಕಲೀ ಎಂದು ಹಾಡುತ್ತಿದ್ದಾನೆ. ಮೂರನೆಯವನೇನೋ ಕಂಡ ಕಂಡ ಸುಂದರ ಹುಡುಗಿಯನ್ನು ಬಲೆಗೆ ಹಾಕಿಕೊಳ್ಳಲು ಪ್ರಯತ್ನಿಸುತ್ತಿದ್ದಾನೆ–" ಆತಂಕದಿಂದ ಹೇಳಿದಳು.

"ಈಗ ಆ ಪುರಾಣವೆಲ್ಲಾ ಯಾಕೆ? ಮೊದಲು ಆ ಸಾತ್ವಿಕರಾಯನ ಹಾಡನ್ನು ನಿಲ್ಲಿಸು. ನನಗೆ ತಲೆ (ಗಳು) ಚಿಟ್ಟುಹಿಡೀತಿದೆ," ಬ್ರಹ್ಮ ಹೇಳಿದ.

ಸರಸ್ವತಿ ಕೂಡಲೇ ಆಂಜನೇಯಸ್ವಾಮಿಯೊಡನೆ ಮಾತನಾಡಿ, ಅವನ

ಮುಖವನ್ನು ಪ್ರಸನ್ನವಾಗಿ ಕಾಣುವಂತೆ ಮಾಡಿದಳು. ಅದನ್ನು ಕಂಡ ಕೂಡಲೇ ಸಾತ್ವಿಕರಾವ್ ಸಂತೋಷಗೊಂಡು ಹಾಡನ್ನು ನಿಲ್ಲಿಸಿದ. ಸರಿಯಾಗಿ ಅದೇ ಸಮಯಕ್ಕೆ ರಾಧಾ ದೇವಸ್ಥಾನದ ಪ್ರಾಂಗಣದಲ್ಲಿ ಹೆಜ್ಜೆ ಇಟ್ಟಳು.

ಸರಸ್ವತಿ ಸಂತೋಷದಿಂದ ಎದ್ದು ನಿಂತಳು.

"ಈಗ ನೋಡಿ–ಇನ್ನು ಇವರಿಬ್ಬರನ್ನು ಹೇಗೆ ಒಂದು ಮಾಡ್ತೀನಂತ–" ಉತ್ಸಾಹದಿಂದ ಹೇಳಿದಳು.

ರಾಧಾ ಮೆಲ್ಲಗೆ ಬಳುಕುತ್ತಾ ಗುಡಿಯೊಳಗೆ ಹೋಗಿ ದೇವರಿಗೆ ನಮಸ್ಕರಿಸುತ್ತಿದ್ದಳು.

ಅಷ್ಟರಲ್ಲಿ ಆಂಜನೇಯಸ್ವಾಮಿಯ ಪ್ರಸನ್ನ ಮುಖವನ್ನು ಕಂಡು ಸಂತೃಪ್ತಿಗೊಂಡ ಸಾತ್ವಿಕರಾವ್ ಆ ದೇವರಿಗೆ ದೇವರಾದ ರಾಮನ ದರ್ಶನಕ್ಕಾಗಿ ರಾಮನ ಗುಡಿಗೆ ಬಂದು ಗಂಟೆ ಹೊಡೆದು, ಕಣ್ಮುಚ್ಚಿ ನಮಸ್ಕರಿಸಿದ. ಅದುವರೆವಿಗೂ ಗಿರಾಕಿಗಳಿಲ್ಲದೆ ಸುಮ್ಮನೆ ಕುಳಿತಿದ್ದ ಪೂಜಾರಿ ಅಕ್ಕಪಕ್ಕದಲ್ಲೇ ನಿಂತಿದ್ದ ಅವರಿಬ್ಬರನ್ನು ಕಂಡು ಓಡೋಡಿಬಂದು "ಇಬ್ಬರೂ ಅರ್ಚನೆ ಮಾಡಿಸಿ, ಶೀಘ್ರವೇ ಸಂತಾನಪ್ರಾಪ್ತಿರಸ್ತು" ಎಂದು ಆಶೀರ್ವದಿಸಿಯೇಬಿಟ್ಟ.

ಸಾತ್ವಿಕರಾವ್, ರಾಧಾ ಅದನ್ನು ಕೇಳಿ ಆಶ್ಚರ್ಯದಿಂದ ಒಮ್ಮೆಗೇ ಕಣ್ಣುಬಿಟ್ಟು ನೋಡಿದರು.

''ಹಾಗಾದರೆ ಹೊಸ ನಾಟಕ ಪ್ರಾರಂಭ ಮಾಡಿದಿರೇನೊ–" ಸಿಟ್ಟಿನಿಂದ ಕೇಳಿದಳು ರಾಧಾ.

"ಹೊಸ ನಾಟಕ?" ಗಲಿಬಿಲಿಗೊಂಡು ಕೇಳಿದ.

"ನನ್ನ ಹಿಂಬಾಲಿಸಿ, ಪಕ್ಕದಲ್ಲಿ ನಿಂತ್ಕೊಂಡು ಏನೂ ತಿಳೀದಿರೋನ ಥರ ನಾಟಕ ಆಡ್ತಿದೀಯಲ್ಲಾ–ಹಾಗೆ ಆಶೀರ್ವಾದ ಮಾಡೋಕೆ ಪೂಜಾರಿಗೆ ಎಷ್ಟು ದಕ್ಷಿಣೆ ಕೊಟ್ಟೆಯೋ?''

''ಏನು, ನಮಗೆ ಮಕ್ಕಳಾಗಬೇಕೆಂದರೆ ಪೂಜಾರಿಗೆ ದುಡ್ಡು ಕೊಟ್ಟು ಆಶೀರ್ವಾದ ಪಡೆಯಬೇಕಾ? ಎಲ್ಲಾ ನಿನ್ನ ಕಲ್ಪನೆ ನನಗೆ ಇಂತಹ ವಿಷಯಗಳಲ್ಲಿ ನಂಬಿಕೇನೇ ಇಲ್ಲ. ಇವರ ಆಶೀರ್ವಾದ ಇಲ್ಲದೇಕೂಡಾ ನಮಗೆ ಮಕ್ಕಳಾಗುತ್ತವೆ. ಬೇಕಾದರೆ ಬೆಟ್ ಕಟ್ತೀನಿ," ರೋಷದಿಂದಲೇ ಹೇಳಿದ.

"ಷಟಪ್" ರಾಧಾ ಕೂಗಿದಳು. "ಇನ್ನೊಂದು ಸಲ, 'ನಮಗೆ ಮಕಳು' ಎಂದರೆ ಮರ್ಯಾದೆ ಇರೋಲ್ಲ.''

''ಆ ಮಾತನ್ನು ನಾನು ಹೇಳಲಿಲ್ಲ ಪೂಜಾರಿ ಹೇಳಿದ್ದು.''

''ಹಾಗೆ ಹೇಳಲು ನೀನೇ ಹಣ ಕೊಟ್ಟಿದ್ದಿ."

''ಇನ್ನೂ ಕೊಟ್ಟಿಲ್ಲ. ಈಗ ಕೊಟ್ಟರೆ ಅನುಕೂಲ...'' ರಾಗ ಎಳೆದ ಪೂಜಾರಿ. 'ಹ್ಞಾ' ಎಂದು ಕೈಯ್ಯಲ್ಲಿದ್ದ ಬ್ಯಾಸ್ಕೆಟನ್ನು ಪೂಜಾರಿಯೆಡೆಗೆ ಎಸೆದು ಹೊರಟುಹೋದಳು ರಾಧಾ.

ಇದನ್ನೆಲ್ಲಾ ದೂರದಲ್ಲಿ ನಿಂತು ನೋಡುತ್ತಿದ್ದ ಸರಸ್ವತಿಯ ಮುಖ ಬಾಡಿತು. 'ಇಲ್ಲದಿದ್ದರೇನು? ಪೂಜಾರಿ ಹೇಳಿದ ತಕ್ಷಣ ಅವರಿಬ್ಬರಿಗೆ ಮಕ್ಕಳಾಗಿಬಿಡುತ್ತಾ?" ಬ್ರಹ್ಮ ಕೇಳಿದ.

''ಸರಿ ಇನ್ನೊಂದು ಪ್ರಯತ್ನ ಮಾಡೋಣ–ನಡೆಯಿರಿ" ಬ್ರಹ್ಮನನ್ನು ಎಳೆದೊಯ್ಯುತ್ತಾ ಹೇಳಿದಳು.

ಅವರಿಬ್ಬರನ್ನೂ ಪಕ್ಕದ ಹೋಟೆಲೊಂದರಿಂದ ಗಮನಿಸುತ್ತಿದ್ದ ಶಚೀದೇವಿ ಗಹಗಹಿಸಿ ನಕ್ಕಳು.

"ನಡೆಯಿರಿ ಆ ಸರಸ್ವತಿ ಇನ್ನೂ ಏನೇನು ಟ್ರಿಕ್ಕುಗಳನ್ನು ಮಾಡುತ್ತಾಳೋ ಎಲ್ಲವನ್ನೂ ಭಗ್ನಗೊಳಿಸೋಣ'' ಎಂದಳು ಇಂದ್ರನೆಡೆಗೆ ನೋಡುತ್ತ.

ಸಾತ್ವಿಕರಾವ್ ರಸ್ತೆಯ ಮೇಲೆ ಬರುವ ವೇಳೆಗೆ ರಾಧಾ ಆಗಲೇ ರಸ್ತೆಯ ಬಲಗಡೆಗೆ ತಿರುಗಿದ್ದಳು. ಬೇಗಬೇಗನೆ ಅತ್ತ ಹೆಜ್ಜೆ ಹಾಕಿದ ಸಾತ್ವಿಕರಾವ್. ರಸ್ತೆ ನಿರ್ಮಾನುಷ್ಯವಾಗಿತ್ತು. ದೂರದಲ್ಲಿ ಪೋಲೀಸರು ಸಿಡಿಸುತ್ತಿದ್ದ ಶೆಲ್‌ಗಳ ಶಬ್ದ ಕೇಳಿಸುತ್ತಿತ್ತು.

''ಏನದು?'' ಗಾಬರಿಯಿಂದ ಕೇಳಿದ ಅವನೊಡನೆ ಮಾತನಾಡಲು ಇಷ್ಟವಿಲ್ಲದಿದ್ದರೂ ಉತ್ತರಿಸಿದಳು...ವಿದ್ಯಾರ್ಥಿಗಳ ಮುಷ್ಕರವೆಂದು. ಅವನ ಕಣ್ಣಲ್ಲಿ ಹಠಾತ್ತನೆ ನೀರು ಬಂದದ್ದನ್ನು ಕಂಡು ರಾಧಾ ಮೆತ್ತಗಾದಳು.

"ಅಳಬೇಡಿ. ತಪ್ಪೆಲ್ಲಾ ನನ್ನದೇ. ನನ್ನ ಹೋಲಿಕೆಯಿದ್ದ ಮನುಷ್ಯ ಇದ್ದುದರಿಂದ ನೀವು ಹೀಗೆ ಅಪಾರ್ಥಮಾಡಿಕೊಂಡಿದ್ದೀರಿ," ಅವನು ಹೇಳಿದ.

"ನಾನೇನೂ ಅಳುತ್ತಿಲ್ಲ. ನೀವೇ ಅಳಬೇಡಿ. ನಡೆದದ್ದೇನೋ ಆಯ್ತು. ಸುಮ್ಮಸುಮ್ಮನೆ ದೇವಸ್ಥಾನದಲ್ಲಿ ನಿಮ್ಮನ್ನು ಬಯ್ದೆ.

ಪೋಲಿಸರು ಸಿಡಿಸುತ್ತಿದ್ದ ಒಂದು ಟಿಯರ್ ಗ್ಯಾಸ್ ಶೆಲ್ಲನ್ನು ತೆಗೆದುಕೊಂಡು ಅವರೆಡೆಗೆ ಎಸೆದು ಸರಸ್ವತಿ ಅವರ ನಡುವೆ ನಡೆಯುತ್ತಿದ್ದ ಸಂಭಾಷಣೆಯನ್ನು ಕೇಳಿ ಸಂತೋಷದಿಂದ ಹಿಗ್ಗುತ್ತಿದ್ದಳು.

"ನಾನಾ? ನಾನೂ ನೀವಂದ ಮಾತಿನಿಂದಲ್ಲ ಅಳುತ್ತಿರುವುದು," ಇನ್ನಷ್ಟು ಕಣ್ಣೀರು ಸುರಿಸುತ್ತಾ ಹೇಳಿದ ಸಾತ್ವಿಕರಾವ್.

''ನಾನೂ ಅಷ್ಟೇ'' ಕರ್ಚೀಫಿನಿಂದ ಕಣ್ಣೊರೆಸಿಕೊಳ್ಳುತ್ತಾ ಅವಳು ಹೇಳಿ

ದಳು. ಇನ್ನೊಂದು ಕ್ಷಣ ಅವಕಾಶ ಕೊಟ್ಟರೆ ಇಬ್ಬರೂ ರಿಜಿಸ್ಟರ್ ಮ್ಯಾರೇಜ್ ಬಗ್ಗೆ ಮಾತನಾಡಿಕೊಳ್ಳುತ್ತಾರೆಂದು ಅರ್ಥವಾಗಿಬಿಟ್ಟಿತು ಶಚೀದೇವಿಗೆ.

ಮರುಕ್ಷಣವೇ ಈರುಳ್ಳಿಯನ್ನು ಹಿಡಿದು ಅವರ ಬಳಿಗೆ ಓಡೋಡಿ ಬಂದ ಇಂದ್ರ.

''ಇದನ್ನ ತಗೊಳ್ಳಿ. ಇದರಿಂದ ಕಣ್ಣೀರು ಬರೋಲ್ಲ" ಎಂದು ಅದನ್ನು ಅವರಿಗೆ ಕೊಟ್ಟು ಓಡಿಹೋದ.

ಸರಸ್ವತಿಗೆ ವಿಪರೀತ ಸಿಟ್ಟು ಬಂತು. ಕಾಲನ್ನು ನೆಲಕ್ಕೆ ಜಾಡಿಸಿದಳು. ಬ್ರಹ್ಮ ಬಿದ್ದು ಬಿದ್ದು ನಗಲು ಪ್ರಾರಂಭಿಸಿದ.

''ಅದಕ್ಕೆ ಬ್ರಹ್ಮಬರಹ ಇರಬೇಕೆನ್ನುವುದು. ಇವರಿಬ್ಬರೂ ಒಂದಾಗ ಬೇಕೆಂದು ನಾನು ಬರೆಯದೆ ಹೋದರೆ ಅದು ಹೇಗೆ ಒಂದಾಗುತ್ತಾರೆ?"

"ನಾನು ಬರೀತೀನಿ–ಎಲ್ಲಿ ಸ್ವಲ್ಪ ಆ ನಿಮ್ಮ ಪೆನ್ ಕೊಡಿ" ಎಂದು ಬ್ರಹ್ಮ ನಿಂದ ಪೆನ್ನನ್ನು ತೆಗೆದುಕೊಂಡು ಏನನ್ನೋ ಗಾಳಿಯಲ್ಲಿ ಬರೆದಳು ರಾಧಾ ಸಾತ್ವಿಕ ರಾವ್ ಒಂದಿಪ್ಪತ್ತು ಗಜ ನಡೆದಿದ್ದಾರೋ ಇಲ್ಲವೋ ಅಷ್ಟರಲ್ಲೇ ಗುಡುಗು ಸಿಡಿಲು ಮಳೆ ಪ್ರಾರಂಭವಾಯಿತು. ಸಾತ್ವಿಕರಾವ್ ಓಡಿಹೋಗಿ ಒಂದು ರೇಕು ಗಳ ಷೆಡ್ ಕೆಳಗೆ ನಿಂತ. ಮತ್ತೆ ಕೆಲವು ಕ್ಷಣಗಳ ನಂತರ ರಾಧಾ ಕೂಡಾ ಓಡೋಡಿ ಬಂದು ಅವನ ಪಕ್ಕದಲ್ಲೇ ನಿಂತಳು. ಇಬ್ಬರೂ ಮಳೆಯಲ್ಲಿ ಸಾಕಷ್ಟು ನೆಂದಿದ್ದರು.

ಇಬ್ಬರೂ ಒಬ್ಬರನ್ನೊಬ್ಬರು ನೋಡಿಕೊಂಡು ಬೆಚ್ಚಿಬಿದ್ದರು. ರಾಧಾ ಹೂಕರಿಸಿದಳು.

'' ಅಂದರೆ ಈಗಲೂ ಮಳೆ ಬರುವುದಕ್ಕೆ ನಾನೇ ಕಾರಣ ಅಂತಾನ ನಿಮ್ಮ ಸಿಟ್ಟು?" ವ್ಯಂಗ್ಯವಾಗಿ ಕೇಳಿದ ಸಾತ್ವಿಕರಾವ್.

ಕೂಡಲೇ ರಾಧಳಿಗೆ ನಗುಬಂತು. ನಗುತ್ತಿರುವಾಗ ಎಷ್ಟೋ ಆಕರ್ಷಣೀ ಯವಾಗಿ, ಸೆಕ್ಸಿಯಾಗಿ ಕಂಡ ಅವಳ ರೂಪವನ್ನು ಕಂಡು ಸಾತ್ವಿಕರಾವ್ ನಿಶ್ಚೇಷ್ಟಿತನಾದ.

ಅದೇ ಸಮಯಕ್ಕೆ ಸರಿಯಾಗಿ "ಚಳಿ ಚಳಿ ತಾಳೇನು ಈ ಚಳಿಯಾ–" ಹಾಡು ನೆನಪಾಯಿತು ರಾಧಳಿಗೆ. ಅವನೆಡೆಗೇ ನೋಡಿದಳು.

''ಮಳೆ ಸದ್ಯಕ್ಕೆ ನಿಲ್ಲೋ ಹಾಗೆ ಕಾಣೋಲ್ಲ–" ಆಕಾಶದ ಕಡೆಗೆ ನೋಡುತ್ತಾ ಹೇಳಿದ. ರಾಧಾ ಗಲಿಬಿಲಿಗೊಂಡು ನೋಡಿದಳು.

"ಅಯ್ಯೋ! ಈಗ ಹೇಗಪ್ಪಾ. ನನ್ನ ಹೋಟೆಲ್‌ನಲ್ಲಿ ಆ ಮುನಿಯಪ್ಪ ಒಬ್ಬನೇ ಇದ್ದಾನೆ."

ನಿಮ್ಮ ಹೋಟೆಲೆಂದರೆ.. ನೀವು ಆ ಹೋಟೆಲಿನ ಪ್ರೊಪ್ರೈಟರಾ?

ಸಾತ್ವಿಕರಾವ್ ಆಶ್ಚರ್ಯದಿಂದ ಕೇಳಿದ.

"ಹೌದು..."

"ಹೆಂಗಸೊಬ್ಬಳು ಹೋಟೆಲ್ ಪ್ರೊಪ್ರೈಟರ್ ಅಂದರೆ ತುಂಬಾ ತಮಾಷೆಯಾಗಿದೆ."

"ಅದೇಕೆ? ಅದೇನು ಹೆಂಗಸಿನಿಂದ ಸಾಧ್ಯವಾಗದ ಕೆಲಸವಾ? ನಾನು ತೆಗೆದುಕೊಂಡಿದ್ದ ಬ್ಯಾಂಕ್ ಲೋನನ್ನು ಮೊದಲನೇ ವರ್ಷವೇ ತೀರಿಸಿಬಿಟ್ಟಿದ್ದೆ. ನಿಮಗೆ ಗೊತ್ತಾ?" ಅವರಿಬ್ಬರ ಮಾತನ್ನು ಕೇಳುತ್ತಿದ್ದ ಶಚೀದೇವಿಯ ಮೈಯೆಲ್ಲಾ ಉರಿಯುತ್ತಿತ್ತು.

''ಮನೆ ಹಾಳಾಯಿತು . ಮಳೆ ನಿಲ್ಲೋದರೊಳಗೆ ಒಂದಾಗೋ ಹಾಗೆ ಕಾಣ್ತಾರೆ...'' ಗಾಬರಿಯಿಂದ ಹೇಳಿದಳು.

ಆದರೆ ಇಂದ್ರನಿಂದ ಯಾವ ಪ್ರತಿಕ್ರಿಯೆಯೂ ಬರದಿದ್ದುದರಿಂದ ಪಕ್ಕಕ್ಕೆ ತಿರುಗಿ ನೋಡಿದಳು. ಸಂಪೂರ್ಣ ನೆಂದಿದ್ದ ಯುವತಿಯೆಡೆಗೇ ಅಸೂಯೆಯ ದೃಷ್ಟಿಯಿಂದ ನೋಡುತ್ತಿದ್ದ ಇಂದ್ರ. ಕೂಡಲೇ ಅವನ ಕಿವಿಹಿಡಿದು ತನ್ನೆಡೆಗೆ ತಿರುಗಿಸಿಕೊಂಡಳು, ಬೆಚ್ಚಿಬಿದ್ದ ಇಂದ್ರ ತಡಬಡಿಸಿದ.

"ಭೂಲೋಕದಲ್ಲಿ ಈ ಹಾಳು ಮಳೆ ಸುರಿದರೆ ಎಲ್ಲೆಲ್ಲಿ ಅಡಗಿರೋ ಸೌಂದರ್ಯಗಳೆಲ್ಲಾ ಹೊರಗೆ ಕಾಣುತ್ವೆ!"

"ನಾನು ಹೇಳ್ತಾ ಇರೋದೇನು? ನೀವು ಮಾತಾಡ್ತಿರೋದೇನು?" ಮತ್ತೊಮ್ಮೆ ಕಿವಿ ಹಿಂಡಬೇಕೆಂಬ ಆಸೆಯನ್ನು ಹತ್ತಿಕ್ಕಿಕೊಂಡಳು.

''ಅದಾ? ಅದು ನಾವು ಈ ಕೂಡಲೇ ಅವರಿಬ್ಬರನ್ನು ಬೇರೆ ಮಾಡದಿದ್ದರೆ ಅಪಾಯ. ಒಂದು ಸಲ ನಾನೂ ರಂಭೆ ಸೇರಿ..." ಶಚೀದೇವಿಗೆ ಕೂಡಲೇ ಒಂದು ಐಡಿಯಾ ಹೊಳೆಯಿತು. ಆ ಕ್ಷಣವೇ ಅವಳು ಎರಡು ಕೊಡೆಗಳನ್ನು ಸೃಷ್ಟಿಸಿ, ಒಂದನ್ನು ತಾನು ಹಿಡಿದುಕೊಂಡು ಮತ್ತೊಂದನ್ನು ಕಂಕುಳಲ್ಲಿರಿಸಿಕೊಂಡು ರಾಧಾ ನಿಂತಿದ್ದ ಕಡೆಗೆ ನಡೆದಳು.

''ಹಲೋ ಮೇಡಮ್...ಒನ್ ಮಿನಿಟ್...ನಾನೂ ನಿಮ್ಮ ಕೊಡೆ ಕೆಳಗೆ ಬರ್ತೀನಿ," ರಾಧಾ ಅವಳನ್ನು ಕೇಳಿಕೊಂಡಳು.

''ಓ! ಬನ್ನೀ ಅದಕ್ಕೇನಂತೆ ಇನ್ನೊಂದು ಕೊಡೆ ಇದೆ ಕೊಡ್ತೀನಿ ಬನ್ನಿ'' ಎಂದು ಅವಳಿಗೆ ಎರಡನೆ ಕೊಡೆ ಕೊಟ್ಟಳು.

ಇಬ್ಬರೂ ಕೊಡೆಗಳನ್ನು ಹಿಡಿದು ಬಳಕುತ್ತಾ ನಡೆಯುತ್ತಿದ್ದುದನ್ನು ಕಂಡ ಸರಸ್ವತಿಗೆ ವಿಪರೀತ ಸಿಟ್ಟು ಬಂತು.

''ನೋಡಿದಿರಾ? ಆ ಶಚೀದೇವಿ ಹೇಗೆ ಹಾಳು ಮಾಡ್ತಿದಾಳೆ."

ಬ್ರಹ್ಮ ಎರಡು ಕೈಗಳಿಂದ ಒಂದು ತಲೆಯನ್ನು ಒತ್ತಿಕೊಂಡ.

"ಈ ಹೆಂಗಸರ ಮನಸ್ಸು ಹಾಗೆಯೇ ಸರಸ್ವತಿ! ಮತ್ತೊಬ್ಬರನ್ನು ಹಿಂಸಿಸುವುದೆಂದರೆ ಅವರಿಗೆ ಸಂತೋಷ."

ಸರಸ್ವತಿ ಮತ್ತೆ ಯೋಚಿಸಲು ಪ್ರಾರಂಭಿಸಿದಳು. ಕೆಲವು ಕ್ಷಣಗಳ ನಂತರ ಅವಳ ಮುಖ ಮಿಂಚಿತು.

ಮನಶ್ಶಾಂತಿಗಾಗಿ ಸೆಕೆಂಡ್ ಷೋಗೆ ಬಂದಿದ್ದ ಸಾತ್ವಿಕರಾವ್. ವರದಕ್ಷಿಣೆಯ ಡಾಕ್ಯುಮೆಂಟರಿ ನೋಡುತ್ತಿದ್ದಂತೆಯೇ ಥಕ್ಕನೇ ಪಕ್ಕದಲ್ಲಿ ರಾಧಾ ಬಂದು ಕುಳಿತಿದ್ದಳು. ಇಬ್ಬರೂ ಒಬ್ಬರ ಮುಖವನ್ನು ಮತ್ತೊಬ್ಬರು ನೋಡಿಕೊಂಡು ಹಾಗೆಯೇ ಫ್ರೀಜ್ ಆದರು ಕೆಲವು ಕ್ಷಣ.

"ನಿಜ ಹೇಳ್ರೀ...ನೀವು ನನ್ನನ್ನು ಫಾಲೋ ಮಾಡುತ್ತಾ...ಇದನ್ನೆಲ್ಲಾ ಬೇಕಂತಲೇ ಮಾಡುತ್ತಿದ್ದೀರೋ ಇಲ್ಲವೋ?"ಅನುಮಾನದಿಂದ ಕೇಳಿದಳು ರಾಧೆ.

ಗಲಿಬಿಲಿಗೊಂಡ ಸಾತ್ವಿಕರಾವ್, "ಅದೇ ಮಾತನ್ನು ನಿಮಗೆ ಹೇಳಬೇಕು" ಎಂದು ತಡವರಿಸುತ್ತಾ ಹೇಳಿದ.

ರಾಧಾ ಯೋಚಿಸಿದಳು. ಅವಳಿಗೂ ಆಶ್ಚರ್ಯವಾಗಿದೆ. ಒಂದೇ ದಿನ ಇಬ್ಬರೂ ಇಷ್ಟೊಂದು ಕಾಕತಾಳೀಯವಾಗಿ ಹೇಗೆ ಸೇರುತ್ತಿದ್ದಾರೆ? ಇಂತಹವು ಸಿನೆಮಾಗಳಲ್ಲಿ ಮಾತ್ರ ನಡೆಯುತ್ತವೆ. ಸಿನೆಮಾ ಪ್ರಾರಂಭವಾಯಿತು.

ಹೀರೋ-ಹೀರೋಯಿನ್‌ಗಳು ಸೈಕಲ್‌ಗಳ ಮೇಲೆ ಎದುರೆದುರು ಬಂದವರೇ ಡ್ಯಾಷ್ ಹೊಡೆದು ಬಿದ್ದರು. ಇಬ್ಬರೂ 'ಸಾರಿ' ಹೇಳಿಕೊಂಡು ಮೇಲೆದ್ದು ನಿಂತರು. ಕೆಳಗೆ ಬಿದ್ದಿದ್ದ ಹೀರೋಯಿನ್ ಪುಸ್ತಕಗಳನ್ನು ತೆಗೆದುಕೊಳ್ಳಲು ಮತ್ತೆ ಇಬ್ಬರೂ ಒಮ್ಮೆಗೇ ಬಗ್ಗಿ ತಲೆಗಳನ್ನು 'ಡೀ' ಹೊಡೆದುಕೊಂಡು ಇನ್ನೊಂದು 'ಸಾರಿ' ಹೇಳಿಕೊಂಡರು. ಇಬ್ಬರೂ ನಾಚಿಕೊಂಡು ಅದಲು ಬದಲು ಪುಸ್ತಕಗಳನ್ನು ತೆಗೆದುಕೊಂಡು ಕಾಲೇಜಿಗೆ ಹೋದರು. ಮತ್ತೆ ಕಾಲೇಜಿನ ಗೇಟಿನ ಬಳಿ 'ಡೀ' ಹೊಡೆದರು.

ಸಾತ್ವಿಕರಾವ್‌ಗೆ ಇದು ಬೇಸರ ತಂದಿತು.

"ಸೋ...ನ್ಯಾಚುರಲ್" ಮೆಚ್ಚುಗೆಯಿಂದ ಹೇಳಿದಳು ರಾಧಾ.

"ಹೇಗೆ?" ಸಾತ್ವಿಕರಾವ್ ಕೂಡಲೇ ಕೇಳಿದ.

"ಹೇಗೇನು? ಇವತ್ತು ನಾವು ಎಷ್ಟು ಸಲ ಹೀಗೆಯೇ ಭೇಟಿಯಾಗಿದ್ದೇವೆ?"

ಸಾತ್ವಿಕರಾವ್ ಮಾತನಾಡಲಿಲ್ಲ.

ಅಷ್ಟರಲ್ಲೇ ಹೀರೋ ..ಹೀರೋಯಿನ್‌ಗಳು ಡ್ಯಾನ್ಸ್ ಮಾಡಲು

ಪ್ರಾರಂಭಿಸಿದ್ದರು.

"ಟ್ರ್ಯಾಪ್..." ಸಾತ್ವಿಕರಾವ್ ಹೇಳಿದ.

"ಏನು ಟ್ರ್ಯಾಪ್?" ರಾಧ ಕೇಳಿದಳು.

"ಒಂದೇ ದಿನದ ಪರಿಚಯದಲ್ಲಿ ಹೀಗೆ ಪ್ರೀತಿಸಿಕೊಳ್ಳುವುದು ಸಾಧ್ಯವಾ?"

"ಪ್ರೀತಿ ಹುಟ್ಟಲು ಒಂದು ಕ್ಷಣಸಾಕು."

"ಒಂದು ಕ್ಷಣವಾ?"

"ಹೌದು"

"ನಾನು ನಂಬುವುದಿಲ್ಲ."

"ನಾನು ನಂಬುತ್ತೇನೆ."

"ಹೇಗೆ ನಂಬ್ತೀರಿ?"

"ನನ್ನ ಫ್ರೆಂಡ್ ಕನಕತಾರಾ ಇದೇ ರೀತಿ ಒಬ್ಬನನ್ನು ಬಸ್‌ಸ್ಟ್ಯಾಂಡ್‌ನಲ್ಲಿ ಪ್ರೀತಿಸಲು ಪ್ರಾರಂಭಿಸಿ, ಬಸ್‌ನಲ್ಲಿ ಪ್ರೀತಿಯನ್ನು ಮುಂದುವರೆಸಿ ಬಸ್ಸನ್ನು ಇಳಿದು ರಿಜಿಸ್ಟ್ರಾರ್ ಆಫೀಸಿಗೆ ನೇರವಾಗಿ ಹೋಗಿ ಮದುವೆ ಆಗಿದ್ದಾರೆ ಗೊತ್ತಾ-"

"ನನಗೆ ನಂಬಿಕೆ ಇಲ್ಲ."

"ನಾಳೆ ನಿಮ್ಮನ್ನ ಅವರ ಮನೆಗೇ ಕರೆದುಕೊಂಡು ಹೋಗುತ್ತೀನಿ. ಆಗ ನೋಡುವಿರಂತೆ, ಅವರ ಮಗೂನ ಎತ್ತಿಕೊಂಡರೆ ನಿಮಗೇ ನಂಬಿಕೆ ಬರುತ್ತೆ-" ನಗುತ್ತಾ ಹೇಳಿದಳು,

ಬಾಲ್ಕನಿಯಲ್ಲಿ ಕುಳಿತು ಅವರಿಬ್ಬರ ಸರಸವನ್ನು ಕಂಡ ಶಚೀದೇವಿ ಅಸಹನೆಯಿಂದ ಇಂದ್ರನ ಕೈಯ್ಯನ್ನು ಜೋರಾಗಿ ಚಿವುಟಿದಳು. ಹತ್ತಿರದಲ್ಲೇ ಕುಳಿತಿದ್ದ ಹುಡುಗಿಯೊಬ್ಬಳ ಕಡೆಗೇ ನೋಡುತ್ತಿದ್ದ ಇಂದ್ರ ಬೆಚ್ಚಿಬಿದ್ದ.

"ಯಾಕೆ? ಯಾಕೆ ಹಾಗೆ ಚಿವುಟಿದ್ದು? ನಾನು ಆ ಹುಡುಗಿ ಸೀರೆ ಡಿಸೈನ್ ನೋಡ್ತಿದ್ದೆ ಅಷ್ಟೇ ತಡವರಿಸುತ್ತಾ ಹೇಳಿದ.

"ಅಲ್ಲಿ ನೋಡಿ. ಅವರಿಬ್ಬರೂ 'ಪ್ರೇಮಲೋಕ'ದಲ್ಲಿ ವಿಹರಿಸುತ್ತಿದ್ದಾರೆ."

"ಹೌದೌದು ಈ 'ಪ್ರೇಮಲೋಕ' ಸಿನೆಮಾ ಚೆನ್ನಾಗಿದೆ. ಈ ರವಿಚಂದ್ರನ್ ಜೂಲೀನ ನೋಡಿ ನಾವು ಕಲೀಬೇಕು ಹೊಸಾಟೈಪ್ ರೊಮಾನ್ಸನ್ನ.'

"ಅಯ್ಯೋ ಅದಲ್ಲಾರೀ! ಸಾತ್ವಿಕರಾವ್ - ರಾಧಾ - ಈಗೇನು ಮಾಡೋದು?" ಗಾಬರಿಯಿಂದ ಕೇಳಿದಳು.

"ಅದಕ್ಕೇನು. ಕರೆಂಟ್ ಹೋಗೋ ಹಾಗೆ ಮಾಡಿದರೆ ಆಯ್ತು."

"ನಿಮ್ಮ ತಲೇಗೆ ಏನು ಹೇಳಬೇಕೋ! ಕರೆಂಟ್ ಹೋಗಿಸಿದ್ರೆ

ತೂಕಡಿಸೋರಿಗೆ ಹಾಸಿಗೆ ಹಾಸಿಕೊಟ್ಟಂತೆ ಆಗುತ್ತೆ ಅಷ್ಟೇ"

ಇಂದ್ರ ಸೀರಿಯಸ್ಸಾಗಿ ಯೋಚಿಸಿದ.

"ಸರಿ...ಒಂದು ಕೆಲಸಮಾಡು ..ದೇಶದ ಒಬ್ಬ ರಾಜಕೀಯ ನಾಯಕನನ್ನು ಡಮಾರ್ ಅನ್ನಿಸಿಬಿಡು. ಆಗ ಥಿಯೇಟರ್ ಮುಚ್ಚಿಬಿಡುತ್ತಾರೆ."

ಶಚೀದೇವಿಗೆ ಈ ಆಲೋಚನೆ ಸರಿಯಾಗಿ ಕಂಡಿತು.

ಮರುಕ್ಷಣವೇ ದೇಶದ ನಾಯಕನೊಬ್ಬ ಹೃದಯಾಘಾತದಿಂದ ಮರಣ ಹೊಂದಿದ. ಫ್ಯಾಕ್ಟರಿಗಳು, ಆಫೀಸುಗಳು, ಅಂಗಡಿಗಳು ಮುಚ್ಚಲ್ಪಟ್ಟವು. ಆದರೆ ಥೀಯೇಟರನ್ನು ಮುಚ್ಚಲಿಲ್ಲ.

ಶಚೀದೇವಿಯ ಮುಖ ಬಾಡಿಹೋಯಿತು.

"ಅಯ್ಯೋ...ಇದೆಂಥ ದೇಶಾರೀ ಸಿನೆಮಾ ಹುಚ್ಚು ಇಷ್ಟೊಂದು ಇವರಿಗೆ!"

"ಹಾಗಾದರೆ ಒಂದು ಹಾವನ್ನು ತಂದು ಜನರ ಮಧ್ಯೆ ಎಸಿ..."

ಶಚೀದೇವಿ ಸಂತೋಷದಿಂದ ಒಂದು ಹಾವನ್ನು ಸೃಷ್ಟಿಸಿ ಪ್ರೇಕ್ಷಕರ ಮಧ್ಯೆ ಎಸೆದಳು. ಮುಂದಿನ ಕ್ಷಣವೇ ಜನರೆಲ್ಲಾ ಕೂಗಾಡುತ್ತಾ ಚಿಲ್ಲಾಪಿಲ್ಲಿಯಾಗಿ ಹೊರಗೆ ಓಡಿದರು. ಸಾತ್ವಿಕರಾವ್–ರಾಧಾ ಆ ಗಲಭೆಯಲ್ಲಿ ಬೇರೆ ಬೇರೆಯಾದರು.

ಸರಸ್ವತಿಗೆ ಸಿಟ್ಟಿನಿಂದ ಮೈಯೆಲ್ಲಾ ಕಂಪಿಸುತ್ತಿತ್ತು.

"ಈ ಶಚೀದೇವಿ ಯಾವ ಮಟ್ಟಕ್ಕಾದರೂ ಇಳಿಯುತ್ತಾಳೆ ನೋಡಿ" ಅಂದಳು.

"ಆಗಲೀ ಬಿಡು. 'ಏಟಿಗೆ ಎದಿರೇಟು' ಎಲ್ಲಾ ಕಾಲದಲ್ಲೂ ಇದ್ದದ್ದೆ. ಸರಿಯಾಗಿ ಯೋಚಿಸು..." ಸಲಹೆ ನೀಡಿದ ಬ್ರಹ್ಮ.

ಸರಸ್ವತಿ ಸ್ವಲ್ಪಹೊತ್ತು ಯೋಚನಾಮಗ್ನಳಾಗಿ, "ಸಿಕ್ಕಿತು ಅವರಿಬ್ಬರನ್ನು ಮತ್ತೆ ಒಂದುಗೂಡಿಸುವ ಉಪಾಯ" ಎಂದು ಕಿರುಚಿದಳು.

"ಏನದು?" ಬ್ರಹ್ಮ ಕೇಳಿದ.

"ಈ ಊರಿಗೆ ವಿಪರೀತ ಮಳೆ ಬರುವಂತೆ ಮಾಡುತ್ತೇನೆ. ಊರೆಲ್ಲಾ ನೀರಿನಲ್ಲಿ ಮುಳುಗಬೇಕು. ಆಗ ಸಾತ್ವಿಕರಾವ್ ರಾಧಾ ಒಂದೆಡೆ ಯಾವುದಾದರೂ ಮಹಡಿಯ ಮೇಲೆ ಸೇರುವಂತೆ ಮಾಡಿದರೆ ಅಲ್ಲೇ ಹೂವಿನ ಹಾರ ಬದಲಾಯಿಸಿಕೊಳ್ಳಬೇಕು," ಸಂತೋಷದಿಂದ ಹೇಳಿದಳು.

ಬ್ರಹ್ಮ ಮತ್ತೆ ನಾಲ್ಕು ಸಲ ಹಣೆ ಬಡಿದುಕೊಂಡ.

[illegible] ಹಾಗೆ ಅತಿವೃ[illegible]

ಯಾದರೆ ಯಾವ ಪಾಪವೂ ಮಾಡದವರಿಗೂ ತೊಂದರೆಯಾಗುವುದಿಲ್ಲವೇ?"

ಸರಸ್ವತಿ ಚಿಂತಿಸಿ ಹೌದೆಂದು ತಲೆತಗ್ಗಿಸಿ ತಲೆಯಾಡಿಸಿದಳು.

"ಮತ್ತೇನು ಮಾಡೂಂತೀರಿ?" ಕೇಳಿದಳು ದೀನಳಾಗಿ.

ಬ್ರಹ್ಮ ಚಕಚಕನೆ ಯೋಚಿಸಿದ.

"ನನ್ನ ಮಾತು ಕೇಳಿದರೆ...ನನ್ನ ಹತ್ತಿರ ಒಂದು ಉತ್ತಮ ಉಪಾಯ **ಏದೆ**" ಎಂದ.

"ಬೇಗ ಹೇಳ್ರೀ..." ಆತುರಪಡಿಸಿದಳು ಸರಸ್ವತಿ.

"ಏನೂ ಇಲ್ಲಾ...ರಾಧಳನ್ನು ನಿರ್ಮಾನುಷ್ಯವಾಗಿರುವ ರಸ್ತೆಯಲ್ಲಿ ನಡೆಯುವಂತೆ ಮಾಡು. ಆಗ ನಾನು ಅವಳ ಮೇಲೆ ಒಬ್ಬ ದೊಡ್ಡ ರೌಡಿಯಂತೆ ಹೋಗಿ ಬಲತ್ಕಾರ ಮಾಡಲು ಪ್ರಯತ್ನಿಸುತ್ತೇನೆ. ಆಗ ಸಾತ್ವಿಕರಾವ್ ಬಂದು ನನ್ನನ್ನು ಬಡಿದು ರಾಧಳನ್ನು ರಕ್ಷಿಸುತ್ತಾನೆ. ಆಗ ರಾಧಾ ಅವನನ್ನು ಮೆಚ್ಚಿ ಕೂಡಲೇ ಮದುವೆಯಾಗಿಬಿಡುತ್ತಾರೆ, ಹೇಗಿದೆ? ಅದ್ಭುತವಾಗಿಲ್ಲವಾ?" ಬ್ರಹ್ಮ ಎದೆಯುಬ್ಬಿಸಿ ಹೇಳಿದ.

ಸರಸ್ವತಿಗೆ ಏನು ಹೇಳಬೇಕೋ ತಿಳಿಯಲಿಲ್ಲ.

"ನೀವು ಇನ್ನೂ ಈ ಹಳೇ ಉಪಾಯಗಳನ್ನೇ ಹೇಳ್ತೀರಲ್ಲಾ! ಯಾರಾದರೂ ಕೇಳಿದರೆ ಏನಂದುಕೊಳ್ಳುತ್ತಾರೆ? ಈ ಮುದುಕನಿಗೆ ಬುದ್ಧಿ ಭ್ರಷ್ಟ ಯಾಗಿದೆ ಎಂದುಕೊಳ್ಳುವುದಿಲ್ಲವಾ?"

ಬ್ರಹ್ಮನಿಗೆ ಪೌರುಷಕ್ಕೆ ಧಕ್ಕೆ ತಗುಲಿತು.

"ನಾನು ಮುದುಕನಾ? ಯಾರು ಆ ಮಾತು ಹೇಳಿದ್ದು?" ಕನ್ನಡಿಗಾಗಿ ಹುಡುಕುತ್ತಾ ಕೇಳಿದ.

"ಸರಿ, ಸರಿ. ನಿಮ್ಮ ಉಪಾಯಗಳೇನೂ ನಂಗೆ ಬೇಡ; ಆಗ್ಲಿ ಅವರಿಬ್ಬರನ್ನು ಒಂದು ಒಳ್ಳೇ ಹೋಟೆಲಿನಲ್ಲಿ ಸೇರುವಂತೆ ಮಾಡಿ ಸಾಕು–"

"ಹಾಗೇ ಆಗ್ಲೀ ಬಿಡು. ಆಮೇಲೆ ನನ್ನ ಉಪಾಯ ಉಪಯೋಗಿಸ್ತೀನಿ." ಸರಸ್ವತಿ ಅನುಮಾನದಿಂದ ನೋಡಿದಳು ಬ್ರಹ್ಮನೆಡೆಗೆ.

"ಏನು–ಬಲಾತ್ಕಾರ ಮಾಡೋ ಹುಚ್ಚು ನಿಮಗೂ ಹತ್ತಿಕೊಂಡಿತಾ?" "ಶಿವ–ಶಿವಾ" ಎಂದ ನಾಲ್ಕೂ ತಲೆಗಳನ್ನು ಚಚ್ಚಿಕೊಳ್ಳುತ್ತಾ.

**ಸಾತ್ವಿಕರಾವ್** ಆ ವೈಭವದ ಹೋಟೆಲಿನೊಳಗೆ ಪ್ರವೇಶಿಸುತ್ತಾ ಆಗ

ತಾನೇ ರಸ್ತೆಕ್ರಾಸ್‌ಮಾಡಿ ಬರುತ್ತಿದ್ದ ರಾಧಾಳನ್ನು ನೋಡಿದ.

"ಹಲೋ ರಾಧಾರವರೇ-ಹಲೋ ಹಲೋ-" ಜೋರಾಗಿ ಹೇಳಿದ. ಆ ಸಂಭ್ರಮದ ಮಾತಿನ ಜೋರಿಗೆ ಹನ್ನೆರಡು ಆಕ್ಸಿಡೆಂಟ್‌ಗಳಾದವು ರಸ್ತೆಯಲ್ಲಿ. ರಾಧಾ ಸಂತೋಷದಿಂದ ಅವನ ಬಳಿಗೆ ಬಂದಳು.

"ಆಗಲೇ ಥಿಯೇಟರಿನಲ್ಲಿ ಮಿಸ್ ಆಗಿಬಿಟ್ಟರಿ," ಅವಳು ಹೇಳಿದಳು.

"ಬನ್ನಿ ಕಾಫಿ ಕುಡಿಯೋಣ'' ಎಂದು ಹೇಳಿದ ಅವನು, ಇಬ್ಬರೂ ಹೋಟೆಲಿನೊಳಗೆ ಹೋಗಿ ಟೇಬಲ್ ಮುಂದೆ ಕುಳಿತರು.

ಬೇರರ್ ಬಂದ.

"ಏನು ಬೇಕು ಸಾರ್?"

"ಎರಡು ಐಸ್‌ಕ್ರೀಮ್"

"ಅದೇಕೆ? ಕಾಫಿ ಅಂತ ಹೇಳಿ ಐಸ್‌ಕ್ರೀಂ ಹೇಳ್ತಿದೀರಿ?" ಆಶ್ಚರ್ಯದಿಂದ ಕೇಳಿದಳು.

"ಐಸ್‌ಕ್ರೀಂ ಆದರೆ ಅರ್ಧಗಂಟೆಯ ಕಾಲ ನಾವಿಲ್ಲಿ ಕುಳಿತುಕೊಳ್ಳಬಹುದಲ್ಲಾ-'' ಎಂದು, ''ಒನ್‌ಮಿನಿಟ್-ಈಗಲೇ ಟಾಯಿಲೆಟ್‌ಗೆ ಹೋಗಿಬರುತ್ತೇನೆ'' ಎನ್ನುತ್ತಾ ಎದ್ದು ಟಾಯಿಲೆಟ್ ಕಡೆಗೆ ನಡೆದ.

ಆ ದೃಶ್ಯವನ್ನೆಲ್ಲಾ ಗಮನಿಸುತ್ತಿದ್ದ ಶಚೀದೇವಿ ಕೂಡಲೇ ಆನಂದರಾವ್ ಹರಿಣಿಯರನ್ನು ರಂಗಕ್ಕೆ ಪ್ರವೇಶ ಮಾಡುವಂತೆ ಮಾಡಿದಳು.

ಆನಂದರಾವ್-ಹರಿಣಿ ಬಂದು ರಾಧಾಳ ಪಕ್ಕದಲ್ಲೇ ಕುಳಿತರು. ಅವರಿಬ್ಬರನ್ನು ಕಂಡು ಆಶ್ಚರ್ಯ ಪಟ್ಟಳು. ಅವಳ ಮುಖ ಕೋಪದಿಂದ ಕೆಂಪಗಾಯಿತು. ಬೇರರ್ ಐಸ್‌ಕ್ರೀಂ ತಂದ.

"ಇದೇನು ಐಸ್‌ಕ್ರೀಂ-ಯಾರಿಗೆ?" ಆನಂದರಾವ್ ಕೇಳಿದ.

"ನಿಮಗೇ ಸಾರ್!"

"ಆರ್ಡರ್ ಕೊಡದೇನೇ ಇದೇನಯ್ಯಾ ನಿನ್ನ ಪ್ರತಿಷ್ಠೆ? ನಿನಗಿಷ್ಟ ಬಂದದ್ದನ್ನು ನಾವು ತಿನ್ನಬೇಕಾ? ಕಾಫಿ ತಗೊಂಡು ಬಾ."

ಬೇರರ್ ಐಸ್‌ಕ್ರೀಮನ್ನು ವಾಪಸ್ಸು ತೆಗೆದುಕೊಂಡುಹೋದ.

ತನ್ನ ಟೇಬಲ್ ಮೇಲೆಯೇ ಆನಂದರಾವ್ ಹರಿಣಿ ಆರಾಮವಾಗಿ ಮಾತನಾಡುತ್ತಿದ್ದುದನ್ನು ಕಂಡು ರಾಧಾಳಿಗೆ ಸಿಟ್ಟು ಬಂತು.

ಅಷ್ಟರಲ್ಲಿ "ಎಕ್ಸ್‌ಕ್ಯೂಸ್‌ಮಿ" ಎನ್ನುತ್ತಾ ಆನಂದರಾವ್ ಟಾಯಿಲೆಟ್ ಕಡೆ ನಡೆದ. ಅದೇ ಸಮಯಕ್ಕೆ ಸರಿಯಾಗಿ ಸಾತ್ವಿಕರಾವ್ ವಾಪಸ್ಸು ಬಂದು ಕುಳಿತ. ರಾಧಾ ಕೋಪಗೊಂಡಿರುವುದನ್ನು ಗಮನಿಸಿ ಆಶ್ಚರ್ಯಪಟ್ಟ.

"ವಾಟ್ ಡಿಯರ್–ಅಷ್ಟರಲ್ಲೇ ನಿನ್ನ ಮುಖದಲ್ಲಿ ಬದಲಾವಣೆಗಳು?" ಕೇಳಿದ. ಹರಿಣಿಯ ಮುಖ ಬಾಡಿಹೋಯಿತು. ಅವಳು ನೆಲಕ್ಕೆ ಕಾಲನ್ನು ಜಾಡಿಸಿದಳು. ಸಾತ್ವಿಕರಾವ್ ಬೆಚ್ಚಿಬಿದ್ದು ರಾಧಾಳ ಕೈ ಬಿಟ್ಟುಬಿಟ್ಟ.

ಬೇರರ್ ಮೂರು ಕಪ್ ಕಾಫಿಯನ್ನು ತಂದು ಅವರ ಮುಂದಿರಿಸಿದ.

"ಏಯ್! ನಿನಗೇನಾನರೂ ಬುದ್ಧಿಯಿದೆಯಾ? ಐಸ್‌ಕ್ರೀಂ ಹೇಳಿದರೆ ಕಾಫಿ ತಂದಿದ್ದೀಯಲ್ಲಾ'' ಕೋಪದಿಂದ ಕೇಳಿದ ಸಾತ್ವಿಕರಾವ್.

ಬೇರರ್ ಎರಡು ಕೈಗಳನ್ನು ತಲೆಯ ಮೇಲೆ ಹೊತ್ತುಕೊಂಡ "ನೀವೇ ತಾನೆ ಸಾರ್ ಐಸ್‌ಕ್ರೀಂ ತಂದರೆ ಬೇಡ ಅಂದದ್ದು?'' ಎಂದ.

"ನಾನೇಕೆ ಹೇಳಲಿ? ನೀನ್ಯಾವಾಗ ತಂದಿದ್ದಿ ಐಸ್‌ಕ್ರಿಮ್‌ನ?''

ಬೇರರ್ ಮತ್ತೆ ಕಾಫಿಯನ್ನು ತೆಗೆದುಕೊಂಡು ಒಳಗೆ ಹೋದ.

ಸಾತ್ವಿಕರಾವ್ ಮತ್ತೆ ರಾಧಾಳ ಕೈ ಹಿಡಿದುಕೊಂಡ, ಅದನ್ನು ಕಂಡ ಹರಿಣಿ ಚಾಮುಂಡಿಯಾದಳು.

"ನಿಮ್ಮೊಡನೆ ಸ್ವಲ್ಪ ಮಾತನಾಡಬೇಕು. ಬನ್ನಿ ಇಲ್ಲಿ" ಎನ್ನುತ್ತಾ ಮೇಲೆದ್ದಳು.

ಅವಳೇಕೆ ತನ್ನನ್ನು ಕರೆಯುತ್ತಿದ್ದಾಳೆಂದು ಸಾತ್ವಿಕರಾವ್‌ಗೆ ಅರ್ಥವಾಗಲಿಲ್ಲ. ಒಮ್ಮೆ ರಾಧಾಳೆಡೆಗೆ ನೋಡಿ ಮೇಲೆದ್ದು ಅವಳ ಹಿಂದೆ ಹೊರಟ.

ಮತ್ತೊಂದು ಟೇಬಲ್ ಬಳಿ ನಿಂತು ಸಾತ್ವಿಕರಾಯನ ಟೈ ಹಿಡಿದು–

''ಯಾರವಳು? ನಿಜ ಹೇಳ್ರೀ–''

"ನೀನಾರು?" ಕೋಪದಿಂದ ಕೇಳಿದ ಸಾತ್ವಿಕರಾವ್.

ಅವನ ಕೆನ್ನೆ ಛಳ್ಳೆಂದಿತು. ಬಿರಬಿರನೆ ಹೆಜ್ಜೆ ಹಾಕುತ್ತಾ ಅಲ್ಲಿಂದ ಹೊರಟು ಹೋದಳು. ಅಷ್ಟರಲ್ಲಿ ಟಾಯಿಲೆಟ್‌ನಿಂದ ಆನಂದರಾವ್ ಮೆಲ್ಲಗೆ ಬಂದು ರಾಧಾಳ ಎದುರಿಗಿದ್ದ ಕುರ್ಚಿಯಲ್ಲಿ ಕುಳಿತ. ಹರಿಣಿಗಾಗಿ ಅತ್ತಿತ್ತ ನೋಡತೊಡಗಿದ.

''ಏನಿದು?'' ಕೋಪದಿಂದ ಕೇಳಿದಳು ರಾಧಾ.

"ಯಾರ ವಿಷಯ ನೀವು ಮಾತಾಡ್ತಿರೋದು?'' ಆನಂದರಾವ್ ಕೇಳಿದ.

"ಇನ್ಯಾರ ವಿಷಯ–ನಿಮ್ಮ ಪ್ರೇಯಸಿಯ ವಿಷಯವೇ–"

ಅವನು ನಕ್ಕು–''ನನ್ನ ಪ್ರೇಯಸಿಯ ವಿಷಯ ನಿಮಗೇಕೆ?"

ಅವಳಿಗೆ ಸಿಟ್ಟು ಸಾವಿರ ಪಟ್ಟು ಹೆಚ್ಚಾಯಿತು.

ಬೇರರ್ ಟ್ರೇನಲ್ಲಿ ಐಸ್‌ಕ್ರೀಂ ತಂದ, ಅದನ್ನು ಕಂಡ ಆನಂದರಾವ್, ''ಕಾಫಿ ತಗೊಂಬಾ ಅಂದ್ರೆ ಮತ್ತೆ ಐಸ್‌ಕ್ರೀಂ ತಂದೆಯಲ್ಲಾ?"

ಬೇರರ್ ತನ್ನ ಟ್ರೇಯನ್ನು ನೆಲದ ಮೇಲೆ ಕುಕ್ಕಿದ.

ಸರಿಯಾಗಿ ಅದೇ ಸಮಯಕ್ಕೆ ರಾಧಾ ಆನಂದರಾವ್ ಕೆನ್ನೆಗೆ ಬಡಿದು ಹೊರ ನಡೆದಿದ್ದಳು.

ಶಚೀದೇವಿ ಸಂತೋಷದಿಂದ ಚಪ್ಪಾಳೆ ತಟ್ಟಿದಳು.

"ಆ ಸರಸ್ವತಿಯ ಕೊಬ್ಬೆಲ್ಲಾ ಇಳಿದು ಹೋಯಿತು'' ಗರ್ವದಿಂದ ಹೇಳಿದಳು.

"ಆ! ಹಾಗಾದರೆ ನಾವಿನ್ನು ಮನೆಗೆ ಹೋಗಬಹುದಲ್ಲಾ–" ಆತುರದಿಂದ ಕೇಳಿದ ಇಂದ್ರ.

ಅದರಿಂದ ಶಚೀದೇವಿಯ ಮುಖದಲ್ಲಿದ್ದ ನಗೆ ಮಾಯವಾಯಿತು.

ನಿಮ್ಮ ಆತುರ ಏನೆಂದು ನನಗರ್ಥವಾಯಿತು ಬಿಡಿ. ರಂಭೆ ಊರ್ವಶಿಯರನ್ನು ನೋಡದೆ ಇರಲಾಗುವುದಿಲ್ಲವೇನೋ ಹೌದು ತಾನೆ?'' ಕೋಪದಿಂಗ ಕೇಳಿದಳು.

''ಅಯ್ಯಯ್ಯೋ! ನೀನು ನನ್ನ ಅಪಾರ್ಥ ಮಾಡಿಕೊಳ್ಳುತ್ತಿದ್ದೀ."

''ಮತ್ತೇನು? ಇಲ್ಲಿ ನಡೆಯುವ 'ಮೇಡ್ ಫಾರ್ ಈಚ್ ಅದರ್' ಸ್ಪರ್ಧೆಯಲ್ಲಿ ಹೇಗಾದರೂ ತಾನು ಸೃಷ್ಟಿಸಿದ ಜೋಡಿ ಗೆಲ್ಲಬೇಕೆಂದು ಅವಳ ಪ್ರಯತ್ನ. ಅದನ್ನು ಹೇಗಾದರೂ ಭಂಗಗೊಳಿಸಬೇಕೆಂದು ನನ್ನ ಹಠ. ಅದು ನಡೆಯುವ ವರೆಗೂ ನಾನು ಇಲ್ಲಿಂದ ಕದಲುವುದಿಲ್ಲ–'' ಶಚೀದೇವಿ ಹೇಳಿದಳು.

ಅದೇ ವೇಳೆಗೆ ಅವರ ದೃಷ್ಟಿ ಆನಂದರಾಯನನ್ನು ಹಿಂಬಾಲಿಸುತ್ತಿದ್ದ ಸರಸ್ವತಿ-ಬ್ರಹ್ಮರ ಮೇಲೆ ಬಿತ್ತು.

''ನೋಡಿದಿರಾ, ನಾನು ಹೇಳಲಿಲ್ಲವಾ? ಆ ಸಾತ್ವಿಕರಾವ್, ರಾಧಾರನ್ನು ಒಂದೆಡೆ ಸೇರಲು ನಾನು ಅಡ್ಡಿ ಮಾಡಿದ್ದನ್ನು ಗಮನಿಸಿ ಅವರೀಗ ಆನಂದರಾವ್‌ನ ಹಿಂದೆ ಬಿದ್ದಿದ್ದಾರೆ. ಅವನು ಮೊದಲೇ ಮಹಾರಸಿಕ. ಸುಂದರಿಯರನ್ನು ಕಂಡರಂತೂ ಅವರಿಗೆ ಮೋಡಿ ಮಾಡಿಬಿಡುತ್ತಾನೆ, ತನ್ನ ಬಯಕೆ ತೀರುವ ವರೆಗೂ ಮದುವೆಗೂ ರೆಡಿ ಅನ್ನುತ್ತಾನೆ. ಆದ್ದರಿಂದ ನಾವು ಅವನ ಮೇಲೆ ಒಂದು ಕಣ್ಣಿಟ್ಟು ಅವನಿಗೆ ಮದುವೆಯಾಗದಿರುವಂತೆ ಮಾಡಬೇಕು," ಎಂದು ಅವನನ್ನು ಹಿಂಬಾಲಿಸಿದರು.

"ನೀವು ಸೃಷ್ಟಿಸಿರುವ ಸುಂದರಿಯರು ಯಾರಾದರೂ ಈ ಊರಿನಲ್ಲಿ

ದ್ದಾರಾ ನೆನಪಿಸಿಕೊಳ್ಳಿ" ಎಂದು ಕೇಳಿದಳು ಸರಸ್ವತಿ ಬ್ರಹ್ಮನನ್ನು.

"ಏಕೆ?'' ತಲೆ ಕೆರೆದುಕೊಳ್ಳುತ್ತಾ ಕೇಳಿದ ಬ್ರಹ್ಮ.

"ಈ ಆನಂದರಾವ್‌ಗೆ ಒಂದು ಜೊತೆ ಮಾಡೋಣ. ಇಬ್ಬರೂ ಸುಂದರ ವಾಗಿದ್ದರೆ 'ಮೇಡ್ ಫಾರ್ ಈಚ್ ಅದರ್' ಜೋಡಿಯಾಗಿ ಆಯ್ಕೆಯಾಗು ವುದು ತುಂಬಾ ಸುಲಭವಲ್ಲವಾ?"

ಬ್ರಹ್ಮ ಒಂದು ಕ್ಷಣ ಯೋಚಿಸಿದ.

"ಆದರೆ ಹಾಗೆ ಮಾಡುವುದು ತಪ್ಪು. ಗಂಡ ಹೆಂಡತಿಯರಲ್ಲಿ ಒಬ್ಬರು ಮಾತ್ರ ಸುಂದರವಾಗಿರಬೇಕು. ಇಲ್ಲದಿದ್ದರೆ ಸೃಷ್ಟಿಯಲ್ಲಿ ಏರುಪೇರಾಗುತ್ತದೆ" ಭಯದಿಂದ ಹೇಳಿದ.

"ನಿಮ್ಮನ್ನು ಕೇಳಿದ್ದು ಸುಂದರ ಹುಡುಗಿ ಎಲ್ಲಿದ್ದಾಳೆ ಎಂದು. ನಿಮ್ಮ ಸೃಷ್ಟಿಯ ಸೂತ್ರದ ಪುರಾಣ ಯಾರಿಗೆ ಬೇಕಾಗಿದೆ?'' ಕೋಪದಿಂದ ಹೇಳಿದಳು.

''ನಡಿ...ತೋರಿಸುತ್ತೇನೆ'' ಎಂದು ಬ್ರಹ್ಮ ತೆಪ್ಪಗಾದ.

ಜಯಲಕ್ಷ್ಮಿ ಪುಸ್ತಕಗಳನ್ನು ಹಿಡಿದುಕೊಂಡು ಹೊರಗೆ ಹೆಜ್ಜೆಯಿಟ್ಟಳು.

"ಎಚ್ಚರಿಕೇನಮ್ಮ! ರಸ್ತೇಲಿ ತಲೆತಗ್ಗಿಸಿಕೊಂಡು ನಡೀಬೇಕು. ಅತ್ತ ಇತ್ತ ಯಾರ ಕಡೆಗೂ ನೋಡಬೇಡ. ಕಾಲ ಒಳ್ಳೇದಲ್ಲಾ!" ಸೀತಮ್ಮ ಮಗಳಿಗೆ ಹೇಳಿದರು.

ಜಯಲಕ್ಷ್ಮಿ ನಗುವನ್ನು ತಡೆದುಕೊಳ್ಳುತ್ತಾ...''ನಂಗೂ ಗೊತ್ತಿದೆ ಬಿಡಮ್ಮಾ ನಾನೇನೂ ಚಿಕ್ಕ ಮಗುವಲ್ಲ.''

"ಏನೋ ತಾಯಿ! ನನ್ನ ಕಣ್ಣಿಗೆ ಇನ್ನೂ ಸಾವಿತ್ರಿ ಕಾಣಿಸುತ್ತಿರುತ್ತಾಳೆ,'' ಎಂದು ಕಣ್ಣೊರೆಸಿಕೊಂಡರು.

ಅವರು ವೈಜಾಕ್‌ನಲ್ಲಿದ್ದಾಗ ತಮ್ಮ ಮನೆಯಲ್ಲಿದ್ದು ಓದಿಕೊಳ್ಳುತ್ತಿದ್ದ ಹುಡುಗಿ ಸಾವಿತ್ರಿ ಒಬ್ಬ ಮೋಸಗಾರನ ಬಲೆಗೆಬಿದ್ದು ಎಲ್ಲರನ್ನು ಎದುರಿಸಿ ಮದುವೆಯಾಗಿ ಓಡಿಹೋಗಿದ್ದಳು. ಅವನ ಮೋಸ...ಆಗಲೇ ಮದುವೆ ಯಾಗಿದ್ದ...ವಿಷಯ ತಿಳಿದು ಅವಳು ಆತ್ಮಹತ್ಯೆ ಮಾಡಿಕೊಂಡಿದ್ದಳು.

ಜಯಲಕ್ಷ್ಮಿ ತಾಯಿಯ ಕಡೆಗೆ ನೋಡಿ ಕೈಬೀಸಿ ಕಾಲೇಜಿಗೆ ಹೊರಟಳು.

ಮನೆಯಬಳಿ ತಗ್ಗಿಸಿದ ತಲೆಯನ್ನು ಕಾಲೇಜಿನ ಬಳಿ ಎತ್ತಿದಳು

ಜಯಲಕ್ಷ್ಮಿ. ಕಾಲೇಜಿನ ಹೊರಗೆ ನಿಂತಿದ್ದ ಗುಂಪನ್ನು ನೋಡಿ ಆಶ್ಚರ್ಯ ಪಟ್ಟಳು.

ವಿದ್ಯಾರ್ಥಿಗಳೆಲ್ಲಾ ಕಾಲೇಜಿನೊಳಗೆ ಹೋಗದೆ, ಹೊರಗೆ ಏಕೆ ನಿಂತಿದ್ದಾದ್ದಾರೆಂದು ಅವಳಿಗೆ ಅರ್ಥವಾಗಲಿಲ್ಲ. ತಾನು ಗುಂಪಿನಲ್ಲಿ ಸೇರಿಕೊಂಡಳು, ಮಿನಿ ಡೋರ್‌ಗೆ ಅಡ್ಡವಾಗಿ ಯುವಕನೊಬ್ಬ ಕಾಲಿನ ಮೇಲೆ ಕಾಲು ಹಾಕಿಕೊಂಡು ಕುಳಿತಿದ್ದ. ಸುಂದರವಾಗಿ ಕಾಣುತ್ತಿದ್ದ ಅವನು ಹೇಳುತ್ತಿದ್ದ.

"ನೋಡಿ ಮಿಸ್! ಒಂಬತ್ತು ಗಂಟೆ ಆಗುವ ವರೆಗೂ ಯಾರನ್ನೂ ಒಳಗೆ ಬಿಡಕೂಡದೆಂದು ಪ್ರಿನ್ಸಿಪಾಲ್ ಹೇಳಿದ್ದಾರೆ. ಅದಕ್ಕೆ ಇನ್ನು ಹತ್ತು ನಿಮಿಷಗಳ ಕಾಲ ನೀವೆಲ್ಲಾ ಇಲ್ಲೇ ಇರಬೇಕು."

ಅವನು ಹೇಳುತ್ತಿದ್ದಂತೆಯೇ ಪ್ರಿನ್ಸಿಪಾಲ್ ಕಾರು ಬಂದು ನಿಂತಿತು. ಅವನು ಚಕ್ಕನೇ ಎದ್ದು ಗೇಟು ತೆರೆದ. ನಿಧಾನವಾಗಿ ಚಲಿಸುತ್ತಿದ್ದ ಕಾರಿನಿಂದ ತಲೆಯನ್ನು ಹೊರಹಾಕಿ ಪ್ರಿನ್ಸಿಪಾಲ್ ಏನೆಂದು ಕೇಳಿದರು.

''ಒಂಬತ್ತು ಗಂಟೆಯ ವರೆಗೂ ಯಾರನ್ನೂ ಒಳಗೆ ಬಿಡಕೂಡದೆಂದು ವೈಸ್ ಪ್ರಿನ್ಸಿಪಾಲ್ ಹೇಳಿದ್ದಾರೆ ಸರ್'' ತಡವರಿಸದೆ ಹೇಳಿದ.

ಅವರು ಮಾತನಾಡಲಿಲ್ಲ. ಕಾರು ಒಳಗೆ ಹೊರಟು ಹೋಯಿತು. ಆಗ ನೋಡಿದ ಆನಂದರಾವ್ ಜಯಲಕ್ಷ್ಮಿಯನ್ನು. ಅವಳ ಸೌಂದರ್ಯ ಅವನಿಗೆ ಹುಚ್ಚು ಹಿಡಿಸಿತು.

''ಹಲೋ ಮಿಸ್ ನೀವು ಬನ್ನಿ! ನೀವೊಬ್ಬರು ಒಳಗೆ ಹೋಗಬಹುದು'' ಅವಳಿಗೆ ಹೇಳಿದ. ಜಯಲಕ್ಷ್ಮಿ ಆಶ್ಚರ್ಯಪಟ್ಟಳು.

"ಅವಳನ್ನು ಮಾತ್ರ ಬಿಟ್ಟೆಯಲ್ಲಾ?" ಕೆಲವು ಹುಡುಗಿಯರು ಕೇಳಿದರು ಕೋಪದಿಂದ.

"ಈಗ ಪ್ರಿನ್ಸಿಪಾಲ್ ನನಗೆ ಹೇಳಿ ಹೋದರು ಅವಳೊಬ್ಬಳನ್ನು ಮಾತ್ರ ಬಿಡುವಂತೆ" ಯಾರೂ ಮಾತನಾಡಲಿಲ್ಲ.

ಜಯಲಕ್ಷ್ಮಿ ಒಳಗೆ ನಡೆದಳು. ಮುಜುಗರದಿಂದಲೇ ಅವಳ ಹಿಂದೆಯೇ ನಡೆಯುತ್ತಾ ಅವಳನ್ನು ಮಾತನಾಡಿಸಲು ಪ್ರಯತ್ನಿಸಿದ.

''ನಾನು ಹೊಸದಾಗಿ ಈ ವಾಚ್‌ಮನ್ ಕೆಲಸಕ್ಕೆ ಸೇರಿದ್ದೀನ್ರಿ. ಅಂದ್ರೆ ನನಗೆ ವಿದ್ಯೆ ಇಲ್ಲಾಂತಲ್ಲ! ಐ.ಎ.ಎಸ್. ಗೆ ಪ್ರಿಪೇರ್ ಆಗ್ತಿದೀನಿ. ಸೆಲೆಕ್ಟ್ ಆಗುವ ವರೆಗೂ ಬಡತನದಿಂದ ಈ ಕೆಲಸಕ್ಕೆ ಸೇರಿದೆ.''

''ನಿಜ ಹೇಳ್ರೀ! ನನ್ನನ್ನು ಒಳಗೆ ಕಳಿಸೆಂದು ಪ್ರಿನ್ಸಿಪಾಲ್ ಹೇಳಿದರಾ?'' ಅಲ್ಲಿಯೇ ನಿಂತು ಕೇಳಿದಳು.

ಅವನು ಒಂದು ಕ್ಷಣ ಸುಮ್ಮನಿದ್ದು, ''ನಿಜ ಹೇಳಬೇಕೆಂದರೆ...ಅವರು ಹೇಳಲಿಲ್ಲ'' ಎಂದ.

''ಹಾಗಾದರೆ ನನ್ನೇಕೆ ಒಳಗೆ ಕಳುಹಿಸಿದಿರಿ?''

''ನೋಡ್ರೀ... ಕೆಲವು ಕೆಲಸಗಳನ್ನು ನಾವೇಕೆ ಮಾಡುತ್ತೇವೆಂದು ನಮಗೆ ತಿಳಿಯುವುದಿಲ್ಲ...'ಅಸಂಕಲ್ಪಿತ ಪ್ರತೀಕಾರ ಚರ್ಯೆ' ಅನ್ನುತ್ತಾರೆ ನೋಡಿ; ಇದೂ ಹಾಗೆಯೇ. ಹೊರಗಡೆ ಅಷ್ಟು ಹುಡುಗಿಯರು ಗುಂಪುಗೂಡಿದ್ದಾರಲ್ಲಾ, ಅಷ್ಟು ಜನರಲ್ಲಿ ನಿಮ್ಮೊಬ್ಬರನ್ನೇ ಒಳಗೆ ಬಿಟ್ಟೆನೆಂದರೆ...? ಇದಕ್ಕೆ ಉತ್ತರ ಆ ಬ್ರಹ್ಮನೇ ಹೇಳಬೇಕೂರೀ. ನೀವೇನಂತಿರಿ?''

ಜಯಲಕ್ಷ್ಮಿ ಚಕಚಕನೆ ಒಳಗೆ ಹೊರಟು ಹೋದಳು.

"ಏನ್ರೀ ಜಯಲಕ್ಷ್ಮಿಯವರೇ! ಸಂಜೆ ನಿಮ್ಮೊಡನೆ ಸ್ವಲ್ಪ ಮಾತನಾಡಬೇಕು. ಗೇಟಿನ ಬಳಿಯೇ ಇರುತ್ತೇನೆ" ಅವನು ಹೇಳಿದ.

ಜಯಲಕ್ಷ್ಮಿಗೆ ತುಂಬಾ ಸಿಟ್ಟು ಬಂತು.

''ಮರ್ಯಾದೆಯಿಂದ ಹೋಗ್ತೀಯಾ, ಪ್ರಿನ್ಸಿಪಾಲ್‌ಗೆ ರಿಪೋರ್ಟ್ ಮಾಡಲಾ?'' ಬೆಂಕಿಯನ್ನುಗುಳುತ್ತಾ ಹೇಳಿದಳು. ಆ ದಿನವೆಲ್ಲಾ ಅವಳ ಮನಸ್ಸು ನೆಮ್ಮದಿ ಕಳೆದುಕೊಂಡಿತ್ತು, ಆದರೆ ಅವನ ತುಂಬು ರೂಪ ಅವಳ ಮನಸ್ಸಿನಲ್ಲಿ ಮುದ್ರಿತವಾಗಿತ್ತು. ಗಂಡಸರೆಂದರೇನೇ ಗಾವುದ ದೂರ ಓಡುವ ಅವಳು, ಅವನ ರೂಪಕ್ಕೆ ಅದೇಕೆ ಸೋಲುತ್ತಿದ್ದಾಳೋ? ಸಂಜೆ ಕ್ಲಾಸಿನಿಂದ ಹೊರಬರುತ್ತಿದ್ದಂತೆಯೇ ಗೇಟಿನ ಕಡೆಗೆ ನೋಡಿದಳು.

ಹಳೆಯ ವಾಚ್‌ಮನ್ನೇ ಕುಳಿತಿದ್ದ.

''ರಂಗಯ್ಯಾ! ಬೆಳಿಗ್ಗೆ ಇಲ್ಲಿ ಹೊಸಾ ವಾಚ್‌ಮನ್ ಇದ್ದನಲ್ಲಾ?''

''ಹೊಸಬನೂ ಅಲ್ಲ, ಏನೂ ಅಲ್ಲ. ನನ್ನ ಮಗನ್ನ ಕೂಡಿಸಿ ಹೋಗಿದ್ದೆ. ಯಾರೋ ಅವನ ಸ್ನೇಹಿತನಂತೆ...ಅವನು ಹುಡುಗಿಯರನ್ನೆಲ್ಲಾ ತಡೆದು ನಿಲ್ಲಿಸಿದ್ದ ಅಂತ ಪ್ರಿನ್ಸಿಪಾಲ್ ನನ್ನನ್ನು ಚೆನ್ನಾಗಿ ಬೈಯ್ದರು.

ಜಯಲಕ್ಷ್ಮಿ ನಗುತ್ತಾ ಹೊರಗೆ ನಡೆದಳು. ನಾಲ್ಕು ಹೆಜ್ಜೆ ಹಾಕಿದ್ದಳೋ ಇಲ್ಲವೋ . "ಹಲೋ! ಗುಡ್ ಈವನಿಂಗ್ ಜಯಲಕ್ಷ್ಮೀಯವರೇ" ಎಂಬ ಸ್ವರ ಕೇಳಿ ಚಕ್ಕನೇ ಪಕ್ಕಕ್ಕೆ ತಿರುಗಿ ನೋಡಿದಳು.

ಆನಂದರಾವ್ ಕಾರಿನಲ್ಲಿ ಕುಳಿತು ಕಿರುನಗುತ್ತಾ ನೋಡುತ್ತಿದ್ದ.

''ಬನ್ನಿ ಮಿಸ್ ಜಯಾ! ನಿಮ್ಮ ಮನೆಯ ಬಳಿ ಡ್ರಾಪ್ ಮಾಡ್ತೀನಿ'' ಕಾರಿನ ಡೋರ್ ತೆಗೆಯುತ್ತಾ ಹೇಳಿದ.

ಕೆಲವು ಕ್ಷಣಗಳಕಾಲ ಅವನೆಡೆಗೇ ನೋಡುತ್ತ ಇದ್ದು. ನಂತರ,

''ನೀವಾ?'' ಆಶ್ಚರ್ಯದಿಂದ ಕೇಳಿದಳು.

"ನನ್ನ ಹೆಸರು 'ನೀವಾ' ಅಲ್ಲ...ಆನಂದರಾವ್"

ಅವನ ಬೆಲೆಬಾಳುವ ಡ್ರೆಸ್ಸು, ಕಾರನ್ನು ನೋಡಿ ಅವಳಿಗೆ ಬುದ್ಧಿ ಕೆಟ್ಟಿತು.

"ನಿಜ ಹೇಳಬೇಕೆಂದರೆ ನಿಮಗೆ ನಾನು ಬೆಳಿಗ್ಗೆ ಸುಳ್ಳು ಹೇಳಿದ್ದೆ..."

ಅವಳು ಬಿಟ್ಟ ಕಣ್ಣನ್ನು ಬಿಟ್ಟಂತೆಯೇ ನೋಡುತ್ತಿದ್ದಳು.

''ನಾನು ತುಂಬಾ ಶ್ರೀಮಂತ ಮನೆತನದವನು. ಬೋಫೋರ್ಸ್ ಡೀಲ್‌ನಲ್ಲಿ ಸ್ವಿಟ್ಜರ್‌ಲ್ಯಾಂಡಿನವರು ಐವತ್ತು ಕೋಟಿ ಕಮಿಷನ್ ಕೊಟ್ಟಿದ್ದು ಯಾರಿಗೆ ಅಂದುಕೊಂಡಿರಿ? ನಮ್ಮಪ್ಪನಿಗೆ."

ಜಯಲಕ್ಷ್ಮಿ ಕೂಡಲೇ ಈ ಪ್ರಪಂಚಕ್ಕೆ ಬಂದಳು. ತಾನೇಕೆ ಅವನ ಮಾತನ್ನೇ ಕೇಳುತ್ತಾ ಇದ್ದಾಳೆ? ತನ್ನ ದಾರಿಯಲ್ಲಿ ತಾನೇಕೆ ಹೋಗುತ್ತಿಲ್ಲ?

"ನಿಜ ಹೇಳಬೇಕೆಂದರೆ ಬೆಳಗ್ಗೆ ಹಾಗೆ ವಾಚ್‌ಮನ್ ನಾಟಕ ಆಡಿದ್ದು ನಿಮಗಾಗಿಯೇ...''

ಜಯಲಕ್ಷ್ಮೀ ನಂಬದವಳಂತೆ ನೋಡಿದಳು. ''ನನಗಾಗಿಯಾ?"

"ಹೌದು! ವರ್ಷದಿಂದ ನೀವು ಪ್ರತಿದಿನವೂ ನಮ್ಮ ಗುಡೀಗೆ ಬರುತ್ತಿದ್ದೀರಲ್ಲಾ."

"ನಿಮ್ಮ ಗುಡಿಯಾ?''

"ಹೌದ್ರೀ!"

"ಹೌದ್ರೀ! ಅದಕ್ಕೆ ಪೂಜಾರಿ ನಾನೇ.''

''ಮತ್ತೆ ನೀವೆಂದೂ ಕಂಡಿರಲಿಲ್ಲವಲ್ಲ ಅಲ್ಲಿ?"

"ನಾನು ನಿಮ್ಮ ಅಜ್ಞಾತ ಪ್ರಿಯಕರನಾದ್ದರಿಂದ ಜಯಾರವರೆ . ನೀವು ಕಂಡರೆ ನನ್ನ ಮನಸ್ಸನ್ನು ಸ್ಥಿಮಿತದಲ್ಲಿರಿಸಿಕೊಳ್ಳುವುದು ಕಷ್ಟವಾಗುತ್ತದೆ. ನನ್ನಿಂದಾಗಿ ನೀವೆಲ್ಲಿ ಗುಡಿಗೆ ಬರುವುದನ್ನು ನಿಲ್ಲಿಸಿಬಿಡುತ್ತೀರೋ ಎಂದು ಭಯಾರಿ! ಹಾಗಾಗಿ ನೀವು ದೂರದಲ್ಲಿ ಕಾಣುತ್ತಿದ್ದಂತೆಯೇ ಗುಡಿಯ ಹಿಂಭಾಗದಲ್ಲಿರುವ ನಮ್ಮ ಮನೆಗೆ ಹೊರಟು ಹೋಗುತ್ತೇನೆ.''

ಜಯಲಕ್ಷ್ಮಿ ನಂಬದವಳಂತೆ ಅವನೆಡೆಗೆ ನೋಡಿದಳು.

"ನೀವೇಕೋ ನನ್ನ ಮಾತನ್ನು ನಂಬುತ್ತಿಲ್ಲವೆಂಬಂತೆ ಕಾಣುತ್ತಿದೆ. ಇವತ್ತಾದರೂ ನಿಮ್ಮ ಪರಿಚಯ ಮಾಡಿಕೊಳ್ಳೋಣವೆಂದು...''

ಜಯಲಕ್ಷ್ಮಿ ಮಾತನಾಡಲಿಲ್ಲ. ಅಲ್ಲಿಂದ ಆದಷ್ಟು ಬೇಗ ಹೊರಟು ಹೋಗೋಣವೆಂದುಕೊಳ್ಳುತ್ತಿದ್ದಳು. ತನ್ನ ಸ್ನೇಹಿತೆಯರಾರಾದರೂ ನೋಡಿದರೆ ಸುದ್ದಿ ಹಬ್ಬಿಸಿಬಿಡುತ್ತಾರೆಂದು ಭಯ ಪಟ್ಟಳು. ತಲೆ ತಗ್ಗಿಸಿಕೊಂಡು

ಅಲ್ಲಿಂದ ಚಕಚಕನೆ ಹೆಜ್ಜೆ ಹಾಕಿದಳು. ಆದರೆ ಮನಸ್ಸು ಮಾತ್ರ ನಡುಗೆಗೆ ಬ್ರೇಕ್ ಹಾಕುತ್ತಿತ್ತು. ಅವನೂ ತನ್ನ ಪಕ್ಕದಲ್ಲೇ ನಡೆಯುತ್ತಿದ್ದುದನ್ನು ಗಮನಿಸಿ ಅವಳಿಗೆ ಮತ್ತಷ್ಟು ಭಯವಾಯಿತು.

"ಆ ಕಾರಣವನ್ನು ಹೇಳಕೂಡದೆಂದುಕೊಂಡಿದ್ದೆ. ಆದರೆ ಈಗ ನೀವು ಅಪಾರ್ಥ ಮಾಡಿಕೊಳ್ಳುತ್ತೀರೆಂದು ಹೇಳಬೇಕಾಗಿದೆ. ನನಗೆ ಕ್ಯಾನ್ಸರ್ ಇದೆಯೆಂದು ನೆನ್ನೆ ತಾನೆ ನಮ್ಮ ಡಾಕ್ಟರ್ ಹೇಳಿದರು ಜಯರವರೇ. ಇನ್ನು ಒಂದು ತಿಂಗಳಿಗಿಂತ ಹೆಚ್ಚಾಗಿ ಬದುಕುವುದಿಲ್ಲ ನಾನು! ಅದಕ್ಕೆಂದೇ ಸಾಯುವ ಮುಂಚೆ ನಿಮ್ಮೊಡನೆ ಕೆಲವು ದಿನಗಳಾದರೂ ಮಾತನಾಡುತ್ತಾ ಕಳೆಯುವ ಅವಕಾಶಕ್ಕಾಗಿ ಹೀಗೆ ಮಾಡಿದೆ..."

ಜಯಲಕ್ಷ್ಮಿ ಚಕ್ಕನೇ ನಿಂತುಬಿಟ್ಟಳು. ಅವಳ ಮನಸ್ಸು ಕರಗಿ ಹೋಯಿತು.

"ನಿಜವಾಗಿಯೂನಾ?" ಕರುಣಾಪೂರಿತ ಧ್ವನಿಯಲ್ಲಿ ಕೇಳಿದಳು.

"ಹೌದ್ರೀ! ನಾನಿನ್ನು ಬರ್ತೀನಿ. ಇಷ್ಟಾದರೂ ಮಾತನಾಡಿದ್ದಕ್ಕೆ ಥ್ಯಾಂಕ್ಸ್." ಅವನು ಹೊರಟುಹೋದ.

ಮಾರನೆ ದಿನ ಅವಳು ದೇವಸ್ಥಾನಕ್ಕೆ ಬರುವ ವೇಳೆಗೆ ಅವನು ಪೂಜಾರಿಯ ವೇಷದಲ್ಲಿ ದೂರದಲ್ಲಿ ಹೋಗುತ್ತಿರುವುದು ಕಂಡಿತು. ಒಂದು ಸಲ ಅವನೊಡನೆ ಮಾತನಾಡಬೇಕೆಂದು ಅವಳಿಗನ್ನಿಸಿತು.

"ಆನಂದರಾವ್‌ರವರೇ..." ಜೋರಾಗಿ ಕರೆದಳು.

ಅವನು ಆಶ್ಚರ್ಯದಿಂದ ಹಿಂತಿರುಗಿ ನೋಡಿದ. ಅವನ ಮುಖದಲ್ಲಿ ತುಂಬಾ ಸಂತೋಷ ಕಾಣುತ್ತಿತ್ತು. ಬೇಗ ಬೇಗನೆ ಅವನ ಬಳಿಗೆ ಹೋದಳು.

"ಪ್ಲೀಸ್ ಹೊರಟು ಹೋಗಬೇಡಿ" ಅವಳು ಹೇಳಿದಳು.

"ಆದರೆ ನಾವಿಲ್ಲಿ ಹೀಗೆ ಮಾತನಾಡುತ್ತಾ ಇದ್ದರೆ ಯಾರಾದರೂ ನೋಡಿ ನಿಮ್ಮ ಬಗ್ಗೆ ತಪ್ಪು ತಿಳಿದರೆ...! ನಾನಿನ್ನು ಬರ್ತೀನಿ."

"ನಾವೇನೂ ತಪ್ಪು ಮಾಡದೇ ಇರೋವಾಗ ಯಾರಿಗೆ ತಾನೆ ನಾವು ಭಯಪಡಬೇಕು?"

"ಹೋಗಲೀ ಒಂದು ಕೆಲಸ ಮಾಡ್ತೀರಾ ಜಯಾರವರೇ! ನನ್ನ ಬಗ್ಗೆ ನಿಮಗೆ ಅಷ್ಟು ಕರುಣೆಯಿದ್ದರೆ ನಾನಿರುವ ಮನೆಗೆ ಬನ್ನಿ. ದಿನವೂ ಸ್ವಲ್ಪ ಹೊತ್ತು ಮಾತನಾಡಿ ಹೋದರೆ ನನಗೆ ಅಷ್ಟೇ ನೆಮ್ಮದಿ. ಕೊನೆಯ ದಿನಗಳಲ್ಲಿ!"

ಜಯಲಕ್ಷ್ಮಿ ಇಲ್ಲವೆನ್ನಲಾಗಲಿಲ್ಲ.

"ನಿಮ್ಮ ಮನೆ ಎಲ್ಲಿ?"

''ಅಗೋ ಆ ಬಿಳಿ ಕಟ್ಟಡ! ಅದರಲ್ಲಿ ಗ್ರೌಂಡ್ ಫ್ಲೋರ್. ಪುರಾಣವನ್ನು ಅಧ್ಯಯನ ಮಾಡಲು ಪ್ರಶಾಂತವಾಗಿರುತ್ತದೆಂದು ಬಾಡಿಗೆಗೆ ಪಡೆದಿದ್ದೇನೆ. ಸಂಜೆಗೆ ತಪ್ಪದೇ ಬರುತ್ತೀರಿ ತಾನೇ?''

"ಓ! ತಪ್ಪದೇ ಬರುತ್ತೇನೆ.''

ಅವನು ತಲೆತಗ್ಗಿಸಿಕೊಂಡು ಹೊರಟುಹೋದ.

"ಇದುವರೆವಿಗೂ ಸರಸ್ವತಿ ಅವರ ಕಥೆಯನ್ನು ನಡೆಸಿಕೊಂಡು ಬಂದಳು. ಈಗ ನೋಡಿ ನಾನು ಅದನ್ನು ಮುಂದುವರೆಸುತ್ತೇನೆ. ಅವರಿಬ್ಬರ ಮದುವೆ ಆಗದಂತೆ ಮಾಡುತ್ತೇನೆ" ಜಂಬದಿಂದ ಹೇಳಿದಳು ಶಚೀದೇವಿ.

ಇಂದ್ರನಿಗೆ ಕೋಪ ಉಕ್ಕಿಬಂತು.

"ಇಗೋ...ಹೀಗೆ ಸರಸ್ವತಿ ಕಥೆ, ನಿನ್ನ ಕಥೆ ಕೇಳ್ಕೊಂಡು ಕುಳಿತಿರೋಕೆ ನಾನೇನು ಹರಿಕಥೆ ಕೇಳೋಕೆ ಬಂದ ಭಕ್ತ ಅಲ್ಲ. ನೀನಿಲ್ಲೇ ಇದ್ದು ಕಥೆ ಮಾಡ್ತಾ ಇರು. ನನ್ನ ದಾರಿಯಲ್ಲಿ ನಾನು ಹೋಗ್ತೀನಿ'' ಇಂದ್ರ ಕಡ್ಡಿಮುರಿದಂತೆ ಹೇಳಿಬಿಟ್ಟ.

ಶಚೀದೇವಿಗೆ ಮೈಯ್ಯೆಲ್ಲಾ ಉರಿಯಿತು.

"ನೀವು ಆ ರಂಭೆ—ಊರ್ವಶಿಯರಿಗಾಗಿಯೇ ಹಾಗೆ ಹೋಗ್ತೀನಿ, ಹೋಗ್ತೀನಿ ಅಂತ ಹೇಳ್ತಿರೋದು. ನಂಗೇನು ಗೊತ್ತಿಲ್ಲ ಅಂದ್ಕೊಂಡಿದೀರಾ?" ರೋಷದಿಂದ ಕೇಳಿದಳು.

ಇಂದ್ರನಿಗೆ ಮತ್ತಷ್ಟು ರೇಗಿತು.

''ಹೌದು. ಅವರಿಗಾಗಿಯೇ ಹೋಗ್ತೀನಿ. ನೀನೇನು ಮಾಡ್ತೀಯಾ?'' ಎದುರುಬಿದ್ದು ಕೇಳಿದ.

ಶಚೀದೇವಿಗೆ ಪರಿಸ್ಥಿತಿ ಕೂಡಲೇ ಅರ್ಥವಾಯಿತು. ಇಲ್ಲೇ ಇಂತಹ ಪರಿಸ್ಥಿತಿಯಲ್ಲಿಯೇ ಸ್ತ್ರೀ ತುಂಬಾ ಎಚ್ಚರಿಕೆಯಿಂದ ವ್ಯವಹರಿಸಬೇಕೆಂದು ಅವಳಿಗೆ ಗೊತ್ತಿತ್ತು. ಇಲ್ಲದಿದ್ದರೆ ಈ ಗಂಡುಗಳು ಇನ್ನೊಬ್ಬಳನ್ನು ಹುಡುಕಿಕೊಂಡು ಹೊಸಬದುಕು ಬಾಳುವ ಅವಕಾಶಗಳು ಇರುತ್ತದೆಂದೂ ತಿಳಿದಿದ್ದಳು.

ಕೂಡಲೇ ಅವಳ ಕಣ್ಣಲ್ಲಿ ನೀರು ತುಂಬಿಕೊಂಡಿತು.

"ಹೌದ್ರೀ! ನಾನು ನಿಮಗಾಗಿ ನಿಮ್ಮ ಸುಖಕ್ಕಾಗಿ ಪಡಬಾರದ ಕಷ್ಟ

ಗಳನ್ನು ಪಡುತ್ತಿದ್ದರೆ, ನೀವು ನನ್ನ ಬಿಟ್ಟು ಹೊರಟು ಹೋಗ್ತೀನೀಂತ ಹೇಳ್ತಿದೀರ" ಕಣ್ಣೀರೊರೆಸಿಕೊಳ್ಳುತ್ತಾ ಹೇಳಿದಳು.

"ನನಗೋಸ್ಕರವಾ? ಏನು ಮಾಡ್ತಿದ್ದಿ?'' ಆಶ್ಚರ್ಯದಿಂದ ಕೇಳಿದ ಇಂದ್ರ.

"ಈ ಕಾಲೇಜ್ ರಸ್ತೆಯಲ್ಲಿಯೇ 'ಮಧುಪಾನ ಮತ್ತು ನೃತ್ಯಶಾಲೆ' ಯೊಂದನ್ನು ಪ್ರಾರಂಭಿಸಲು ಏರ್ಪಾಟುಗಳನ್ನು ಮಾಡಿದ್ದೇನೆ. ನಿಮ್ಮ ರಂಭೆ-ಊರ್ವಶಿಯರು ಇಲ್ಲೇ ಡ್ಯಾನ್ಸ್ ಮಾಡಿಕೊಂಡಿರಬಹುದು."

ಇಂದ್ರ ಸಂತೋಷದಿಂದ ಉಬ್ಬಿ ಹೋದ.

"ನಿನ್ನನ್ನೆಷ್ಟು ಅಪಾರ್ಥ ಮಾಡಿಕೊಂಡಿದ್ದೆ ತಿಲೋತ್ತಮೆ! ಕ್ಷಮಿಸು," ಪಶ್ಚಾತ್ತಾಪದಿಂದ ಹೇಳಿದ.

"ನನ್ನ ಹೆಸರು ಶಚೀದೇವಿ" ಕೋಪವನ್ನು ತಡೆದುಕೊಳ್ಳುತ್ತಾ ಹೇಳಿದಳು.

"ಕ್ಷಮಿಸು ಶಚೀ! ಇಷ್ಟಕ್ಕೂ ನಮಗೆ ಮಧುಪಾನ ಶಾಲೆ ಏಕೆ?'' ಅವನು ಕೇಳಿದ.

"ಆನಂದರಾವ್ ಪಕ್ಕದಲ್ಲೇ ಇದ್ದು...ಅವನ ಪ್ರೇಮ ವ್ಯವಹಾರವನ್ನೆಲ್ಲಾ ಆರಂಭದಲ್ಲೇ ಚಿವುಟಿಬಿಡಲು'' ರಹಸ್ಯವಾಗಿ ಹೇಳಿದಳು.

**ಹೊ**ಸದಾಗಿ ಕಸ್ತೂರ್‌ಬಾ ಕಾಲೇಜ್ ರಸ್ತೆಯಲ್ಲಿ ಪ್ರಾರಂಭಿಸಿದ 'ಇಂದ್ರ ಸಭಾ ಬಾರ್ ಅಂಡ್ ರೆಸ್ಟೋರೆಂಟ್' ಜನರಿಂದ ತುಂಬಿ ತುಳುಕಾಡುತ್ತಿತ್ತು. ಆ ದಟ್ಟಣೆಯಲ್ಲಿಯೇ ಒಂದೆಡೆ ಕುಳಿತು ಊಟ ಮಾಡುತ್ತಿದ್ದರು...ಆನಂದ ಜಯಲಕ್ಷ್ಮಿ.

ಜಯಲಕ್ಷ್ಮಿಯ ಮನಸ್ಸೆಲ್ಲಾ ಅವನ ಮೇಲೆ ಕರುಣೆಯಿಂದ ತುಂಬಿತ್ತು. ಅವನು ಅತಿ ಶೀಘ್ರದಲ್ಲಿಯೇ ದಾರುಣವಾದ ಕ್ಯಾನ್ಸರ್ ವ್ಯಾಧಿಗೆ ಗುರಿಯಾಗಿ ಸತ್ತುಹೋಗುತ್ತಾನೆಂಬ ವಿಷಯ ಅವಳ ಎದೆಯನ್ನು ಕರಗಿಸಿತ್ತು.

ಊಟ ಆದಕೂಡಲೆ ಅವನು ಹೇಳಿದ.

"ಜಯಾ! ನಿಜ ಹೇಳಬೇಕೆಂದರೆ ನನಗೆ ಕ್ಯಾನ್ಸರ್ರೂ ಇಲ್ಲ, ಗೀನ್ಸರ್ರೂ ಇಲ್ಲ. ಕೇವಲ ನಿನ್ನೊಡನೆ ಕೆಲವು ಕ್ಷಣ ಕಳೆಯುವುದಕ್ಕಾಗಿ ಹೀಗೆ ಅಮೇರಿಕಾ ಎಂದೂ, ಕ್ಯಾನ್ಸರ್ ಎಂದೂ ನಾಟಕ ಆಡಿದೆ."

ಜಯಲಕ್ಷ್ಮಿ ನಿಶ್ಚೇಷ್ಟಿತಳಾದಳು.

ಸಂತೋಷ, ಸಿಟ್ಟು ಎರಡೂ ಅವಳಿಗುಂಟಾಯಿತು.

''ಇಷ್ಟು ಮೋಸವಾ!" ನಸುಗೋಪದಿಂದ ಹೇಳಿದಳು.

"ಇದೆಲ್ಲಾ ನಿಮ್ಮ ಸ್ನೇಹಕ್ಕಾಗಿ ಮೇಡಂ! ಇಷ್ಟು ದಿನವೂ ಯಾವ ಹುಡುಗಿಯೂ ನನ್ನನ್ನು ಆಕರ್ಷಿಸಿರಲಿಲ್ಲ. ಮೊಟ್ಟಮೊದಲು ನೀವು ನನಗೆ ಮರಳು ಮಾಡಿದಿರಿ– ನನ್ನ ಹೃದಯವನ್ನೂ ಆಕ್ರಮಿಸಿಬಿಟ್ಟರಿ. ನೀವು ಒಪ್ಪಿಗೆ ಕೊಟ್ಟರೆ ನಾವು ಮದುವೆಯಾಗೋಣ..."

ಜಯಲಕ್ಷ್ಮಿ ಯೋಚಿಸಲು ಪ್ರಾರಂಭಿಸಿದಳು.

''ನಾನು ಯೋಚಿಸಬೇಕು," ನಿಧಾನವಾಗಿ ಹೇಳಿದಳು. ಆನಂದರಾವ್ ಸಂತೋಷದಿಂದ ಉಬ್ಬಿಹೋದ. ''ಹಾಗಾದರೆ ಪರವಾಗಿಲ್ಲ. ಆಲೋಚಿಸುವ ವರೆಗೂ ಬಂದಿದೆಯೆಂದರೆ ಸಾಕು! ಅನಂತರ ಎಲ್ಲಾ ಹಗುರವಾಗಿ ನಡೆದು ಬಿಡುತ್ತೆ."

ಅವಳು ನಕ್ಕುಬಿಟ್ಟಳು.

ಮಾರನೆ ದಿನ ಅದೇ ಟೇಬಲ್ ಬಳಿ ಕುಳಿತ ನಂತರ ತನ್ನ ಒಪ್ಪಿಗೆಯನ್ನು ಹೇಳಿದಳು.

ಆನಂದರಾವ್ ಸಂತೋಷ ತಡೆಯಲಾರದೆ ಅವಳ ಕೈಯ್ಯನ್ನು ತನ್ನ ಕೈಯ್ಯಲ್ಲಿ ತೆಗೆದುಕೊಂಡ.

"ಹಾಗಾದರೆ ನೀವು ನಾಳೆ ಕಾಲೇಜಿಗೆ ಚಕ್ಕರ್ ಹೊಡೆಯಬೇಕು."

"ಏಕೆ?" ಆಶ್ಚರ್ಯದಿಂದ ಕೇಳಿದಳು.

"ನಮಗೆ ನಡೆಯಲಿರುವ ಮದುವೆಯನ್ನು ಸೆಲಬ್ರೇಟ್ ಮಾಡಿ ಕೊಳ್ಳೋಣ.'

ಅವಳು ಅನುಮಾನದಿಂದ ನೋಡಿದಳು ಅವನೆಡೆಗೆ.

''ಅಂದರೆ?"

''ಮದುವೇಗೇನ್ರೀ? ಅಗೋ ಆ ಮೂಲೆಯಲ್ಲೇ ಪುರೋಹಿತರು ಕುಳಿತು ಊಟ ಮಾಡ್ತಿದಾರೆ. ಈಗಲೇ ಮುಹೂರ್ತವನ್ನು ನಿರ್ಧಾರ ಮಾಡ್ಕೊಂಡು ಬರ್ತೀನಿ–" ಎಂದು ಪುರೋಹಿತನ ಬಳಿಗೆ ನಡೆದ.

''ಬರುವ ಶನಿವಾರ ದಿವ್ಯವಾದ ದಿನ'' ಪುರೋಹಿತ ಹೇಳಿದ.

"ಹಾಗಾ? ಇನ್ನು ನಾಲ್ಕೇ ದಿನ ಇದೆ. ಹೋಗಲೀ ಇನ್ನೊಂದು ದಿನ ಇದ್ರೆ ಹೇಳಿ–"

''ಹಾಗಾದರೆ ಅದರ ಮುಂದಿನ ಶನಿವಾರ ಒಳ್ಳೆಯ ದಿನ–''

"ಅದೇನು ಸ್ವಾಮಿ– ಬರೀ ಶನಿವಾರಗಳನ್ನೇ ಹೇಳುತ್ತಿದ್ದೀರಿ?"

''ಆ ಒಂದು ದಿನವೇ ನಾನು ಕುಡಿಯದೇ ಇರುವುದು– ಅದಕ್ಕಾಗಿ''

ಶಚೀದೇವಿ ಗಾಬರಿಯಿಂದ ಆನಂದರಾವ್ ಬಳಿಗೆ ಬಂದಳು.

''ಹಲೋ! ಗುಡ್ ಮಾರ್ನಿಂಗ್ ಮೇಡಂ'' ಆನಂದರಾವ್ ಅವಳನ್ನು ನೋಡುತ್ತಿದ್ದಂತೆಯೇ ಕಿರುನಗುತ್ತಾ ಹೇಳಿದ.

"ತುಂಬಾ ಆತುರಪಡುತ್ತಿದ್ದೀ ಆನಂದರಾವ್'' ಅವಳೂ ಕಿರುನಗು ಬೀರುತ್ತ ಹೇಳಿದಳು.

"ಇಂತಹ ವಿಷಯಗಳಲ್ಲಿ ಆತುರವೇ ಸರಿ ಮೇಡಂ. ಆಲಸ್ಯವಾದರೆ ಅಮೃತವೂ ವಿಷವಾಗುತ್ತದೆ."

**ಚಂ**ದ್ರಬೋಸ್ ಸಂತೋಷದಿಂದ ಕಿಟಾರನೆ ಕಿರುಚಿದ. "ಯುರೇಕಾ, ಯುರೇಕಾ." ಅವನ ಹೆಂಡತಿ ಕೋಪದಿಂದ ಅವನ ಬೆನ್ನಿಗೆ ಬಡಿದಳು.

''ಏನ್ರೀ ಅದು ಹುಚ್ಚು ಕಿರುಚಾಟ? ಕೆಮಿಸ್ಟ್ರಿ ಪುಸ್ತಕವನ್ನು ಓದಿದಾಗೆಲ್ಲಾ ಹೀಗೆ ಕಿರುಚೋದು ರೂಢಿಯಾಗಿಬಿಟ್ಟಿದೆ," ಸಿಡುಕಿದಳು.

"ಅದಲ್ಲವೇ! ಹಿಂದಿನವಾರ ಹೊಸ ಫಾರ್ಮುಲಾವನ್ನು ಕಂಡು ಹಿಡಿದು ಆ ಔಷಧಿಯನ್ನು ನಮ್ಮ ಇಲಿಯ ಮೇಲೆ ಪ್ರಯೋಗಿಸಿದೆ. ಸರಿಯಾಗಿ ಒಂದು ವಾರ ಆಯ್ತೋ ಇಲ್ಲವೋ, ಈಗ ನೋಡಿದೆಯಾ? ನಮ್ಮ ಮನೆಯೆಲ್ಲಾ ನೂರಾರು ಇಲಿಗಳಿಂದ ತುಂಬಿಹೋಗಿದೆ. ಇದರರ್ಥ ಏನಂತಿ?'' ಸಂತೋಷ ದಿಂದ ಕಿರುಚಿದ.

''ಏನರ್ಥ! ಆ ಔಷಧಿ ಉಪಯೋಗಿಸಿದವರಿಗೆಲ್ಲಾ ನೂರಾರು ಮಕ್ಕಳಾ ಗುತ್ತವೆ''

ಚಂದ್ರಬೋಸ್ ಬೇಸರದಿಂದ ಸುಮ್ಮನಾದ.

"ಮಕ್ಕಳು ಹುಟ್ಟುವ ವಿಷಯ ಸರಿಯೇನೇ. ಈ ಔಷಧಿ ಉಪಯೋಗಿ ಸಿದವರಿಗೆಲ್ಲಾ ಯೌವನ ಮರಳಿ ಬರುತ್ತೆ. ಈ ಔಷಧಿಯಿಂದ ನಮ್ಮ ದೇಶದ ಮಿಲಿಟರಿಯವರಿಗೆ ಎಷ್ಟು ಉಪಯೋಗವೆಂದು ಒಂದು ಸಲ ಯೋಚಿಸು.''

''ಆ್ಞ! ನಿಜಾನಾರೀ?" ಆಶ್ಚರ್ಯದಿಂದ ಕೇಳಿದಳು.

''ಅಷ್ಟೇ ಅಲ್ಲ! ಈ ಔಷಧಿಯ ಫಾರ್ಮುಲಾವನ್ನು ನಮ್ಮ ಸರ್ಕಾರಕ್ಕೆ

ಕೊಟ್ಟರೆ ಕೈತುಂಬಾ ಹಣ ಸಿಗುತ್ತದೆ."

"ಕತ್ತೆ ಮೊಟ್ಟೆ! ನಾವು ಈ ಔಷಧಿ ಕಂಡು ಹಿಡಿದಿರೋ ವಿಷಯ ಗೊತ್ತಾದರೆ ನಮ್ಮಿಬ್ಬರನ್ನು ಜೈಲಿಗೆ ತಳ್ಳುತ್ತಾರಷ್ಟೆ.''

"ಜೈಲಿಗಾ? ಏಕೆ?''

''ಈ ಔಷಧಿ ಫ್ಯಾಮಿಲಿ ಪ್ಲಾನಿಂಗನ್ನು ನಾಶ ಮಾಡುತ್ತದೆಂದು".

"ಅಬ್ಬಾ" ತಲೆ ಹಿಡಿದುಕೊಂಡ ಬೋಸ್. "ಮಕ್ಕಳಾಗದಿರೋ ಹಾಗೆ ಇನ್ನೊಂದು ಫಾರ್ಮುಲಾ ಇದೆ ಬಿಡೆ."

"ಏನ್ರೀ, ಹಾಗಾದರೆ ಆ ಔಷಧೀನ ನೀವೇ ಕುಡೀರಿ. ಇಷ್ಟು ದಿನ ನನ್ನ ಮರೆತು ಬರೀ ಕೆಮಿಸ್ಟ್ರಿ, ಲ್ಯಾಬು ಅಂತ ಕಾಲ ಕಳೆದುಬಿಟ್ರಿ.''

"ಅಬ್ಬಾ! ಮೊದಲು ಇದನ್ನು ಬೇರೊಬ್ಬ ವ್ಯಕ್ತಿಯ ಮೇಲೆ ಉಪಯೋಗಿಸಬೇಕು. ಆ ಮೇಲೆ ಇದು ಹಾನಿಕರವಲ್ಲವೆಂದು ತಿಳಿಯುತ್ತೆ."

"ಯಾರ ಮೇಲೋ ಏಕೆ? ನೀವೇ ಕುಡಿದುಬಿಡಿ. ಇವತ್ತೇ ಗೊತ್ತಾಗುತ್ತಲ್ಲಾ ಅದರ ಬಂಡವಾಳ."

"ನಿನಗೇನು ಬುದ್ಧಿಯಿದೆಯೇನೇ, ಒಂದೊಂದು ಸಲ ಅದು ಪ್ರಾಣಕ್ಕೆ ಅಪಾಯ ಉಂಟು ಮಾಡಬಹುದು.''

"ಆದರೆ ಆಗ್ಲೀ ಬಿಡ್ರಿ. ಹೀಗೆ ನೀವು ಮಾಡೋ ಪ್ರಯೋಗಗಳ ಫಲಿತಾಂಶಗಳನ್ನು ವರ್ಷಾನುಗಟ್ಟಲೆ ನಿರೀಕ್ಷೆ ಮಾಡೋಕೆ ನನ್ನಿಂದ ಸಾಧ್ಯವಿಲ್ಲ"

ಚಂದ್ರಬೋಸ್‌ಗೆ ಇನ್ನು ಕೋಪವನ್ನು ತಡೆಯಲು ಆಗಲಿಲ್ಲ.

"ಅಷ್ಟೇ. ನನ್ನ ಪ್ರಾಣಕ್ಕೇನಾದ್ರೂ ನಿನಗೆ ಯೋಚನೆ ಇಲ್ಲ ಅಂದ ಹಾಗಾಯ್ತು.''

"ಮತ್ತೇನು?"

ತನ್ನ ಕೋಪವನ್ನು ಕೆಮಿಸ್ಟ್ರಿ ಪುಸ್ತಕದ ಮೇಲೆ ತೋರಿಸಿ ಅದನ್ನು ನೆಲಕ್ಕೆ ಒಗೆದ.

"ನಿಮ್ಮ ಗಂಡು ಜಾತಿಯೇ ಅಷ್ಟು! ಅದರಲ್ಲೂ ನಿಮ್ಮಂತಹ ಸೈಂಟಿಸ್ಟ್‌ಗಳು ಇನ್ನು ನಿಕೃಷ್ಟರು! ಹೆಂಡತಿಯರನ್ನು ಹೇಗೆ ಗೌರವಿಸಬೇಕೆಂದೇ ಗೊತ್ತಿರುವುದಿಲ್ಲ," ಪಟಪಟ ಹೇಳಿದಳು.

"ನೋಡು. ನನ್ನ ಬೇಕಾದರೆ ಏನಾದರೂ ಅನ್ನು. ಆದ್ರೆ ನಮ್ಮ ಸೈಂಟಿಸ್ಟ್‌ಗಳನ್ನ ಮಾತ್ರ.. ''

"ಅಂದೇ ಅಂತೀನಿ. ನಿಮ್ಮ ಪ್ರಯೋಗದ ಮೇಲೆ ನಿಮಗೇ ನಂಬಿಕೆಯಿಲ್ಲ ಅಂದ ಮೇಲೆ..."

ಚಂದ್ರಬೋಸನ ಸಹನೆಯ ಕಟ್ಟೆ ಒಡೆಯಿತು.

''ನಿನ್ನಂಥ ಬುದ್ಧಿಹೀನಳೊಡನೆ ಸಂಸಾರ ಮಾಡ್ತಿದೀನಲ್ಲಾ ನಂಗೆ ತಲೆ ಇಲ್ಲ ಅಷ್ಟೆ,'' ಎದ್ದು ಹೊರನಡೆಯುತ್ತಾ ಹೇಳಿದ.

"ನಂಗೂ ಅಷ್ಟೆ. ನಿಮ್ಮಂತಹ ಮೂರ್ಖರೊಡನೆ ಸಂಸಾರ ಮಾಡ್ತಿದೀನಲ್ಲಾ !"

ಚಂದ್ರಬೋಸ್ ಹೊರಬಂದು ಹಿಂದಕ್ಕೆ ತಿರುಗಿ ಹೇಳಿದ.

"ನಿನ್ನಂತಹವಳೊಡನೆ ಸಂಸಾರ ಮಾಡುವುದಕ್ಕಿಂತ ಯಾವುದಾದರೂ ಹಾಳು ಬಾವೀಲಿ ಬಿದ್ದು ಸಾಯೋದು ಮೇಲು,'' ಕಿರುಚಿದ.

"ಸಾಯ್ತೀನಿ ಅಂತ ಹೆದರಿಸ್ತಿದೀರ. ಸಂತೋಷವಾಗಿ ಇನ್ನೊಬ್ಬನ್ನ ಮದ್ವೆ ಆಗ್ತೀನಿ."

ಚಂದ್ರಬೋಸ್‌ಗೆ ಇನ್ನು ಸಹಿಸಲಾಗಲಿಲ್ಲ. ಆಗತಾನೇ ಅಲ್ಲಿಗೆ ಬಂದ ಖಾಲಿ ಆಟೋದಲ್ಲಿ ಕುಳಿತು "ಹೆಸರಘಟ್ಟ" ಅಂದ.

"ಹೆಸರುಘಟ್ಟದಲ್ಲಿ ಎಲ್ಲಿಗೆ ಸರ್?'' ಆಟೋ ಡ್ರೈವರ್ ಕೇಳಿದ.

"ಕೆರೆ ಮಧ್ಯಕ್ಕೆ"

''ಹತ್ತು ರೂಪಾಯಿ ಎಕ್ಸ್‌ಟ್ರಾ ಆಗುತ್ತೆ ಸಾರ್."

"ಕೊಡ್ತೀನಿ ನಡಿಯಯ್ಯಾ" ಎಂದ ಆತುರಪಡಿಸುತ್ತಾ.

ಆಟೋ ಶರವೇಗದಲ್ಲಿ ಹೋಯಿತು.

ಕೆರೆಯ ಬಳಿ ನಿಂತು ಯೋಚಿಸಿದ.

ತನ್ನ ಪ್ರತಿಭೆಯನ್ನು ಸರ್ಕಾರ, ರಾಜೀವ್‌ಗಾಂಧಿ ಅಲ್ಲದಿದ್ದರೂ ತನ್ನ ಹೆಂಡತಿ ಕೂಡಾ ಗುರುತಿಸಲಿಲ್ಲ.

ಮನೆಯೊಳಗೆ, ಹೊರಗೆ ಎರಡೂ ಕಡೆ ಅಶಾಂತಿ. ತಾನು ಸತ್ತರೂ ಚಿಂತೆಯಿಲ್ಲವಂತೆ ಅವಳಿಗೆ. ಬೇರೆಯವನನ್ನು ಮದುವೆಯಾಗಲು ಸಿದ್ಧಳಾಗಿದ್ದಾಳೆ. ಎಂತಹ ದಾರುಣ? ಧುಮುಕಲು ಆಳವಾದ ಜಾಗಕ್ಕೆ ಕಣ್ಣಾಡಿಸಿದ.

ಅದೇ ಸಮಯದಲ್ಲಿ ಸಾತ್ವಿಕರಾವ್ ತನ್ನ ಕೋಣೆಯಲ್ಲಿ ಕುಳಿತು ತಾನು ಬರೆಯುತ್ತಿದ್ದ ಕಾಗದವನ್ನು ಓದಿಕೊಂಡ.

"ರಾಧಾ! ನನ್ನ ಡಾರ್ಲಿಂಗ್ ರಾಧಾ,

"ಹೋಟೆಲಿನಲ್ಲಿ ನಿನ್ನ ವರ್ತನೆ ನನಗೆಷ್ಟು ಬೇಸಿರ ತರಿಸಿತೆಂದು ಹೇಳಲಾಗುತ್ತಿಲ್ಲ. ನಮ್ಮ ಪಕ್ಕದಲ್ಲಿ ಕುಳಿತಿದ್ದ ಆ ಹುಡುಗಿ ಯಾರೆಂದು ನನಗೆ ಗೊತ್ತಿಲ್ಲ. ನಾನು ಆ ವಿಷಯವನ್ನು ನಿನಗೆ ಹೇಳಬೇಕೆಂದು ಎಷ್ಟು ಸಲ ಪ್ರಯತ್ನಿಸಿದರೂ ನೀನು ಅವಕಾಶ ಕೊಡದೆ ಸಿಟ್ಟಾಗಿಬಿಟ್ಟೆ. ನೀನು ನನ್ನ ಕೆನ್ನೆಗೆ ಹೊಡೆದ ಏಟು ನೇರವಾಗಿ ಹೃದಯಕ್ಕೇ ಬಿದ್ದಂತೆ ನೋವಾಗುತ್ತಿದೆ. ಅದಕ್ಕೆ ನಿನ್ನ ಬದುಕಿನಿಂದ ಮಾತ್ರವಲ್ಲ, ಈ ಲೋಕದಿಂದಲೇ ದೂರ ಹೋಗಿಬಿಡುತ್ತೇನೆ. ಸಂಜೆಯ ವೇಳೆಗೆ ಈ ನಿನ್ನ ಪ್ರೇಮಿ, ಅಮರ ಚರಿತ್ರೆಯಲ್ಲಿ ನಿಂತು ಬಿಡುತ್ತಾನೆ."

"ಎಂದೂ ನಿನ್ನವ,

"ಸಾತ್ವಿಕರಾವ್

"ಬ್ಯಾಂಕ್ ಕ್ಲರ್ಕ್."

ಆ ಕಾಗದವನ್ನು ತೆಗೆದುಕೊಂಡು ತನ್ನ ಕೋಣೆಯಿಂದ ಹೊರಬಂದ. ಕಾಲು ಗಂಟೆಯಲ್ಲೇ ರಾಧಾ ವಿಲಾಸ್ ಕಾಫಿ ಹೋಟೆಲ್ ಬಳಿಗೆ ಬಂದ. ರಾಧಾ ಕೌಂಟರ್ ಬಳಿ ಕುಳಿತಿದ್ದಳು. ಅವಳನ್ನು ನೋಡಿ ನೋವಿನಿಂದ 'ಹಾ' ಎಂದುಕೊಂಡು ಸರ್ವ್ ಮಾಡುತ್ತಿದ್ದ ಭದ್ರನ ಬಳಿಗೆ ಬಂದ. "ಈ ಕಾಗದಾನ ರಾಧಾಗೆ ಕೊಟ್ಟಿಡು..." ಅವನಿಗೆ ಕಾಗದ ಕೊಡುತ್ತಾ ಹೇಳಿದ.

"ನೀವೇ ಕೊಡಬಹುದಲ್ಲಾ" ಭದ್ರ ಕೇಳಿದ.

''ನಮ್ಮಿಬ್ಬರ ನಡುವೆ ಮಾತುಕತೆಯಿಲ್ಲ ಭದ್ರ."

"ಹಾಗಾ! ಸರಿ ಕೊಡ್ತೀನಿ ಬಿಡಿ'' ಒಪ್ಪಿಕೊಂಡ.

ಸಾತ್ವಿಕರಾವ್ ಆಟೋದಲ್ಲಿ ಹತ್ತು ರೂಪಾಯಿ ಎಕ್ಸ್ಟ್ರಾ ಕೊಟ್ಟು ನೇರವಾಗಿ ಹೆಸರಘಟ್ಟ ಕೆರೆಯ ಕಡೆಗೆ ಹೊರಟ,

ಒಮ್ಮೆ ಕೆರೆಯ ಕಡೆಗೆ ನೋಡಿ, "ಭಗವಂತಾ! ಮುಂದಿನ ಜನ್ಮದಲ್ಲಾದರೂ ರಾಧಾಳನ್ನಾಗಲೀ, ಅಥವಾ ಅವಳಿಗಿಂತ ಸುಂದರಿಯೊಬ್ಬಳನ್ನಾಗಲೀ ನನಗೆ ಹೆಂಡತಿಯಾಗಿ ಕರುಣಿಸು" ಎಂದವನೇ ಕೆರೆಯೊಳಗೆ ಜಿಗಿದ.

ಅದೇ ಅವನು ಮಾಡಿದ ದೊಡ್ಡ ತಪ್ಪು! ಆ ಕೆರೆಯಲ್ಲಿ ಆ ದಿನ ಕೇವಲ ಮೂರಡಿ ಮಾತ್ರ ನೀರಿತ್ತು. ನೀರಿನ ಮಟ್ಟ ಇಷ್ಟು ಕಡಿಮೆಯಾಗಿದೆಯಲ್ಲಾ ಹೇಗಪ್ಪಾ ಈ ಮಹಾನಗರಕ್ಕೆ ನೀರನ್ನು ಹೊಂದಿಸುವುದೆಂದು ಅಲ್ಲೇ ಹತ್ತಿರದಲ್ಲಿ ಕುಳಿತ ಜಲಮಂಡಲಿಯ ಅಧಿಕಾರಿಗಳು ತಲೆ ಕೆಡಿಸಿಕೊಳ್ಳುತ್ತಿದ್ದರು.

ಸಾತ್ವಿಕರಾವ್ ನೀರಿನಲ್ಲಿ ಬಿದ್ದ ಕೂಡಲೇ ಅವನ ಕಾಲುಗಳು ಕೆಸರಿನಲ್ಲಿ ಸಿಕ್ಕಿಕೊಂಡಿತು. ಅತಿ ಕಷ್ಟದಿಂದ ಎದ್ದು ನಿಂತ.

''ಅಯ್ಯೋ! ನೀರೇ ಇಲ್ಲ. ಇದರ ನೀರಿನ ಮಟ್ಟವನ್ನು ಜಲಮಂಡಲಿಯ

ವರು ಬೋರ್ಡೊಂದರ ಮೇಲೆ ಬರೆದು ತೂಗು ಹಾಕಿದ್ದರೆ ಚೆನ್ನಾಗಿತ್ತು" ಎಂದುಕೊಂಡು ಮತ್ತೆ ನೀರಿನಲ್ಲಿ ಮುಳುಗಲು ಪ್ರಯತ್ನಿಸಿದ.

ಕೂಡಲೇ ಉಸಿರು ಸಿಕ್ಕಿಹಾಕಿಕೊಂಡಂತಾಗಿ "ಬಚಾವ್, ಬಚಾವ್" ಎಂದು ಕಿರುಚಿದ. ಕೇಂದ್ರ ಸರ್ಕಾರ ಹಿಂದಿನ ದಿನ ತಾನೇ ವಿಧಿಸಿದ್ದ 'ಹಿಂದಿ ಕಲಿಯಬೇಕು' ಯೋಜನೆಯಡಿ ಅಷ್ಟು ಹಿಂದಿಯನ್ನು ಮಾತ್ರ ಕಲಿತಿದ್ದ.

ಜಲಮಂಡಲಿಯವರು ಓಡಿ ಬಂದು ಸಾತ್ವಿಕರಾವ್‌ನನ್ನು ಮೇಲಕ್ಕೆಳೆದು ತಂದರು.

"ನನ್ನನ್ನೇಕೆ ಬದುಕಿಸಿದಿರಿ?" ಸಿನಿಮಾದಲ್ಲಿ ಹೀರೋಯಿನ್ ಹೇಳುವ ಧಾಟಿಯಲ್ಲಿ ಕೇಳಿದ.

''ಯಾರೇನು? ಇರೋ ಸ್ವಲ್ಪ ನೀರು ಹಾಳಾಗದೇ ಇರಲಿ ಅಂತ! ಮೊದಲೇ ನೀರಿನ ಪ್ರಾಬ್ಲಮ್ ಅಂತ ನಾವು ತಲೆ ಕೆಡಿಸಿಕೊಳ್ತಾ ಇದ್ರೆ ನೀನು ಬೇರೆ ಇದರಲ್ಲೇ ಬಿದ್ದು ಸಾಯೋಕೆ ನೋಡ್ತಾ ಇದ್ದಿ."

ಸಾತ್ವಿಕರಾವ್ ನೀರಸವಾಗಿ ಮುಲುಗುತ್ತಾ ಎದ್ದುನಿಂತ.

ಅದುವರೆವಿಗೂ ಈತ ಮಾಷೆಯನ್ನೆಲ್ಲಾ ನೋಡುತ್ತಾ ನಿಂತಿದ್ದ ವಿದ್ಯಾರ್ಥಿಯೊಬ್ಬ ಸಾತ್ವಿಕರಾವ್ ಬಳಿಗೆ ಬಂದು–

''ನಮಸ್ಕಾರ ಸಾರ್'' ಅಂದ.

''ನಮಸ್ಕಾರ, ನೀನ್ಯಾರಪ್ಪಾ?'' ಕೇಳಿದ ಸಾತ್ವಿಕರಾವ್.

"ಅದ್ಯಾಕೆ ಸಾರ್...ನಾನು ಗುರುತು ಸಿಗಲಿಲ್ವಾ? ವಿನಯ್ ಕುಮಾರ ಸಾರ್. ಹಿಂದಿನ ವರ್ಷ ಟೆನ್ತ್ ಬಿ ನಲ್ಲಿದ್ದೆ."

ಸಾತ್ವಿಕರಾವ್‌ಗೆ ಅವನ ಮಾತೇನೂ ಅರ್ಥವಾಗಲಿಲ್ಲ.

"ಇನ್ನೂ ನೆನಪಾಗಲಿಲ್ಲವಾ ಸಾರ್? ನಮಗೆ ಟೆನ್ತ್‌ನಲ್ಲಿ ಕೆಮಿಸ್ಟ್ರಿ ಲ್ಯಾಬ್ ನೀವೇ ತಾನೇ ತಗೋತಿದ್ದಿದ್ದು? ನಮಗೇನೂ ಹೇಳದೆ ನಿಮ್ಮ ಪಾಡಿಗೆ ನೀವೇ ಏನೋ ಎಕ್ಸ್‌ಪರಿಮೆಂಟ್ ಮಾಡ್ಕೊಂತಿರ್ತಿದ್ರಿ."

ಸಾತ್ವಿಕ ಮತ್ತಷ್ಟು ಗಲಿಬಿಲಿಗೊಂಡ.

"ನಾನು ಸೈನ್ಸ್ ಟೀಚರ್ರಾ?"

"ಏನೋ ಕನ್‌ಫ್ಯೂಸ್‌ನಲ್ಲಿದ್ದೀರಿ ಸಾರ್. ನಡೀರಿ ನಿಮ್ಮ ಮನೆ ಬಳಿ ಡ್ರಾಪ್ ಮಾಡ್ತೀನಿ,'' ಎನ್ನುತ್ತಾ ತನ್ನ ಕಾರಿನಲ್ಲಿ ಹತ್ತಿಸಿಕೊಂಡು ಕಾರನ್ನು ಓಡಿಸಿದ. ಸುಸ್ತಾಗಿದ್ದ ಸಾತ್ವಿಕರಾವ್ ಹಿಂದಿನ ಸೀಟಿನಲ್ಲಿ ಹಾಗೆಯೇ ಒರಗಿಕೊಂಡು ನಿದ್ರಿಸಿದ.

"ಇಳೀರಿ ಸಾರ್! ನಿಮ್ಮನೆ ಬಂತು" ವಿದ್ಯಾರ್ಥಿ ಹೇಳಿದ. ಸಾತ್ವಿಕರಾವ್

ಕೆಳಗಿಳಿದು ಆ ಬೀದಿಯನ್ನು ನೋಡಿ, "ಈ ಮನೆಯಲ್ಲಪ್ಪ ನಮ್ಮದು..." ಎಂದು ಆಶ್ಚರ್ಯದಿಂದ ಅವನೆಡೆಗೆ ನೋಡಿದ.

"ಪರ್ವಾಗಿಲ್ಲ ಸಾರ್ ನೀವು ಚೆನ್ನಾಗಿ ಫೂಲ್ ಮಾಡ್ತಿದೀರ. ನಿಮ್ಮ ಮನೇಗೆ ನಾನು ಎಷ್ಟೊಂದು ಸಲ ಬಂದಿದ್ದೆ. ನಡೀರಿ ಒಳಗೆ'' ಎನ್ನುತ್ತಾ ಬಲವಂತದಿಂದ ಒಳಗೆ ಕರೆದುಕೊಂಡುಹೋದ.

ಅದೇ ಸಮಯಕ್ಕೆ ಸರಿಯಾಗಿ ಲಲಿತಾದೇವಿ ಹೊರಗೆ ಬಂದಳು. ಅವಳ ಕಣ್ಣಿಂದ ನೀರು ಧಾರಾಕಾರವಾಗಿ ಸುರಿಯುತ್ತಿತ್ತು, ಸಾತ್ವಿಕರಾವ್‌ನನ್ನು ಕಂಡು ತನ್ನ ಗಂಡನೇ ವಾಪಸ್ಸು ಬಂದಿದ್ದಾನೆಂದು ತಿಳಿದು ಸಂತೋಷದಿಂದ ಹಿಗ್ಗಿದಳು.

''ಆ ಬಂದುಬಿಟ್ಟಿರಾ, ನೀವು ಆತ್ಮಹತ್ಯೆ ಮಾಡಿಕೊಳ್ಳದೆ ವಾಪಸ್ಸಾದರೆ ತೆಂಗಿನಕಾಯಿ ಒಡೀತೀನಿ ಅಂತ ದೇವರಿಗೆ ಹರಕೆ ಹೊತ್ತುಕೊಂಡಿದ್ದೆ'' ಕಣ್ಣೀರನ್ನು ಒರೆಸಿಕೊಳ್ಳುತ್ತಾ ಹೇಳಿದಳು. ಸಾತ್ವಿಕರಾವ್ ಅವಳನ್ನು ಕಂಡು ನಿಶ್ಚೇಷ್ಟಿತನಾದ.

ಅವಳು ತಾನು ಪ್ರೀತಿಸಿದ ರಾಧೇನೇ. ಆದರೆ ಅಲಂಕಾರವನ್ನು ಸಂಪೂರ್ಣ ಬದಲಾಯಿಸಿಕೊಂಡಿದ್ದಾಳೆ. ತಮಾಷೆಯೆಂದರೆ ಅವಳ ಕತ್ತಿನಲ್ಲಿ ಮಂಗಳ ಸೂತ್ರವಿತ್ತು. ಆಗಲೇ ಅಕ್ಕಪಕ್ಕದ ಮನೆಯುವರೂ ಅಲ್ಲಿ ಜಮಾಯಿಸಿದ್ದರು.

''ಏನಯ್ಯಾ ಇದು? ಹೆಂಡತಿ ಜೊತೆ ಜಗಳ ಆಯ್ತೂಂತ ಬಾವೀಲಿ ಬಿದ್ದು ಸಾಯೋಕೆ ಹೋಗಿದ್ದೀಯಲ್ಲಾ...ಒಳ್ಳೇ ಗಂಡಸು'' ತಲೆಗೊಂದು ಮಾತು ಆಡಿದರು.

''ಹಾಗೆ ಸ್ವಲ್ಪ ಬುದ್ಧಿ ಹೇಳಿ. ಮದುವೆ ಆದಾಗಿನಿಂದಲೂ ಇದೇ ಗೋಳು'' ಲಲಿತ ಗೊಣಗಿದಳು.

ಸಾತ್ವಿಕರಾವ್‌ಗೆ ಬುದ್ಧಿ ಕೆಟ್ಟಿತು. ರಾಧಾ ತನಗೆ ನಿಜವಾಗಿಯೂ ಹೆಂಡತಿಯಾಗಿಬಿಟ್ಟವಳಂತೇ ಮಾತನಾಡುತ್ತಿದ್ದಾಳಲ್ಲಾ? ಸುತ್ತಮುತ್ತಲಿನವರೂ ಹಾಗೆಯೇ ಮಾತನಾಡುತ್ತಿದ್ದಾರೆ" ತನಗೇನೂ ಅರ್ಥವಾಗುತ್ತಿಲ್ಲ.

''ರಾಧಾರವರೇ! ನೀವೇನು ಹೇಳುತ್ತಿದ್ದೀರೋ ನನಗೆ ತಿಳಿಯುತ್ತಿಲ್ಲ. ನೀವು ನನ್ನ ಹೆಂಡತಿಯಾ? ಮದುವೆಯಾಗೋಣವೆಂದು ಕೇಳಿದ್ದಕ್ಕೇ ಕೆನ್ನೆ ಹರಿದು ಹೋಗುವಂತೆ ಹೊಡೆದಿದ್ದಿರಿ."

''ನೋಡಿದಿರಾ, ನೋಡಿದಿರಾ? ನನ್ನ ಹೆಸರು ರಾಧಾ ಅಂತೆ, ನಮಗೆ ಮದುವೇನೇ ಆಗಿಲ್ವಂತೆ! ಸುಮ್ಮನೆ ನೋಡ್ತಿದೀರಲ್ಲಾ ಅವರಿಗೆ ಸ್ವಲ್ಪ ಬುದ್ಧಿ ಹೇಳ್ರೀ..." ಗುಂಪನ್ನು ರಿಕ್ವೆಸ್ಟ್ ಮಾಡಿಕೊಂಡಳು ಲಲಿತಾದೇವಿ.

"ನೋಡ್ರೀ ಚಂದ್ರಬೋಸ್‌ರವರೇ! ಹೆಂಗಸರನ್ನು ಹೀಗೆ ಅಳಿಸೋದು

ಸರಿಯಲ್ಲ. ಇನ್ನು ಈ ಸೀನ್‌ನ ಕ್ಲೋಸ್ ಮಾಡಿ ಒಳಗೆ ಹೋಗಿ."

ಸಾತ್ವಿಕರಾವ್‌ಗೆ ಏನು ಮಾಡಬೇಕೆಂದೇ ತೋಚಲಿಲ್ಲ.

"ನೋಡಿ ಸ್ವಾಮಿ...ಎಲ್ಲೋ ಏನೋ ಎಡವಟ್ಟಾಗಿದೆ. ಈಗಾಗಲೇ ಒಂದು ಸಲ ರಾಧಾ ಕನ್‌ಫ್ಯೂಸ್ ಮಾಡಿಕೊಂಡು ನಮ್ಮ ಆಫೀಸಿಗೆ ಬಂದು ನನ್ನ ಕೆನ್ನೆಗೆ ಬಡಿದಿದ್ದರು. ಮತ್ತೆ ಹೋಟೆಲಿನಲ್ಲಿ ಇನ್ಯಾರೋ ಹುಡುಗಿ ನನ್ನನ್ನು ಯಾರೋ ಎಂದುಕೊಂಡು ಮಾತನಾಡಿಸಿದಾಗ ಎರಡನೆ ಸಲ ರಾಧಾ ನನ್ನ ಕೆನ್ನೆಗೆ ಬಡಿದಿದ್ದರು. ಈಗ ನೀವು ನೋಡಿದರೆ ನನ್ನನ್ನು ಗಂಡನೆಂದು ಹೇಳುತ್ತಿದ್ದೀರಿ..."

ಲಲಿತಾದೇವಿ ಒಮ್ಮೆಗೇ ಜೋರಾಗಿ ಅಳಲು ಪ್ರಾರಂಭಿಸಿದಳು.

"ನನ್ನ ಮೇಲಿನ ಕೋಪಕ್ಕೆ ನನ್ನೊಡನೆ ಮದುವೆಯೇ ಆಗಿಲ್ಲವೆನ್ನುತ್ತಿದ್ದಾರಲ್ಲಪ್ಪಾ! ನನ್ನನ್ನು ಅನಾಥಳನ್ನಾಗಿ ಮಾಡಿ ಓಡಿಹೋಗಲು ನೋಡುತ್ತಿದ್ದಾರೆ ದೇವರೆ!"

"ನೋಡಿ ಚಂದ್ರಬೋಸ್! ಆಗಿದ್ದೇನೋ ಆಗಿಹೋಯಿತು. ಈಗ ನೀವು ಮನೆಯೊಳಗೆ ಹೋಗಿ ನಿಮ್ಮ ಹೆಂಡತೀನ ಸಮಾದಾನಪಡಿಸಿ," ಮುದುಕನೊಬ್ಬ ಬುದ್ಧಿ ಹೇಳಿದ.

"ನನ್ನ ಹೆಸರು ಚಂದ್ರಬೋಸ್ ಅಲ್ಲಾರೀ; ಸಾತ್ವಿಕರಾವ್."

"ಹಾಗೇನೇ ನೀವು ಸೈನ್ಸ್ ಟೀಚರ್ ಅಲ್ಲಾಂತಾನೂ ಹೇಳ್ತೀರಾ?"

"ನಿಜವಾಗಿಯೂ ನಾನು ಬ್ಯಾಂಕಿನಲ್ಲಿ ಕ್ಲರ್ಕ್...ದೇವರ ಆಣೇಗೂ."

ಎಲ್ಲರೂ ಗೊಳ್ಳೆಂದು ನಕ್ಕರು.

"ಈ ಮನೆ ಕೂಡಾ ನಿನ್ನದಲ್ಲ. ಇನ್ನು ನಾಟಕ ಸಾಕು. ಸಿನೆಮಾಗಳಲ್ಲಿ ಡಬಲ್ ಆಕ್ಟಿಂಗ್ ನೋಡೀ ನೋಡೀ ಸಾಕಾಗಿದೆ. ನಡೀರಿ...ನಡೀರಿ." ಎಂದು ಎಲ್ಲರೂ ಅವನನ್ನು ಮನೆಯೊಳಗೆ ಕಳಿಸಿಬಿಟ್ಟರು. ಕೂಡಲೇ ಬಾಗಿಲನ್ನು ಮುಚ್ಚಿಕೊಂಡು ಒಳಗಿನಿಂದಲೇ ಡೋರ್‌ಲಾಕ್ ಮಾಡಿಕೊಂಡಳು ಲಲಿತಾದೇವಿ. ಭಯದಿಂದ ಕುರ್ಚಿಯಲ್ಲಿ ಕುಸಿದು ಕುಳಿತ ಸಾತ್ವಿಕರಾವ್‌ನ ಬಳಿಗೆ ನಿಧಾನವಾಗಿ ಬಂದಳು ಅವಳು.

"ಎಷ್ಟು ಕೆಟ್ಟೋರ್ರೀ ನೀವು! ಇವತ್ತು ನಮ್ಮ ಮ್ಯಾರೇಜ್ ಆ್ಯನಿವರ್ಸರಿ ಅನ್ನೋದನ್ನೇ ಮರೆತುಬಿಟ್ಟಿದ್ದೆ. ಬನ್ನಿ...ಸ್ನಾನ ಮಾಡಿಸ್ತೀನಿ ನಾನೇ ಇವತ್ತು. ನಾಳೆತನಕ ಸುಖವಾಗಿ ಮನೆ ಒಳಗೇ ಕಳೆಯೋಣ..."

"ರಾಧಾರವರೇ ನೀವೇನು ಮಾತನಾಡುತ್ತಿದ್ದೀರೆಂದು ನನಗರ್ಥವಾಗುತ್ತಿಲ್ಲ. ನಮಗೆ ಮದುವೆ ಯಾವಾಗಾಯಿತು?"

ಲಲಿತಾದೇವಿ ಮತ್ತೆ ಕಣ್ಣೀರು ಸುರಿಸಲು ಪ್ರಾರಂಭಿಸಿದಳು.

"ಇಗೋ, ನನ್ನನ್ನು ಇನ್ನೊಂದು ಸಲ ರಾಧಾ ಅಂದ್ರೆ ನಾನು ಸುಮ್ಮನೆ ಇರೋದಿಲ್ಲ! ನನ್ನ ಹೆಸರು ಲಲಿತಾ, ಲಲಿತಾ ರಾಧಾ ಅಂತೀರಲ್ಲಾ" ರೋಷದಿಂದ ಹೇಳಿದಳು.

ಸಾತ್ವಿಕರಾವ್ ಬಾಯಿಬಿಟ್ಟುಕೊಂಡು ಬೆರಗಾಗಿ ನೋಡುತ್ತಾ ಇದ್ದುಬಿಟ್ಟ ಅವಳ ಮಾತಿಗೆ.

"ಹ್ಲೂ...ಇನ್ನೂ ಹಾಗೇಕೆ ನೋಡ್ತಿದೀರಿ. ನಡೀರಿ ದಿನಾಗಲೂ ಆ ಹಾಳು ಲ್ಯಾಬೇ ಆಯಿತು ..ನಿಮ್ಮ ಬದುಕೆಲ್ಲಾ ಕೆಮಿಸ್ಟ್ರೀನೇ. ಇವತ್ತು ಅದೆಲ್ಲಾ ಮರೆತು ಹಾಯಾಗಿ ಕಳೆಯೋಣ."

"ರಾಧಾ! ಇದನ್ನೆಲ್ಲಾ ನೀವು ತಮಾಷೆಗೆ ಮಾಡ್ತಿದೀರಲ್ಲಾ. ನನ್ನ ಗೋಳಾಡಿಸೋಕೆ ತಾನೆ?''

"ಮತ್ತೆ ಹುಚ್ಚುಚ್ಚಾಗಿ ಮಾತಾಡ್ತಿದೀರ. ಆ ಕೆರೇಲಿ ಧುಮುಕಿದ್ದಕ್ಕೆ ನಿಮ್ಮ ಬುದ್ಧಿ ಕೆಟ್ಟಿದೆ. ಮೊದಲು ಒದ್ದೆ ಬಟ್ಟೇನ ಬದಲಾಯಿಸಿಕೊಳ್ಳಿ. ಹಾಯಾಗಿ ನಿದ್ರೆ ಹೋದ್ರೆ ಎಲ್ಲಾ ಸರಿಹೋಗುತ್ತೆ."

ಬಲವಂತವಾಗಿ ಅವನ ಕೈಹಿಡಿದುಕೊಂಡು ಮಲಗುವ ಕೋಣೆಗೆ ಎಳೆದುಕೊಂಡು ಹೋದಳು. ಅವನ ಒದ್ದೆ ಬಟ್ಟೆಗಳನ್ನು ಬಿಚ್ಚಿ ಇಸ್ತ್ರಿ ಮಾಡಿದ್ದ ಬಟ್ಟೆಗಳನ್ನು ತಾನೇ ಸ್ವತಃ ತೊಡಿಸಿದಳು. ನಂತರ ಅವನನ್ನು ಮಂಚದ ಮೇಲೆ ಮಲಗಿಸಿ ತಾನೂ ಪಕ್ಕದಲ್ಲೇ ಮಲಗಿದಳು.

ಸಾತ್ವಿಕರಾವ್ ಕಂಗಾಲಾಗಿ ಎದ್ದು ಕುಳಿತ.

"ಅಯ್ಯೋ! ಮತ್ತೆ ಯಾಕೆ ಎದ್ರಿ?"

"ಅದೂ...ಏನಿಲ್ಲ."

ಲಲಿತ ಮತ್ತೆ ಅವನನ್ನು ಮಂಚದ ಮೇಲೆ ತಳ್ಳಿ ಅವನ ಕಾಲುಗಳ ಮೇಲೆ ತನ್ನ ಕಾಲುಗಳನ್ನು ಹಾಕಿ ಮಲಗಿದಳು.

ಸಾತ್ವಿಕರಾವ್‌ಗೆ ಉಸಿರು ಕಟ್ಟಿಕೊಂಡಿತು. ಶರೀರವೆಲ್ಲಾ ನಡುಗುತ್ತಿತ್ತು. ಬಲವಂತದಿಂದ ಕಣ್ಮುಚ್ಚಿ ಮಲಗಿದ. ಲಲಿತ ಸಂಪೂರ್ಣವಾಗಿ ಅವನ ಮೇಲೆ ಬಾಗಿದಳು.

"ಇವತ್ತು ನಮ್ಮ ಮದುವೆಯ ಆ್ಯನಿವರ್ಸರಿ ಅನ್ನೋದನ್ನ ಮರೆತಿರಾ?"

ಕಿವಿಯಲ್ಲಿ ಬಾಯಿಟ್ಟು ರಹಸ್ಯವಾಗಿ ಕೇಳಿದಳು. ಅವಳು ಮುಡಿದಿದ್ದ ಮಲ್ಲಿಗೆ ಹೂವು ಅವನಿಗೆ ಮತ್ತು ಬರಿಸಿತು.

'ಅಯ್ಯೋ ದೇವರೇ! ಇದಾವುದೋ ಯಾರನ್ನೋ ಇನ್ಯಾರೋ ಎಂದು

ಭಾವಿಸಿದಂತಿದೆ. ನಾಳೆ ಬೆಳಿಗ್ಗೆ ತಾನು ಚಂದ್ರಬೋಸ್ ಅಲ್ಲವೆಂದು ತಿಳಿದರೆ ತುಂಬಾ ತೊಂದರೆಯಾಗುತ್ತದೆ. ಆದ್ದರಿಂದ ಏನಾದರೂ ಉಪಾಯ ಹೂಡಿ ಇಲ್ಲಿಂದ ತಪ್ಪಿಸಿಕೊಳ್ಳಬೇಕು.'

"ಅಬ್ಬಾ" ಎಂದು ನರಳುತ್ತಾ ಅವಳ ಹಿಡಿತದಿಂದ ತಪ್ಪಿಸಿಕೊಂಡು ಎದ್ದು ಕುಳಿತ.

ಲಲಿತ ಕೂಡಾ ಆತಂಕದಿಂದ ಎದ್ದು ಕುಳಿತಳು.

,'ಏನ್ರೀ? ಏನಾಯ್ತು?" ಕೇಳಿದಳು.

''ಅಷ್ಟೆತ್ತರದಿಂದ ನದಿಯಲ್ಲಿ ಧುಮುಕಿದ್ದಕ್ಕೊ ಏನೋ ನಡುವು ಹಿಡಿದು ಕೊಂಡಿದೆ. ಅಯ್ಯಯ್ಯಪ್ಪಾ–" ಎಂದ ಮುಖ ಕಿವುಚಿ ನರಳಿದ.

"ಅಯ್ಯೋ! ಏನು ಮಾಡೋದ್ರಿ? ಡಾಕ್ಟರನ್ನು ಕರೆಸಲಾ?"

"ಬೇಡ, ಬೇಡ! ಡಾಕ್ಟರ್ ಯಾಕೆ ಇಷ್ಟಕ್ಕೆಲ್ಲಾ— ಬೆಳಗಾದರೆ ಸರಿ ಹೋಗುತ್ತೆ. ಇವತ್ತೊಂದು ರಾತ್ರಿ ನೀನು ಬೇರೆ ಮಂಚದ ಮೇಲೆ ಮಲಕ್ಕೊ–"

ನಿರಾಸೆ, ಸಿಡಿಮಿಡಿ ಅವಳ ಮುಖದಲ್ಲಿ ಕಂಡಿತು.

''ನನಗೆ ಸುಖಪಡೋ ಯೋಗ ಇಲ್ಲ ಬಿಡಿ," ಎಂದು ಹಣೆ ಚಚ್ಚಿ ಕೊಳ್ಳುತ್ತಾ ಬೇರೆ ಮಂಚದ ಮಲಗಿದಳು.

'ಅಯ್ಯಯ್ಯಪ್ಪಾ' ಎಂದು ಮತ್ತೆ ನರಳುತ್ತಾ ಮಲಗಲು ಹೋದಾಗ ಅವನ ದೃಷ್ಟಿ ಟೇಬಲ್ ಮೇಲಿದ್ದ ಫೋಟೋ ಫ್ರೇಮ್ ಮೇಲೆ ಬಿತ್ತು. ಕಣ್ಣನ್ನು ಅಗಲಗೊಳಿಸಿ ನೋಡಿದ,

ತಾನೂ ರಾಧಾ ಒಟ್ಟಿಗೆಯಿರುವ ಮದುವೆಯ ಫೋಟೋ.

"ಅಯ್ಯೊ ದೇವರೇ! ನಿಜವಾಗಿಯೂ ನನ್ನ ರಾಧಾಳ ಮದುವೆ ಆಗಿ ಹೋಗಿದೆಯಾ? ಅವಳು ನನ್ನ ಕೆನ್ನೆಗೆ ಬಡಿದಳೆಂದು ನಾನು ತಿಳಿದುಕೊಂಡಿದ್ದು ಕೇವಲ ಭ್ರಮೆಯೇ?" ತನ್ನಷ್ಟಕ್ಕೆ ತಾನೇ ಅಂದುಕೊಂಡ. ಮತ್ತಷ್ಟು ಹೊತ್ತು ಆ ಫೋಟೋ ಕಡೆಗೇ ನೋಡುತ್ತಾ ಇದ್ದಂತೆ ಅದರಲ್ಲಿ ಸ್ವಲ್ಪ ವ್ಯತ್ಯಾಸ ಕಂಡಿತು ಅವನಿಗೆ– ಆಶ್ಚರ್ಯ ಮತ್ತಷ್ಟು ಹೆಚ್ಚಾಯಿತು. ತನಗೊಬ್ಬ ಡೂಪ್ಲಿಕೇಟ್ ಇದ್ದಾನೆಂದು ಖಾತ್ರಿಯಾಯಿತು. ಆದರೆ ರಾಧಾಳಿಗೂ ಡೂಪ್ಲಿಕೇಟ್ ಇರುವು ದೆಂದರೆ ಅವನಿಗೆ ತುಂಬಾ ಆಶ್ಚರ್ಯವಾಯಿತು.

ಸಾಮಾನ್ಯವಾಗಿ ಸಿನೆಮಾಗಳಲ್ಲಿ ಒಂದೇ ರೂಪದ ಇಬ್ಬರು ಹೀರೋಗಳಿ ರುತ್ತಾರೆ. ಆದರೆ ಈಗ–ಇಲ್ಲಿ– ನಿಜ ಜೀವನದಲ್ಲಿ ಕೇವಲ ಇಬ್ಬರು ಒಂದೇ ಹೀರೋಗಳು ಮಾತ್ರವಲ್ಲ. ಒಂದೇ ರೂಪದ ಇಬ್ಬರು ಹೀರೋಯಿನ್‌ಗಳು! ನಂಬಲೇ ಸಾಧ್ಯವಿಲ್ಲದಂತಹ ವಿಷಯ.

ಲಲಿತ ನಿದ್ರೆ ಹೋದ ಕೂಡಲೇ ತಾನು ಮೆಲ್ಲಗೆ ಎದ್ದು ಓಡಿ ಹೋಗ ಬೇಕೆಂದುಕೊಂಡ.

ಹೀಗೇ ನಡೆಯುತ್ತಿರಲಾಗಿ ತನ್ನ ಅಸಿಸ್ಟೆಂಟ್ ತಂದುಕೊಟ್ಟ ಕಾಗದ ವನ್ನು ಒಮ್ಮೆ ನೋಡಿದಳು ರಾಧಾ.

"ರಾಧಾ! ನನ್ನ ಡಾರ್ಲಿಂಗ್!" ಎಂಬ ಸಂಬೋಧನೆಯನ್ನು ನೋಡಿ ಬೆಚ್ಚಿ ಬಿದ್ದ ಳು.

"ಭದ್ರಾ!" ಕಿರುಚಿದಳು. ಭದ್ರ ಓಡೋಡಿ ಬಂದ.

"ಏನಮ್ಮಾ?''

"ಈ ಕಾಗದ ಯಾರು ಕೊಟ್ಟರು?''

"ಇನ್ಯಾರಮ್ಮಾ? ಆ ಸಾತ್ವಿಕರಾವೇ! ಏನಾದರೂ ತಪ್ಪು ಬರಿದಿದ್ದಾರಾ ಅಮ್ಮಾ?"

ಅನುಮಾನದಿಂದ ಕೇಳಿದ.

"ಇನ್ನೂ ಓದಿಲ್ಲ ನಾನು. ಹೋಗಿ ನಿನ್ನ ಕೆಲಸ ನೀನು ನೋಡಿಕೋ." ಅವನನ್ನು ಗದರಿಸಿ ಓಡಿಸಿದಳು. ಕಾಗದವನ್ನೆಲ್ಲಾ ಪೂರ್ತಿ ಓದಿದ ನಂತರ ಅವಳ ಮನಸ್ಸಿಗೆ ಒಂದು ರೀತಿ ಆಯಿತು. ಸಾತ್ವಿಕರಾವ್ ಆತ್ಮಹತ್ಯೆಗೆ ಪ್ರಯತ್ನಪಟ್ಟಿದ್ದು — ಅದೂ ತಾನು ಅವನನ್ನು ಮದುವೆಯಾಗಲು ಒಪ್ಪದಿದ್ದು ದಕ್ಕೆ ಅವಳಿಗೆ ಇಷ್ಟವಾಗಲಿಲ್ಲ.

"ಭದ್ರಾ!" ಮತ್ತಷ್ಟು ಜೋರಾಗಿ ಕರೆದಳು.

"ಏನಮ್ಮಾ!"

"ಸಾತ್ವಿಕರಾವ್ ಆತ್ಮಹತ್ಯೆ ಮಾಡಿಕೊಳ್ಳುತ್ತೇನೆಂದು ಬರೆದಿದ್ದಾನೆ. ಕೂಡಲೇ ಹೋಗಿ ಅದನ್ನು ತಡೆಯಬೇಕು. ಬೇಗ ಓಡು–"

"ಹಾಗಾದರೆ ಹೋಟೆಲ್?"

"ಮುಚ್ಚಿ ಬಿಡು. ಮನುಷ್ಯನೊಬ್ಬನ ಪ್ರಾಣಕ್ಕಿಂತಲೂ ಹೋಟೆಲ್ ಹೆಚ್ಚಲ್ಲ.''

"ಇಷ್ಟಕ್ಕೂ ಆತ ಏಕೆ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾನಮ್ಮಾ?"

''ನಾನು ಕೆನ್ನೆಗೆ ಬಾರಿಸಿದೆನೆಂದು."

''ನೀವು ಏಕೆ ಕೆನ್ನೆಗೆ ಬಾರಿಸಿದಿರಮ್ಮಾ?"

"ಷಟಪ್! ಮೊದಲು ಆತ ಆತ್ಮಹತ್ಯೆ ಮಾಡಿಕೊಳ್ಳುವ ಮುಂಚೆ ಹುಡಿಕಿ ಹಿಡಿಯಿರಿ. ಆಮೇಲೆ ಪ್ರಶ್ನೆಗಳನ್ನು ಹಾಕುವಿಯಂತೆ" ಅಸಹನೆಯಿಂದ ಹೇಳಿದಳು.

ಭದ್ರ ಕೂಡಲೇ ತನ್ನ ಅಸಿಸ್ಟೆಂಟನ್ನು ಕರೆದುಕೊಂಡು ರಸ್ತೆಗೆ ಬಂದ.

ಚಂದ್ರಬೋಸ್ ಕೆರೆಯ ಏರಿಯ ಮೇಲೆ ನಿಂತು ಸಾತ್ವಿಕರಾವ್ ಆತ್ಮಹತ್ಯೆ ಮಾಡಿಕೊಳ್ಳುವ ಪ್ರಯತ್ನವನ್ನು ನೋಡುತ್ತಿದ್ದ. ಅಷ್ಟು ಕಡಿಮೆ ನೀರಿನ ಮಟ್ಟವನ್ನು ಗಮನಿಸಿ ತಾನು ತನ್ನ ಆತ್ಮಹತ್ಯೆ ಸ್ಥಳವನ್ನು ಬದಲಾಯಿಸಿಕೊಳ್ಳಲು ನಿಶ್ಚಯಿಸಿದ.

ಆಟೋ ಹತ್ತಿ...''ಊರಿನ ಹೊರಗಿರುವ ರೈಲ್ವೆ ಟ್ರಾಕ್ ಬಳಿಗೆ ಬಿಡು" ಅಂದ.

''ಮತ್ತೆ ವಾಪಸ್ಸು ಬರ್ತೀರಾ ಸಾರ್?''

"ಅಯ್ಯೋ ಹುಚ್ಚ! ಹೋದವರಾರಾದರೂ ಮತ್ತೆ ವಾಪಸ್ಸು ಬರುತ್ತಾರಾ?" ಎಂದು ಹೇಳಿದ ವೇದಾಂತ ಹೇಳುವ ಧಾಟಿಯಲ್ಲಿ.

"ನಂಗೇ ಬೇಕಾಗಿದ್ದೂ ಅದೇ ಸಾರ್. ಹಾಗೆ ಸಾಯಬೇಕಾದರೆ ಸುಮ್ಮನೆ ನಮ್ಮಂಥ ಆಟೋದವರೊಡನೆ ಚೌಕಾಶಿ ಮಾಡ್ಕೊಂಡಿರಬಾರದು. ನೀವು ಹೇಗೂ ವಾಪಸ್ಸಾಗುವುದಿಲ್ಲ ಅಲ್ಲವೇ ಸಾರ್? ಮೀಟರ್ ಮೇಲೆ ಒಂದೈವತ್ತು ರೂಪಾಯಿ ಕೊಟ್ಬಿಡಿ."

ಚಂದ್ರಬೋಸ್ ಆಪ್ಯಾಯತೆಯಿಂದ ಅವನ ಭುಜ ತಟ್ಟಿದ.

''ಸರಿ...ನನ್ನ ಬಳಿಯಿರುವುದನ್ನೆಲ್ಲಾ ನಿನಗೇ ಕೊಟ್ಟುಬಿಡುತ್ತೇನೆ."

"ಥ್ಯಾಂಕ್ಯೂ ಸಾರ್."

ಆಟೋ ಊರ ಹೊರಗಿನ ರೈಲ್ವೆ ಟ್ರಾಕ್ ಬಳಿಗೆ ಬಂತು.

ತನ್ನ ಪರ್ಸಿನಲ್ಲಿದ್ದಷ್ಟು ಹಣವನ್ನೆಲ್ಲಾ ಆಟೋದವನಿಗೆ ಕೊಟ್ಟು, ರೈಲ್ವೆ ಟ್ರಾಕ್ ಮೇಲೆ ಮಲಗಿಕೊಂಡ. ಒಂದು ಗಂಟೆಯ ನಂತರ ಕಂಬಿಗಳನ್ನು ನೋಡುತ್ತಾ ಬಂದ ಗ್ಯಾಂಗ್‌ಮನ್ ಅವನನ್ನು ನೋಡಿದ.

''ಸಾಯೋದಿಕ್ಕೆ ಬಂದಿದೀರಾ ಸಾರ್? ಪಾಪ ದುರಾದೃಷ್ಟವಂತರು."

"ಯಾಕೆ?"

''ಹಿಂದಿನ ಸ್ಟೇಷನ್ ಹತ್ತಿರ ಆಕ್ಸಿಡೆಂಟ್ ಆಗಿರೋದ್ರಿಂದ ಇನ್ನೆರಡು ದಿನ ಯಾವ ರೈಲೂ ಬರೋದಿಲ್ಲ."

ಚಂದ್ರಬೋಸ್ ನಿರಾಸೆಯಿಂದ ಎದ್ದು ನಿಂತ.

''ನೀವು ಸಾಯಲೇಬೇಕೆಂದಿದ್ದರೆ ರೈಲಿನಲ್ಲಿ ಪ್ರಯಾಣ ಮಾಡಬೇಕು ಸಾರ್. ಕಂಬಿಗಳ ಮೇಲೆ ಮಲಗಿದರೆ ಸಾಯುವ ದಿನಗಳಲ್ಲ ಇವು."

ಗುರಿಯಿಲ್ಲದವನಂತೆ ರಸ್ತೆಯ ಮೇಲೆ ನಡೆಯತೊಡಗಿದ. ಅವನ ಮನಸ್ಸೆಲ್ಲಾ ಚಿಂತೆಯಿಂದ ಕೂಡಿತ್ತು. ಆಗ ಎದುರಾದ ಭದ್ರ. ಒಂದೇ ಓಟ ದಲ್ಲಿ ಅವನ ಬಳಿಗೆ ಬಂದು ಚಂದ್ರಬೋಸ್‌ನ ಕೈ ಹಿಡಿದ.

''ಗುರುಗಳೇ! ನೀವು ಆ ಕಾಗದವನ್ನು ನನ್ನ ಕೈಗೆ ಕೊಟ್ಟು ಹೋದಿರಿ. ಅಲ್ಲಿ ರಾಧಮ್ಮ ನಿಮ್ಮನ್ನ ಎಲ್ಲಿದ್ರೂ ಹುಡುಕಿ ತರುವಂತೆ ಆರ್ಡರ್ ಮಾಡಿದ್ದಾರೆ. ಅವರಿಗೆ ನಿಮ್ಮ ಬಗ್ಗೆ ನಿಜವಾಗಿಯೂ ಪ್ರೀತಿಯಿದೆ ಸಾರ್. ಮೇಲೆ ಮಾತ್ರ ಹಾಗೆ ನಟಿಸುತ್ತಾರೆ ಅಷ್ಟೆ. ಈ ಹೆಂಗಸರೆಲ್ಲಾ ಅಷ್ಟೇ ಸಾರ್."

"ಏಯ್ ಯಾರು ನೀನು?"

"ಅದೇನು ಸಾರ್ ಹಾಗೆ ಕೇಳ್ತೀರಿ! ಈಗ ಸ್ವಲ್ಪ ಹೊತ್ತಿಗೆ ಮುಂಚೆ ನೀವೇ ಆತ್ಮಹತ್ಯೆ ಲೆಟರ್ ಕೊಟ್ಟಿದ್ರಿ.''

"ನಾ ನಿನಗೆ ಲೆಟರ್ ಕೊಟ್ಟಿದ್ನಾ?"

''ಮರೆತುಬಿಟ್ರಾ ಸಾರ್?"

"ಷಟಪ್! ರಾಧಮ್ಮ ಯಾರು?''

"ಅದೇಕೆ ಸಾರ್ ..ಮತ್ತೆ ಹಾಗೇ ಮಾತಾಡ್ತಿದೀರಿ? ಓಹೋ ಅವರ ಮೇಲೆ ಕೋಪ ಬಂದು ಹಾಗನ್ನುತ್ತಿದ್ದೀರಾ ಸಾರ್? ನಾನು ಹೇಳಿದೆನಲ್ಲಾ ಸಾರ್...ಮೇಲೆ ಅವರು ಹಾಗೆ ಆಡಿದ್ರೂ ಒಳಗೆ ನಿಮ್ಮನ್ನ ತುಂಬಾ ಪ್ರೀತಿಸು ಸುತ್ತಿದ್ದಾರೇಂತ."

"ನಿನಗೆ ತಲೆ ಕೆಟ್ಟಿದೆ ಅಂದ್ರೆ ನನಗೂ ಕೆಟ್ಟಿದೆಯಾ? ನನಗೆ ಆಗಲೇ ಮದುವೆ ಆಗಿದೆ. ನನ್ನ ಹೆಂಡತಿ ಹೆಸರು ಲಲಿತಾ. ಈ ರಾಧಾ ಯಾರೋ ನಂಗೆ ಗೊತ್ತಿಲ್ಲ .."

ಭದ್ರ ಇನ್ನು ಲಾಭವಿಲ್ಲವೆಂದು ತನ್ನ ಅಸಿಸ್ಟೆಂಟ್ ಕಡೆ ನೋಡಿ ಏನೋ ಸನ್ನೆ ಮಾಡಿದ.

ಹತ್ತು ನಿಮಿಷಗಳಲ್ಲೇ ರಾಧಾಳನ್ನು ಕರೆತಂದ ಅಸಿಸ್ಟೆಂಟ್.

''ಏನ್ರೀ! ಏನೋ ಸಿಟ್ಟಿನಲ್ಲಿ ನಿಮ್ಮ ಕೆನ್ನೆಗೆ ಹೊಡ್ದೆ ಅಂತ ಆತ್ಮಹತ್ಯೆ ಮಾಡಿಕೊಳ್ತಿದೀರಲ್ಲಾ...ಬನ್ನೀ ಮನೆಗೆ ಹೋಗೋಣ.''

"ಏನು ನೀನು ಮಾತಾಡ್ತಿರೋದು?" ಅವಳನ್ನು ಲಲಿತ ಅಂದುಕೊಂಡು ಆಶ್ಚರ್ಯದಿಂದ ಕೇಳಿದ ಚಂದ್ರಬೋಸ್. "ನಾನು ನಿನಗೆ ಆತ್ಮಹತ್ಯೆ ಮಾಡಿ ಕೋಳ್ತೀನೀಂತ ಕಾಗದ ಬರೆದಿದ್ನಾ?''

"ಹೌದ್ರೀ! ಇಷ್ಟಕ್ಕೆ ಮುಂಚೆ ನೀವೇ ನಮ್ಮ ಹೋಟೆಲ್ಲಿಗೆ ಬಂದು ಬರೆದು ಕೊಟ್ಟು ಹೋಗಿದ್ರಲ್ಲಾ–" ಅನುಕಂಪದಿಂದ ಕೇಳಿದಳು ರಾಧಾ.

"ನಮ್ಮ ಹೋಟೆಲ್ಲಾ? ಏನು ನೀನು ಮಾತಾಡ್ತಿರೋದು? ನಿನ್ನ ತಲೆ ಕೆಟ್ಟಿದೆ."

"ಏನ್ರೀ ನೀನೂ–ತಾನೂ" ಅಂತೀರಾ? ನಾನೇನು ನಿಮ್ಮ ಹೆಂಡ್ತಿ ಆಗಿಲ್ಲ ಇನ್ನೂ."

"ಏನು! ನೀನು ನನ್ನ ಹೆಂಡ್ತಿ ಅಲ್ವಾ" ಎನ್ನುತ್ತಾ ಅವಳ ಕತ್ತಿನ ಕಡೆ ನೋಡಿ ಸ್ಥಭ್ದನಾದ.

"ಅಯ್ಯೋ ಪಾಪಿ! ಜಗಳ ಆಡಿದ್ದಿಕ್ಕಷ್ಟೇ ತಾಳೀನೂ ತೆಗೆದುಬಿಟ್ಟಿದ್ದಿಯಲ್ಲೇ"

ಚಂದ್ರಬೋಸ್‌ಗೆ ಮೈಯ್ಯೆಲ್ಲಾ ಉರಿಯಿತು.

"ನಿನಗೆ ನಾಚಿಕೆ ಆಗೋಲ್ವಾ ಹಾಗೆ ಮಾಡೋಕೆ? ಅದೂ ಹೆಸರು ಬೇರೆ ಬದಲಾಯಿಸಿಕೊಂಡಿದ್ದಿ 'ರಾಧಾ' ಅಂತ, ಇನ್ಯಾವೋನ್ನೋ ಮದುವೆ ಆಗ್ಬೇಕಂತಾನಾ ನಿನ್ನ ಪ್ಲಾನು?" ಸಿಡಿಮಿಡಿಗುಟ್ಟುತ್ತಾ ಕೇಳಿದ.

"ಭದ್ರ! ಈತನಿಗೆ ಹುಚ್ಚು ಹಿಡಿದಿದೆ. ಕೂಡಲೇ ಮೆಂಟಲ್ ಆಸ್ಪತ್ರೆಗೆ ಕರೆದುಕೊಂಡು ಹೋಗದಿದ್ರೆ ಇನ್ನಷ್ಟು ಹೆಚ್ಚಾಗುತ್ತೆ."

"ಹೌದಮ್ಮಾ! ನಾನೂ ಅದನ್ನೇ ಯೋಚಿಸ್ತಿದೀನಿ. ಇರಿ– ಟ್ಯಾಕ್ಸಿ ತರ್ತೀನಿ."

"ಏನು? ನನಗೆ ಹುಚ್ಚು ಹಿಡಿದಿದೆಯಾ? ಈ ರೀತಿ ನನ್ನ ಪೀಡೆ ಕಳ್ಕೊಳ್ಳೋಣ ಅಂತ ಪ್ಲಾನ್ ಹಾಕ್ತಿದ್ದೀಯಾ?" ಮತ್ತಷ್ಟು ಜೋರಾಗಿ ಕಿರುಚಿದ.

ಅಷ್ಟರಲ್ಲಿ ಭದ್ರ ಟ್ಯಾಕ್ಸಿ ತಂದಿದ್ದ.

ಅಲ್ಲಿದ್ದ ಜನರ ಸಹಾಯದೊಡನೆ ಚಂದ್ರಬೋಸ್‌ನನ್ನು ಟ್ಯಾಕ್ಸಿಯಲ್ಲಿ ತಳ್ಳಿದರು.

ಸೈಕಿಯಾಟ್ರಿಸ್ಟ್ ಅವನನ್ನು ಕಿರುನಗೆಯಿಂದ ಸ್ವಾಗತಿಸಿದ.

''ವಾಟ್ ಈಸ್‌ದಿ ಪ್ರಾಬ್ಲಮ್?'' ರಾಧಾಳನ್ನು ಕೇಳಿದ.

"ನಾನು ಮದುವೆ ಆಗೋಕೆ ನಿರಾಕರಿಸಿದೇಂತ ಆತ್ಮಹತ್ಯೆ ಮಾಡಿಕೊಳ್ಳೋಕೆ ಪ್ರಯತ್ನಿಸಿದರು ಸಾರ್! ಹೇಗೋ ಹುಡುಕಿ ಕರೆದು ತಂದ್ರೆ– ತಲೆಕೆಟ್ಟಿದೆ

ನೋಡಿ."

"ಎಲ್ಲಾ ಸುಳ್ಳು ಡಾಕ್ಟರ್! ನನ್ನ ಹೆಂಡತಿಯನ್ನೇ ಮದುವೆ ಆಗೂಂತ ನಾನ್ಯಾಕೆ ಕೇಳ್ಲಿ ಡಾಕ್ಟರ್? ತಾನೇ ಮಂಗಳಸೂತ್ರವನ್ನು ಕಡಿದುಕೊಂಡು ಹೆಸರನ್ನು ಬದಲಾಯಿಸಿಕೊಂಡಿದ್ದಾಳೆ."

"ಓಹೋ ಹಾಗಾ! ಬನ್ನಿ ಒಳಗೆ ಮಾತಾಡೋಣ," ಡಾಕ್ಟರ್ ಹೇಳಿದರು.

ಇಬ್ಬರೂ ಒಳಗೆ ಹೋದರು,

"ಏನು ನಡೀತು ಅಂದ್ರೆ ಡಾಕ್ಟರ್-'' ಎನ್ನುತ್ತಿದ್ದಂತೆಯೇ ಚಂದ್ರಬೋಸನನ್ನು ಇಬ್ಬರು ಬಂದು ಬಿಗಿಯಾಗಿ ಹಿಡಿದುಕೊಂಡು, ಒಂದು ಟೇಬಲ್ ಮೇಲೆ ಮಲಗಿಸಿ ಬೆಲ್ಟ್‌ನಿಂದ ಬಿಗಿದರು. ಅನಂತರ ಏನು ನಡೆಯಿತೆಂದೇ ಚಂದ್ರಬೋಸ್‌ಗೆ ತಿಳಿಯಲಿಲ್ಲ. ಮತ್ತೆ ಕಣ್ಣು ಬಿಡುವ ವೇಳೆಗೆ ಒಂದು ಮಂಚದ ಮೇಲೆ ಮಲಗಿದ್ದ. ತನ್ನೆಡೆಗೇ ಆತುರದಿಂದ ನೋಡುತ್ತಿದ್ದ ರಾಧಾಳ ಕಣ್ತುಂಬಾ ನೀರು ತುಂಬಿತ್ತು.

''ಹೇಗಿದೆ ಸಾತ್ವಿಕ್ ಈಗ? ನನ್ನ ನೆನಪು ಬಂತಾ?" ಪ್ರೀತಿಯಿಂದ ಕೇಳಿದಳು.

"ಸಾತ್ವಿಕ್ಕಾ? ಯಾವ ಸಾತ್ವಿಕ್? ನನ್ನ ಹೆಸರು ಚಂದ್ರಬೋಸ್. ನೀನೇ ಹೆಸರನ್ನು ಬದಲಾಯಿಸಿಕೊಂಡು ಇನ್ಯಾರೋ ಸಾತ್ವಿಕ್ ಜೊತೆ ಓಡಿ ಹೋಗೋ ಪ್ರಯತ್ನ ಮಾಡ್ತಿದ್ದೀಯಾ! ಅದಕ್ಕೆ ನನ್ನನ್ನು ಹುಚ್ಚು ಆಸ್ಪತ್ರೆಯಲ್ಲಿ ಸೇರಿಸಿದ್ದಿ"

''ನೋಡಿದಿರಾ ಡಾಕ್ಟರ್! ನಿಮ್ಮ ಷಾಕ್ ಟ್ರೀಟ್‌ಮೆಂಟ್ ಸ್ವಲ್ಪಾನೂ ಕೆಲಸ ಮಾಡಿಲ್ಲ,''

''ನೀವೇನು ಯೋಚನೆ ಮಾಡ್ಬೇಡಿ. ಇನ್ನೊಂದು ಷಾಕ್ ಕೊಡ್ತೀನಿ," ಡಾಕ್ಟರ್ ಹೇಳಿದರು.

ಚಂದ್ರಬೋಸ್ ಬೆಚ್ಚಿಬಿದ್ದ. ತಾನೀಗ ಅವರು ಹೇಳಿದಂತೆ ಆಡದಿದ್ದರೆ ತನಗೆ ಒಂದಾದ ಮೇಲೊಂದರಂತೆ ಷಾಕ್ ಟ್ರೀಟ್‌ಮೆಂಟ್ ಕೊಡುತ್ತಿರುತ್ತಾರೆ. ಕೂಡಲೇ ಮಾತು ಬದಲಿಸಿದ.

"ಹಲೋ ರಾಧಾ! ಸಾರೀ ರಾಧಾ! ನಿನ್ನನ್ನು ಇದುವರೆವಿಗೂ ಲಲಿತ ಅಂದುಕೊಂಡಿದ್ದೆ."

ರಾಧಾಳ ಮುಖ ಅರಳಿತು.

"ಅಬ್ಬ— ಸಧ್ಯ! ಇಷ್ಟು ಬೇಗ ಗುಣವಾಯ್ತಲ್ಲಾ. ಇವು ಎಷ್ಟು ಬೆರಳು ಅಂತ ಹೇಳಿ ನೋಡೋಣ'' ಎಂದಳು ನಾಲ್ಕು ಬೆರಳುಗಳನ್ನು ತೋರಿಸಿ;

"ನಾಲ್ಕು ಬೆರಳುಗಳು ರಾಧಾ" ತಡಬಡಿಸದೆ ಹೇಳಿದ ಚಂದ್ರಬೋಸ್.

''ವೆರಿಗುಡ್! ಇನ್ನು ಇವರನ್ನು ಮನೇಗೆ ಕರ್ಕೊಂಡ್ಹೋಗಿ'' ಡಾಕ್ಟರ್ ಹೇಳಿದರು.

ಎಲ್ಲರೂ ಟ್ಯಾಕ್ಸಿಯಲ್ಲಿ ಮನೆ ಸೇರಿಕೊಂಡರು.

''ಬನ್ನಿ– ಇದೇ ನಮ್ಮನೆ'' ಬಾಗಿಲನ್ನು ತೆರೆಯುತ್ತಾ ಅವಳು ಹೇಳಿದಳು

"ಮುಂದಿನವಾರವೇ ನಾವು ಗುಡಿಗೆ ಹೋಗಿ ಹಾರಗಳನ್ನು ಬದಲಾಯಿಸಿ ಕೊಳ್ಳೋಣ ಸರೀತಾನೇ?''

''ಆ್ಞ! ಮದುವೆಯಾ? ಮತ್ತೆ ಲಲಿತಾ?'' ಕಂಗಾಲಾಗಿ ಅಂದು 'ಪಾರ್ಕ್'ನ ನೆನಪಾಗಿ ಕೂಡಲೇ ಮಾತನ್ನು ಬದಲಾಯಿಸಿದ. ''ಆ್ಞ ಮದು ವೆಯಾ? ಅಂದರೆ ನೀನು ಒಪ್ಪಿಕೊಂಡಿ ಅಂತಾಯಿತು.'' ಸಂತೋಷವನ್ನು ನಟಿ ಸುತ್ತಾ ಹೇಳಿದ.

',ಹೌದ್ರೀ! ನಮ್ಮ ಡ್ಯಾಡೀಗೆ ಟೆಲಿಗ್ರಾಂ ಕೊಟ್ಟಿದೀನಿ ನಾಳೆ ಬರ್ತಾರೆ–"

"ಆ...ಆ...ಹೌದ್ಹೌದು ನಿಮ್ಮ ಡ್ಯಾಡಿ...ನಿಮ್ಮ ಡ್ಯಾಡಿ..." ತೊದಲಿದ.

"ಅವರು ಸೈನ್ಯದಲ್ಲಿ ಕರ್ನಲ್ ತಾನೇ! ನನ್ನ ಸ್ವಂತ ವಿಷಯದಲ್ಲಿ ನನಗೇ ಸಂಪೂರ್ಣ ಸ್ವಾತಂತ್ರ್ಯ ಕೊಟ್ಟಿದ್ದಾರೆ. ಅದಕ್ಕೇ ಸೆಲ್ಫ್ ಎಂಪ್ಲಾಯ್‌ಮೆಂಟ್ ಸ್ಕೀಮಿನಲ್ಲಿ ಹೋಟೆಲಿಟ್ಟು ನನ್ನ ಕಾಲಮೇಲೆ ನಾನು ನಿಂತಿದ್ದೀನಿ."

ಚಂದ್ರಬೋಸ್‌ಗೆ ಎಲ್ಲಾ ಅಗಮ್ಯವಾಗಿದೆ. ಸ್ವಲ್ಪ ಹೊತ್ತು ಹೋಟೆಲ್ ಅನ್ನುತ್ತಾಳೆ.. ಆಮೇಲೆ ಮದುವೆ ಅನ್ನುತ್ತಾಳೆ. ಇದೇನೋ ರಹಸ್ಯ ಅಗಿದೆ. ಹಾಳಾದ್ದು ಲಲಿತಳ ಹೋಲಿಕೆಯಿರುವ ಮತ್ತೊಂದು ಹುಡುಗಿಯಲ್ಲವಲ್ಲಾ ಈ ರಾಧಾ? ಅವನ ಎದೆ ಜೋರಾಗಿ ಬಡಿದುಕೊಂಡಿತು. ಹೌದು! ಹಾಗೆ ನಡೆಯುವ ಅವಕಾಶಗಳಿವೆ. ಹೋಗಲಿ ಹಾಗೇ ಆದರೂ ನನ್ನನ್ನೇಕೆ ಸಾತ್ವಿಕರಾವ್ ಅನ್ನುತ್ತಾಳೆ?

ಸಾಧ್ಯವಾದಷ್ಟು ಬೇಗ ಈ ಮನೆಯಿಂದ ಓಡಿಹೋಗಬೇಕು.

''ನೀವು ಆ ರೂಮಿನಲ್ಲಿ ಮಲಗಿಕೊಳ್ಳಿ! ಸ್ವಲ್ಪ ಹೊತ್ತು ರೆಸ್ಟ್ ತಗೊಂಡರೆ ನಾರ್ಮಲ್ ಆಗುತ್ತೀರಿ" ಎನ್ನುತ್ತಾ ಹೊರಗೆ ನಡೆಯುತ್ತಾ ಬಾಗಿಲು ಮುಚ್ಚಿ ಕೊಂಡಳು.

ಅವಳು ಹೊರಡುತ್ತಿದ್ದಂತೆಯೇ ಟೇಬಲ್ ಬಳಿಗೆ ನಡೆಯುತ್ತಾ ಅಲ್ಲಿದ್ದ ಫೋಟೋ ಫ್ರೇಮ್ ನೋಡಿದ.

ರಾಧಾ, ಅವಳ ತಂದೆ ತಾಯಿಯರೊಡನೆ ತೆಗೆಸಿಕೊಂಡಿದ್ದ ಫೋಟೋ. ಲಲಿತ ತಂದೆ–ತಾಯಿಯರಂತಿಲ್ಲ. ಸೋ...ಲಲಿತ ಬೇರೆ.. ರಾಧಾ ಬೇರೆ... ಅರ್ಧರಾತ್ರಿ ಯಾವಾಗಾಗುತ್ತದೆಂದು ಕಾಯುತ್ತಿದ್ದ.

ಆನಂದರಾವ್ ಸಂತೋಷದಿಂದ ಶಿಳ್ಳೆ ಹಾಕುತ್ತಾ ರಸ್ತೆಯ ಮೇಲೆ ಬಂದ. ಜಯಲಕ್ಷ್ಮಿಯನ್ನು ಮೋಸದಿಂದ ಅನುಭವಿಸಿದ ನಂತರ ಈಗ ಮತ್ತೊಂದು ಹುಡುಗಿ ಬೇಕೆನ್ನಿಸಿದೆ. ರಸ್ತೆಯಲ್ಲಿ ಸುತ್ತುತ್ತಿದ್ದಂತೆಯೇ ಅವನಿಗೆ ಹಠಾತ್ತನೆ ರಾಧಾ ನೆನಪಾದಳು. ಅವಳ ನೆನಪಾಗುತ್ತಿದ್ದಂತೆಯೇ ಅವನ ಮೈಯ್ಯೆಲ್ಲಾ ಬಿಸಿಯಾಯಿತು.

"ಅಬ್ಬಾ! ಎಂತಹ ಸೆಕ್ಸೀ ಫಿಗರ್" ಅಂದುಕೊಂಡ ಮನಸ್ಸಿನಲ್ಲೇ.

ಆ ದಿನ ಹೋಟೆಲಿನಲ್ಲಿ ಕಾಫಿ ಕುಡಿಯುತ್ತಿದ್ದಾಗ ಕೌಂಟರ್ ಬಳಿ ಕುಳಿತಿದ್ದ ಅವಳನ್ನು ಕಂಡಿದ್ದ. ಅಷ್ಟೇ...ಹೇಗಾದರೂ ಅವಳನ್ನು ಸ್ವಂತ ಮಾಡಿಕೊಳ್ಳ ಬೇಕೆನ್ನಿಸಿತ್ತು. ಅದಕ್ಕೇ ರಾತ್ರಿ ಸಾಹಸಮಾಡಿ ಅವಳ ಮನೆಗೆ ನುಗ್ಗಿದ. ಆದರೆ ಬದುಕಿನಲ್ಲಿ ಮೊಟ್ಟಮೊದಲನೆ ಸಲ ತಾನು ಅವಳಿಂದ ಅಪಜಯ ಅನುಭವಿಸಿದ. ಅವಳು ತನ್ನ ರೂಪಕ್ಕೆ ಮರುಳಾಗಲಿಲ್ಲ. ಆದರೆ ಅವಳ ರೂಪ ಮಾತ್ರ ತನ್ನ ಮನಸ್ಸಿನಲ್ಲಿ ಉಳಿದುಬಿಟ್ಟಿತು. ಆಗಾಗ ನೆನಪಾಗಿ ಮನಸ್ಸನ್ನು ಕಲಕುತ್ತಿರುತ್ತಾಳೆ. ನಿಧಾನವಾಗಿ ಅವಳ ಮನೆಯ ಕಡೆಗೆ ಹೆಜ್ಜೆ ಹಾಕಿದ. ಆಗ ರಾತ್ರಿ ಹತ್ತು ಗಂಟೆಯಾಗಿದ್ದರಿಂದ ರಸ್ತೆಯೆಲ್ಲಾ ನಿರ್ಜನವಾಗಿತ್ತು. ರಾಧಾಳ ಮನೆಯ ಕಾಂಪೌಂಡಿನ ಒಳಗೆ ಬಂದು ಕಿಟಕಿಯಲ್ಲಿ ಬಗ್ಗಿ ನೋಡಿದ. ರಾಧಾ ನೀಲಿ ಬಲ್ಬಿನ ಬೆಳಕಿನಲ್ಲಿ ಮತ್ತಷ್ಟು 'ಬ್ಲೂ' ಆಗಿ ಕಾಣುತ್ತಿದ್ದಾಳೆ...ಹಾಸಿಗೆಯ ಮೇಲೆ.

ಮನೆಯೊಳಗೆ ಹೇಗೆ ನುಸುಳಬೇಕೆಂದೇ ಅವನಿಗರ್ಥವಾಗಲಿಲ್ಲ. ಸರಿಯಾಗಿ ಅದೇ ಸಮಯಕ್ಕೆ ಬಾಗಿಲು ತೆಗೆಯುವ ಸಪ್ಪಳವಾಗಿ, ಹೂವಿನ ಗಿಡಗಳ ಮರೆಯಲ್ಲಿ ಕುಳಿತ ಆನಂದರಾವ್.

ಒಳಗಿನಿಂದ ಚಂದ್ರಬೋಸ್ ಕಳ್ಳನಂತೆ ಹೆಜ್ಜೆ ಹಾಕುತ್ತಾ ಹೊರಬಂದು ಅಲ್ಲಿಂದ ವೇಗವಾಗಿ ಓಡಲು ಪ್ರಾರಂಭಿಸಿದನು. ಲೈಟಿನ ಬೆಳಕಿನಲ್ಲಿ ಸಂಪೂರ್ಣ ತನ್ನಂತೆಯೇ ಇದ್ದ ಚಂದ್ರಬೋಸ್‌ನನ್ನು ಕಂಡು ಆಶ್ಚರ್ಯಪಟ್ಟ ಆನಂದರಾವ್. ಇಷ್ಟು ಹೋಲಿಕೆಯಾ? ತಕ್ಷಣ ಅವನಿಗೆ ಅದ್ಭುತವಾದ ಉಪಾಯ ಹೊಳೆಯಿತು. ತನ್ನ ಹೋಲಿಕೆಯಿರುವವನೊಡನೆ ಈ ರಾಧಾಗೆ ಸಂಬಂಧವಿರುವಂತಿದೆ. ಆದ್ದರಿಂದ ತಾನೀಗ ಒಳಗೆ ಸೇರಿಕೊಂಡರೆ ಆ ವ್ಯಕ್ತಿಯೆಂದುಕೊಳ್ಳುತ್ತಾಳೆ. ಸೋ...ತನ್ನ ಬಯಕೆ ಇಂದು ಈಡೇರಲಿದೆ.

ಚಕಚಕನೆ ಒಳಗೆ ನಡೆದ ಅವನು. ರಾಧಾಳ ಕೋಣೆಯ ಬಾಗಿಲು ಮುಚ್ಚಿತ್ತು. ನಿಧಾನವಾಗಿ ಬಾಗಿಲನ್ನು ತಳ್ಳಿಕೊಂಡು ಒಳಗೆ ಹೋದ. ರಾಧಾಳ ಸೌಂದರ್ಯ ಅವನಿಗೆ ಹುಚ್ಚು ಹಿಡಿಸಿತ್ತು. ನಿಧಾನವಾಗಿ ಅವಳೆಡೆಗೆ ಬಗ್ಗಿ ಅವಳ ತುಟಿಗೆ ತನ್ನ ತುಟಿಯನ್ನು ಬೆಸೆದ. ರಾಧಾ ಚಕ್ಕನೆ ಕಣ್ಬಿಟ್ಟು ನೋಡಿದಳು.

''ನೀವಾ?" ಆಶ್ಚರ್ಯದಿಂದ ಕೇಳಿದಳು.

ಆನಂದರಾವ್ ಸಂಪೂರ್ಣವಾಗಿ ಅವಳ ಮೇಲೇ ಮಲಗಿದ.

''ಹೌದು. ನಾನೇ'' ಅಂದ ಕಿರುನಗುತ್ತಾ.

ಅವಳು ಮುಜುಗರದಿಂದ ಅವನ ಹಿಡಿತವನ್ನು ತಪ್ಪಿಸಿಕೊಂಡು ಪಕ್ಕಕ್ಕೆ ಹೊರಳಿದಳು.

"ಹೋಗಿ ನಿಮ್ಮ ಕೋಣೆಯಲ್ಲಿ ಮಲಗಿಕೊಳ್ಳಿ" ಸೂಕ್ಷ್ಮವಾಗಿ ಹೇಳಿದಳು.

''ಉಹ್ಞೂ! ನಿದ್ರೆ ಬರುತ್ತಿಲ್ಲ'' ಮತ್ತಷ್ಟು ಗಾಢವಾಗಿ ಆಲಿಂಗಿಸಿ ಕೊಳ್ಳುತ್ತಾ ಹೇಳಿದ.

ರಾಧಾಳಿಗೆ ಕೋಪ ಬಂದರೂ ತಡೆದುಕೊಂಡು,

"ಹೀಗೆ ನನಗೆ ಈಗಲೇ ಇಷ್ಟವಿಲ್ಲ, ಮದುವೆಯಾದ ಮೇಲೆ ನಿಮ್ಮಿಷ್ಟ ದಂತೆ ..'' ಅಂದಳು ಮತ್ತಷ್ಟು ದೂರ ಸರಿಯುತ್ತಾ.

"ಮದುವೆದೇನಿದೆ. ಯಾವಾಗಂದರೆ ಆವಾಗ. ಈಗ ಬೇಕಾದರೆ ಈಗಲೇ" ಅಂದ.

ರಾಧಾಳಿಗೆ ಆಶ್ಚರ್ಯವಾಯಿತು. ಇಷ್ಟಕ್ಕೆ ಮುಂಚೆ 'ನೀನು ರಾಧಾ ಅಲ್ಲ, ನನಗೆ ಲಲಿತಳೊಡನೆ ಮದುವೆ ಆಗಿದೆ. ಇದು ನಮ್ಮ ಮನೆಯಲ್ಲ' ಎಂದೆಲ್ಲಾ ಒದರಿದ್ದ ವ್ಯಕ್ತಿ ಇವನೇನಾ? ಅವನನ್ನು ಪಕ್ಕಕ್ಕೆ ತಳ್ಳಿ ಎದ್ದು ನಿಂತಳು.

"ನಮ್ಮ ಡ್ಯಾಡಿ ನಾಳೆ ಬರ್ತಾರಲ್ಲಾ, ಆಗ ಮದುವೆ ಡೇಟ್‌ನ ಫಿಕ್ಸ್ ಮಾಡೋಣ. ಇನ್ನೆಷ್ಟು ದಿನ? ಮಹಾ ಅಂದರೆ ಒಂದು ವಾರ! ಅಷ್ಟು ತಡಿ ಯೋಕೆ ಆಗೋಲ್ವಾ?''

"ವಾರವೇನು? ವರ್ಷಾನುಗಟ್ಟಲೆ ಬೇಕಾದರೆ ಕಾಯುತ್ತೇನೆ ನಿನಗಾಗಿ. ಆದರೆ ಈ ಒಂದು ರಾತ್ರಿ...''

"ಐಯಾಮ್ ಸಾರಿ..." ಖಂಡಿತವಾಗಿ ಹೇಳಿದಳು.

''ಪ್ಲೀಸ್...ರಾಧಾ...ಈ ರಾತ್ರಿ ಒಂದ್ಸಲ.''

"ಬೆಚ್ಚಗೆ ಕಂಬಳಿಹೊದ್ದು ಮಲಗಿ" ಎನ್ನುತ್ತಾ ಅವನನ್ನು ಮಂಚದ ಮೇಲೆ ತಳ್ಳಿ ತಾನು ರೂಮಿನಿಂದ ಹೊರಗೋಡಿ ಬಾಗಿಲಿನ ಚಿಲಕವನ್ನು ಹೊರಗಿ

ನಿಂದ ಹಾಕಿದಳು.

"ರಾಧಾ...ರಾಧಾ...ಒಂದು ಸಲ ಬಾಗಿಲು ತೆಗೆಯೇ. ನಾನು ನಮ್ಮ ಮನೇಗೆ ಹೋಗಿ ಮಲಗುತ್ತೀನಿ ಪ್ಲೀಸ್' ಎಂದು ಅವನೆಷ್ಟು ಕೇಳಿಕೊಂಡರೂ ಲಾಭವಿಲ್ಲದೆ ಹೋಯಿತು. ವಿಧಿಯಿಲ್ಲದೆ ಮಂಚದ ಮೇಲೆ ಮಲಗಿದ.

ರಾಧಾಳ ಕೈಯ್ಯಲ್ಲಿ ಎರಡನೆ ಸಲ ಪೆಟ್ಟು ತಿಂದ. ಇವಳನ್ನು ಹೇಗಾದರೂ ಮದುವೆಯಾಗಿಯಾದರೂ ಸರಿ...ಒಂದು ಸಲ ಅನುಭವಿಸಿಬಿಡಬೇಕು... ಅಂದುಕೊಂಡ ಆನಂದರಾವ್.

ಸಾತ್ವಿಕರಾವ್ ಕಣ್ಣುಬಿಟ್ಟು ನೋಡಿದ ಗಡಿಯಾರದ ಕಡೆ. ಸರಿಯಾಗಿ ರಾತ್ರಿ ಹನ್ನೊಂದೂವರೆ ಆಗಿದೆ. ತನ್ನ ಕಾಲಿನ ಮೇಲೆ ತನ್ನ ಕಾಲನ್ನು ಹಾಕಿಕೊಂಡು ನಿದ್ರಿಸುತ್ತಿದ್ದಾಳೆ ಲಲಿತ.

ನಿಧಾನವಾಗಿ ಅವಳ ಕಾಲುಗಳನ್ನು ಪಕ್ಕಕ್ಕೇ ಸರಿಸಲು ಪ್ರಯತ್ನಿಸಿದ. ಆದರೆ ಅವಳು ಮತ್ತಷ್ಟು ಹತ್ತಿರವಾಗಹತ್ತಿದಳು.

ಕೆಲ ನಿಮಿಷಗಳ ನಂತರ ಅವಳಿಗೆ ಸಂಪೂರ್ಣ ಎಚ್ಚರವಾಯಿತು. ಅವನು ಕೂಡಾ ಎಚ್ಚರವಾಗಿರುವುದನ್ನು ಕಂಡು, "ಏನು? ಬೇಕಾ?" ಎನ್ನುತ್ತಾ ಅವನ ಮೇಲೆ ಮಲಗಿ ಅವನನ್ನು ಚುಂಬಿಸಿದಳು ಗಾಢವಾಗಿ. ಸಾತ್ವಿಕರಾವ್ ಇನ್ನು ತಡೆದುಕೊಳ್ಳಲಾರದೆ ಹೋದ. ಯಾವ ಕ್ಷಣದಲ್ಲಾದರೂ ಅವನು ಸೋತು ಹೋಗುವ ಪರಿಸ್ಥಿತಿ ಉಂಟಾಗಿತ್ತು. 'ತನ್ನದು ತಪ್ಪು' ಎಂಬ ಬಾವನೆ ಕ್ರಮೇಣ ಹೆಚ್ಚಾಗುತ್ತಿತ್ತು.

ತನ್ನನ್ನು ತನ್ನ ಗಂಡನೆಂದುಕೊಂಡು ಅವಳು ಈ ರೀತಿ ವರ್ತಿಸುತ್ತಿರುವುದರಿಂದ ಅವಳನ್ನು ಅನುಭವಿಸುವುದು ಅವಳಿಗೆ ಮೋಸಮಾಡಿದಂತೆಯೇ ಅನ್ನಿಸಿತು ಅವನಿಗೆ.

"ಈ ಒಂದು ರಾತ್ರಿಯಾದರೂ ನೀವು ಆ ಸೈನ್ಸ್ ಪುಸ್ತಕಗಳನ್ನು ಮರೆತು ಬಿಡ್ರಿ. ನಮ್ಮ ಮದುವೆಯಾದ ಮೊದಲ ರಾತ್ರಿ ಸರಿಯಾಗಿ ಇದೇ ಸಮಯಕ್ಕೆ ಒಂದಾಗಿದ್ದೆವು. ಅದಕ್ಕೆ ಈಗಲೂ..."

ಸಾತ್ವಿಕರಾವ್ ಅವಳ ತುಟಿಗೆ ತುಟಿ ಸೋಕಿಸದೆ ವಿಧಿಯಿರಲಿಲ್ಲ. ಅಷ್ಟರಲ್ಲೇ ಅವನ ಅಂತರಾತ್ಮ ಕಿಟಾರನೆ ಕಿರುಚಿತು.

'ತಪ್ಪು' 'ತಪ್ಪು' 'ತಪ್ಪು' ಎನ್ನುವಂತೆ ಯಾರದೋ ಧ್ವನಿ ಮನೆತುಂಬ ಪ್ರತಿಧ್ವನಿಸುತ್ತಿತ್ತು. ಒಂದೇ ನೆಗೆತದಲ್ಲಿ ಮಂಚದಿಂದ ಹಾರಿ ನಿಂತ ಸಾತ್ವಿಕರಾವ್.

"ಈಗಲೇ ಬಾತ್‌ರೂಮಿಗೆ ಹೋಗಿ ಬರುತ್ತೇನೆ" ಎಂದು ಹೊರ ನಡೆದು, ಬಾಗಿಲಿನ ಶಬ್ದವಾಗದಂತೆ ರಸ್ತೆಯನ್ನು ಸೇರಿಕೊಂಡ. ಅಲ್ಲಿಂದ ಶರವೇಗದೊಡನೆ ತನ್ನ ಮನೆ ಕಡೆಗೆ ಓಡಲು ಪ್ರಾರಂಭಿಸಿದ. ಅದೇ ಸಮಯಕ್ಕೆ ಸರಿಯಾಗಿ ಮನೆಗೆ ವಾಪಸ್ಸಾದ ಚಂದ್ರಬೋಸ್ ಮೆಲ್ಲನೆ ಒಳನಡೆದು ನಗ್ನವಾಗಿ ಮಲಗಿದ್ದ ತನ್ನ ಹೆಂಡತಿಯನ್ನು ನೋಡಿದ. ಅದುವರೆವಿಗೂ ತನಗೂ ತನ್ನ ಹೆಂಡತಿಗೂ ಭೇದ ಭಾವನೆ ಜಗಳಗಳು ಉಂಟಾಗಲು ಕಾರಣ ಕೇವಲ 'ಸೆಕ್ಸ್' ಎಂದು ಅವನಿಗೀಗ ಅರ್ಥವಾಯಿತು.

"ಹಾಗೇಕೆ ನೋಡ್ತಾ ನಿಂತುಬಿಟ್ರೀ...ಬನ್ನೀ ಪ್ಲೀಸ್" ಅರೆಗಣ್ಣುಗಳಿಂದಲೇ ಆತುರದ ಆಹ್ವಾನ ನೀಡಿದಳು ಲಲಿತಾದೇವಿ. ಚಂದ್ರಬೋಸ್ ಒಂದು ನಿರ್ಧಾರ ತೆಗೆದುಕೊಂಡ.

ಇನ್ನು ಜನ್ಮದಲ್ಲಿ ಬೇಡವೆನ್ನುವಷ್ಟು ವಿರಕ್ತಿ ಉಂಟಾಗುವಂತೆ ಅವಳನ್ನು ಪ್ರಣಯ ಲೀಲೆಯಲ್ಲಿ ಮುಳುಗಿಸಬೇಕು ತಾನೀಗ.

ತಾನು ಇಲಿಯ ಮೇಲೆ ಪ್ರಯೋಗಿಸಿದ ಔಷಧಿಯನ್ನು ಅಲ್ಮೇರಾದಿಂದ ಹೊರತೆಗೆದ. ಎಂತಹ ಸೈಡ್ ಎಫೆಕ್ಟ್ ಉಂಟಾದರೂ ಸರಿ. ಇವತ್ತು ಆ ಔಷಧಿಯನ್ನು ಸೇವಿಸಿ ಅವಳ ಆಸೆಯನ್ನು ತೀರಿಸಲೇಬೇಕು. ಇನ್ನು ಮುಂದೆ ಅವಳು 'ಸೆಕ್ಸ್' ಬಗ್ಗೆ ಮಾತನಾಡಲೂ ಹೆದರಬೇಕು. ಆ ಶೀಶೆಯಲ್ಲಿದ್ದ ಔಷಧಿಯನ್ನೆಲ್ಲಾ ಒಂದೇ ಸಲ ಕುಡಿದುಬಿಟ್ಟ. ಅವನ ಶರೀರದಲ್ಲೆಲ್ಲಾ ಏನೋ ಬದಲಾವಣೆ ಉಂಟಾಯಿತು ಅಷ್ಟೇ!

ತುಂಬಾ ಅಪಾಯಕಾರೀ ಮೃಗದಂತೆ ತನ್ನನ್ನು ಆಕ್ರಮಿಸುತ್ತಿರುವ ಗಂಡನನ್ನು ಕಂಡು ಅವಳು ಕಿಟಾರನೆ ಕಿರುಚಿದಳು. ಭಯದಿಂದ ಕಿರುಚಿದಳೋ, ಸಂತೋಷದಿಂದ ಕಿರುಚಿದಳೋ ಚಂದ್ರಬೋಸ್‌ಗೆ ತಿಳಿಯಲಿಲ್ಲ. ಒಂದು ವಾರದ ಕಾಲ ಆ ಮನೆಯ ಬಾಗಿಲು ತೆರೆದುಕೊಳ್ಳದಿದ್ದುದರಿಂದ ಅಕ್ಕಪಕ್ಕದವರಿಗೆ ಅನುಮಾನ ಬಂದು ಬಾಗಿಲನ್ನು ಮುರಿದು ತೆಗೆದರು. ಕೊನೆ ಉಸಿರನ್ನಾಡುತ್ತಿದ್ದ ಲಲಿತಾದೇವಿಯನ್ನು ಅಂಬ್ಯುಲೆನ್ಸ್ ವ್ಯಾನಿನಲ್ಲಿ ಕರೆದೊಯ್ದು ಆಸ್ಪತ್ರೆಗೆ ಸೇರಿಸಿದರು. ಡಾಕ್ಟರ್‌ಗಳು ಸಾಕಷ್ಟು ಪರೀಕ್ಷೆಗಳನ್ನು ನಡೆಸಿ, ಮೂರು ದಿನಗಳ ಕಾಲ ಅವಳ ತೊಂದರೆಯ ಬಗ್ಗೆ ಮೆಡಿಕಲ್ ಕಾನ್ಫರೆನ್ಸ್ ನಡೆಸಿ...ಕೊನೆಗೆ ಎಲ್ಲಾ ಸ್ಪೆಷಲಿಸ್ಟ್‌ಗಳೂ ಒಟ್ಟಾಗಿ ಲಲಿತಾದೇವಿಯ ಬೆಡ್ ಬಳಿಗೆ ಹೋಗಿ ಒಂದು ನಿರ್ಧಾರ ತಿಳಿಸುವಂತೆ ಹೇಳಿದರು.

"ಲಲಿತಾದೇವಿಯವರೇ ನೀವು ಗರ್ಭವತಿಯಾಗಿದ್ದೀರಿ! ತ್ರಿವಳಿಯನ್ನು ಪಡೆಯಲಿದ್ದೀರಿ" ಸಿನೆಮಾದಲ್ಲಿ ಹೇಳುವಂತೆ.

ಬೆಳಿಗ್ಗೆ ಆನಂದರಾವ್‌ಗೆ ಎಚ್ಚರವಾದಾಗ ರಾಧಾ ಅವನ ಮುಖದಲ್ಲಿ ಮುಖವಿಟ್ಟು ನೋಡುತ್ತಿದ್ದಳು.

"ಏಳ್ರೀ! ಟೈಮ್ ಹತ್ತು ಗಂಟೆ ಆಯ್ತು. ಇನ್ನೊಂದು ಗಂಟೆಯಲ್ಲಿ ನಮ್ಮ ಡ್ಯಾಡಿ ಬಂದುಬಿಡ್ತಾರೆ'' ಕಿರುನಗುತ್ತಾ ಹೇಳಿದಳು.

'ಡ್ಯಾಡಿ' ಎಂಬ ಪದ ಅವನಿಗೆ ಎಲೆಕ್ಟ್ರಿಕ್ ಷಾಕ್ ತಂದಿತು. ಚಕ್ಕನೆ ಎದ್ದು ಕುಳಿತ.

"ನಿಮ್ಮ ಡ್ಯಾಡಿ ಕರ್ನಲ್ ಅಂದೆಯಲ್ಲಾ?'' ನೆನಪಿಸಿಕೊಳ್ಳುತ್ತಾ ಕೇಳಿದ.

"ಹೌದು."

"ಅಂದರೆ ಆತನ ಕೈಯ್ಯಲ್ಲಿ ಸದಾ ಗನ್ ಇರುತ್ತಾ?"

"ಗನ್ ಇರುವುದಿಲ್ಲವಾದರೆ ಪಿಸ್ತೂಲ್ ಇರುತ್ತೆ...ಆದರೂ ನೀವೇನೂ ಭಯಪಡಬೇಕಾಗಿಲ್ಲ ಬಿಡಿ. ನಮ್ಮ ಡ್ಯಾಡಿ ತುಂಬಾ ಒಳ್ಳೆಯವರು."

''ಹಾಗಾದರೆ ಪರವಾಗಿಲ್ಲ. ಇಷ್ಟಕ್ಕೂ ನಮ್ಮ ಮದುವೆಗೆ ಏನೂ ಅಭ್ಯಂತರ ಮಾಡುವುದಿಲ್ಲವಲ್ಲ'' ಅನುಮಾನದಿಂದ ಕೇಳಿದ.

"ಅಭ್ಯಂತರವೇನೂ ಮಾಡೋದಿಲ್ಲ. ನಾನು ಮಾಡಿಕೊಳ್ಳುವ ಗಂಡು ನನ್ನನ್ನು ಚೆನ್ನಾಗಿ ಸಾಕುತ್ತಾನಾ ಅಷ್ಟಾದರೂ ಆಸ್ತಿಪಾಸ್ತಿ ಇರಬೇಕು ಅನ್ನೋದು ಅವರ ಕೋರಿಕೆ.''

''ಐಸೀ'' ಎನ್ನುತ್ತಾ ಚಕಚಕನೆ ಯೋಚಿಸಲು ಪ್ರಾರಂಭಿಸಿದ. ತನ್ನ ಮನೆ, ಮನೆಯಲ್ಲಿರುವ ಮುರಿದ ಕುರ್ಚಿ, ಚಾಪೆ ನೋಡಿದರೆ ಕರ್ನಲ್ ತಮ್ಮ ಮಗಳನ್ನು ಸತ್ತರೂ ಕೊಡುವುದಿಲ್ಲ. ಈಗೇನು ಮಾಡೋದು? ಹೋಗಲೀ ಈ ರಾಧಾಳನ್ನು ಬಿಟ್ಟುಬಿಡೋಣವೆಂದರೆ ತನ್ನ ಮನಸ್ಸು ಒಪ್ಪುವುದಿಲ್ಲ. ಹುಡುಗಿಯರ ವಿಷಯದಲ್ಲಿ ಮಾತ್ರ ತಾನು ತುಂಬಾ ಕಠಿಣ. ಹೇಗಾದರೂ ಅನುಭವಿಸುವುದೇ ತನ್ನ ಧ್ಯೇಯ. ಈ ಮುಂಚೆ ಕೂಡಾ ಒಬ್ಬಳು ಹೀಗೆಯೇ 'ಮದುವೆಯಾಗುವ ತನಕ ನಾನು ಪತಿವ್ರತೆಯೆಂದು ಹೇಳಿದಾಗ ಅವಳನ್ನು ಹತ್ತಾರು

ಜನರ ಮುಂದೆ ಗುಡಿಯೊಂದರಲ್ಲಿ ಮದುವೆಯ ನಾಟಕವಾಡಿ ಒಂದು ವಾರ ಚೆನ್ನಾಗಿ ಅನುಭವಿಸಿ ಎಂಟನೆ ದಿನ ರಾತ್ರೋ ರಾತ್ರಿ ಓಡಿಬಂದಿದ್ದ. ಈಗಲೂ ಅದನ್ನೇ ರಿಪೀಟ್ ಮಾಡುತ್ತಿದ್ದಾನೆ.

ಹಠಾತ್ತನೆ ಅವನಿಗೊಂದು ಉಪಾಯ ಹೊಳೆಯಿತು. ತನ್ನ ಪಕ್ಕದ ಮನೆ ಪಂಡಿತರು ತನ್ನ ಕೈಯ್ಯಲ್ಲಿ ಅವರ ಮನೆ ಬೀಗದ ಕೈ ಕೊಟ್ಟು ಹೆಂಡತಿಯೊಡನೆ ತೀರ್ಥ ಯಾತ್ರೆಗೆ ಹೋಗಿದ್ದಾರೆ. ಅವರು ಬರುವವರೆಗೂ ಅವರ ಫರ್ನೀಚರ್ ಗಳನ್ನೆಲ್ಲಾ ತನ್ನ ಮನೆಯಲ್ಲಿರಿಸಿಕೊಂಡರೆ ಆಯಿತು.

"ಕಾಫಿ ತಗೊಳ್ಳಿ" ಕಾಫಿ ತಂದು ಕೊಟ್ಟಳು ಅವಳು. ಕಾಫಿ ಕುಡಿಯುತ್ತಿದ್ದರೆ ಆವನಿಗೆ ಮತ್ತೊಂದು ಅನುಮಾನ ಉಂಟಾಯಿತು. ಹಾಳಾದೋನು ಇವಳ ಒರಿಜಿನಲ್ ಪ್ರಿಯಕರ ಬಂದರೆ ಎಲ್ಲಾ ರಸಾಭಾಸ ಆಗಿಬಿಡುತ್ತೆ, ಬರಲಿ ಬಿಡು...ಇಬ್ಬರೂ ಒಂದೇ ರೂಪ ಹೊಂದಿರುವುದರಿಂದ ಯಾರು ಒರಿಜಿನಲ್ ಯಾರು ಡೂಪ್ಲಿಕೇಟ್ ಎಂದು ಅಷ್ಟು ಬೇಗ ತಿಳಿಯುವುದಿಲ್ಲ.

"ಓ.ಕೆ. ರಾಧಾ ನಾನಿನ್ನು ಬರ್ತೀನಿ. ಅಂದಹಾಗೆ ಹೇಳಲು ಮರೆತಿದ್ದೆ ನಾನು ಈಗ ಮನೇನ ಬದಲಾಯಿಸಿದ್ದೀನಿ. ನಿಮಗೆ ಹೇಳಿಲ್ಲವಲ್ಲಾ? ಇದೇ ಅಡ್ರೆಸ್ ತಗೊಳ್ಳಿ" ಎನ್ನುತ್ತಾ ಅಡ್ರೆಸ್ ಕಾರ್ಡ್ ಕೊಟ್ಟ. ರಾಧಾ ಆಶ್ಚರ್ಯ ಪಟ್ಟಳು.

"ಇಷ್ಟಕ್ಕೆ ಮೊದಲು ನಿಮ್ಮ ರೂಮು ನೀವು ಕೆಲಸ ಮಾಡೋ ಬ್ಯಾಂಕಿನ ಪಕ್ಕದಲ್ಲೇ ಇದೆ ಅಂದಿದ್ರಿ.."

"ಆ್ಞ! ಅಂದಿದ್ದೆ...ಹೌದು ಅಂದಿದ್ದೆ. ಆದರೆ ಅವತ್ತು ಮಾರನೆ ದಿನಾನೇ ಆ ಬಿಲ್ಡಿಂಗ್‌ನೇ ಡಿಮಾಲಿಷ್ ಮಾಡ್ಬೇಕು ಅಂತ ಖಾಲಿ ಮಾಡ್ಸಿದ್ರು. ಆಗಿನಿಂದಲೂ ಈ ಹೊಸ ಮನೇಲಿದ್ದೀನಿ.

"ಒಳ್ಳೇ ಕೆಲಸ ಮಾಡಿದ್ರಿ ನೀವು. ಇಲ್ದಿದ್ರೆ ನಮ್ಮ ಡ್ಯಾಡೀನ ಆ ಹಳೇ ಅಡ್ರೆಸ್‌ಗೇ ಕರೆದುಕೊಂಡು ಬರ್ತಿದ್ದೆ."

"ಓ.ಕೆ. ಡಿಯರ್ ಸೀಯೂ! ಸಂಜೆ ನಿಮಗೋಸ್ಕರ ಎದುರು ನೋಡ್ತಿರ್ತೀನಿ." ಅವಳು ಬಾಗಿಲ ವರೆಗೂ ಬಂದು ಕೈ ಆಡಿಸಿದಳು.

"ಅಹ್ಹಹ್ಹಾ..." ಎಂದು ನಗುತ್ತಿದ್ದ ತ್ರಿಬಲ್ ಜೀರೋ ಇರಾನಿ ಹೋಟೆಲಿನಲ್ಲಿ ಬಷೀರನ ಮುಂದೆ.

"ವಿಷಯ ಏನೂಂತ ಹೇಳ್ದೆ ಏನಯ್ಯಾ ಇಂಥ ವಿಲ್ಲನ್ ನಗು?" ಸಿಟ್ಟಿನಿಂದ ಕೇಳಿದ ಬಷೀರ್.

"ಸಿನೆಮಾಗಳಲ್ಲಿ ಸೀಕ್ರೆಟ್ ಏಜೆಂಟ್‌ಗಳು ಸೀಕ್ರೆಟ್ ಮಾತಾಡೋವಾಗ ಸ್ವಲ್ಪ ಹೊತ್ತು ಇದೇ ರೀತಿ ನಗೋಲ್ವಾ?"

"ಇಷ್ಟಕ್ಕೂ ಏನು ವಿಷಯ ಅಂತ ಹೇಳು. ನಂಗೆ ಸ್ಕೂಲಿಗೆ ಟೈಮಾಗುತ್ತೆ."

"ಇಹ್ಹಿಹೀ! ತುಂಬಾ ಸೀಕ್ರೆಟ್ ಗುರೂ! ಹೇಗೆ ಹೇಳೋದು?"

"ಕೋಡ್ ಲಾಂಗ್ವೇಜ್‌ನಲ್ಲಿ ಮಾತಾಡು ಯಾರಿಗೂ ತಿಳಿಯದಂತೆ."

"ಓಕೆ ಗುರು! ವಿಷಯ ಏನೂಂದ್ರೆ ಕಚಂಕದ್ರಕಬೋಕಸ್ ಕಒಂಕದುಕ ಹೊಕಸಕಸೀಕಕ್ರೆಕಟ್ ಕಕಂಡುಕಹಿಕಡಿಕದಿಕದ್ದಾಕನೆ" ಜೋರಾಗಿ ಗಹಗಹಿಸುತ್ತಾ ಹೇಳಿದ.

ಹಹ್ಹಹಾ! ಎಂದು ನಕ್ಕ ಅವರ ಪಕ್ಕದಲ್ಲೇ ಕುಳಿತಿದ್ದ ಒಬ್ಬ ಹುಡುಗ.

"ಏಯ್ ಯಾಕೆ ಹಾಗೆ ನಗ್ತೀ?" ಕೋಪದಿಂದ ಕೇಳಿದ ಬಷೀರ್.

"ನೀವೇನು ಮಾತನಾಡಿದಿರೀಂತ ನಂಗೆ ಗೊತ್ತಾಯ್ತು. ಚಂದ್ರಬೋಸ್ ಒಂದು ಹೊಸ ಸೀಕ್ರೆಟ್ ಕಂಡುಹಿಡಿದಿದ್ದಾನೆ ಅಂತ ತಾನೇ? ಇದನ್ನು ನಾವು ಐದನೇ ಕ್ಲಾಸಿನಲ್ಲಿ ಓದುತ್ತಿದ್ದಾಗಲೇ ಉಪಯೋಗಿಸುತ್ತಿದ್ದೆವು."

ಬಷೀರ್, ತ್ರಿಬ್ಬಲ್ ಜೀರೋ ಇಬ್ಬರೂ ಬಾಡಿಹೋದ ಮುಖಗಳೊಡನೆ ಹೊರಬಂದರು.

"ಇನ್ನೊಂದು ಸೀಕ್ರೆಟ್ ಪ್ಲೇಸ್ ಇದೆ ನಡಿ. ಅಲ್ಲಾದರೆ ಯಾರೂ ನಮ್ಮ ಸೀಕ್ರೆಟ್ ಕೇಳಿಸಿಕೊಳ್ಳುವುದಿಲ್ಲ" ಬಷೀರ್ ಹೇಳಿದ.

ಇಬ್ಬರೂ ಪೋಲೀಸ್ ಸ್ಟೇಷನ್ ಬಳಿಗೆ ಬಂದರು.

"ಈಗ ಹೇಳು ಸಾಮಾನ್ಯ ಭಾಷೆಯಲ್ಲಿ" ಬಷೀರ್ ಕೇಳಿದ.

"ನಿಂಗೇನು ಬುದ್ಧಿ ಕೆಟ್ಟಿದೆಯಾ ಗುರು? ಇದು ಪೋಲೀಸ್ ಸ್ಟೇಷನ್ನು" ಕಂಗಾಲಾಗಿ ಕೇಳಿದ ತ್ರಿಬ್ಬಲ್ ಜೀರೋ.

''ಗೊತ್ತಿದ್ದಿದ್ದೇ ಬಿಡಯ್ಯಾ, ಪೋಲೀಸ್ ಸ್ಟೇಷನ್ ಎಂತಹ ಸೀಕ್ರೆಟ್ ಗಳಿಗಾದರೂ ಉತ್ತಮ ಸ್ಥಳ. ಅವರು ಕೇಳಿಸಿಕೊಂಡರೂ, ಎದುರಿಗೆ ಕಂಡರೂ ಕಂಪ್ಲೇಂಟ್ ಕೊಡುವ ವರೆಗೂ ಅದರ ಬಗ್ಗೆ ತಲೆಹಾಕುವುದಿಲ್ಲ."

ತ್ರಿಬ್ಬಲ್ ಜೀರೊನ ಮುಖ ಸಂತೋಷದಿಂದ ಅರಳಿತು: "ಸರಿಯಾದ ಮಾತು ಗುರು. ನಮ್ಮ ಪಕ್ಕದ ರಸ್ತೇಲಿ ಒಂದು ಕೊಲೆ ಆಗಿತ್ತು. ಪೋಲೀಸರು ನೋಡಿದರೂ ಕೂಡಾ ಸುಮ್ಮನಿದ್ದರು. ಯಾರೂ ಕಂಪ್ಲೇಂಟ್ ಕೊಡಲಿಲ್ಲವೆಂದು ಅವರ ಪಾಡಿಗೆ ಅವರಿದ್ದರು. ಒಂದು ವಾರದ ನಂತರ ಆ ಹೆಣವನ್ನು ..."

"ಷಟಪ್!'' ಜೋರಾಗಿ ಕಿರುಚಿದ ಬಷೀರ್. ತ್ರಿಬ್ಬಲ್ ಜೀರೋ ಸುಮ್ಮನಾದ. "ಆ ಸೀಕ್ರೆಟ್ ಫಾರ್ಮುಲಾ ಯಾವುದೆಂದು ಬೊಗಳು ಈಗ...''

''ಅದೇ ಗುರೂ ಇಹ್ಹಿಹ್ಹೀ ಆ ಔಷಧಿಯನ್ನು ಇಲಿಯ ಮೇಲೆ ಪ್ರಯೋಗಿಸಿದ. ಆದರೆ ಪುನಃ ಯೌವ್ವನ ಮರಳಿ ಬಂದದ್ದರಿಂದ ಮನೆಯ ತುಂಬಾ ನೂರಾರು ಇಲಿಮರಿಗಳು ತುಂಬಿದವು."

"ನಿನಗೆ ಹೇಗೆ ಗೊತ್ತು ಆ ವಿಷಯ?"

"ನನಗೆ ನೀನೇ ಹೇಳಿದ್ದಿಯಲ್ಲಾ–ದಿನವೂ ಅವರು ಮಲಗುವ ಕೋಣೆಯ ಪಕ್ಕದಲ್ಲಿ ಕುಳಿತು ಅವರ ಮಾತುಗಳನ್ನೆಲ್ಲಾ ಕೇಳುವಂತೆ. ತಿಂಗಳಿನಿಂದ ಅದನ್ನೇ ಮಾಡುತ್ತಿದ್ದೆ."

ಬಷೀರನಿಗೆ ಮೈಯೆಲ್ಲಾ ಉರಿಯಿತು.

"ಇಲಿ ಮರಿ ಹುಟ್ಸೋ ಪ್ರಯೋಗದ ಫಾರ್ಮುಲಾದಿಂದ ಪಾಕೀಸ್ಥಾನಕ್ಕೆ ಏನು ಉಪಯೋಗವೊ ಅಯೋಗ್ಯ? ಏನಾದರೂ ಮಿಲಿಟರಿಗೆ ಕೆಲಸಕ್ಕೆ ಬರೋ ಫಾರ್ಮುಲಾ ಮಾರಿದರೇನೇ ಹಣ ಸಿಗೋದು.''

''ಅಬ್ಬಾ ಪೂರ್ತಿ ಕೇಳು ಗುರು. ಆ ಔಷಧಿಯನ್ನು ತೆಗೆದುಕೊಂಡರೆ ಎಂತಹ ಮುದುಕರಿಗಾದರೂ ಯೌವ್ವನ ಬರುತ್ತದೆ. ಆ ಔಷಧಿಯನ್ನು ನಮ್ಮ ದೇಶದ ಸಿಪಾಯಿಗಳಿಗೆಲ್ಲಾ ಕೊಟ್ಟರೆ ಅವರಿಗೆ ಯೌವ್ವನ ಬರುತ್ತದೋ ಇಲ್ಲವೊ?''

"ಅಹ್ಹಾ! ಅದ್ಭುತ, ಕೂಡಲೆ ನಾವು ಈ ಸೀಕ್ರೆಟ್ಟನ್ನು ನಮ್ಮ ಬಾಸ್‌ಗೆ ನಮ್ಮ ಸೀಕ್ರೆಟ್ ರೇಡಿಯೋ ಟ್ರಾನ್ಸ್‌ಮಿಟರ್‌ನ ಮೂಲಕ ಹೇಳೋಣ'' ಅಂದ ಜೇಬಿನಿಂದ ಬೆಂಕಿಪೊಟ್ಟಣ ತೆಗೆಯುತ್ತಾ.

"ಬಾಸ್! ಬ್ರಹ್ಮಾಂಡವಾದ ಸೀಕ್ರೆಟ್."

"ಏನದು?" ಕೇಳಿದ ವೆಂಕಟೇಶ್ವರ್.

"ಇಗೋ–ಈ ರೇಡಿಯೋ ಟ್ರಾನ್ಸ್‌ಮಿಟರ್‌ನಲ್ಲಿ ಮಾತಾಡು–'' ಬಷೀರ್ ಹೇಳಿದ.

ವೆಂಕಟೇಶ್ವರ ಆ ಬೆಂಕಿಪೊಟ್ಟಣವನ್ನು ತೆಗೆದುಕೊಂಡು ಕಿರುಚಾಡಿದ. ಅರ್ಧ ಗಂಟೆಯ ಕಾಲ ಮಾತನಾಡಿ ವಿಷಯಗಳನ್ನೆಲ್ಲಾ ಚರ್ಚಿಸುತ್ತಿದ್ದಂತೆಯೇ ನೂರಾರು ಜನ ಅವನ ಸುತ್ತಲೂ ನೆರೆದಿದ್ದರು.

''ಏನು ನಿಮಗೇನು ಬೇಕು?'' ಕೋಪದಿಂದ ಕೇಳಿದ ವೆಂಕಟೇಶ್ವರ.

''ಅದೇರಿ, ಯೌವ್ವನ ಮರಳಿ ಪಡೆಯುವ ಔಷಧಿಯನ್ನು ಅದ್ಯಾರೋ ಚಂದ್ರಬೋಸ್ ಅನ್ನೋರು ಕಂಡುಹಿಡಿದಿದ್ದಾರಂತಲ್ಲಾ? ಅದನ್ನು ನೀವು ಪಾಕೀಸ್ಥಾನಕ್ಕೆ ಕಳಿಸುವಾಗ ನಮಗೂ ಸ್ವಲ್ಪ ಸಪ್ಲೈ ಮಾಡಿ. ಬೇಕಾದಷ್ಟು ಹಣ ಕೊಡ್ತೀವಿ ನಮಗೇನು ಬಿಟ್ಟಿ ಬೇಡ.''

"ನಿಮಗೆ ಹೇಗೆ ಗೊತ್ತಾಯ್ತು ಆ ವಿಷಯ?" ಭಯಪಡುತ್ತಾ ಕೇಳಿದ.

"ಒಂದು ಕಿಲೋಮೀಟರ್ ದೂರ ಕೇಳಿಸೋವಷ್ಟು ಜೋರಾಗಿ ಮಾತಾಡ್ತಿದ್ರಿ.''

"ಅದಾ. ಅದು ಸುಮ್ಮನೆ ಜೋಕ್ ಮಾಡ್ದೆ ಅಷ್ಟೆ. ಚಂದ್ರಬೋಸೂ ಇಲ್ಲ; ಯಾರೂ ಇಲ್ಲ. ನಡೀರಿ ನಡೀರಿ.''

ಜನರೆಲ್ಲಾ ಹೊರಟು ಹೋದರು ಅವನೆಡೆಗೆ ವಿಚಿತ್ರವಾಗಿ ನೋಡುತ್ತಾ. ಅರ್ಧಗಂಟೆಯ ನಂತರ ಅವರು ಹೆಡ್‌ಪೋಸ್ಟ್ ಆಫೀಸ್ ಬಳಿಗೆ ಹೋಗಿ ಪಾಕೀಸ್ಥಾನಕ್ಕೆ ಟ್ರಂಕ್‌ಕಾಲ್ ಬುಕ್ ಮಾಡಿದರು, ಅರ್ಧಗಂಟೆಯ ನಂತರ ಪಾಕೀಸ್ಥಾನದ ಏಜೆಂಟ್ ಮಾತನಾಡಿದ.

"ಬಾಸ್! ಮತ್ತೆ ಅದ್ಭುತವಾದ ಫಾರ್ಮುಲಾ ಕಂಡು ಹಿಡಿದಿದ್ದಾನೆ ಚಂದ್ರಬೋಸ್" ಎಂದು ಹೇಳಿದ ವೆಂಕಟೇಶ್ವರ.

"ಯಾವ ಫಾರ್ಮುಲಾ?''

ವಿವರವಾಗಿ ತಿಳಿಸಿದ ಅವನು.

"ಸರಿ. ಆ ವಿಜ್ಞಾನಿಯನ್ನು ಅಪಹರಿಸಿಕೊಂಡು ಬನ್ನಿ. ನಮ್ಮ ಬಾರ್ಡರ್‌–ವರೆಗೂ ತಂದರೆ ಅಲ್ಲಿಂದ ನಾವು ನಮ್ಮ ದೇಶದೊಳಗೆ ಎಳೆದೊಯ್ಯುತ್ತೇವೆ."

"ನಮ್ಮ ಇಪ್ಪತ್ತೈದು ಲಕ್ಷ ರೂಪಾಯಿಗಳು?" ವೆಂಕಟೇಶ್ವರ ಕೇಳಿದ.

''ಏನು? ಇಪ್ಪತ್ತೈದು ಲಕ್ಷ? ನಿಮಗೇನು ತಲೆ ಕೆಟ್ಟಿದೆಯಾ? ಅಷ್ಟು ದುಡ್ಡು ಕೊಟ್ಟರೆ ನಾವು ನಮ್ಮ ದೇಶಾನೆ ಅವರಿಗೆ ಕೊಟ್ಟುಬಿಡ್ತೀವಿ.''

''ಹಾಗಾದರೆ ಎಷ್ಟು ಕೊಡ್ತೀರಿ?''

"ನೂರ ಐವತ್ತು ರೂಪಾಯಿ–ಕಿಡ್ನಾಪಿಂಗ್ ಚಾರ್ಜ್; ಒಬ್ಬರಿಗೆ ಆರು ನೂರು–ರೂಪಾಯಿ ಸೀಕ್ರೆಟ್ ಏಜೆಂಟ್ ಚಾರ್ಜ್..."

''ಇದನ್ಯಾಯ! ಬರೀ ಆರುನೂರಾ? ಎಷ್ಟು ಕಷ್ಟ ಗೊತ್ತಾ...''

"ಇಷ್ಟವಿದ್ದರೆ ಮಾಡಿ, ಇಲ್ಲದಿದ್ದರೆ ಬಿಡಿ; ಇನ್ನೊಬ್ಬ ಐನೂರಿಗೇ ರೆಡಿಯಾಗಿದ್ದಾನೆ.''

"ಅರೆರೇ, ಹಾಗಲ್ಲ ಸ್ವಾಮಿ–ಅದರ ಜೊತೆಗೆ ಬಾರ್ಡರ್ ವರೆಗೂ ರೈಲ್ವೆ ಚಾರ್ಜನ್ನು ಕೊಡಿಸಿಬಿಡಿ."

''ಏನು? ರೈಲಿನ ಚಾರ್ಜಾ? ಅದು ನಮ್ಮಿಂದ ಸಾಧ್ಯವಿಲ್ಲ. ಟಿಕೆಟ್ ಇಲ್ಲದೆ ಪ್ರಯಾಣ ಮಾಡಿ, ನಾವೇ ಯಾವಾಗಲೂ ಸೀಟಿನ ಕೆಳಗೆ ಮಲಗಿ ಪ್ರಯಾಣ ಮಾಡುತ್ತೇವೆ!"

''ಹಾಗೇ ಆಗಲೀ ಸರ್" ಫೋನ್ ಇಟ್ಟುಬಿಟ್ಟ.

ಮನೆಯ ಮುಂದೆ ಆಟೋ ನಿಂತ ಸದ್ದು ಕೇಳಿ ಓಡೋಡಿ ಬಂದು ಹೊರಗೆ ನೋಡಿದ ಆನಂದರಾವ್. ರಾಧಾ ಒಬ್ಬಳೇ ಆಟೋದಿಂದ ಇಳಿದಳು.

"ನಿಮ್ಮ ಡ್ಯಾಡಿ ಎಲ್ಲಿ?" ಆಶ್ಚರ್ಯದಿಂದ ಕೇಳಿದ.

"ಡ್ಯಾಡಿ ಅವರ ಫ್ರೆಂಡ್ ಮನೆಗೆ ಹೋದರು. ಅಲ್ಲಿ ಸ್ವಲ್ಪ ಹೊತ್ತು ಕಳೆದ ನಂತರ ಇಲ್ಲಿಗೆ ಬರುತ್ತೇನೆಂದು ಅಡ್ರೆಸ್ ತೆಗೆದುಕೊಂಡಿದ್ದಾರೆ. ಇನ್ನೊಂದು ಗಂಟೆಯಲ್ಲಿ ಬಂದುಬಿಡುತ್ತಾರೆ ..'' ಎಂದು ಮಾತನ್ನು ನಿಲ್ಲಿಸಿ ಅವನ ಆಕಾರವನ್ನು ಪರೀಕ್ಷಿಸುವಂತೆ ನೋಡಿದಳು.

"ಈ ಡ್ರೆಸ್ಸಿನಲ್ಲಿ ನೀವು ತುಂಬಾ ಸ್ಮಾರ್ಟಾಗಿ ಕಾಣ್ತೀರ'' ನಕ್ಕಳು.

"ಥ್ಯಾಂಕ್ಯೂ! ಆದರೆ ಈ ಮಾತನ್ನು ನೀನು ಹೇಳಿದರೆ ಏನು ಲಾಭ? ನಿಮ್ಮ ಡ್ಯಾಡಿ ಹೇಳಬೇಕು.'' ಇಬ್ಬರೂ ಒಳಗೆ ಬಂದರು.

ಆ ಮನೆಯನ್ನೂ ಹಾಲಿನಲ್ಲಿನ ಫರ್ನೀಚರ್‌ಗಳನ್ನೂ ಕಂಡು ಅವಳು ಸಂಭ್ರಮಪಟ್ಟಳು.

''ಇಷ್ಟೊಂದು ಒಳ್ಳೆಯ ಫರ್ನೀಚರ್‌ಗಳಾ? ನಿಮಗೆ ಒಳ್ಳೇ ಟೇಸ್ಟ್ ಇದ್ದಂತಿದೆ,'' ಅವಳು ಹೇಳಿದಳು.

"ಏನು ಟೇಸ್ಟೋ ಏನೋ! ಬೆಳಗಿನಿಂದ ಇದುವರೆವಿಗೂ ಮೈಕೈ ನೋಯಿಸಿ ಕೊಂಡು ಇಷ್ಟು ಓರಣವಾಗಿರಿಸಿದೆ. ಫರ್ನೀಚರ್‌ಗಳು, ಟೀವಿ, ಗೋಡೆ ಗಳಿಗಿರುವ ಪೇಂಟಿಗ್‌ಗಳೂ ನನ್ನವಲ್ಲ; ನಮ್ಮನೆ ಪಕ್ಕದ ಪಂಡಿತರದ್ದು; ಅವರು ಊರಿಗೆ ಹೋಗಿದ್ದಾರೆ ಬೀಗದ ಕೈ ನನಗೆ ಕೊಟ್ಟು."

"ಪರವಾಗಿಲ್ಲ ಬಿಡಿ ಒಂದು ಗಂಟೆಯ ಮಟ್ಟಿಗೆ ಅಷ್ಟೆ ತಾನೇ.ನಮ್ಮ ಡ್ಯಾಡಿ ಹೊರಟು ಹೋದ ಮೇಲೆ ವಾಪಸ್ಸು ಕೊಟ್ಟುಬಿಡಿ. ಅದು ಸರಿ, ಮನೆಯೆಲ್ಲಾ ಕವಿದಿದೆಯಲ್ಲಾ ?''

"ಅದು ಓಲ್ಟೇಜ್ ಡ್ರಾಪ್. ಇಷ್ಟೊತ್ತಾದ್ರೆ ದಿನಾ ಹೀಗೇನೇ, ಇನ್ನು ಸ್ವಲ್ಪ ಹೊತ್ತಿಗೆ ಬಂದು ಬಿಡುತ್ತೆ ಪೂರ್ತಿ ಕರೆಂಟ್. ಅದೂ ಅಲ್ಲದೆ ನಿಮ್ಮ ಡ್ಯಾಡಿ ಯನ್ನು ಇಂತಹ ಮಂದಬೆಳಕಿನಲ್ಲಿ ಭೇಟಿಯಾಗುವುದೇ ಒಳ್ಳೆಯದೆನಿಸುತ್ತೆ. ಅವರೊಡನೆ ಮಾತನಾಡಬೇಕೆಂದರೆ ನನಗೆ ಭಯ.''

ಅವನ ಬಳಿಗೆ ಬಂದು ಅವನ ನೆಕ್‌ಟೈಗೆ ಚುಂಬಿಸಿದಳು.

"ನೀವೆಷ್ಟು ಸ್ಮಾರ್ಟಾಗಿ ಕಾಣ್ತೀರಿ ಗೊತ್ತಾ ಈಗ?''

"ನೀನೇನು ಕಡಿಮೆ ಸುಂದರೀನ? ಇಂತಹ ಸುಂದರಿಯನ್ನು ಈ ದೇಶದಲ್ಲಿ ನಾನು ಕಾಣುತ್ತಿರುವುದು ಇದೇ ಮೊದಲು.''

"ಅಂದರೆ ನನಗಿಂತ ಕಡಿಮೆ ಸುಂದರಿಯರನ್ನು ನೋಡಿದ್ದೀರಾ...''

"ಅಗೋ–ಅಗ್ಲೇ ಶುರುಮಾಡಿಬಿಟ್ಟೆ. ಮತ್ಸರ! ನೀವು ಹುಡುಗೀರೇ ಹೀಗೆ ಸುಮ್ಮಸುಮ್ಮನೆ ಬೆಚ್ಚಿ ಬೀಳ್ತೀರಿ."

"ಸುಮ್ಮಸುಮ್ಮನೆ ಯಾಕೆ ಬೆಚ್ಚಿಬೀಳ್ತೀವಿ? ಏನೋ ಅನುಮಾನ ಬಂದರೆ ಮಾತ್ರ ಅಷ್ಟೆ. ಆ ಫೋಟೊ ಫ್ರೇಮಿನಲ್ಲಿರುವ ಹುಡುಗಿ ಯಾರು?"

ಆನಂದರಾವ್ ಬೆಚ್ಚಿಬಿದ್ದ. ತಾನು ಆ ಜಯಲಕ್ಷ್ಮಿ ಫೋಟೋವನ್ನು ಅಲ್ಲಿಂದ ತೆಗೆದು ಹೊರಗೆ ಹರಿದು ಬಿಸಾಕೋಣವೆಂದುಕೊಳ್ಳುತ್ತಲೆ ಮರೆತಿದ್ದ.

''ಯಾವ ಹುಡುಗಿ ಫೋಟೋ?" ಉತ್ತರ ಹೊಳೆಯದೆ ಕೇಳಿದ.

"ಇದೇ" ಎನ್ನುತ್ತಾ ಅದನ್ನು ಕೈಗೆತ್ತಿಕೊಂಡಳು. ಆನಂದರಾವ್ ಅದನ್ನು ನೋಡಿ-"ಓ ಇದಾ? ಇದು ನಮ್ಮ ಕೆಲಸದವಳದು.''

ಅವಳಿಗೆ ಆಶ್ಚರ್ಯ ವಾಯಿತು. "ನಿಮ್ಮ ಮನೆ ಕೆಲಸದವಳದಾ?"

ಆನಂದರಾವ್ ತನ್ನನ್ನ ತಾನೇ ನಿಂದಿಸಿಕೊಂಡ ಅಂತಹ ಹುಚ್ಚು ಉತ್ತರ ಕೊಟ್ಟಿದ್ದಕ್ಕಾಗಿ. ಆದರೆ ಈಗೇನೂ ಮಾಡುವಂತಿಲ್ಲ. ಅದನ್ನು ಮುಂದುವರಿಸಿ ಕೊಂಡು ಹೋಗುವುದೇ ಏಕೈಕ ಮಾರ್ಗ." ಆ್ಞ ! ಹೌದು. ಆ ಹುಡುಗಿ ಎರಡು ವರ್ಷ ನಮ್ಮ ಮನೆಯಲ್ಲಿ ಕೆಲಸ ಮಾಡಿದಳು. ಅವಳದೊಂದು ದೊಡ್ಡ ಕಥೆ ಜಯಾ."

"ಜಯಾ! ನನ್ನ ಹೆಸರು ರಾಧಾ."

"ಅದೇ ರಾಧಾ ಬದಲು ಜಯ ಬಂದ್ಬಿಡ್ತು."

"ಅದಿರ್ಲಿ ಅದೇನು ಅವಳ ಕಥೆ?"

"ಅವಳು ಕೆಲಸದವಳಾದರೂ ನಮ್ಮ ಮನೆಯವಳಂತೆಯೇ ಇದ್ದಳು. ನಮ್ಮ ಕಷ್ಟಸುಖಗಳಲ್ಲಿ ಭಾಗಿಯಾಗಿದ್ದಳು. ನಮ್ಮ ತಾಯಿಗೆ ರಕ್ತದ ಅಗತ್ಯಬಿದ್ದಾಗ ತನ್ನ ರಕ್ತಕೊಟ್ಟು ಅವರನ್ನು ಉಳಿಸಿದ್ದಳು, ಅವಳು ತನ್ನ ಆರೋಗ್ಯವನ್ನು ಲೆಕ್ಕಿಸದೆ ನಮ್ಮೆಲ್ಲರ ಸೇವೆ ಮಾಡುತ್ತಿದ್ದಳು. ಎಲ್ಲರಿಗೂ ತೀರಾ ಬೇಕಾದವಳಾಗಿದ್ದಾಗಲೇ ಕೊನೆಯುಸಿರೆಳೆದಿದ್ದಳು. ಅದಕ್ಕೆ ಅವಳ ಫೋಟೋವನ್ನು ನಮ್ಮ ಮನೆಯವರೆಲ್ಲಾ ತಮ್ಮ ತಮ್ಮ ಕೋಣೆಗಳಲ್ಲಿರಿಸಿಕೊಂಡಿದ್ದೇವೆ..." ಸಖತ್ತಾಗಿ ಬುರುಡೆ ಬಿಟ್ಟ.

"ಅಯ್ಯೋ ಪಾಪ! ಹೋಗಿಯೇಬಿಟ್ಟಳಾ?"

"ಅವಳನ್ನು ನೆನೆಸಿಕೊಂಡರೆ ನನಗೆ ಅಳುವೇ ಬರುತ್ತದೆ." ಕಣ್ಣೊರೆಸಿ ಕೊಳ್ಳುತ್ತಾ ಹೇಳಿದ.

ಅಷ್ಟರಲ್ಲಿ ಕರೆಂಟ್ ಹೋಯಿತು.

"ಅರೆ! ಕರೆಂಟ್ ಹೋಯಿತೇನೋ! ಬೆಂಕಿಪೊಟ್ಟಣ ಎಲ್ಲಿದೆ?" ಅವಳು ಕೇಳಿದಳು.

"ಆ ಟೇಬಲ್ ಮೇಲೋ, ಟೇಬಲ್ ಕೆಳಗೋ ಇರುತ್ತದೆ ನೋಡು."

ಅವಳು ಮೇಲೆದ್ದು ಟೇಬಲ್ ಮೇಲೆ ಕೈಯಾಡಿಸಿದಳು.

"ಎಲ್ಲಿಯೂ ಕಾಣಿಸುತ್ತಿಲ್ಲ."

ಅದೇ ಸಮಯಕ್ಕೆ ಸರಿಯಾಗಿ ಫೋನ್ ಬಂತು. ಸ್ಪ್ರಿಂಗಿನಂತೆ ಮೇಲೆದ್ದು ಓಡಿದ ಫೋನಿನ ಬಳಿಗೆ; ಅವಳೆಲ್ಲಿ ಎತ್ತಿಬಿಡುತ್ತಾಳೋ ಎಂಬ ಭಯದಿಂದ.

"ಹಲೋ" ಅಂದ ಗಾಬರಿಯಿಂದ.

"ಹಲೋ" ಎಂದಿತು ಹೆಣ್ಣುಧ್ವನಿ. ಅದು ತುಳಸಿಯ ಸ್ವರವೆಂದು ತಿಳಿದ ಕೂಡಲೇ "ನೀವಾ ತುಳಸೀರಾವ್. ಚೆನ್ನಾಗಿದ್ದೀರಾ?" ಎಂದ.

"ಏನು ತುಳಸೀರಾವ್? ನನ್ನನ್ನ ಗಂಡಸನ್ನಾಗಿ ಮಾಡಿಬಿಟ್ಟಿರಾ?" ಕಿರು–ಗೋಪದಿಂದ ಕೇಳಿದಳು.

"ಹಾಗಲ್ಲ ತುಳಸೀರಾವ್; ನಾನು ಸ್ವಲ್ಪ ಅರ್ಜೆಂಟ್ ಕೆಲಸದಲ್ಲಿದ್ದೇನೆ."

"ಇವತ್ತು ರಾತ್ರಿ ಹತ್ತುಗಂಟೆಗೆ ಬರ್ತೀನಿ."

"ಆನಂದರಾವ್ ಬೆಚ್ಚಿಬಿದ್ದ. ಬೇಡ ತುಳಸೀರಾವ್! ಇವತ್ತು ನಾನು ತುಂಬಾ ಬಿಜಿಯಾಗಿದ್ದೇನೆ", ಎಂದು ಡಿಸ್‌ಕನೆಕ್ಟ್ ಮಾಡಿಬಿಟ್ಟ.

ಸಮಾಧಾನದ ನಿಟ್ಟುಸಿರು ಬಿಡುತ್ತಿದ್ದಂತೆಯೇ ಪಂಡಿತರು ಬಂದೇ ಬಿಟ್ಟರು. ಅವರಿಗೆ ತಡಬಡಿಸಿ ಉತ್ತರ ನೀಡುತ್ತಿದ್ದಂತೆಯೇ ರಾಧಾಳ ತಂದೆ

ವೀರಭದ್ರರಾವ್ ಬಂದರು. "ರಾಧಾ!"

"ಬಂದ್ರಾ ಅಪ್ಪಾ? ಬನ್ನೀ, ಕರೆಂಟ್ ಸರಿಯಾಗಿಲ್ಲ ನಿದಾನವಾಗಿ; ಒಳಗೆ ಬನ್ನಿ."

ಆನಂದರಾವ್ ಕಂಗಾಲಾಗಿ ಎದ್ದು ನಿಂತ.

"ಹೀಗೆ ನನ್ನ ಕೈ ಹಿಡಿದುಕೊಳ್ಳಿ ಸಾರ್-ಸೋಫಾ ಬಳಿಗೆ ಕರೆದೊಯ್ಯುತ್ತೇನೆ."

''ಹೇಗೆ ಕರೆದೊಯ್ಯುತ್ತಿ. ನಿನ್ನ ಕಣ್ಣು ಬೆಕ್ಕಿನ ಕಣ್ಣೇನು?''

''ಹಾಗಲ್ಲ ಸಾರ್, ಇದು ನಮ್ಮನೆ ತಾನೆ? ಜಾಗದ ಪರಿಚಯ ಚೆನ್ನಾಗಿದೆ."

"ಹಾಗಾ! ಹಾಗಾದರೆ ರೂಮೆಲ್ಲಾ ಒಂದು ಸಲ ಓಡು ನೋಡೋಣ.''

ಓಡಲು ಹೋದ ಆನಂದರಾವ್ ಕುರ್ಚಿ ತಗುಲಿ ಕೆಳಗೆ ಬಿದ್ದ.

''ಹೀಗೆ ಅತೀ ಬುದ್ಧಿವಂತಿಕೆ ಪ್ರದರ್ಶಿಸೋರನ್ನ ಕಂಡ್ರೆ ನನಗೆ ಆಗೋಲ್ಲ."

ಪರಿಸ್ಥಿತಿ ವಿಷಮವಾಗುತ್ತಿದೆಯೆಂದರಿತ ರಾಧಾ, "ಡ್ಯಾಡಿ-ಇವರೇ ಆನಂದರಾವ್ ಡ್ಯಾಡಿ. ನಾನು ಇವರನ್ನೇ ಮದುವೆ ಆಗಬೇಕೆಂದಿರುವುದು."

ಪಂಡಿತರು ಬೆಚ್ಚಿಬಿದ್ದರು. "ಏನು?" ಅವರ ಬಾಯಿಂದ ಈ ಪ್ರಶ್ನೆ ಬರುತ್ತಿದ್ದಂತೆಯೇ ಆನಂದರಾವ್ ''ಅದೇ! ಮದುವೆ" ತಡಬಡಿಸಿದ.

''ಓಹೋ! ನೀನೇನಾ ಆನಂದರಾವ್? ಅಲ್ಲಯ್ಯಾ ಮನೇಲಿ ಒಂದು ಬೆಂಕಿ ಪೊಟ್ಟಣ ಮೇಣದ ಬತ್ತಿ ಇಟ್ಟಿರದೇ ಇರ್ರೋನು ನನ್ನ ಮಗಳನ್ನು ಹೇಗೆ ಸಾಕ್ತಿ?'' ವೀರಭದ್ರರಾವ್ ಅನುಮಾನಪಡುತ್ತಾ ಕೇಳಿದ.

''ಮದುವೆ ಆದ ಕೊಡಲೇ ಮೊದಲು ಅದನ್ನೇ ಕೊಂಡುಕೊಳ್ಳುತ್ತೇನೆ ಸಾರ್,'' ವಿನಯದಿಂದ ಹೇಳಿದ ಆನಂದರಾವ್.

"ಹಾಗಾದರೆ ಈಗೇನು ಮಾಡುತ್ತಿ?''

"ಏನು ಮಾಡ್ಲಿ ಸಾರ್?"

''ಡೋಂಟ್ ಆಸ್ಕ್ ಕ್ವೆಶ್ಚನ್ಸ್! ಪ್ರಶ್ನೆ ಹಾಕೋರನ್ನ ಕಂಡ್ರೆ ನಂಗೆ ಆಗೋಲ್ಲ,'' ರೇಗಿದರು ಕರ್ನಲ್ ಸಾಹೇಬರು.

''ಆಯಿತು ಸಾರ್."

"ನೋಡು ಮಿ. ಆನಂದರಾವ್! ಎಂದಿಗಾದರೂ ಸರಿ; ಒಂದು ವಿಷಯವನ್ನು ಚೆನ್ನಾಗಿ ನೆನಪಿಟ್ಟುಕೊ; ನಿನ್ನ ಸುತ್ತಲೂ ಇರುವ ಕತ್ತಲನ್ನು ಬೈಯ್ಯುತ್ತಾ ಕುಳಿತು ಕೊಳ್ಳುವುದಕ್ಕಿಂತ, ಒಂದು ಸಣ್ಣ ದೀಪವನ್ನು ಅದೆಷ್ಟೇ ಸಣ್ಣದಾದರೂ ಬೆಳಗಿಸು," ಉಪದೇಶ ನೀಡಿದರು.

''ಇನ್ನು ಮೇಲೆ ಹಾಗೇ ಮಾಡ್ತೀನಿಸಾರ್''

''ಷಟಪ್! ಈ ನಿರಾಶಾವಾದಿಗಳೆಂದರೆ ನನಗೆ ಆಗುವುದಿಲ್ಲ. ಪರಿಸ್ಥಿತಿ

ಯನ್ನು ಎದುರಿಸುವಾಗ ಬುದ್ಧಿವಂತನೆನ್ನಿಸಿಕೊಂಡವನು ಅನೇಕ ಕೋನಗಳಿಂದ ಯೋಚಿಸಬೇಕು. ಉದಾಹರಣೆಗೆ ...ಸಮಸ್ಯೆ—ಕತ್ತಲು, ಪರಿಹಾರ–ಬೆಳಕು. ನೋಡಿದೆಯಾ ಪರಿಹಾರ ಎಷ್ಟು ಬೇಗ ಬಂತು...''

"ಆಹಾ! ಎಂತಹ ನಗ್ನ ಸತ್ಯವನ್ನು ಹೇಳಿದಿರಿ ಸಾರ್. ಸಮಸ್ಯೆ–ಕತ್ತಲು ಪರಿಹಾರ–ಬೆಳಕು! ವಂಡರ್‌ಫುಲ್.''

ಪಂಡಿತರು ಇನ್ನು ಸುಮ್ಮನಿರಲಾರದೆ ಹೋದರು.

''ಪರಿಹಾರ ಬೆಳಕೇ ಅಲ್ಲಾ ಸ್ವಾಮಿ-ಅದಕ್ಕೆ ಒಳ್ಳೆ ಮುಹೂರ್ತ ನೋಡ ಬೇಕು ಇಲ್ಲದಿದ್ದರೆ ಬೆಳಕು ಕಾಣಿಸುವುದಿಲ್ಲ. ಆ!"

ವೀರಭದ್ರರಾವ್ ಕಿಡಿಕಿಡಿಯಾದರು.

''ರಾಧಾ! ಹೂ ಈಸ್ ದಿಸ್ ಅದರ್ ಫೆಲೋ?"

ಆನಂದರಾವ್ ಕೂಡಲೇ, ''ಆ ಇವರು ಪಂಡಿತರು ಸಾರ್! ನಮ್ಮ ಮನೆ ಓನರ್. ಮೇಲಿನ ಮನೆಯಲ್ಲಿದ್ದಾರೆ.''

"ನಮಸ್ಕಾರ ಸ್ವಾಮಿ" ವಿನಯದಿಂದ ಹೇಳಿದರು ಪಂಡಿತರು.

"ನಮಸ್ಕಾರ. ಎಲ್ಲಿ ನಿಮ್ಮ ಮುಖವನ್ನು ಒಂದು ಸಲ ತೋರಿಸಿ" ಎನ್ನುತ್ತಾ ಸಿಗರೇಟ್ ಲೈಟರನ್ನು ಬೆಳಗಿಸಿದರು ವೀರಭದ್ರರಾವ್.

ಅಷ್ಟರಲ್ಲಿ ರಾಧಾ "ಡ್ಯಾಡಿ ನಿಮಗೋಸ್ಕರ ಆನಂದರಾವ್ ಒಂದು ಒಳ್ಳೆಯ ಫಾರಿನ್ ವಿಸ್ಕಿ ಬಾಟಲ್ ತಂದಿದ್ದಾರೆ.''

ವೀರಭದ್ರರಾವ್ ಮುಖ ಅರಳಿತು ಎಂದಳು.

"ಹಾಗಾ! ವೆರಿಗುಡ್! ಈಗ ನಿನ್ನಲ್ಲಿ ಒಂದು ಒಳ್ಳೆ ಗುಣ ಕಂಡಿತು ನೋಡು. ಹಾಗಾದರೆ ಇನ್ನು ತಡವೇಕೆ? ಹೋಗಿ ಆ ಬಾಟಲ್ ತಗೊಂಡು ಬಾ."

ವೀರಭದ್ರರಾವ್‌ನ ಮುಖದಲ್ಲಿ ಸಂತೋಷ ಕಂಡಿತು. ಆನಂದರಾವ್ ಎಡವುತ್ತಾ ಆಲ್ಮೇರಾ ಬಳಿಗೆ ಹೋಗಿ ಬಾಟಲನ್ನು ತೆಗೆದುಕೊಂಡು ಬಂದು ವೀರಭದ್ರರಾವ್‌ಗೆ ಕೊಟ್ಟ.

"ಗುಡ್! ಬಾರಯ್ಯಾ! ನೀನೂ ಕೂತ್ಕೊಬಾ ."

"ಅಯ್ಯಯ್ಯೋ, ಆನಂದರಾವ್ ಕುಡಿಯೋದಿಲ್ಲ ಡ್ಯಾಡಿ ತುಂಬಾ ಒಳ್ಳೆಯವರು."

"ಹೌದಾ! ಮೊದಲೇ ಹೇಳ್ಬಾರ್ದಿತ್ತಾಮ್ಮ ಅನವಶ್ಯಕವಾಗಿ ಆತನ ಮೇಲೆ ರೇಗಿದ್ದೆ. ಪಂಡಿತರೆ ನೀವಾದರೂ ಬನ್ರೀ"...

"ಅವರು ಕಾಫೀನ ಕೂಡಾ ಮೂಸಿ ನೋಡೋಲ್ಲ ಡ್ಯಾಡಿ".

''ಅರೇ! ತುಂಬಾ ತಮಾಷೆಯಾಗಿದೆಯಲ್ಲಾ. ಹಾಗಾದರೆ ನಾನೊಬ್ಬನೇ

ಫುಲ್ ಬಾಟಲ್ ಹೊಡೀಬೇಕಾ?''

ವೀರಭದ್ರರಾವ್ ತೀರ್ಥ ಸೇವನೆ ಪ್ರಾರಂಭಿಸುತ್ತಿದ್ದಂತೆಯೇ ಆನಂದ ರಾವ್ ರಾಧಾಳನ್ನು ಎಳೆದುಕೊಂಡು ಮತ್ತೊಂದು ಕೋಣೆಗೆ ಹೋದ.

ವೀರಭದ್ರರಾವ್ ಪಂಡಿತರೊಡನೆ ಮಾತನಾಡುತ್ತಾ ವಿಸ್ಕಿಯನ್ನು. ಇಳಿಸುತ್ತಿದ್ದ. ''ತುಂಬಾ ಒಳ್ಳೇಹುಡುಗ ಆನಂದರಾವ್. ಹಿಂದಿನ ತಿಂಗಳಷ್ಟೇ ನನಗೊಂದು ಮಿಲಿಟರಿ ರಮ್ ತಂದುಕೊಟ್ಟಿದ್ದ ." ಎಂದರು ಪಂಡಿತರ! ಚಕ್ಕನೆ ಅವರ ಕಾಲರನ್ನು ಹಿಡಿದ ವೀರಭದ್ರರಾವ್ ಕೇಳಿದರು ..."ಇಷ್ಟೊತ್ತೂ ಅವನು ಕುಡಿಯುವುದಿಲ್ಲ ಅಂತ ಹೇಳ್ತಿದ್ದಿ."

ಪಂಡಿತರು ನಾಲಿಗೆ ಕಚ್ಚಿಕೊಂಡರು.'' ಹಾಗಲ್ಲಾ ವಿಸ್ಕಿ ಕುಡಿಯುವುದಿಲ್ಲ ಅಂತ; ರಮ್ಮನ್ನಲ್ಲ..."

"ಯು ಆರ್ ಚೀಟ್'' ಕರ್ನಲ್ ಅವನ ಕಾಲರ್ ಬಿಡುತ್ತಾ ಹೇಳಿದ. ಇಬ್ಬರೂ ಮತ್ತೆ ಒಳಗೆ ಬಂದರು.

''ಆನಂದರಾವ್..." ಕಿರುಚಿದ ಕರ್ನಲ್.

ಅವನೊಡನೆ ಬಂದ ರಾಧಾ "ಏನುಡ್ಯಾಡಿ?" ಎಂದು ಕೇಳಿದಳು. ಆನಂದ ರಾವ್ ಕಡೆಗೆ ತಿರುಗಿದ ಕರ್ನಲ್ ''ನೋಡಯ್ಯಾ...ನಿಂಗೆ ಹಿಂದೆ ಮುಂದೆ ಇರೋ ಹಾಗೆ ಕಾಣೋಲ್ಲ, ನನ್ನ ಮಗಳನ್ನ ಮಾಡ್ಕೋತೀನಿ ಅಂತಿದ್ದಿ, ಆದರೆ ನಮ್ಮ ಹುಡುಗಿ ಇಷ್ಟಪಡುತ್ತಿರುವುದರಿಂದ ಓ. ಕೆ. ಅನ್ನುತ್ತೇನೆ. ನಿನಗೆ ನನ್ನ ಮಗಳನ್ನು ಸಾಕುವ ಸಾಮರ್ಥ್ಯ ಇದೆಯಾ?"

"ಓ! ಇದೆ ಡ್ಯಾಡಿ. ಆನಂದರಾವ್ ಒಳ್ಳೆ ಕಲೆಗಾರ." ಇಲ್ಲದ್ದನ್ನೆಲ್ಲಾ ಹೊಗಳಿದಳು ರಾಧಾ.

ಸರಸ್ವತಿ ಸಿಟ್ಟಿನಿಂದ ಬ್ರಹ್ಮನೆಡೆಗೆ ನೋಡಿದಳು.

"ನೋಡಿದಿರಾ! ನೋಡಿದಿರಾ! ನಾನು ಸಾತ್ವಿಕರಾವ್‌ಗೂ ರಾಧಾಗೂ ಮದುವೆ ಮಾಡಿ ಆ ಜೋಡಿಯನ್ನು ಕಣ್ತುಂಬಾ ನೋಡೋಣವೆಂದುಕೊಂಡರೆ ಆ ಶಚೀದೇವಿ ಆನಂದರಾವ್‌ನ್ನೂ ರಾಧಾಳನ್ನೂ ಸೇರಿಸುತ್ತಿದ್ದಾಳೆ."

ಬ್ರಹ್ಮ ಕಿರು ನಗೆ ನಕ್ಕ.

"ಹುಚ್ಚಿ!" ಎಂದು ಏನೋ ಹೇಳಲು ಪ್ರಯತ್ನಿಸುತ್ತಿದ್ದಂತೆಯೇ ಸರಸ್ವತಿ

ಸಿಡಿದಳು. "ಇನ್ನೊಂದು ಸಲ ಹಾಗೆ 'ಹುಚ್ಚಿ' ಅನ್ನೋ ಮಾತು ಆಡ್ಬೇಡಿ. ಹೆಂಗಸರೇನು ಮಾತಾಡಿದರೂ 'ಹುಚ್ಚಿ' ಎಂಬ ಪದ ಉಪಯೋಗಿಸಿ ಅವರ ಬಾಯಿ ಮುಚ್ಚಿಸುವುದು ನೀವು ಗಂಡಸರು ಮಾಡುವ ಸಾಮಾನ್ಯ ಕೆಲಸ.'' ಮತ್ತಷ್ಟು ಆಕ್ರೋಶದಿಂದ ಹೇಳಿದಳು.

ಬ್ರಹ್ಮನಿಗೆ ಏನು ಮಾತನಾಡಬೇಕೆಂದೇ ತೋಚಲಿಲ್ಲ.

''ಪ್ರಿಯೇ!" ಕೆಲಕ್ಷಣ ಯೋಚಿಸಿ ಹೇಳಿದ. ''ನೀನೇಕೆ ಇಷ್ಟು ತಲೆಕೆಡಿಸಿ ಕೊಳ್ಳುತ್ತಿದ್ದೀಯೋ ನನಗರ್ಥವಾಗುತ್ತಿಲ್ಲ. ಮದುವೆ ಮಾಡಿಸಲು ಸಾವಿರ ಸುಳ್ಳು ಹೇಳಬೇಕೆಂದಿದ್ದಾರೆ ಆದರೆ, ಮದುವೆ ನಿಲ್ಲಿಸಲು ಒಂದು ನಿಜ ಸಾಕು.''

"ಅಂದರೆ?" ಅನುಮಾನದಿಂದ ಕೇಳಿದಳು ಸರಸ್ವತಿ,

"ಆ ಆನಂದರಾವ್‌ನ ಒರಿಜಿನಲ್ ಪ್ರಿಯೆ ಜಯಲಕ್ಷ್ಮಿ ಇದ್ದಾಳಲ್ಲವಾ! ಆ ನಿಜ ಸಾಕು ...ಎಲ್ಲಾ ಸರ್ವನಾಶವಾಗಲು."

ಸರಸ್ವತಿಯ ಮುಖದಲ್ಲಿ ಮತ್ತೆ ಜೀವ ಬಂತು.

''ಅಬ್ಬ! ಎಂತಹ ತಲೆಗಳೂರೀ ನಿಮ್ದು" ಎಂದು ಒಂದೇ ಓಟದಲ್ಲಿ ಹೊರಗೆ ಜಿಗಿದಳು.

**ಪಂ**ಡಿತರು ಬಿದ್ದು ಬಿದ್ದು ನಗುತ್ತಿದ್ದರು. ಆಗಲೇ ಆತನಿಗೆ ಮತ್ತೇರಿತ್ತು. "ಆನಂದರಾವ್ ಅದ್ಭುತ ನಟ. ಎಂತಹ ಅದ್ಭುತನಟನೆಂದರೆ ಏಕಕಾಲದಲ್ಲಿ ಎರಡು ಕಡೆ ಇರುವಂತೆ ಭ್ರಮೆ ಮೂಡಿಸುವಷ್ಟು! ಅವತ್ತು ಜಯಲಕ್ಷ್ಮಿ..." ಆನಂದ ರಾವ್ ಬೆಚ್ಚಿಬಿದ್ದು ಚಕ್ಕನೆ ಪಂಡಿತರ ಬಾಯಿ ಮುಚ್ಚಿದ. ವೀರಭದ್ರರಾವ್ ಅನುಮಾನ ದಿಂದ ನೋಡಿದ.

"ಅದೇನು ಪಂಡಿತರೇ! ಜಯಲಕ್ಷ್ಮೀ...'' ವೀರಭದ್ರರಾವ್ ಕೇಳಿದ.

ಆನಂದರಾವ್ ನಡುವೆ ಬಾಯಿಹಾಕಿ, "ಏನೂ... ಇಲ್ಲಸಾರ್! ಈ ಪಂಡಿತರು ಕುಡಿಯೋದು ಕಡಿಮೆ. ಇವತ್ತು ಸ್ವಲ್ಪ ಜಾಸ್ತಿ ಕಿಕ್ ಆಗಿರಬೇಕು. ಅವರೇನು ಮಾತನಾಡುತ್ತಿದ್ದಾರೋ ಅವರಿಗೇ ತಿಳಿಯುತ್ತಿಲ್ಲ....''

"ಹಾಗಾ! ವೆರಿ ಸ್ಟ್ರೇಂಜ್ ಕೇಸ್..."

"ಇಲ್ಲಾ ನಾನು ಹೇಳ್ತಿರೋದು ನಿಜಾನೇ. ಕುಡಿದಾಗ ಮಾತ್ರ ನಾನು ನಿಜ ಹೇಳೋದು. ಈ ಆನಂದರಾವ್‌ಗೆ ಮತ್ತೊಬ್ಬ ಪ್ರೇಯಸಿ–ಜಯಲಕ್ಷ್ಮಿ

ಇದ್ದಾಳೆ."

"ಜಯಲಕ್ಷ್ಮೀ!" ಬಿಕ್ಕಳಿಸುತ್ತಾ ಕೇಳಿದ ಕರ್ನಲ್ ವೀರಭದ್ರರಾವ್.

"ಅದು–ಅದೂ ಇವರ ಮನೆ ಕೆಲಸದೋಳು ಡ್ಯಾಡಿ. ಟೇಬಲ್ ಮೇಲಿರೊ ಫೋಟೋ ಅವಳದ್ದೇ! ಪಾಪ ಇವರ ಮನೆಗೆ ತುಂಬಾ ದುಡಿದು ಸತ್ತು ಹೋದ್ಲಂತೆ.''

"ಏನು ಜಯಲಕ್ಷ್ಮೀ ಸತ್ತುಹೋದಳಾ?" ಪಂಡಿತರು ಆಶ್ಚರ್ಯದಿಂದ ಕೇಳಿದರು. ಆನಂದರಾವ್ ಗದ್ಗದಿತನಾಗಿ ಮಾತನಾಡಿದ, "ಹೌದು ಪಂಡಿತರೇ ಅವಳಿಗೆ ಯಾವುದೋ ಮೆದುಳು ಜ್ವರವಾಗಿ ಸತ್ತುಹೋದಳು. ಪಾಪ, ಒಳ್ಳೆಯ ಹುಡುಗಿ".

"ಅಮ್ಮಾ! ರಾಧಾ..." ವೀರಭದ್ರರಾವ್ ಕರೆದರು.

"ಏನು ಡ್ಯಾಡೀ?"

"ಈ ಕೆಲಸದವಳ ಬಗ್ಗೆ ನನಗೇನೋ ಅನುಮಾನ."

''ಅಯ್ಯಯ್ಯೋ! ಅಂತಹದೇನಿಲ್ಲ ಸಾರ್. ನಮ್ಮಿಬ್ಬರ ಮಧ್ಯೆ ಯಜಮಾನ ಕೆಲಸದವಳ ರಿಲೇಷನ್ ಮಾತ್ರ ಇತ್ತು, ಅವಳು ನಮ್ಮ ಕುಟುಂಬಕ್ಕೆ ಮಾಡಿದ ತ್ಯಾಗದಿಂದಾಗಿ ಅವಳ ಫೋಟೋ ಇರಿಸಿಕೊಂಡಿದ್ದೇನೆ ಅಷ್ಟೆ—''

ಅದೇ ಸಮಯಕ್ಕೆ ಸರಿಯಾಗಿ ಜಯಲಕ್ಷ್ಮಿ ಅಲ್ಲಿಗೆ ಬಂದಳು. ಅವಳ ಸೆರಗು ವೀರಭದ್ರರಾವ್ ಮುಖಕ್ಕೆ ಬಿದ್ದಾಗ ಅದನ್ನು ಗಟ್ಟಿಯಾಗಿ ಹಿಡಿದ.

"ಯಾರು? ಯಾರಿದು ಈ ಹೆಂಗಸು ರಾಧಾ?"

''ನಾನಿಲ್ಲಿದ್ದೇನೆ ಡ್ಯಾಡಿ," ರಾಧಾ ಮತ್ತೊಂದು ಮೂಲೆಯಿಂದ ಹೇಳಿದಳು.

''ಹಾಗಾದರೆ ಈ ಸೀರೆ ಯಾರದು? ಯಾರಮ್ಮ ನೀನು?''

ಜಯಲಕ್ಷ್ಮಿ ತನ್ನ ಸೆರಗನ್ನು ಒಂದೇ ಸಲ ಎಳೆದುಕೊಂಡು ದೂರ ನಿಂತಳು, ಪಂಡಿತರು ಕಣ್ಣುಜ್ಜಿಕೊಂಡು ಮಂದಬೆಳಕಿನಲ್ಲಿ ಜಯಲಕ್ಷ್ಮಿಯ ಕಡೆಗೆ ನೋಡಿದರು.

"ಅವಳು ಜಯಲಕ್ಷ್ಮಿಯಿರಬಹುದು."

ಆನಂದರಾವ್ ಪಂಡಿತರ ಪಕ್ಕಗೆ ಚುಚ್ಚಿದ, ಕೂಡಲೇ ಅವರು ಅರ್ಥ ಮಾಡಿಕೊಂಡು—'' ಜಯಲಕ್ಷ್ಮಿಯೆಂದರೆ ನನ್ನ ಉದ್ದೇಶದಲ್ಲಿ ಅವಳ ಪಿಶಾಚಿ ಇರಬಹುದು ಎಂದು",

ಅವಳ ನೆರಳನ್ನು ಕಂಡು ವೀರಭದ್ರರಾವ್ "ಅಬ್ಬಾ! ಅಷ್ಟೊಂದು ಕಪ್ಪಗಿದೆ" ಎಂದರು.

ಜಯಲಕ್ಷ್ಮಿ ನಿದಾನವಾಗಿ ಆನಂದರಾವ್‌ನ ಹಿಂದೆ ಬಂದು ಅವನ ಕೆನ್ನೆ ಸೀಳುವಂತೆ ಬಾರಿಸಿದಳು.

"ಅಮ್ಮಾ'' ಎಂದು ಕಿರುಚಿದ ಆನಂದರಾವ್. ಬೆಚ್ಚಿಬಿದ್ದು ನಿಂತ ವೀರಭದ್ರರಾವ್.

''ಏನಾಯ್ತು-ಏನಾಯ್ತು? ಆನಂದರಾವ್... ಯಾರೋ ನಿನ್ನ ಕೆನ್ನೆಗೆ ಬಾರಿಸಿದಂತೆ ಕೇಳಿಸಿತು, ಯಾರದು?''

ಆನಂದರಾವ್ ಪಕ್ಕದಲ್ಲೇ ನಿಂತಿದ್ದ ರಾಧಾಳ ಬೆನ್ನನ್ನು ಚಿವುಟಿದ.

''ಆಹಾ! ಅದು-ನಾನೇ ಡ್ಯಾಡಿ ಹೊಡೆದದ್ದು'' ಅವಳು ಹೇಳಿದಳು.

''ನೀನಾ? ಯಾಕಮ್ಮ ಅಷ್ಟು ಜೋರಾಗಿ ಹೊಡೆದಿ? ಇವನೆಂದರೆ ನಿನಗೆ ಇಷ್ಟವಿಲ್ಲದಿದ್ದರೆ ಹೇಳು. ಮದುವೆ ಕ್ಯಾನ್ಸಲ್ ಮಾಡಿಬಿಡೋಣ,'' ಸಂತೋಷ ದಿಂದ ಹೇಳಿದ ವೀರಭದ್ರರಾವ್.

"ಅಯ್ಯೋ! ಹಾಗಲ್ಲ ಡ್ಯಾಡಿ ಅವರ ಕೆನ್ನೆಮೇಲೆ ಸೊಳ್ಳೆ ಕುಳಿತ್ತಿತ್ತು. ಅದಕ್ಕೆ ಹೊಡ್ದೆ ಅಷ್ಟೆ."

"ಅಹ್ಹಹ್ಹಾ! ನಿಮ್ಮ ಮಗಳ ಕಣ್ಣೇ ಕಣ್ಣುಸ್ವಾಮಿ. ಕತ್ತಲಲ್ಲೂ ಸೊಳ್ಳೆ ಕಾಣುತ್ತೆ."

ಈ ಸಲ ಜಯಲಕ್ಷ್ಮಿ ಮತ್ತೊಂದು ಕಡೆಯಿಂದ ಎರಡೂ ಕೆನ್ನೆಗಳಿಗೆ ಬಾರಿಸಿ ದಳು. "ಅಬ್ಬಾ!" ಎಂದು ಕಿರುಚುತ್ತಾ ಮೇಲೆದ್ದು ನಿಂತು, ಸಿಟ್ಟಿನಿಂದ ಅವ ಳನ್ನು ಹಿಡಿದ "ಜಯಾ!" ಎಂದು ಕಿರುಚಿದ ಆನಂದರಾವ್.

ಜಯಲಕ್ಷ್ಮಿ ಅವನಿಂದ ಬಿಡಿಸಿಕೊಂಡು ದೂರ ಓಡಿದಳು.

"ಏನಯ್ಯಾ ಇದು? ನಿಜವಾಗಿಯೂ ಜಯಲಕ್ಷ್ಮಿಯ ದೆವ್ವವೇ ನಿನ್ನನ್ನ ಕಾಡುತ್ತಿದೆಯಾ?''

"ಇಲ್ಲಾ ಸಾರ್-ಇನ್ನೊಂದು ಸೊಳ್ಳೆ ಕಚ್ಚಿತು; ನಾನೇ ಕೆನ್ನೆಗೆ ಬಡಿದು ಕೊಂಡೆ. ಜಯಲಕ್ಷ್ಮಿ ನೆನಪಾದಳು! ನಿಜವಾಗಿಯೂ ಅವಳು ದೇವತೆ ಸಾರ್.! ನಿಮಗೆ ಒಂದು ನಗ್ನ ಸತ್ಯ ಹೇಳಲಾ ಸಾರ್?''

''ಕತ್ತಲಲ್ಲಿ ನಗ್ನತೆ ಕಾಣುವುದಿಲ್ಲ-ಹೇಳು."

"ನಾನು ನಿಜವಾಗಿಯೂ ಜಯಲಕ್ಷ್ಮಿಯನ್ನು ಪ್ರೀತಿಸಿದ್ದೆ ಸಾರ್"

"ಅದೇನು? ಅವಳ ನಿನ್ನ ನಡುವೆ ಕೇವಲ ಯಜಮಾನ -ಕೆಲಸದವಳ ಸಂಬಂಧ ಮಾತ್ರವಿತ್ತೆಂದು ಹೇಳಿದೆ."

''ಹಾಗೆ ಹೇಳಿದ್ದೆನಾ? ಹಾಗಾದರೆ ಅದು ಮೊದಲ ವರ್ಷದ ಮಾತು."

"ಎರಡನೇ ವರ್ಷ?''

''ಎರಡನೇ ವರ್ಷ ಇಬ್ಬರೂ ಪ್ರೀತಿಸಿಕೊಂಡೆವು."

ರಾಧಾ ಅವನ ಕೆನ್ನೆಯನ್ನು ಛಳ್ಳೆನಿಸಿದಳು ಈ ಸಲ,

"ಏನಯ್ಯಾ ಸೊಳ್ಳೆಗಳು ನಿನ್ನ ಹಾಗೆ ಕಚ್ತಾ ಇವೆ?"

''ಲೈಟಿಲ್ಲ ನೋಡಿ. ಅದಕ್ಕೆ ವಿಜೃಂಭಿಸುತ್ತಿವೆ. ಇನ್ನೊಂದು ನಗ್ನ ಸತ್ಯವೇನೆಂದರೆ ಸಾರ್- ನಾವಿಬ್ಬರೂ ಅಂತಸ್ತುಗಳ ವ್ಯತ್ಯಾಸದಿಂದ ಮದುವೆ ಆಗಕೂಡದೆಂದು ನಿರ್ಧರಿಸಿದ್ದೆವು ಸಾರ್."

"ರಾಧಾ! ಈ ಮನುಷ್ಯ ನೋಡಿದರೆ ಸೆಕೆಂಡ್ ಹ್ಯಾಂಡ್ ಮದುವೆ ಗಂಡು ಅನ್ನಿಸುತ್ತೆ. ಇಂತಹವರು ಇವ್‌ನಿಂಗ್ ಮಾರ್ಕೆಟ್‌ಗಳಲ್ಲಿ ಹೆಂಡತಿಯರನ್ನು ಹುಡುಕಿಕೊಳ್ಳುವುದು ಒಳ್ಳೆಯದು.''

"ಅಯ್ಯೋ! ನಾನಂತಹವನಲ್ಲ ಸಾರ್. ಸತ್ಯಸಂಗತಿ ಹೇಳುವುದು ನನಗೆ ಅಭ್ಯಾಸ. ಸತ್ಯವೆಂದರೆ ನಾನು ರಾಧಾಳನ್ನು ಪ್ರೀತಿಸಿದಷ್ಟು ಗಾಢವಾಗಿ ಇನ್ಯಾರನ್ನೂ ಪ್ರೀತಿಸಿರಲಿಲ್ಲ" ಎಂದು ಚಕ್ಕನೆ ಅವಳ ಬಾಯಿ ಮುಚ್ಚಿ ಮಹಡಿ ಮೆಟ್ಟಿಲ ಕಡೆಗೆ ಎಳೆದೊಯ್ದ.

ವೀರಭದ್ರರಾವ್ ಅನುಮಾನದಿಂದ ಅತ್ತಕಡೆಗೆ ಮುಖತಿರುಗಿಸಿದ.

"ಏನಯ್ಯಾ! ಯಾರನ್ನೋ ಎಳೆದುಕೊಂಡು ಹೋಗ್ತಿರೋ ಹಾಗಿದೆ ನೀನು?" ಕಿರುಚಿದ.

"ಟಾರ್ಚ್ ತರೋಕೆ ಮಹಡಿ ಮೇಲೆ ಹೋಗ್ತಿದೀನಿ. ಪಂಡಿತರೇ ಅವರಿಗೆ ಸ್ವಲ್ಪ ಹೇಳಿ–ದೆವ್ವಾನೂ ನನ್ನ ಹಿಂದೇನೆ ಬರ್ತಿರೋ ಹಾಗಿದೆ" ಎನ್ನುತ್ತಾ ಮಹಡಿ ಹತ್ತಿಬಿಟ್ಟ.

ಬಾಗಿಲನ್ನು ಭದ್ರಪಡಿಸಿ ಚಕ್ಕನೇ ಜಯಲಕ್ಷ್ಮಿಯ ಕೈಗಳನ್ನು ಹಿಡಿದುಕೊಂಡ.

"ಅಮ್ಮಾ ತಾಯಿ! ದಯವಿಟ್ಟು ಈಗೇನೂ ಗಲಭೆ ಮಾಡಬೇಡ. ಹೊರಗೆ ದೊಡ್ಡ ಮನುಷ್ಯರಿದ್ದಾರೆ'' ಕೇಳಿಕೊಂಡ.

''ಆ ಸ್ಟೈಲಾಗಿರೋ ಹುಡುಗಿ ಯಾರು?"

''ನನ್ನ ಫ್ರೆಂಡ್! ಮೊನ್ನೆತಾನೇ ಫ್ರೆಂಡ್‌ಷಿಪ್ ಆಯಿತು."

''ಮೊನ್ನೆ ಫ್ರೆಂಡ್‌ಷಿಪ್ ಆಯಿತು. ನಾಳೆ ಆ ಷಿಪ್ ಹಾರ್ಬರ್ ಸೇರುತ್ತೇನೋ."

''ಛೆ! ಛೆ!! ನೀನಿದ್ದಮೇಲೆ ನನಗ್ಯಾಕೆ ಇನ್ನೊಂದು ಹಾರ್ಬರ್ ಜಯಲಕ್ಷ್ಮಿ?"

''ಹಾಗಾ! ಹಾಗಾದರೆ ಅವಳ ಮುಂದೆ ನಾನು ಕೆಲಸದವಳು, ತ್ಯಾಗಿ

"ನಿನ್ನ ಮಾತನ್ನು ನಂಬಲಾ?'' ಅನುಮಾನದಿಂದ ಕೇಳಿದಳು.

''ನಂಬದೆ ಬೇರೆದಾರಿಯೇ ಇಲ್ಲ ಜಯಲಕ್ಷ್ಮಿ! ಮುಖ್ಯವಾದ ಸಮಸ್ಯೆಯೊಂದಕ್ಕೆ ಪರಿಹಾರ ಸಿಗಬೇಕಾಗಿದೆ. ಹಾಗಾಗಿ ಅದು ಪೂರ್ತಿಯಾಗುವ ವರೆಗೂ ನೀನು ಸುಮ್ಮನಿರು."

ಜಯಲಕ್ಷ್ಮಿ ಒಂದು ಕ್ಷಣ ಆಲೋಚಿಸಿದಳು.

''ಸರಿ, ಆ ಕೆಲಸವನ್ನು ಬೇಗ ಮುಗಿಸು. ನಾನು ನಿನ್ನೊಡನೆ ತುಂಬಾ ಮುಖ್ಯವಾದ ವಿಷಯವೊಂದನ್ನು ಮಾತನಾಡಬೇಕು."

"ಓ! ಅರ್ಧಗಂಟೆಯಲ್ಲಿ ಸೆಟಲ್ ಮಾಡಿಬಿಡುತ್ತೇನೆ.''

''ಒಂದು ನಿಮಿಷ ಹೆಚ್ಚಾದರೂ ನಾನು ಬಂದುಬಿಡ್ತೀನಿ."

''ಸರಿ—" ಎನ್ನುತ್ತಾ ಗಡಿಬಿಡಿಯಿಂದ ಕೆಳಗೋಡಿಬಂದ ಆನಂದರಾವ್, ರಾಧಾ ಆಗಲೇ ಮೆಟ್ಟಿಲನ್ನು ಹತ್ತುತ್ತಿದ್ದಳು,

"ಏನು ಮಾಡ್ತಿದ್ರಿ ಮಹಡಿ ಮೇಲೆ?'' ಕೇಳಿದಳು.

"ಟಾರ್ಚ್‌ಗಾಗಿ ಹುಡುಕುತ್ತಿದ್ದೆ''

"ಹುಡುಕುತ್ತಾ ಯಾರೊಡನೆ ಮಾತನಾಡುತ್ತಿದ್ದಿರಿ?''

ಆನಂದರಾವ್ ತಡಬಡಿಸಿದ. ''ನನ್ನಷ್ಟಕ್ಕೆ ನಾನೇ ಮಾತನಾಡಿಕೊಳ್ಳುತ್ತಿದ್ದೆ ಚಿಕ್ಕಂದಿನಿಂದಲೂ ಹಾಸ್ಟಲ್‌ಗಳಲ್ಲಿದ್ದುದರಿಂದ ನನ್ನಲ್ಲಿ ನಾನೇ ಮಾತನಾಡಿಕೊಳ್ಳುವ ರೂಢಿಯಾಗಿದೆ.''

ವೀರಭದ್ರರಾವ್ ಅವನೆಡೆಗೆ ಅನುಮಾನದಿಂದ ನೋಡಿದರು.

''ರಾಧಾ! ಇವನಿಗೇನಾದರೂ ಹುಚ್ಚಿದೆಯೋ ಅಂತ ಈಗಲೇ ಚೆಕ್ ಮಾಡಿಸುವುದು ಉತ್ತಮ. ಆ ಮೇಲೆ ತೊಂದರೆ ಪಡಬೇಕಾಗುತ್ತದೆ."

"ಇಲ್ಲಾ ಡ್ಯಾಡಿ–ಇವನಿಗೆ ಹುಚ್ಚಿಲ್ಲ. ಇದ್ದಿದ್ದರೆ ರಾಜಕೀಯಕ್ಕೆ ಹೋಗುತ್ತಿದ್ದ."

"ಆಫ್‌ಕೋರ್ಸ್ ಆ ಮಾತು ನಿಜವೇ ಅಂದುಕೋ, ಆದರೆ ಆ ಕೆಲಸದವಳ ವಿಷಯದಲ್ಲಿ ನನಗೇಕೋ ಅನುಮಾನ. ಅವಳನ್ನು ಪ್ರೀತಿಸಿದ್ದೆ ಎಂದಿದ್ದ ಬೇರೆ. ಸೋ ..ಇದೇನಾದರೂ ಸೆಕ್ಸ್ ಹುಚ್ಚಾ?"

''ಸೆಕ್ಸ್ ಹುಚ್ಚಾಗಿದ್ದರೆ ವಾರಪತ್ರಿಕೆಗಳಲ್ಲಿ ಎಡಿಟರ್ ಆಗಿ ಲೈಂಗಿಕ ಸಮಸ್ಯೆಗಳಿಗೆ ಪರಿಹಾರ ನೀಡುತ್ತಾ ಇರುತ್ತಿದ್ದ ಅಷ್ಟೆ!"

ವೀರಭದ್ರರಾವ್ ಒಂದು ಕ್ಷಣ ಯೋಚಿಸಿದ.

''ಹೌದೌದು! ಕರೆಕ್ಟಾಗಿ ಹೇಳಿದಿ. ನನ್ನ ಫ್ರೆಂಡ್ ಒಬ್ಬನಿಗೆ ಹೀಗೆ ಇದೇ ಹುಚ್ಚು ಹಿಡಿದು ಒಂದು ಅಶ್ಲೀಲ ಪತ್ರಿಕೆ ಪ್ರಾರಂಭಿಸಿದ್ದ. ತಮಾಷೆಯೇನೆಂದರೆ ಈಗ ಅದೇ ಫ್ಯಾಮಿಲಿ ಮ್ಯಾಗಜಿನ್ ಆಗಿದೆ."

"ಆನಂದರಾವ್ ಸ್ವಲ್ಪ ರಸಿಕನಷ್ಟೆ; ಉಳಿದಂತೆ ಒಳ್ಳೆಯವನೇ ಡ್ಯಾಡಿ, ನೀವು 'ಹ್ಞೂ' ಅಂದರೆ ಮುಂದಿನವಾರವೇ ಮದುವೆ ಮಾಡಿಕೊಂಡು ಬಿಡುತ್ತೇವೆ."

ಅವಳ ಮಾತನ್ನು ಮೇಲಿರುವ ಜಯಲಕ್ಷ್ಮಿ ಎಲ್ಲಿ ಕೇಳುತ್ತಾಳೋ ಎಂದು ಆತಂಕಪಟ್ಟ ಆನಂದರಾವ್.

"ಷ್" ಎನ್ನುತ್ತಾ ಅವಳ ಬಾಯಿ ಮುಚ್ಚಿಬಿಟ್ಟ ತನ್ನ ಕೈಯಿಂದ.

"ಯಾಕೆ...ಬಾಯಿ ಮುಚ್ತೀರಿ" ಅವನ ಕೈಯ್ಯನ್ನು ಪಕ್ಕಕ್ಕೆ ತಳ್ಳಿ ಕೇಳಿದಳು ರಾಧಾ.

"ಗಲಾಟೆ ಮಾಡಬೇಡ."

ಅದೇ ಸಮಯಕ್ಕೆ ಸರಿಯಾಗಿ ಜಯಲಕ್ಷ್ಮಿ ಮೇಲಿನಿಂದ ಒಂದು ಬಿಂದಿಗೆ ನೀರನ್ನು ಅವರ ಮೇಲೆ ಹೊಯ್ದಳು. ವೀರಭದ್ರರಾವ್, ಪಂಡಿತರು ನೆಂದು ಮುದ್ದೆಯಾದರು,

ಇಬ್ಬರೂ ಕಂಗಾಲಾಗಿ ಕೇಕೆ ಹಾಕಿದರು.

"ಏನಯ್ಯಾ ಇದು? ವಾಟೀಸ್ ದಿಸ್? ಪ್ರವಾಹವಾ?" ವೀರಭದ್ರರಾವ್ ಕೇಳಿದ.

"ಮಳೆ ಇರಬೇಕು ಪ್ರಳಯಕ್ಕೆ ಮುಂಚೆ ಇದೇ ರೀತಿ ಮಳೆ ಬರುತ್ತದಂತೆ."

ಅದೇ ವೇಳೆಗೆ ಸರಿಯಾಗಿ ಬಿಂದಿಗೆಯೊಂದು ಮೆಟ್ಟಿಲುಗಳ ಮೇಲಿನಿಂದ ಉರುಳುತ್ತಾ ಬಂತು.

ಎಲ್ಲರೂ ಆಶ್ಚರ್ಯದಿಂದ ಅತ್ತಕಡೆಗೇ ನೋಡತೊಡಗಿದರು. ವೀರಭದ್ರರಾವ್‌ಗೆ ಅನುಮಾನ ಬಂತು. "ಮೇಲೆ ಯಾರಿದ್ದೀರಿ?" ಆನಂದರಾವ್ ಕೂಗಿದ.

"ಜಯಲಕ್ಷ್ಮಿಯ ಪ್ರೇತ ಇರಬೇಕು" ಪಂಡಿತರು ನಿರ್ಧರಿಸಿದರು.

"ಪ್ರೇತಗಳೇಕೆ ಬಿಂದಿಗೆಗಳನ್ನು ಎಸೆಯುತ್ತವೆ?" ರಾಧಾ ಪ್ರಶ್ನಿಸಿದಳು.

"ನಂಗೂ ಅದೇ ಅರ್ಥವಾಗುತ್ತಿಲ್ಲ. ಓ...ಈಗ ನೆನಪಾಗುತ್ತಿದೆ. ಇವತ್ತು ಅವಳ ಫೋಟೋಗೆ ಊದುಕಡ್ಡಿ ಹಚ್ಚಿರಲಿಲ್ಲ. ಬಹುಶಃ ಸಿಟ್ಟಾಗಿದ್ದಾಳೆ" ಆನಂದ

ರಾವ್ ಹೇಳಿದ.

ಅವನ ಉತ್ತರದಿಂದ ಸಮಾಧಾನ ಹೊಂದದ ವೀರಭದ್ರರಾವ್ ಮೇಲೆ ಹತ್ತಲು ಹೋಗುವುದಕ್ಕೂ ಕರೆಂಟ್ ಬರುವುದಕ್ಕೂ ಸರಿಹೋಯಿತು. ಅಲ್ಲಿದ್ದ ಫರ್ನಿಚರ್‌ಗಳನ್ನು ಕಂಡ ಪಂಡಿತರು ಹಾರಾಡಲು ಪ್ರಾರಂಭಿಸಿದರು.

"ಮೂರ್ಖಾ! ನಮ್ಮ ಮನೆಯ ಸೋಫಾಗಳನ್ನು, ವಾಲ್ ಡೆಕೋರೇಷನ್‌ಗಳನ್ನು ತಂದು ನೀನು ಮೆರೀತಿದ್ದೀಯಾ?"

"ಹಾಗಲ್ಲ ಪಂಡಿತರೇ..."

"ಹಾಗೂ ಇಲ್ಲ; ಹೀಗೂ ಇಲ್ಲ. ಹಿಂದೆ ಮುಂದೆ ಇಲ್ದೇ ಇರೋ ನೀನು ಹುಡುಗಿಯರಿಗೆ ಈ ರೀತಿ ನೀನೇ ಸಾಹುಕಾರ ಅಂತ ಮೋಸ ಮಾಡ್ತೀಯಾ?"

ರಾಧಾ ಕೋಪದಿಂದ ತಂದೆಯ ಕಡೆಗೆ ತಿರುಗಿ ಸಿಟ್ಟಿನಿಂದ– "ನಡಿ ಡ್ಯಾಡಿ! ನಾವು ಹೋಗೋಣ ನಡಿ" ಅಂದಳು.

ಕರ್ನಲ್ ವೀರಭದ್ರರಾವ್ ಬುಸುಗುಡುತ್ತಾ ಮಗಳೊಡನೆ ಹೊರಗೆ ಬಂದರು.

ಶಚಿದೇವಿ ಸಿಟ್ಟನ್ನು ತಾಳಲಾರದೆ ಪಕ್ಕದಲ್ಲಿ ಗಾಢವಾಗಿ ನಿದ್ರಿಸುತ್ತಿದ್ದ ಇಂದ್ರನ ಕೆನ್ನೆಗೆ ಬಡಿದಳು. ಇಂದ್ರ ಬೆಚ್ಚಿಬಿದ್ದು ಎದ್ದು ಕುಳಿತ,

"ಯಾಕೆ ಹಾಗೆ ಹೊಡೆದಿ?"

ಶಚೀದೇವಿ ಕಂಗಾಲಾದಳು. ತಾನು ಸರಸ್ವತಿಯ ಮೇಲಿನ ಕೋಪದಿಂದ ಗಂಡನಿಗೆ ಹೊಡೆದೆನೆಂದು ಹೇಳಿದರೆ ಅವನು ತನ್ನ ಕೆನ್ನೆ ಒಡೆಯುತ್ತಾನೆಂದು ಅರ್ಜೆಂಟಾಗಿ ಒಂದು ಕಥೆಯನ್ನು ಸೃಷ್ಟಿಸಿದಳು.

"ಮತ್ತೇನು? ನಿದ್ರೇಲಿ 'ರಂಭಾ, ರಂಭಾ' ಅಂತ ಕನವರಿಸಿಕೊಳ್ತಿದ್ದಿರಲ್ಲಾ" ಕೋಪವನ್ನು ನಲಿಸುತ್ತಾ ಹೇಳಿದಳು.

ಇಂದ್ರನಿಗೆ ಆಶ್ಚರ್ಯವಾಯಿತು. "ರಂಭಾ ಎಂದು ಕನವರಿಸಿದೆನಾ?" ಕೆನ್ನೆಯನ್ನು ಸವರಿಕೊಳ್ಳುತ್ತಾ ಕೇಳಿದ.

"ಹೌದು! ನಿಜಹೇಳಿ. ರಂಭೆಯೊಡನೆ ಏನು ಮಾಡ್ತಿದ್ರಿ?"

"ಅಯ್ಯೋ ರಂಭೆ ಅಲ್ಲ ಕಣೆ! ತಿಲೋತ್ತಮೆ–"

ಈ ಸಲ ನಿಜವಾದ ಸಿಟ್ಟಿನಿಂದಲೇ ಇಂದ್ರನ ಮತ್ತೊಂದು ಕೆನ್ನೆಗೆ ಇನ್ನೂ

ಜೋರಾಗಿ ಬಿತ್ತು ಏಟು.

ಕೆನ್ನೆಯನ್ನು ಸವರಿಕೊಳ್ಳುತ್ತಾ, ಅಬ್ಬಾ, "ಇನ್ನೆಂದಿಗೂ ಕನಸಿನಲ್ಲೂ ಅವರನ್ನು ನೆನೆಸಿಕೊಳ್ಳುವುದಿಲ್ಲ ಬಿಡು" ತಪ್ಪೊಪ್ಪಿಕೊಂಡ. ಆದರೆ ಮನಸ್ಸಿನಲ್ಲಿ ಸಂತೋಷಪಟ್ಟ. ಏಕೆಂದರೆ ಅವನು ನಿಜವಾಗಿಯೂ ಕನಸಿನಲ್ಲಿ ವಿಹರಿಸುತ್ತಿದ್ದುದು ಅಹಲ್ಯೆಯೊಡನೆ. ಶಚೀದೇವಿ ನಂಬಿದಳು ಅವನ ಮಾತನ್ನು.

''ನೋಡಿದಿರಾ? ಆ ಸರಸ್ವತಿ ಎಂತಹ ಕೆಲಸ ಮಾಡಿದಳು? ನಾನು ಆನಂದರಾವ್ ರಾಧಾರಿಗೆ ಮದುವೆ ಮಾಡಿಸೋಣವೆಂದರೆ ತಾನು ಜಯಲಕ್ಷ್ಮಿಯನ್ನು ಅಲ್ಲಿಗೆ ಕರೆಸಿ ಎಲ್ಲಾ ರಸಾಭಾಸ ಮಾಡಿಬಿಟ್ಟಳು" ರೋಷದಿಂದ ಹೇಳಿದಳು.

''ಹೋಗಲಿ ಬಿಡು ಯಾರೊಡನೆಯೋ ಮದುವೆ ಅಂತಾ ಆಯ್ತಲ್ಲಾ" ಇಂದ್ರ ಹೇಳಿದ.

''ನಾಚಿಕೆ ಇಲ್ದೇದ್ರೆ ಆಯ್ತು! ಈಗ ಆ ಸಾತ್ವಿಕರಾವ್‌ಗೂ ರಾಧಾಗೂ ಮದುವೆಯಾದರೆ ಏನಾಗುತ್ತೆ ಗೊತ್ತಾ?"

"ನನ್ನನ್ನು ಅಷ್ಟು ಪೆದ್ದು ಅಂದ್ಕೊಂಡಿದ್ದೀಯಾ? ಮದುವೆ ಆದ್ರೆ ಏನಾಗುತ್ತೆ ಅಂತ ಕೇಳ್ತೀಯಲ್ಲಾ?" ನಾಚಿಕೊಳ್ಳುತ್ತಾ ಕೇಳಿದ ಇಂದ್ರ.

ಶಚೀದೇವಿ ಮತ್ತೊಮ್ಮೆ ಅವನ ಕೆನ್ನೆಗೆ ಹೊಡೆಯಬೇಕೆಂಬ ಬಯಕೆಯನ್ನು ಬಲವಂತದಿಂದ ತಡೆದುಕೊಂಡಳು.

''ನಾನು ಹೇಳ್ತಿರೋದು ಆ ವಿಷಯ ಅಲ್ಲ, ಬರುವ ಉಗಾದಿಯ ದಿನ 'ನಡೆಯುವ ಮೇಡ್ ಫಾರ್ ಈಚ್ ಅದರ್' ಸ್ಪರ್ಧೇಲಿ ಈ ರಾಧಾ-ಸಾತ್ವಿಕರಾವ್ ಜೋಡಿಯನ್ನು ಪ್ರವೇಶ ಮಾಡಿಸುತ್ತಾಳೆ. ಆಗ ಅವರು ಗೆಲ್ಲುವುದು ಶತಃಸ್ಸಿದ್ಧ. ಹಾಗೇನಾದರೂ ಆದರೆ ನಮ್ಮ ಪ್ರತಿಷ್ಠೆ ಏನಾಗುತ್ತೆ?"

"ಓ! ಅದಾ ಸಮಸ್ಯೆ! ಅದಕ್ಕಿಷ್ಟು ದೊಡ್ಡ ರಾದ್ಧಾಂತ ಏಕೆ? ಸ್ಪರ್ಧೆ ನಡೆಯುವುದರೊಳಗಾಗಿ ಆ ಸಾತ್ವಿಕರಾವ್-ರಾಧಾರ ನಡುವೆ ಜಗಳ, ಭಿನ್ನಾಭಿಪ್ರಾಯ ವಿವಾದಗಳನ್ನು ಸೃಷ್ಟಿಸಿದರೆ ಆಯಿತು."

ಶಚೀದೇವಿ ಆಶ್ಚರ್ಯಪಟ್ಟಳು; ತನ್ನ ಗಂಡನಲ್ಲಿ ಇಷ್ಟು ಬುದ್ಧಿವಂತಿಕೆ ಇದೆಯೆಂದು ಅವಳಿಗೆ ಅನ್ನಿಸಿರಲಿಲ್ಲ.

''ಅಬ್ಬ! ಎಷು ಒಳ್ಳೆಯ ಉಪಾಯ ಹೇಳಿದಿರಿ, ಅದಕ್ಕೆ ನೀವೆಷ್ಟು ವೇಷಗಳನ್ನು ಹಾಕಿದರೂ, ನೀವೆಂದರೆ ನನಗೆ ಪ್ರಾಣ," ಎಂದಳು ಅವನ ಎರಡೂ ಕೆನ್ನೆಗಳನ್ನು ಚುಂಬಿಸುತ್ತಾ. ಹೆಂಡತಿಯರು ಉಲ್ಲಸಿತರಾಗಿರುವಾಲೇ ಗಂಡಂದಿರು ಅದ್ಭುತವಾಗಿ ನಟಿಸಬೇಕೆಂದು ಇಂದ್ರನಿಗೆ ಗೊತ್ತು. ಹಾಗಾಗಿ ಅವಳಿಗೆ ತನ್ನ ಬಗ್ಗೆ ಮತ್ತಷ್ಟು ಹೆಚ್ಚು ಪ್ರೀತಿ ಉಂಟಾಗುವಂತಹ ಡೈಲಾಗನ್ನು ಹೇಳಿದ: "ನೀನೆಂದರೆ

ನನಗೆ ತುಂಬಾ ಇದು... ಅಹಲ್ಯಾ" ಎಂದು ನಾಲಿಗೆ ಕಚ್ಚಿಕೊಂಡ ಆವರೆ ಆಗಲೇ ತಡವಾಗಿತ್ತು.

"ಅಹಲ್ಯಾ... ಅಹಲ್ಯಾ ಅಲ್ಲ-ಶಚೀದೇವಿ" ಎಂಬುದನ್ನು ಅವಳು ಕೇಳಿಸಿಕೊಳ್ಳುವುದಕ್ಕಿಂತ ಮುಂಚಿತವಾಗಿಯೇ ಅವಳ ಐದೂ ಬೆರಳುಗಳು ಅವನ ಕೆನ್ನೆಯ ಮೇಲೆ ಮುದ್ರೆ ಒತ್ತಿದ್ದವು.

ಬದುಕು ಹಾಸಿಗೆಯಂತೆ.

ಪ್ರಸ್ತುತ ಚಂದ್ರಬೋಸ್ ಲಲಿತರಿಗೆ ಬದುಕು ಯು-ಫೋಮ್ ಹಾಸಿಗೆ ಅನ್ನಿಸಿದರೆ, ಸಾತ್ವಿಕ್‌ರಾವ್-ರಾಧಾರಿಗೆ ಅದು ಹತ್ತಿಯ ಹಾಸಿಗೆಯಾದರೆ, ಆನಂದರಾವ್ ಜಯಲಕ್ಷ್ಮಿಯರಿಗೆ ಮುಳ್ಳಿನ ಹಾಸಿಗೆಯಾಗಿತ್ತು.

ಅದಕ್ಕೆ ಕಾರಣ ಆನಂದರಾವ್.

ತನ್ನ ಬದುಕಿನ ಕೊನೆಯ ಕ್ಷಣದ ವರೆಗೂ ಸುಖಪಡಲು ಬಿಡದೆ ಹೀಗೆ ಇದ್ದಕ್ಕಿದ್ದಂತೆ ಒಬ್ಬ ಸಂಸಾರಸ್ಥನನ್ನಾಗಿ ಮಾಡಿದ ರಾಧಳ ಮೇಲೆ ಅವನಿಗೆ ಅಪಾರ ಸಿಟ್ಟು ಬಂತು.

ಜಯಲಕ್ಷ್ಮಿ ಅಡಿಗೆ ಮನೆಯಲ್ಲಿ ಗಡಿಬಿಡಿಯಿಂದ ಓಡಾಡುತ್ತಿದ್ದಳು. ಆನಂದರಾವ್ ಮಾರ್ಕೆಟ್‌ನಿಂದ ಮನೆಯ ಸಾಮಾನುಗಳನ್ನೆಲ್ಲಾ ತಂದಿರಿಸಿ, ಜಯಲಕ್ಷ್ಮಿಯನ್ನು ಮನಸ್ಸಿನಲ್ಲೇ ಬೈದುಕೊಂಡ.

"ಜಯಲಕ್ಷ್ಮಿಯವರೇ" ಎನ್ನುತ್ತಾ ಒಬ್ಬ ಯುವತಿ ಬಾಗಿಲಿನ ಬಳಿ ನಿಂತು ಕರೆದಳು. ಆ ಮಧುರ ಸ್ವರ ಕೇಳುತ್ತಿದ್ದಂತೆಯೇ ಆನಂದರಾವ್ ಕನ್ನಡಿಯಲ್ಲಿ ತನ್ನ ಮುಖವನ್ನು ನೋಡಿಕೊಂಡು ಹೊರಗೋಡಿ ಬಂದ.

ಸುಂದರವಾಗಿ ಹಾಲುಕೋವಾದಂತಿದ್ದಾಳೆ ಅವಳು.

"ಹಲೋ-" ಅಂದ ಆನಂದರಾವ್, ತಾನು ಯಾವಾಗಲೂ ಪ್ರಯೋಗಿಸುವ ಆಕರ್ಷಣೀಯ ಕಿರುನಗೆಯನ್ನು ಪ್ರದರ್ಶಿಸುತ್ತಾ....

ಸಾಧಾರಣವಾಗಿ ಶೇ. ಇಪ್ಪತ್ತೈದು ಜನ ಆ ಕಿರುನಗೆಗೇ ಟೋಪಿ ಬೀಳುತ್ತಾರೆ. ಆದರೆ ಈ ಹುಡುಗಿ ಹಾಗೆ ಬೀಳಲಿಲ್ಲ.

"ಜಯಲಕ್ಷ್ಮಿಯವರಿದ್ದಾರಾ?" ಎಂದು ಕೇಳಿದಳು ಯಾವ ಭಾವನೆಯನ್ನೂ ತೋರಿಸದೆ.

"ಷ್ಹಷ್ಹ, ಇದ್ದಾರೆ. ಸ್ನಾನ ಮಾಡುತ್ತಿದ್ದಾರೆ. ಬನ್ನಿ! ಬರುವವರೆಗೂ ಹಾಗೇ ಕುಳಿತು ಮಾತಾಡೋಣ," ಅವನು ಹೇಳಿದ.

"ಬೇಡ ಬಿಡಿ. ಇಲ್ಲೇ ಇರ್ತೀನೆ" ಹುಡುಗಿ ಹೇಳಿದಳು.

ಆನಂದರಾವ್ ಇನ್ನು ಎರಡನೆ ಬಾಣ ಬಿಡಲು ನಿರ್ಧರಿಸಿಕೊಂಡ. ಮೊದಲನೆ ಬಾಣ ಫೇಲ್ ಆದರೂ ಎರಡನೆಯದು ಹಾಗಾಗುವುದಿಲ್ಲ.

"ನೀವು ತುಂಬಾ ಸುಂದರವಾಗಿ ಕಾಣುತ್ತೀರಿ—" ಮತ್ತಷ್ಟು ಆಕರ್ಷಣೀಯವಾಗಿ ನಗುತ್ತಾ ಹೇಳಿದ. ಸಾಮಾನ್ಯವಾಗಿ ಈ ಡೈಲಾಗ್‌ಗೆ ಶೇ. ತೊಂಬತ್ತರಷ್ಟು ಹುಡುಗಿಯರು ಟೋಪಿ ಬೀಳುತ್ತಾರೆ.

ಆದರೆ ಆ ಹುಡುಗಿ ಅದಕ್ಕೂ ಸೋಲಲಿಲ್ಲ.

"ಹೋಗೀ ಅಂಕಲ್! ನೀವು...ನಾನು ಹೇಗಿದ್ದೀನಂತ ನಂಗೆ ಚೆನ್ನಾಗಿ ಗೊತ್ತಿದೆ. ಆಂಟಿಗಿಂತಲೂ ಸುಂದರಿಯೇನಲ್ಲ—ಬೇಕಾದರೆ ಆಂಟಿ ಹೊರಗೆ ಬಂದ ಮೇಲೆ ನಮ್ಮ ಮಮ್ಮೀನ ಬೇಕಾದರೆ ಜಡ್ಜ್ ಆಗಿ ಕರೀತೀನಿ—" ಅವಳು ಹೇಳಿದಳು.

ಆಗ ಅರ್ಥವಾಯಿತು ಆನಂದರಾವ್‌ಗೆ, ತನ್ನನ್ನು 'ಅಂಕಲ್' ಎಂದು ಕರೆಯಲು ಆ ಹುಡುಗಿಗೆ ಅದೆಷ್ಟು ಧೈರ್ಯ? ಆ ಧೈರ್ಯ ಏಕೆ ಬಂದಿದೆಯೆಂದರೆ ತಾನು ವಿವಾಹಿತನಾದುದರಿಂದ. ಆ ರಾತ್ರಿ ಅವನಿಗೆ ಸರಿಯಾಗಿ ನಿದ್ರೆ ಬರಲಿಲ್ಲ. ಆ ಸುಂದರವಾದ ಹುಡುಗಿಯ ಕನಸು ಕಾಣುತ್ತಿದ್ದಂತೆಯೇ ಜಯಲಕ್ಷ್ಮಿಯೂ ಎಚ್ಚರಗೊಂಡು ಅವನೆಡೆಗೆ ನೋಡಿದಳು.

"ಏನಿದು—ಅರ್ಧರಾತ್ರಿಯ ವೇಳೆ ಈ ಕಿರುನಗೆ? ಹಳೆ ಕೇಸುಗಳೇನಾದರೂ ನೆನಪಾಗುತ್ತಿದೆಯಾ?" ನಗುತ್ತಲೇ ಕೇಳಿದಳು.

"ಇನ್ನೆಲ್ಲಿಯ ಹಳೇ ಕೇಸುಗಳು! ಎಲ್ಲಕ್ಕೂ ಮಂಗಳ ಹಾಡಿಸಿಬಿಟ್ಟೆಯಲ್ಲಾ! ನಮ್ಮ ಫ್ರೆಂಡೊಬ್ಬನು ಸೆಕೆಂಡ್ ಷೋ ಸಿನಿಮಾಗೆ ಹೋಗೋಣ ಅಂತ ಹೇಳಿದ್ದ."

"ಫ್ರೆಂದ್ ಅಂದ್ರೆ ಮೇಲಾ? ಫೀಮೇಲಾ?"

"ಛೀ! ಹಾಗೆಲ್ಲಾ ಮಾತಾಡ್ಬೇಡಾ. ಕಣ್ಣು ಕಾಣಿಸೋಲ್ಲ ಅಷ್ಟೆ. ಅಂತಹ ವನ್ನೆಲ್ಲಾ ಎಂದೋ ಬಿಟ್ಟಿದ್ದೇನೆ" ಆನಂದರಾವ್ ಹೇಳಿದ.

"ಎಷ್ಟು ಒಳ್ಳೆಯವರ್ರಿ. ಈ ಬುದ್ಧಿ ಮೊದಲೇ ಇದ್ದಿದ್ರೆ ನಮ್ಮ ಮದುವೆ ಶಾಸ್ತ್ರೋಕ್ತವಾಗಿ ಹಸೆಮಣೆ ಮೇಲೆ ನಡೀತಿತ್ತು," ನಕ್ಕಳು.

ಆನಂದರಾವ್ ಕೆಂಡವಾದ. ಮತ್ತೆ ರಾಧಳ ಮೇಲೆ ವಿಪರೀತ ಸಿಟ್ಟು ಬಂತು. ಅದೇ ಸಮಯಕ್ಕೆ ಸರಿಯಾಗಿ ಬೀದಿ ಬಾಗಿಲನ್ನು ತಟ್ಟಿದ ಶಬ್ದವಾಯಿತು.

"ರಾತ್ರಿ ಹತ್ತಾಗುತ್ತಾ ಬಂತು. ಈಗ ಯಾರು ಬಂದ್ರಪ್ಪಾ?" ಜಯಲಕ್ಷ್ಮಿ ಗೊಣಗಿದಳು.

ಆನಂದರಾವ್ ಹೋಗಿ ಬಾಗಿಲ ತೆರೆದ. ಎದುರಿನಲ್ಲಿ ಶಚೀದೇವಿ ನಿಂತಿದ್ದಳು.

"ಚೆನ್ನಾಗಿದ್ದೀಯಾ ಆನಂದರಾವ್?" ಕೇಳಿದಳು.

"ಆ್ಞ ಆ್ಞ ಚೆನ್ನಾಗೇ ಇದ್ದೀನಿ," ಜಯಲಕ್ಷ್ಮಿಯ ಕಡೆಗೆ ಭಯದಿಂದ ನೋಡುತ್ತಾ ಹೇಳಿದ.

"ಕೂತ್ಕೊಳ್ಳಿ–ಬನ್ನಿ" ಜಯಲಕ್ಷ್ಮಿ ಶಚೀದೇವಿಯನ್ನು ಆಹ್ವಾನಿಸಿದಳು.

"ಬನ್ನಿ....ಬನ್ನಿ! ಕೂತ್ಕೊಳ್ಳಿ, ಬನ್ನಿ" ಅವಳೇಕೆ ಬಂದಳೆಂದು ಅರ್ಥವಾಗದೆ ಕರೆದ ಆನಂದರಾವ್.

"ನಿಮ್ಮನ್ನು ನೋಡಿ ತುಂಬಾ ದಿನಗಳಾದವು," ಶಚೀದೇವಿ ಕಿರುನಗುತ್ತಾ ಹೇಳಿದಳು. ಆನಂದರಾವ್‌ನ ಪ್ರಾಣ ಹಾರಿದಂತಾಯಿತು. ಜಯಲಕ್ಷ್ಮಿ ಖಚಿತವಾಗಿಯೂ ತಮ್ಮಿಬ್ಬರಿಗೂ ಸಂಬಂಧವಿದೆಯೆಂದು ಅನುಮಾನ ಪಡುತ್ತಿದ್ದಾಳೆ. ಮೊದಲು ತಮಗಿಬ್ಬರಿಗೂ ಯಾವುದೇ ಅನೈತಿಕ ಸಂಬಂಧವಿಲ್ಲವೆಂದು ತೋರಿಸಿಬಿಡಬೇಕು. ಇಲ್ಲದಿದ್ದರೆ ಶಿವ ಶಿವಾ....

"ನಿಮ್ಮನ್ನು ಒಂದೇ ಒಂದು ಸಲ ನೋಡಿದ್ದೆ. ಹೌದು ತಾನೇ?" ಜಯಲಕ್ಷ್ಮಿಗೆ ಕೇಳಿಸುವಂತೆ ಕೇಳಿದ.

"ಅದ್ಯಾಕೆ? ದಿನವೂ ನಮ್ಮ ಬಾರ್‌ಗೆ ಬರುತ್ತಿದ್ದೀಯಲ್ಲಾ! ಆಗಲೇ ಮರೆತು ಬಿಟ್ಟೆಯಾ?" ಜೋರಾಗೇ ಕೇಳಿದಳು ಶಚೀದೇವಿ.

"ಹೌದ್ಹೌದು! ನೆನಪಾಯಿತು–ನೆನಪಾಯಿತು. ದಿನವೂ ಅಂದರೆ ಪ್ರತಿ ದಿನವೂ ಅಲ್ಲ—ಎ....ಎರಡು ಸಲ—ವಾರಕ್ಕೆ....ಎರಡು ಸಲ–ಅಷ್ಟೆ... ಅಷ್ಟೆ," ತಡವರಿಸಿದ ಒಣಗಿದ ನಾಲಗೆಯಲ್ಲಿ.

ಶಚೀದೇವಿಗೆ ಅವನ ಈ ವರ್ತನೆ ಸ್ವಲ್ಪವೂ ಅರ್ಥವಾಗಲಿಲ್ಲ.

ಅವತ್ತು ತನ್ನನ್ನು ನೋಡಿ 'ಸ್ವಲ್ಪ ಏಜ್ ಆದರೇನಂತೆ ಪಾರ್ಕಿಗೆ ಹೋಗೋಣ ಬಾ' ಎಂದು ಅದೆಷ್ಟು ಪ್ರಾಣ ತಿಂದಿದ್ದ. ಇವತ್ತೇಕೆ ಹೀಗೆ ಬಿಗುಮಾನ ತೋರುತ್ತಿದ್ದಾನೆ? ತನ್ನನ್ನು ಕಂಡಕೂಡಲೇ ಸಿನಿಮಾಗೆ ಹೋಗೋಣವಾ ಎಂದು ಕೇಳುತ್ತಾನೇನೋ ಅಂದುಕೊಂಡಿದ್ದವಳಿಗೆ ನಿರಾಶೆಯಾಯಿತು.

ಜಯಲಕ್ಷ್ಮಿಯ ಎದುರಿನಲ್ಲಿ ಹೇಗೆ ಇವನಿಗೆ ವಿಷಯ ತಿಳಿಸುವುದು ಎಂದು ಚಡಪಡಿಸಿದಳು ಶಚೀದೇವಿ. ಹಾಗೆ ಹೇಳಿದರೆ ಜಯಲಕ್ಷ್ಮಿ ಎದುರು

ತ್ತಿರಬಹುದು. ರಾಧಳ ಸಂಸಾರ ಹಾಳಾಗುತ್ತಿದ್ದರೆ ಅವಳು ನೋಡಿಕೊಂಡು ಸುಮ್ಮನಿರುವುದಿಲ್ಲ ಅಲ್ಲವೇ?

ಸೋ....ಏನಾದರೂ ಸುಳ್ಳು ಹೇಳಿ ಅವನನ್ನು ಹೊರಗೆ ಕರೆದೊಯ್ಯಬೇಕು. ಆಮೇಲೆ ಅವನ ಮೆದುಳಿಗೆ ತನ್ನ ಉಪಾಯವನ್ನು ಸೇರಿಸಬೇಕು.

"ಹಾಗೆಯೇ ಸೆಕೆಂಡ್‌ಷೋ ಸಿನಿಮಾಗೆ ಹೋಗೋಣವಾ?" ಕೇಳಿದಳು. ಅವಳಿಗೆ ಗೊತ್ತಿರಲಿಲ್ಲ, ಭಾರತದ ವಿವಾಹಿತ ಯುವಕನೊಬ್ಬನನ್ನು ಅವನ ಹೆಂಡತಿಯೆದುರೇ ಸಿನಿಮಾಗೆ ಆಹ್ವಾನಿಸುವುದು ಪರಮ ಪಾಪವೆಂದು.

"ಓಹೋ! ಈ ಸ್ನೇಹಿತನೇನೋ!" ಹೂಂಕರಿಸಿದಳು ಜಯಲಕ್ಷ್ಮಿ.

ಆನಂದರಾವ್ ಸಂಪೂರ್ಣ ಸುಸ್ತಾದ. ಈ ಶಚೀದೇವಿ ಹೀಗೇಕೆ ಆಡುತ್ತಿದ್ದಾಳೆ? ಮೊದಲು ಅವಳೇಕೆ ತನ್ನ ಮನೆಗೆ ಬಂದಳೋ? ತಲೆ ಕೆಡಿಸಿಕೊಂಡು ಯೋಚಿಸಿದ.

"ಏನ್ರೀ ನೀವು ಮಾತಾಡ್ತಿರೋದು? ಸಿನಿಮಾಗೆ ಹೋಗ್ಬೇಕಾ?" ಅವನು ಕೇಳಿದ.

"ನಿನ್ನೊಡನೆ ಸ್ವಲ್ಪ ಮಾತಾಡಬೇಕು...." ಅವನ ಪರಿಸ್ಥಿತಿಯನ್ನು ಅರ್ಥ ಮಾಡಿಕೊಳ್ಳದೆ ಹೇಳಿದಳು ಶಚೀದೇವಿ.

"ಅದೇನು ಮಾತನಾಡಬೇಕೋ ಇಲ್ಲೇ ಮಾತನಾಡಿ...." ಅವನು ಕೇಳಿದ.

"ಅದು ತುಂಬಾ ರಹಸ್ಯ. ಹೋಗಲಿ ಸಿನಿಮಾಗೆ ಬರೋಕೆ ಇಷ್ಟವಿಲ್ಲದಿದ್ದರೆ ನಮ್ಮ ಬಾರ್‌ಗೆ ಹೋಗೋಣ ಬಾ. ಅಲ್ಲಾದರೆ ಚೆನ್ನಾಗಿರುತ್ತದೆ," ಕರೆದಳು.

ಜಯಲಕ್ಷ್ಮಿಯ ಸಹನೆಯ ಕಟ್ಟೆ ಒಡೆಯಿತು.

"ಏಯ್! ನಿನ್ನ ವಯ್ಯಾರ ತೋರಿಸೋಕೆ ನನ್ನ ಗಂಡನೇ ಬೇಕಾಯ್ತಾ? ಈ ಊರಿನಲ್ಲಿ ಬೇರೆ ಯಾವ ಗಂಡಸೂ ಸಿಗಲಿಲ್ವ?" ಎನ್ನುತ್ತಾ ಶಚೀದೇವಿಯ ಮೇಲೆ ಕಿಡಿಕಾರಿದಳು.

ಶಚೀದೇವಿ ಬಿಳಿಚಿಕೊಂಡಳು.

"ಇದರಲ್ಲಿ ತಪ್ಪೇನಿದೆ?—ಒಂದು ನಿಮಿಷ ಮಾತನಾಡಿದರೆ ತಪ್ಪೇನು?" ತನ್ನದೇನೂ ತಪ್ಪಿಲ್ಲದವಳಂತೆ ಕೇಳಿದಳು.

ಬಾಗಿಲಿನ ಹಿಂದೆ ಇದ್ದ ಪೊರಕೆಯನ್ನು ಕೈಗೆ ತೆಗೆದುಕೊಂಡಳು ಜಯಲಕ್ಷ್ಮಿ. "ಇವತ್ತು ಒಂದು ನಿಮಿಷ ಮಾತನಾಡಿದರೆ ತಪ್ಪಿಲ್ಲ ಅನ್ನುತ್ತೀ. ನಾಳೆ ಅರ್ಧಗಂಟೆ ಪ್ರಣಯ ಕಲಾಪ ನಡೆಸಿದರೆ ತಪ್ಪಿಲ್ಲ ಅನ್ನುತ್ತೀ. ನಾವೇನೋ

ನಿಯತ್ತಾಗಿ ಸಂಸಾರ ಮಾಡ್ತಾ ಇದ್ದೀವಿ. ಮರ್ಯಾದೆಯಿಂದ ಹೊರಗೆ ಹೋಗು" ಕಿರುಚಿದಳು. ಶಚೀದೇವಿ ಜಯಲಕ್ಷ್ಮಿಯ ಕಾಳಿಕಾವತಾರವನ್ನು ಕಂಡು ಹೆದರಿ, ಹೊರನಡೆದಳು.

ಆ ರಾತ್ರಿಯೆಲ್ಲಾ ಜಯಲಕ್ಷ್ಮಿ, ಆನಂದರಾವ್‌ರಿಗೆ ನಿದ್ರೆಬರಲಿಲ್ಲ. ಆನಂದರಾವ್‌ಗೆ ಶಚೀದೇವಿಯನ್ನು ನೆನೆಸಿಕೊಂಡು ನಿದ್ರೆಬರಲಿಲ್ಲ. ಶಚೀದೇವಿ ತನ್ನನ್ನೇಕೆ ಸಿನೆಮಾಗೆ ಆಹ್ವಾನಿಸಿದಳು? ಅಂದರೆ ಅವಳಿಗೆ ತನ್ನ ಮೇಲೆ ಪ್ರೀತಿಯಿದೆಯೆಂದಂತಾಯಿತು. ಅವನ ಮನಸ್ಸೆಲ್ಲಾ ಚಪಲತೆಯಿಂದ ತುಂಬಿತು. ತಾನು ಬೇಕಾದಷ್ಟು ವಿವಾಹಿತ ಸ್ತ್ರೀಯರೊಡನೆ ವ್ಯವಹಾರ ನಡೆಸಿದ್ದನಾದರೂ ಶಚೀದೇವಿಯ ವಿಷಯವೇ ಬೇರೆ. ಒಬ್ಬ ದೇವಕನ್ಯೆ ಯಂತಿದ್ದಾಳೆ. ನಾಳೆ ಆ ದೇವ ಕನ್ಯೆಯೊಡನೆ ತಾನು ಸ್ವರ್ಗ ಸುಖ ಅನುಭ ವಿಸಲಿದ್ದಾನೆ. ಜಯಲಕ್ಷ್ಮಿಯ ಯೋಚನೆಯೇ ಬೇರೆ. ಆನಂದರಾವ್ ತುಂಬಾ ಶೋಕಿಲಾಲ. ಅವನನ್ನು ಹೇಗಾದರೂ ಮಾಡಿ ಬೇರೆ ಹೆಂಗಸರೆಡೆಗೆ ಕಣ್ಣುಹಾಯಿಸದಂತೆ ಮಾಡಬೇಕು.

ಮಾರನೇದಿನ ಆಫೀಸಿಗೆ ಹೋಗುತ್ತೇನೆಂದು ಹೇಳಿದ ಆನಂದರಾವ್ 'ಇಂದ್ರ ಸಭಾಬಾರ್'ಗೆ ಬಂದ ಶಚೀದೇವಿ ಅವನನ್ನು ಕಂಡು ಹಿಗ್ಗಿದಳು.

"ನೀನು ಬಂದೇ ಬರುತ್ತೀಯೆಂದು ನನಗೆ ನಂಬಿಕೆಯಿತ್ತು" ನಗುತ್ತಾ ಹೇಳಿದಳು.

"ಬರದೆ ಹೇಗಿರಲಿ?" ಅವಳೆಡೆಗೆ ತೀಕ್ಷ್ಣವಾಗಿ ನೋಡುತ್ತಾ ಹೇಳಿದ. ಅವನ ನೋಟ ಅವಳಿಗೆ ಇಷ್ಟವಾಗಲಿಲ್ಲವಾದರೂ ಅವನಿಂದ ಈಗ ಕೆಲಸವಾಗ ಬೇಕಾಗಿತ್ತು—ಹಾಗಾಗಿ ಸುಮ್ಮನೆ ನಕ್ಕಳು. ಅವನ ಮೂಲಕವೇ ಸರಸ್ವತಿಯ ಮೇಲೆ ಸೇಡುತೀರಿಸಿಕೊಳ್ಳಬೇಕಾಗಿತ್ತು.

"ಬಾ! ಒಳಗೆ ಹೋಗೋಣ" ಎನ್ನುತ್ತಾ ಬಾರ್‌ಗೆ ಅಟ್ಯಾಚ್ ಆಗಿದ್ದ ಮತ್ತೊಂದು ಕೋಣೆಗೆ ನಡೆದಳು. ಆನಂದರಾವ್ ಸಂತೋಷದಿಂದ ಅವಳನ್ನು ಹಿಂಬಾಲಿಸಿದ. ಕೋಣೆಯು ಒಳ್ಳೆ ಸಿನೆಮಾ ಸ್ಟುಡಿಯೋದಂತೆ ಅಲಂಕರಿಸ ಲ್ಪಟ್ಟಿತ್ತು. ಅವಳೆಡೆಗೆ ಬಯಕೆಯಿಂದ ನೋಡುತ್ತಾ, "ಆಪರೇಷನ್ ಆಗಿದೆಯಾ?" ಎಂದು ಕೇಳಿದ. "ಇಲ್ಲದಿದ್ದರೆ ಬೇರೆ ಅರೇಂಜಮೆಂಟ್ಸ್ ಮಾಡೋಣ" ಅವಳಿಗೇನೂ ಅರ್ಥವಾಗಲಿಲ್ಲ.

"ಆಪರೇಷನ್ ಎಂದರೇನು?" ಕುತೂಹಲದಿಂದ ಕೇಳಿದಳು.

"ಅದೇ—ಮಕ್ಕಳಾಗದಂತೆ—"

"ಅದೇಕೀಗ—"

"ಅದೇ–ನಿಮಗೆ ಯಾವ ಟ್ರಬಲ್ ಇಲ್ಲದೆ ಎಲ್ಲಾ ಸುಖವಾಗಿ ನಡೆದು ಬಿಡುತ್ತಲ್ಲಾ ಅಂತ".

"ಏನು ನೀನು ಮಾತಾಡ್ತಿರೋದು? ಹೇಳುವುದೇನೋ ವಿವರವಾಗಿ ಹೇಳು," ಸಿಡುಕಿದಳು.

"ಓ. ಕೆ. ಮೇಡಮ್! ಆ ವಿಷಯವನ್ನು ಆ ಮೇಲೆ ನೋಡಿ ಕೊಳ್ಳೋಣ. ಇನ್ನು ನಾವು ಪ್ರಾರಂಭಿಸೋಣವೇ ?" ಎನ್ನುತ್ತಾ ಅವಳ ಭುಜದ ಮೇಲೆ ಕೈಹಾಕಿದ. ಮರುಕ್ಷಣವೇ ಅವನ ಕೆನ್ನೆ ಛಳ್ಳೆಂದಿತು.

"ಏನು ಮೈಗೆ ಹೇಗಿದೆ?" ಕೋಪದಿಂದ ಕೇಳಿದಳು.

"ಅದೇನ್ರಿ? ನೀವೇ ಸಿನಿಮಾ ಅಂದ್ರಿ... ಅದೂ ಇದೂ ಅಂದ್ರಿ! ಈಗ ಕೆನ್ನೆಗೆ ಹೊಡೀತೀರಲ್ಲಾ" ಸಿಟ್ಟಿನಿಂದಲೇ ಕೆನ್ನೆ ಸವರಿಕೊಳ್ಳುತ್ತಾ ಹೇಳಿದ ಆನಂದರಾವ್.

"ಹೌದು. ನಿನ್ನೊಡನೆ ಮಾತನಾಡಬೇಕೆಂದು ಸಿನಿಮಾಗೆ ಕರೆದೆನಾಗಲೀ, ಹೀಗೆ ಮೋಜು ಮಾಡೋಕೆ ಅಲ್ಲಾ."

"ಅರೆ! ಅಲ್ಲಾರೀ! ಈಗ ಹೇಗೆ ಮತ್ತೆ? ನಾನು ಅದಕ್ಕೆ ಪ್ರಿಪೇರಾಗಿ ಬಂದಿದೇನಲ್ರಿ?" ಯೋಚಿಸುತ್ತಾ ಹೇಳಿದ.

"ಮೊದಲು ನಾನುಹೇಳೋ ವಿಷಯಾನ ಕೇಳು" ಕೋಪವನ್ನು ತಡೆದು ಕೊಳ್ಳುತ್ತಾ ಹೇಳಿದಳು.

"ಸರಿ ಹೇಳಿ! ಏನದು?"

"ನಿನ್ನನ್ನು ಅಷ್ಟು ಅವಮಾನಗೊಳಿಸಿ, ನಿನಗೆ ಆ ಜಯಲಕ್ಷ್ಮಿಯೊಡನೆ ಮದುವೆ ಮಾಡಿಸಿದ ರಾಧಳನ್ನು ಸುಮ್ಮನೆ ಬಿಡುತ್ತೀಯಾ?"

"ಇನ್ನೇನು ಮಾಡೋಕೆ ಆಗುತ್ತೆ?" ಮುಗ್ಧನಂತೆ ಕೇಳಿದ.

"ಯೋಚಿಸಿದ್ರೆ ಬೇಕಾದಷ್ಟು ಉಪಾಯಗಳು ಸಿಗುತ್ತೆ–" ಕಿರುನಗುತ್ತಾ ಹೇಳಿದಳು.

"ಆದರೆ ಅವಳನ್ನು ರೇಪ್ ಮಾಡೋಕೆ ನನಗಿಷ್ಟವಿಲ್ಲ."

ಶಚೀದೇವಿ ಬೆಚ್ಚಿ ಬಿದ್ದಳು.

"ಅದೇನು? ರೇಪ್ ಮಾಡೂಂತ ಯಾರು ಹೇಳಿದ್ರು?"

"ಸುಂದರವಾದ ಹುಡುಗಿ ಕೊಬ್ಬು ಮಾಡಿದ್ರೆ ಅದಕ್ಕಿಂತ ಹೆಚ್ಚಾಗಿ ಇನ್ನೇನು ಮಾಡ್ತೀವ್ರಿ? ಆದರೆ ನನ್ನ ಪಾಲಿಸಿ ರೇಪ್‌ಗೆ ವಿರುದ್ಧವಾದದ್ದು! ಒಂದು ವೇಳೆ ಅದೇ ನನ್ನ ಪಾಲಿಸಿಯಾಗಿದ್ದಿದ್ದರೆ ನಿಮ್ಮನ್ನು ಯಾವಾಗಲೋ.... ಸರಿ ಬಿಡಿ! ಈಗ ನಿಮ್ಮ ಸಮಸ್ಯೆಯೇನು ? ಒಂದಲ್ಲ ಒಂದುದಿನ ನೀವೇ ಪಶ್ಚಾತ್ತಾಪ ಪಡ್ತೀರ–"

ಶಚೀದೇವಿ ಎರಡೂ ಕೈಗಳಿಂದ ತಲೆ ಒತ್ತಿಕೊಂಡಳು.

"ನೀನು ಸ್ವಲ್ಪಹೊತ್ತು ಈ ಹುಚ್ಚುಚ್ಚು ಮಾತು ನಿಲ್ಲಿಸ್ತೀಯಾ ಇಲ್ವಾ?"

"ಸರಿ–ಹೇಳೀ ನೀವೇ–"

"ರಾಧಳ ಮೇಲೆ ಸೇಡು ತೀರಿಸಿಕೊಳ್ಳಬೇಕೆಂದರೆ ಇನ್ನೊಂದು ದಾರಿಯಿದೆ–"

"ಏನದು?" ಆತುರದಿಂದ ಕೇಳಿದ.

"ಅವಳು ನಿನ್ನ ಒದುಕನ್ನು ಹಾಳು ಮಾಡಿದ್ದಕ್ಕೆ ನೀನು ಅವಳ ಸಂಸಾರ ವನ್ನು ನಾಶಮಾಡಬೇಕು."

"ಆದರೆ ಅವಳು ನನ್ನ ಬದುಕನ್ನೆಲ್ಲಿ ಹಾಳುಮಾಡಿದಳೂರೀ? ನನ್ನ ಕೋಪವೆಲ್ಲಾ ವ್ಯವಹಾರಕ್ಕೆ ರೆಡೀ ಎಂದು ಬಂದು ನಂಬಿಕೆದ್ರೋಹ ಮಾಡಿದ ಳೆಂದು ಅಷ್ಟೇ."

"ಅದೇಕೆ? ಜಯಲಕ್ಷ್ಮಿಯೊಡನೆ ಮದುವೆ ಮಾಡಿಸಿ ನಿನ್ನ ಬದುಕನ್ನು ಹಾಳುಮಾಡಲಿಲ್ಲವಾ?"

"ನಾನು ಬಲವಂತದಿಂದ ತಾಳಿಕಟ್ಟುತ್ತಿದ್ದಾಗ ಹಾಗೆಯೇ ಅಂದು ಕೊಂಡಿದ್ದೆ. ಆದರೆ ನಿಜ ಹೇಳಿ ಬಿಡುತ್ತೇನೆ ಕೇಳಿ. ಹಾಸಿಗೆ ಮೇಲೆ ಜಯಲಕ್ಷ್ಮಿ ನಿಜಕ್ಕೂ ತುಂಬಾ ಆಕ್ಟೀವ್ ಕಣ್ರಿ! ನಿಜ ಹೇಳ್ತಿದೀನಿ–ಇಷ್ಟು ಜನ ಹುಡುಗಿಯರೊಡನೆ ನಂಗೆ 'ಇದು' ಇದೆಯಲ್ಲಾ! ಆದರೂ ಜಯ ಲಕ್ಷ್ಮಿಯ 'ಇದರ' ಮುಂದೆ ಬೇರೆ ಎಲ್ಲಾ ತೀರಾ ಸಪ್ಪೆ."

ಶಚೀದೇವಿ ಮತ್ತೆ ತಲೆ ಒಡಿದುಕೊಂಡು ಕುಳಿತಳು.

"ಆದರೂ ಇನ್ನೆಷ್ಟೋ ಜನ ಹುಡುಗಿಯರೊಡನೆ ನೀನು ಹಾಯಾಗಿ ಕಳೆಯುವುದು ತಪ್ಪಿತಲ್ಲ."

"ಆ ಮಾತೇನೋ ನಿಜಾನೇ! ಮದುವೆಯಾದವನೆಂದರೆ ಎಷ್ಟಾದರೂ ಅಟ್ರ್ಯಾಕ್ಷನ್ ಕಡಿಮೆ ಆಗುತ್ತೆ ಬಿಡಿ. ಈ ರೀತಿ ಮದುವೆಯಿಂದ ಪೆಟ್ಟುತಿಂದೆ ಅಷ್ಟೆ!" ನಿರಾಸೆಯಿಂದ ಹೇಳಿದ.

ಶಚೀದೇವಿ ಸಂತೋಷದಿಂದ ಅವನ ಕೈ ಹಿಡಿದಳು.

"ಹೌದಾ ? ಸರಿಹಾಗಾದರೆ ಅವಳ ಮೇಲೆ ಸೇಡು ತೀರಿಸಿಕೋ."

"ಆದರೆ ರೇಪ್ ಮಾಡುವುದು..." ಹಿಮ್ಮೆಟ್ಟಿದ.

"ಅಬ್ಬ! ರೇಪ್ ಅನವಶ್ಯವಿಲ್ಲಯ್ಯಾ ಗಂಡಸೇ! ನೀನು ಮಾಡ ಬೇಕಾದ್ದೇನೆಂದರೆ ಅವಳಗಂಡ ಸಾತ್ವಿಕರಾವ್ ಬ್ಯಾಂಕಿನಿಂದ ಮನೆಗೆ ಬರುವ ಸಮಯ ನೋಡಿ ಅವಳಿಗೆ ಚುಂಬಿಸುತ್ತಿರಬೇಕು. ಅವನು ಅದನ್ನು ನೋಡ ಬೇಕು."

ಆನಂದರಾವ್ ನಿರಾಸೆಯಿಂದ ಎದ್ದು ನಿಂತ.

"ಚೆನ್ನಾಗಿದೆ! ಮತ್ತೆ ಎರಡನೆ ಸಲ ಅವಳಿಂದ ಕೆನ್ನೆ ಬಡಿಸ್ಕೋ ಬೇಕೂಂತಾನಾ?"

"ರಾಧಾ ಏಕೆ ನಿನ್ನ ಹೊಡೀತಾಳೆ? ನೀನು ಆನಂದರಾವ್ ಎಂದು ಅವಳಿಗೆ ಹೇಗೆ ತಿಳಿಯುತ್ತದೆ. ನೀನೂ ಸಾತ್ವಿಕರಾವ್ ಇಬ್ಬರೂ ಒಂದೇ ರೀತಿ ಇದ್ದೀರಲ್ಲಾ! ಸೋ...ನೀನು ಸ್ವಲ್ಪ ಸಾತ್ವಿಕರಾವ್ ಥರ ನಟಿಸಿದರೆ ಸಾಕು."

ಆ ಆಲೋಚನೆ ಚೆನ್ನಾಗಿಯೇ ಕಂಡಿತು ಆನಂದರಾವ್‌ಗೆ.

"ಉಪಾಯವೇನೋ ಚೆನ್ನಾಗಿದೆ ಮೇಡಂ ನನ್ನ ಕೇಳಿದರೆ ಬರೀ ಚುಂಬನಕ್ಕೆ ನಿಲ್ಲಿಸದೆ ಸ್ವಲ್ಪ ಮುಂದುವರೆದು ನನ್ನ ಆಸೇನೂ ನೆರವೇರಿಸಿ ಕೊಂಡರೆ ಒಳ್ಳೆದೂ ಅನ್ನಿಸುತ್ತಿದೆ– ಏನಂತೀರಿ?"

ಆಶ್ಚರ್ಯಪಟ್ಟಳು ಶಚೀದೇವಿ. "ಈಗ ತಾನೇ ಅದು ನಿನ್ನ ಪಾಲಿಸೀಗೆ ವಿರುದ್ಧ ಅಂತ ಹೇಳ್ದಿ?"

"ಬಲವಂತದಿಂದ ರೇಪ್ ಮಾಡುವುದು ನನ್ನ ಪಾಲಿಸೀಗೆ ವಿರುದ್ಧ ಅಂತ ಹೇಳಿದ್ದೆ. ನಿಮಗೆ ಗೊತ್ತಿಲ್ದೇ ಇರೋದೇನಿದೆ? ಬೆಳಗಾಗೆದ್ರೆ ನಾವು ನಮಸ್ಕಾರ ಮಾಡೋ ಇಂದ್ರನೇ ಮೋಸದಿಂದ ಅಹಲ್ಯೆಯೊಡನೆ ವ್ಯವಹಾರ ಮಾಡ್ತಾನೆ–" ಶಚೀದೇವಿ ಕೋಪದಿಂದ ಎದ್ದು ನಿಂತಳು.

"ಸಾಕು–ಇನ್ನು ನೀನು ಹೊರಡು" ಅಂದಳು ಅವಮಾನದಿಂದ ಬೆಂದು ಹೋಗಿ.

"ಆದರೂ ನನಗೆ ತಿಳಿಯದಿದ್ದುದರಿಂದ ಕೇಳುತ್ತೇನೆ ಮೇಡಂ! ಆ ಅಹಲ್ಯೆಗೆ ಇಷ್ಟು ಗೊತ್ತಾಗೋದಿಲ್ವ? ತುಂಬಾ ಜನಕ್ಕೆ ಗೊತ್ತಾಗಿಬಿಟ್ಟಿದೆ...." ಶಚೀದೇವಿ ಇನ್ನು ಅಲ್ಲಿ ನಿಲ್ಲಲಿಲ್ಲ. ಕೋಪದಿಂದ ಹೊರಟುಹೋದಳು. ಆನಂದರಾವ್ ಸಂತೋಷದಿಂದ ವಿಷಲ್ ಹಾಕಿಕೊಳ್ಳುತ್ತಾ ಹೊರಗೆ ಬಂದ. ಆ ದಿನವೇ ರಾಧಳಿಗೆ ಮೋಸಮಾಡಿ ಎಂಜಾಯ್ ಮಾಡುವ ಕಾರ್ಯಕ್ರಮ ವನ್ನು ಹಾಕಿಕೊಂಡ. ಶಚೀದೇವಿ ತನ್ನ ಕಿವಿಯಲ್ಲಿ ಏನೋ ಪ್ರತೀಕಾರ, ಸೇಡು ಅಂತಹ ಪದಗಳನ್ನು ತುಂಬಿದಳಾದರೂ ತನಗೆ ಅದು ಬೇಕಾಗಿರಲಿಲ್ಲ. ತನಗೆ ರಾಧ ಒಂದು ಸಲ ನಿರಾಶೆಪಡಿಸಿದ್ದಾಳೆ. ಆದ್ದರಿಂದ ಸಾತ್ವಿಕರಾವ್ ನಂತೆ ನಟಿಸಿ ಅವಳೊಡನೆ ವ್ಯವಹಾರ ನಡೆಸಿ ಆಗ "ಹ್ಹ ಹ್ಹ ಹ್ಹಾ ರಾಧ! ನನಗೇ ಮೋಸಮಾಡಿದೆಯಾ? ಈಗ ನೋಡು. ನಾನು ನಿನ್ನ ಗಂಡನಂತೆ ನಟಿಸಿ ನಿನ್ನನ್ನು ಮೋಸಮಾಡಿ ನನಗೆ ಬೇಕಾಗಿದ್ದ ಅನುಭವವನ್ನು ಸಂಪಾದಿಸಿ

ಕೊಂಡೆ. ಬರ್ತೀನಿ!" ಎನ್ನಬೇಕು. ಆನಂತರ ರಾಧಾ ಬದುಕೆಲ್ಲಾ ಪಶ್ಚಾತ್ತಾಪ ಪಡಬೇಕು.

ರಾಧಳನ್ನು ಹತ್ತಿರಕ್ಕೆಳೆದುಕೊಂಡ ಸಾತ್ವಿಕರಾವ್. ಎಳೆದುಕೊಂಡು ಆಕಾಶದ ಕಡೆಗೆ ನೋಡಿದ. ನಂತರ ಕಣ್ಣು ಮುಚ್ಚಿಕೊಂಡ.

"ಪ್ರೀತಿಯ ಭಗವಂತಾ! ಪ್ರಪಂಚದಲ್ಲಿ ಯಾರಿಗೂ ಕೊಡದ ಅದೃಷ್ಟ ವನ್ನು ನನಗೆ ಕೊಟ್ಟಿದ್ದಿ! ಹಗಲು-ರಾತ್ರಿ ನಿದ್ರಾಹಾರಗಳು ಇಲ್ಲದೆ ಆ ಅದೃಷ್ಟವನ್ನು ಅನುಭವಿಸುತ್ತಿದ್ದರೂ ತೀರದಷ್ಟು ಸುಖಿಸಿಗುತ್ತಿದೆ. ಇದಕ್ಕಾಗಿ ನಿನಗೆ ನನ್ನ ಕೃತಜ್ಞತೆಗಳನ್ನು ಅರ್ಪಿಸುತ್ತಿದ್ದೀನಿ. ಓಮೆನ್."

ರಾಧ ನಕ್ಕಳು.

"ಏನು ಆ ಅದೃಷ್ಟ ?" ತುಂಟತನದಿಂದ ಕೇಳಿದಳು.

"ಇನ್ನೇನಿದೆ? ನಿನ್ನ ಬಗ್ಗೆಯೇ ದೇವರಿಗೆ ಥ್ಯಾಂಕ್ಸ್ ಹೇಳುತ್ತಿದ್ದೇನೆ." ಸಾತ್ವಿಕರಾವ್ ಹೇಳಿದ.

"ಸಾಕು ಇನ್ನು ಹೋಗಿ! ಬ್ಯಾಂಕ್ ತೆಗೆದು ಐದು ನಿಮಿಷಗಳಾಗಿ ಹೋಗಿರುತ್ತೆ."

ಅವನ ಹಿಡಿತದಿಂದ ಬಿಡಿಸಿಕೊಳ್ಳುತ್ತಾ ಹೇಳಿದಳು.

"ಹೋಗಲೀ ಇವತ್ತೊಂದು ದಿನ ಬ್ಯಾಂಕಿಗೆ ರಜಾ ತಗೊಂಡು ಬಿಡ್ತೀನಿ.

"ಸಾಧ್ಯವಿಲ್ಲ. ಈಗಾಗಲೇ ಈ ವರ್ಷದ ರಜೆಯೆಲ್ಲಾ ಎರಡು ತಿಂಗಳಲ್ಲೆ ಮುಗಿಸಿದ್ದೀರಿ" ದಬಾಯಿಸಿದಳು.

"ಹೋಗಲೀ ಲಾಸ್ ಆಫ್ ಪೇ ಮೇಲೆ ರಜೆ ತಗೋತೀನಿ."

"ಲಾಸಾಫ್ ಎನರ್ಜಿ-ಲಾಸಾಫ್ ಪೇ-ಎರಡು ನಷ್ಟಗಳು-ಬೇಡ ತುಂಟತನದಿಂದ ಹೇಳಿದಳು.

ಸಾತ್ವಿಕರಾವ್ ಇಷ್ಟವಿಲ್ಲದೇ ಬ್ಯಾಂಕಿಗೆ ಹೊರಟು, ಎರಡು ಹೆಜ್ಜೆ ಹ ನಿಂತು ಬಿಟ್ಟ.

"ಹೋಗಲೀ ಲಂಚ್ ಟೈಂನಲ್ಲಿ ಬರ್ತೀನಿ."

"ಬೇಡ....ಸುತ್ತಮುತ್ತಲಿನವರೆಲ್ಲಾ ಈಗಾಗಲೇ ಬೈಸಾಕ್ಯಾಲ ಕೊಳ್ಳುತ್ತಿದ್ದಾರೆ."

"ಪಾಪ ಅವರಿಗೇಕೆ ಖರ್ಚು ನಮ್ಮಿಂದ—"

ಅವನನ್ನು ಬಲವಂತದಿಂದ ತಳ್ಳಿ ಬಾಗಿಲು ಹಾಕಿಕೊಂಡಳು. ಮರು ಕ್ಷಣವೇ ಬಾಗಿಲು ತಟ್ಟಿದ. ಬಾಗಿಲನ್ನು ತೆಗೆದ ರಾಧಳನ್ನು ಕಂಡು–"ಹೋಗೋಕೆ ಮುಂಚೆ ಮುಖ್ಯವಾದ ವಿಷಯವನ್ನೇ ಮರೆತಿದ್ದೆ–" ಸಾತ್ವಿಕರಾವ್ ಒಳಗೆ ನುಗ್ಗುತ್ತಾ ಹೇಳಿದ.

"ಏನು?" ರಾಧಾ ಕೇಳುವುದಕ್ಕೆ ಮುಂಚೆಯೇ– "ಇದು" ಎನ್ನುತ್ತಾ ಅವಳ ತುಟಿಗಳನ್ನು ಮೃದುವಾಗಿ ಕಚ್ಚಿ ದೀರ್ಘವಾಗಿ ಚುಂಬಿಸಿದ. ಮತ್ತೆ ತುಂಬಾ ಹೊತ್ತು ವಿಶ್ವ ಪ್ರಯತ್ನ ಮಾಡಿ ಅವನನ್ನು ಹೊರಗೆ ತಳ್ಳಿ ಚಿಲಕ ಹಾಕಿಕೊಂಡಳು.

ಅವನು ಸ್ಕೂಟರಿನಲ್ಲಿ ರಸ್ತೆಯ ಮೇಲೆ ಒಂದು ತಿರುವು ತಿರುಗುವ ವರೆಗೂ ಕಿಟಕಿಯಿಂದ ನೋಡಿ ಹಿಂತಿರುಗಿ ಬಂದಳು.

ಮಧ್ಯಾಹ್ನ ಒಂದು ಗಂಟೆಗೆ ಸರಿಯಾಗಿ ಡೋರ್‌ಬೆಲ್ ಬಾರಿಸಿತು. "ಮತ್ತೆ ಬಂದರೇನೋ..ಹೀಗೇ ಆದರೆ ಕೆಲಸ ಕಳ್ಕೋತಾರೆ" ಅಂದುಕೊಂಡಳು.

ಅವನನ್ನು ಹೇಗಾದರೂ ಹಾಗೆಯೇ ಹೊರಗಿನಿಂದಲೇ ಕಳಿಸಬೇಕೆಂದು ಕೊಂಡು ಬಾಗಿಲ ತೆರೆದಳು.

ಕಿರುನಗುತ್ತಾ ಎದುರಿನಲ್ಲಿ ಆನಂದರಾವ್ ನಿಂತಿದ್ದ. ಆದರೆ ಸಾತ್ವಿಕ ರಾವ್‌ನಂತೆಯೇ ತನ್ ಹೇರ್‌ಸ್ಟೈಲನ್ನು ಬದಲಾಯಿಸಿಕೊಂಡಿದ್ದರಿಂದ ಅವಳಿಗೆ ಅನುಮಾನ ಬರಲಿಲ್ಲ.

"ಇದೇನು ಅವತಾರ? ಈ ಡ್ರೆಸ್ ಎಲ್ಲಿತ್ತು?" ಅವನ ಡ್ರೆಸ್ ನೋಡುತ್ತಾ ಕೇಳಿದಳು.

ಆನಂದರಾವ್ ಬೆಚ್ಚಿಬಿದ್ದ.

ತಾನು ತುಂಬ ಡಬಲ್‌ಆಕ್ಷನ್ ಸಿನೆಮಾಗಳನ್ನು ನೋಡಿದ್ದನಾದರೂ ಆ ಎರಡನೆಯವನ ಡ್ರೆಸ್‌ಕಂಟಿನ್ಯುಟಿ ಬಗ್ಗೆ ತಲೆಕೆಡಿಸಿಕೊಂಡಿರಲಿಲ್ಲ.

"ಇದು ನನ್ನ ಫ್ರೆಂಡ್ ಸೀತಾಪತೀದು."

"ನಿಮ್ಮ ಫ್ರೆಂಡ್ 'ಸೀತಾಪತಿ' ಅಂತ ಯಾರೂ ಇರ್ಲಿಲ್ಲವಲ್ಲಾ?"

"ಹ್ಹಾ ಹೊಸದಾಗಿ ಬ್ಯಾಂಕಿಗೆ ಒಬ್ಬ ಸೀತಾಪತಿ ಅಂತ ಬಂದಿದ್ದಾನೆ. ನಿಂಗೆ ಹೇಳೋದನ್ನ ಮರೆತಿದ್ದೆ. ಬೆಳಗ್ಗೆ ಬ್ಯಾಂಕಿಗೆ ಹೋದ ತಕ್ಷಣ ಬಾತ್ ರೂಂನಲ್ಲಿ ಜಾರಿಬಿದ್ದೆ. ಬಟ್ಟೆಯಲ್ಲಾ ಒದ್ದೆ ಆಯ್ತು. ಕೂಡಲೇ ಪಕ್ಕದಲ್ಲಿ ಇದ್ದ ಅವನ ಮನೆಗೆ ಹೋಗಿ ಬಟ್ಟೆ ಬದಲಾಯಿಸಿಕೊಂಡೆ."

ರಾಧೆ ನಕ್ಕಳು.

ಅವನು ಒಳಗೆ ಬಂದ. "ಬೇಗ ಬಟ್ಟೆ ಬದಲಾಯಿಸಿಕೊಂಡು ಹೊರಡಿ" ರಾಧೆ ಹೇಳಿದಳು. ಆನಂದರಾವ್ ಅವಳೊಡನೆ ಬೆಡ್‌ರೂಮಿಗೆ ಹೋದ.

ಅನಾಮತ್ತಾಗಿ ರಾಧಳನ್ನು ತನ್ನೆರಡು ಕೈಗಳಿಂದ ಎತ್ತಿ ಮಂಚದ ಮೇಲೆ ಮಲಗಿಸಿದ. ರಾಧಳಿಗೆ ಅರ್ಥವಾಗಿ ಹೋಯಿತು.

"ನಂಗೆಲ್ಲ ಗೊತ್ತು ನೀವು ಇವಕ್ಕೆ ಬಂದಿದ್ದೀರಿ"– ಅವನಿಂದ ತಪ್ಪಿಸಿ ಕೊಳ್ಳಲು ಪ್ರಯತ್ನಿಸುತ್ತಾ ಹೇಳಿದಳು.

"ಹ್ಞ! ತಿಳಿದು ಹೋಯಿತಾ? ಹೇಗೆ ಗೊತ್ತಾಯ್ತು? ನಾನಿನ್ನೂ ಪ್ರಾರಂಭಿಸಿಯೇ ಇಲ್ಲವಲ್ಲ!" ಎನ್ನುತ್ತಾ ಅವಳನ್ನು ಪೂರ್ತಿಯಾಗಿ ಆಕ್ರಮಿಸಿ ಕೊಂಡ. ಸ್ವಲ್ಪ ಹೊತ್ತು ಸರಿದಾಡಿದ ರಾಧ ಇನ್ನು ಪ್ರಯೋಜನವಿಲ್ಲವೆಂದು ಅರಿತು ಸುಮ್ಮನಾದಳು. ಆಗಲೇ ಅವಳ ಶರೀರ ಅವನ ಬಂಧನದಲ್ಲಿ ಹೊಸಳಿ ಹೊರಳಿ ಕೋರಿಕೆಗಳನ್ನು ಕೆರಳಿಸುತ್ತಿತ್ತು.

"ಛಿ! ನಿಮಗೆ ವೇಳೆ, ಸಮಯ ಒಂದೂ ಗೊತ್ತಾಗೋದಿಲ್ಲ" ಎಂದಳು ತನ್ನನ್ನು ಅರ್ಪಿಸಿಕೊಳ್ಳುತ್ತಾ ಆನಂದರಾವ್ ವಿಜಯದ ನಗೆ ನಕ್ಕ.

"ಹೌದು ರಾಧಾ— ಇದಕ್ಕೆ ವೇಳೆ ಸಮಯದ ಅವಶ್ಯಕತೆಯಿಲ್ಲ" ಎನ್ನುತ್ತಾ ಸೀರೆಯನ್ನು ಎಳೆದೆಳೆದು ದೂರಕ್ಕೆ ತಳ್ಳಿದ.

ಸರಸ್ವತಿ ಚೇಳು ಕಚ್ಚಿದವಳಂತೆ ಕಿರುಚಿದಳು.

ಬ್ರಹ್ಮ ಆ ಕಿರುಚಾಟಕ್ಕೆ ಹೆದರಿ ಆ ಕ್ಷಣದಲ್ಲಿ ಕೆಲವು ನೂರಾರು ಅಂಗವಿಕಲ ರನ್ನು ಸೃಷ್ಟಿಸಿದ.

"ಏನು? ಏನಾಯಿತು?" ಸರಸ್ವತಿಯೆಡೆಗೆ ಆಶ್ಚರ್ಯದಿಂದ ನೋಡುತ್ತಾ ಕೇಳಿದ.

"ಏನು ನಡಿಯೋದೇನು? ಆ ಶಚೀದೇವಿಯನ್ನು ನೋಡಿದಿರಾ? ಎಂತಹ ಕೆಲಸ ಮಾಡಿದ್ದಾಳೆ ಹೊಟ್ಟೆಕಿಚ್ಚಿಗೆ?"

"ಏನು ಮಾಡಿದ್ದಾಳೆ?"

ಸಾತ್ವಿಕರಾವ್ ರಾಧರನ್ನು ಒಳ್ಳೆಯ ಜೊತೆ ಮಾಡಿ "ಮೇಡ್ ಫಾರ್ ಈಚ್ ಅದರ್" ಸ್ಪರ್ಧೆಗೆ ರೆಡಿ ಮಾಡುತ್ತಿದ್ದರೆ, ಅವರ ಸಂಸಾರವನ್ನು ನಾಶ ಮಾಡಲು ಆನಂದರಾಯನನ್ನು ಕಳಿಸಿದ್ದಾಳೆ."

"ನಾಶ ಅಂದರೆ ಏನು ಮಾಡುತ್ತಿದ್ದಾಳೆ?"

"ಇನ್ನೇನು ಮಾಡುತ್ತಾಳೆ? ರಾಧಳ ಶೀಲವನ್ನು ಹಾಳು ಮಾಡುತ್ತಾಳೆ. ಅದರಿಂದ ಕ್ರಮೇಣ ಅವಳ ಸಂಸಾರ ಹಾಳಾಗುತ್ತೆ. ಅದರಿಂದ ಅವರಿಬ್ಬರೂ ವಿಚ್ಛೇದನ ಪಡೆಯುತ್ತಾರೆ."

"ಆದರೆ ನಾನು ಬರೆದ ರಾಧಳ ಹಣೆಬರಹದಲ್ಲಿ ಅವಳಿಗೆ ವಿಚ್ಛೇದವಿಲ್ಲವಲ್ಲಾ?" ಸರಸ್ವತಿಯ ಮೈಯೆಲ್ಲಾ ಉರಿದು ಹೋಯಿತು.

"ಆ ಬರಿದಿದ್ದೀರಿ ಬಿಡಿ ಭಾರಿ–ಬರಹಾನ! ಒಟ್ಟಿನಲ್ಲಿ ನನ್ನ ಹಣೇಲಿ ಸರಿಯಾಗಿ ಬರೀಲಿಲ್ಲ ನೀವು–ಅದೆಲ್ಲಾ ಇರಲಿ ಈಗ ರಾಧಳ ಗತಿಯೇನು ಯೋಚಿಸಿ," ಕೇಳಿದಳು.

"ಯೋಚಿಸಿ ನಾಳೆ ಹೇಳುತ್ತೇನೆ" ಬ್ರಹ್ಮ ಹೇಳಿದ.

"ಅತ್ತ ಹಾಗೇ ಇದೆ! ಅಲ್ಲಾರೀ ರಾಧಳ ಶೀಲ ಇನ್ನು ಕೆಲವೇ ಕ್ಷಣಗಳಲ್ಲಿ ಹಾಳಾಗ್ತಿದೆ ಏನೋ ನಾಳೆ ಹೇಳ್ತಾರಂತೆ. ಊರೆಲ್ಲಾ ದೋಚಿದ ಮೇಲೆ ಕೋಟೆ ಬಾಗಿಲು ಹಾಕಿದ ಹಾಗೆ!" ಗೊಣಗಿದಳು.

ಆನಂದರಾವ್ ರಾಧಳ ಶರೀರವನ್ನೆಲ್ಲಾ ಚುಂಬಿಸುತ್ತಿದ್ದಾನೆ. ರಾಧಳಿಗೆ ಎಚ್ಚರ ತಪ್ಪಿದಷ್ಟು ಸಂತೋಷವಾಗಿದೆ.

"ಅಯ್ಯೋ ಬೇಗ ಹೇಳ್ರೀ!" ಸರಸ್ವತಿ ಆತುರ ಪಡಿಸಿದಳು.

"ಅದಕ್ಕೇಕೆ ಅಷ್ಟು ಚಿಂತೆ. ಕೂಡಲೇ ರಾಧಳ ಗಂಡ ಸಾತ್ವಿಕರಾವ್‌ನನ್ನು ಬ್ಯಾಂಕಿನಿಂದ ಮನೆಗೆ ಬರುವ ಹಾಗೆ ಮಾಡಿದರಾಯಿತು. ಆನಂದರಾವ್ ಓಡಿಹೋಗುತ್ತಾನೆ."

ಸರಸ್ವತಿ ಮರುಕ್ಷಣವೇ ಬ್ಯಾಂಕಿನ ಕಡೆಗೆ ಓಡಿದಳು.

ಬ್ಯಾಂಕ್ ಹತ್ತಿರವೇ ಇದ್ದ ಒಂದು ಪಬ್ಲಿಕ್ ಟೆಲಿಫೋನ್ ಬೂತ್‌ಗೆ ಹೋಗಿ ಟೆಲಿಫೋನ್ ಡೈರೆಕ್ಟರಿ ತೆಗೆದು ನೋಡಿ ಮ್ಯಾನೇಜರ್‌ಗೆ ಫೋನ್ ಮಾಡಿದಳು.

"ಹಲೋ–" ಅಂದ ಬ್ಯಾಂಕ್ ಮ್ಯಾನೇಜರ್.

"ಹಲೋ– ನಾನು ಜನಾರ್ಧನ ಪೂಜಾರಿ ಸೆಕ್ರೆಟರಿ ಮಾತಾಡ್ತಿರೋದು"

"ಗುಡ್ ಮಾರ್ನಿಂಗ್ ಮೇಡಮ್."

ಕೇಳಿದಳು.

"ಇದೆ ಮೇಡಂ"

"ಆ್ಞ ? ಇದೆಯಾ?" ಸಿಟ್ಟಿನಿಂದ ಕೇಳಿದಳು.

"ಇಲ್ಲ—ಇಲ್ಲಾ ಮೇಡಂ"

"ಅದೇ—ಅದನ್ನೇ ಹೇಳಿದರು ಪೂಜಾರಿಯವರು—"

"ಏನು ತಪ್ಪು ನಡೆದಿದೆ ಮೇಡಂ?"

"ರಸ್ತೇಲಿ ಸುತ್ತೋ ಗೂಂಡಾಗಳಿಗೆ, ಸೋಮಾರಿಗಳಿಗೆ, ಕುಡುಕರಿಗೆಲಾ ತಲಾ ಐದು ಸಾವಿರ ಲೋನ್ ಕೊಡಬೇಕೆಂದು ನಾವು ಆರ್ಡರ್ ಕಳಿಸಿಲ್ವಾ?"

"ಸಿಕ್ಕಿದೆ ಮೇಡಂ! ನೀವು ತಿಳಿಸಿದಂತೆ ಕೇಳಿದವರಿಗೆಲ್ಲಾ ಮತ್ತೆ ವಾಪಸ್ ಮಾಡಲು ತಿಳಿಸದೆ ಲೋನ್ ಕೊಟ್ಟಿದ್ದೇವಲ್ಲಾ ಮೇಡಂ—"

"ಅದೇ ಪೆದ್ದುತನ. ಅವರಿಗೆ ಒಂದು ಸಲ ಕೊಟ್ಟರೆ ಸಾಕಾ? ಒಂದು ವಾರದಲ್ಲೇ ಅದನ್ನೆಲ್ಲಾ ಕುಡಿದು ಬಿಸಾಡಿದಾರೆ. ಈಗ ಒಬ್ಬನ ಹತ್ರಾನೂ ಕುಡಿಯೋಕೆ ಒಂದು ಪೈಸೇನೂ ಇಲ್ಲ—"

"ಹಾಗೇ ಆಗ್ಲಿ ಮೇಡಮ್—ನಮಗೆ ಗೊತ್ತಿರಲಿಲ್ಲ ಮೇಡಂ—"

"ಅದಕ್ಕೆರೀ ಈಗ ಅವರಿಗೇ ಬೇರೆ ಬೇರೆ ಹೆಸರಿಟ್ಟು ಮತ್ತೆ ಐದೈದು ಸಾವಿರ ಕೊಡಿ."

"ಹಾಗೆ ಆಗಲೀ ಮೇಡಂ ನಾಳೆ ಕೊಡ್ತೀವಿ."

"ಅದನ್ನೇ ಬೇಡ ಅಂದಿದ್ದು. ಈಗಲೇ ಹೋಗಿ ಅವರಿಗೆ ಕೊಡಿ."

"ಆದರೆ ಈಗ ಬ್ಯಾಂಕ್ ಅವರ್ಸ್—"

"ಕೂಡಲೇ ಮುಚ್ಚಿಬಿಡ್ರಿ ನಿಮ್ಮ ಬ್ಯಾಂಕನ್ನ—ಎರಡು ನಿಮಿಷದಲ್ಲೇ ನಿಮ್ಮ ಬ್ಯಾಂಕ್ ಮುಚ್ಚದಿದ್ರೆ ಐದು ನಿಮಿಷದಲ್ಲೇ ನಿಮ್ಮನ್ನ ಡಿಸ್‌ಮಿಸ್ ಮಾಡಿಬಿಡ್ತೀವಿ; ಇಲ್ಲಾ ಪಂಜಾಬ್‌ನ ಒಂದು ಬ್ರಾಂಚಿಗೆ ಟ್ರಾನ್ಸಫರ್—" ಎಂದು ಅವಳು ಬ್ಯಾಂಕಿನ ಕಡೆಗೆ ನೋಡುತ್ತಿದ್ದಂತೆಯೇ ಬ್ಯಾಂಕಿಗೆ ಬೀಗ ಹಾಕುತ್ತಿದ್ದುದು ಕಂಡಿತು. ಸಾತ್ವಿಕರಾವ್ ಸಂತೋಷದಿಂದ ಸ್ಕೂಟರಿನಲ್ಲಿ ಮನೆಯ ಕಡೆಗೆ ವೇಗದಿಂದ ಹೋಗುತ್ತಿದ್ದ.

ತೃಪ್ತಿಯಿಂದ ನಕ್ಕಳು ಸರಸ್ವತಿ.

"ಈಗೇನು ಮಾಡ್ತಿ ಶಚೀದೇವಿ?" ಅಂದುಕೊಂಡಳು ಗರ್ವದಿಂದ.

ಡಬ್ಬೆಂದು ಬಾಗಿಲಿನ ಶಬ್ದವಾಗುತ್ತಿದ್ದಂತೆ ಆಗತಾನೇ ಮುಖ್ಯವಾದ ಕೆಲಸಕ್ಕೆ ಪ್ರಾರಂಭಿಸಬೇಕೆಂದಿದ್ದ ಆನಂದರಾವ್ ಬೆಚ್ಚಿಬಿದ್ದು ಮಂಚದ ಮೇಲಿನಿಂದ ಒಂದೇ ನೆಗೆತಕ್ಕೆ ಕೆಳಗೆ ಜಿಗಿದ.

"ಅಯ್ಯೋ ನಿನ್ನ ಗಂಡ ಇರಬೇಕು—ನಾನು ಹೇಗೆ ಓಡಿಹೋಗಲಿ?" ಎಂದು ಕೇಳಿದ. ರಾಧೆ ಆಶ್ಚರ್ಯಪಟ್ಟಳು.

"ನನ್ನ ಗಂಡ ಅಂದ್ರೇನ್ರಿ? ನಿಮಗೇನಾದರೂ ತಲೆ ಕೆಟ್ಟಿದೆಯಾ?" ಆಶ್ಚರ್ಯದಿಂದ ಕೇಳಿದಳು.

ಆನಂದರಾವ್ ಚಕ್ಕನೆ ತನ್ನ ತಪ್ಪನ್ನು ಕಂಡುಕೊಂಡ.

"ಅಹ್ಹಹ್ಹಾ! ಜೋಕ್ ಮಾಡಿದೆ."

ಅವನು ಮಾತನಾಡುತ್ತಿದ್ದಂತೆಯೇ ಮತ್ತೆ ಬಾಗಿಲು ಬಡಿದ ಶಬ್ದ ವಾಯಿತು.

"ಬೇಗ ಹೋಗಿ ನೋಡ್ರಿ–ಯಾರೋ" ರಾಧಾ ಹೇಳಿದಳು.

ಆನಂದರಾವ್ ಹಿಂದೆಗೆದ–"ಆ್ಞ! ನಾನಾ? ನೀನೇ ಹೋಗಿ ನೋಡಿ ಬಾ. ಒಳಗೆ ಷರ್ಟ್ ಹಾಕಿಕೊಳ್ತಿರ್ತೀನಿ" ಕಂಗಾಲಾಗಿ ಹೇಳಿದ.

ರಾಧ ಸೀರೆಯನ್ನು ಸರಿಪಡಿಸಿಕೊಂಡು, ಕೆದರಿದ ತಲೆಗೂದಲನ್ನು ಹಿಂದಕ್ಕೆ ತಳ್ಳಿಕೊಳ್ಳುತ್ತಾ ಹೋಗಿ ಬಾಗಿಲು ತೆರೆದಳು.

ಅಷ್ಟೆ! ಎದುರಿನಲ್ಲಿ ನಿಂತಿದ್ದ ಸಾತ್ವಿಕರಾವ್‌ನನ್ನು ಕಂಡು ಕಿಟಾರನೆ ಕಿರುಚಿದಳು. ಆ ಕೂಗಿಗೆ ಸಾತ್ವಿಕರಾವ್, ಒಳಗೆ ಷರ್ಟನ್ನು ಸರಿಪಡಿಸಿಕೊಳ್ಳು ತ್ತಿದ್ದ. ಆನಂದರಾವ್ ಇಬ್ಬರೂ ಬೆಚ್ಚಿಬಿದ್ದರು.

ಆನಂದರಾವ್ ಯಾವುದೋ ಕೊಲೆಯೇ ನಡೆಯಿತೇನೋ ಎಂಬುವಷ್ಟು ಭಯದಿಂದ ಓಡೋಡಿ ಬಂದ ಹೊರಗೆ.

ಅವನನ್ನು ನೋಡುತ್ತಲೇ ಸಾತ್ವಿಕರಾವ್‌ಗೆ ಷಾಕ್ ತಗುಲಿದಂತಾಯ್ತು.

ಅಚ್ಚ ತನ್ನ ರೂಪದಂತೆಯೇ, ತನ್ನಂತೆಯೇ ಇದ್ದಾನೆ....

ತನಗೆ ಅಂದು ಬ್ಯಾಂಕಿನಲ್ಲಿ ರಾಧಾ ಕೆನ್ನೆಗೆ ಹೊಡೆದ ದೃಶ್ಯ ಥಕ್ಕನೆ ಕಣ್ಮುಂದೆ ಸುಳಿಯಿತು. ಆ ದಿನದಿಂದಲೇ ತನಗೆ ದೃಢವಾದ ನಂಬಿಕೆ ಬಂದಿತ್ತು. ತನ್ನನ್ನು ಹೋಲುವ ಯಾವುದೋ ವ್ಯಕ್ತಿ, ರಾಧಾಳನ್ನು ಏನೋ ಮಾಡುವ ಮೂಲಕ ತನ್ನ ಕೆನ್ನೆ ಒಡೆದಿತ್ತೆಂದೂ, ಆದರೆ ತನ್ನ ಮಾತನ್ನು ಆಗ ಯಾರೂ ಕೇಳಿರಲಿಲ್ಲವೆಂದು.

ಹಠಾತ್ತನೆ ಆನಂದರಾವ್ ಆ್ಯಕ್ಷನ್‌ನಲ್ಲಿ ಬಂದ. ತಾನು ಇನ್ನು ಅಲ್ಲಿ ಹಾಗೆಯೇ ನಿಂತರೆ ಸಾತ್ವಿಕರಾವ್ ತನ್ನನ್ನು ಮುಗಿಸಿಬಿಡುತ್ತಾನೆ. ಮರುಕ್ಷಣವೇ ಅವನು ಬುಲೆಟ್‌ನಂತೆ ಹೊರಗೋಡಿದ.

ಅದನ್ನು ಕಂಡ ರಾಧ ಮತ್ತೊಮ್ಮೆ ಕಿರುಚಿದಳು.

ಆಗ ಪ್ರಸ್ತುತ ಪ್ರಪಂಚಕ್ಕೆ ಮರಳಿದ ಸಾತ್ವಿಕರಾವ್, "ಏನು? ಏನು ನಡೆಯಿತು? ಅವನ್ಯಾರು?" ರಾಧಳ ಕಡೆಗೆ ನೋಡುತ್ತಾ ಕೇಳಿದ.

"ಅದೇ ನನಗೂ ಅರ್ಥವಾಗುತ್ತಿಲ್ಲ. ಅವನ್ಯಾರೋ ಕಳ್ಳಬಡ್ಡೀಮಗ. ನಿಮ್ಮ ರೂಪದಲ್ಲಿ ಬಂದು...." ನಂತರದ ವಿಷಯವನ್ನು ಹೇಳುವುದೋ ಬೇಡವೋ ಎಂದು ಸಂದಿಗ್ಧತೆಯಲ್ಲಿ ಬಿದ್ದಳು ರಾಧೆ

"....ಬಂದು? ಏನು ಮಾಡಿದ?" ಮತ್ತಷ್ಟು ಅನುಮಾನದಿಂದ ಕೇಳಿದ ಸಾತ್ವಿಕರಾವ್.

"ಬಂದು...." ಇನ್ನೂ ಯೋಚಿಸುತ್ತಲೇ ಇದ್ದಳು ಅವಳು. ಸಾತ್ವಿಕ ರಾವ್ ಇನ್ನು ಸಸ್ಪೆನ್ಸನ್ನು ತಡೆಯಲಾರದೇ ಹೋದ.

"ಆ್ಞ! ಬಂದು? ಏನು ಮಾಡಿದ–ಬೇಗ ಹೇಳು." ಅವಳ ಅವತಾರದ ಕಡೆಗೆ ನೋಡುತ್ತಾ ಆತುರಪಡಿಸಿದ.

"ಬಂದು–ಚುಂಬಿಸಿದ"

"ಆ್ಞ! ಚುಂಬಿಸಿದನಾ? ಶಿವಶಿವಾ! ನೀನೇಕೆ ಅದಕ್ಕೆಲ್ಲಾ ಅವಕಾಶ ಕೊಟ್ಟೆ?"

"ಅಯ್ಯೋ ನನಗೇನು ಗೊತ್ತಿ? ನೀವೇ ಅವನೆಂದುಕೊಂಡು–ಅಲ್ಲಲ್ಲ ಅವನೇ ನೀವೆಂದುಕೊಂಡು,...."

"ಅಬ್ಬಾ...." ಎರಡು ಕೈಗಳಿಂದಲೂ ತಲೆಯನ್ನು ಒತ್ತಿಕೊಂಡ ಸಾತ್ವಿಕರಾವ್.

"ಆ ದಿನ ನಾನ್ಹೇಳಿದರೆ ಕೇಳಿದೆಯಾ? ಯಾವೋನೋ ಡೂಪ್ಲಿ ಕೇಟೊಬ್ಬ ಡಬಲ್ಯಾಕ್ಷನ್ ಮಾಡ್ತಿದ್ದಾನೇಂತ ಬಡ್ಕೊಂಡೆ."

"ಅಬ್ಬಾ! ದೇವರು ನಿಜವಾಗ್ಲೂ ದೊಡ್ಡೋನೂರೀ! ಸರಿಯಾದ ಸಮಯಕ್ಕೆ ನಿಮ್ಮ ರೂಪದಲ್ಲಿ ಬಂದು ರಕ್ಷಿಸಿದ."

ಸಾತ್ವಿಕರಾವ್ ಮತ್ತೆ ಅವಳ ಕಣ್ಣಲ್ಲಿ ನೋಡಿದ.

"ಅಂದರೆ ನಿಜವಾಗಿ ಅನಾಹುತ ನಡೆಯಲಿಲ್ಲ ತಾನೇ?"

"ಅಯ್ಯೋ! ಇಲ್ಲಾರೀ! ನಡೆಯುತ್ತಿದ್ದಾಗಲೇ ನೀವು ಬಂದ್ರಿ...." ದೀನಳಾಗಿ ಹೇಳಿದಳು,

"ಹ್ಞೂ!" ಅಂದ ಸಾತ್ವಿಕರಾವ್.

"ಹಾಗೇ 'ಹ್ಞೂ' ಅನ್ನಬೇಡ್ರಿ! ಆ ಒಂದು ಅಕ್ಷರದಿಂದ ಎಷ್ಟು ನಮ್ಮಂಥವರ ಸಂಸಾರಗಳು ಹಾಳಾಗಿವೆಯೋ ಏನೋ—"

"ಹ್ಞೂ!" ಅಂದ ಮತ್ತೊಮ್ಮೆ.

ರಾಧಳ ಕಣ್ಣಲ್ಲಿ ನೀರು ಸುರಿಯಲು ಪ್ರಾರಂಭವಾಯಿತು.

"ಬಂದಿದ್ದವನು ಆನಂದರಾವ್ ಎಂದು ತಿಳಿದಿದ್ದರೆ ಅವನ್ನ ಕಣ್ಣಲ್ಲಿ ಮೆಣಸಿನ ಪುಡಿ ತುಂಬಿಸಿ ಕಳಿಸ್ತಿದ್ದೆ," ಹೇಳಿದಳು ಅಳುತ್ತಲೇ.

ಸಾತ್ವಿಕರಾವ್ ಮತ್ತೆ ಬೆಚ್ಚಿಬಿದ್ದ.

"ಏನು? ಅವನ ಹೆಸರು ಆನಂದರಾವ್ ಎಂದೂ ನಿನಗೆ ಗೊತ್ತು! ಅಂದರೆ ಗೊತ್ತಿದ್ದೂ ಈ ವ್ಯವಹಾರಕ್ಕೆ ಒಪ್ಪಿಕೊಂಡಿದ್ದಿ ಅಂದಹಾಗಾಯಿತು. ಇದರಿಂದ ಸ್ಪಷ್ಟವಾಗಿ ತಿಳಿಯುವುದೇನೆಂದರೆ ನಿನಗೂ ಅವನಿಗೂ ಎಂದಿನಿಂದಲೋ ಸಂಬಂಧವಿದೆಯೆಂದು."

"ನಾನು ಹೇಳುವುದನ್ನು ಕೇಳದೆ ಏನ್ರೀ ನಿಮ್ಮ ಊಹೆ? ಅಂತಹ ಹೆಸರಿನವನೊಬ್ಬ ನಿಮ್ಮಂತೆಯೇ ಇದ್ದಾನೆಂದು ತಿಳಿದಿತ್ತಾಗಲೀ ನಾನಾಗೇ ಇದಕ್ಕೆ ಪ್ರೋತ್ಸಾಹ ಕೊಡಲಿಲ್ಲ."

"ರಾಧಾ! ಇನ್ನು ಆ ಡೈಲಾಗುಗಳೆಲ್ಲಾ ಸಾಕು! ನಮ್ಮಿಬ್ಬರಿಗೂ ಈ ಕ್ಷಣದಿಂದಲೇ ಎಲ್ಲಾ ಸಂಬಂಧ ಕಡಿದುಹೋದಂತೆ. ಅಷ್ಟೆ! ನನ್ನ ದಾರಿ ನನಗೆ; ನಿನ್ನ ದಾರಿ ನಿನಗೆ."

"ಅದೆಂತಹ ಮಾತೂರೀ! ನನ್ನ ತಪ್ಪೇನೂ ಇಲ್ಲದಿದ್ದರೂ ಶಿಕ್ಷೆ ವಿಧಿಸುತ್ತಿದ್ದೀರಲ್ಲಾ!"

"ರಾಧಾ! ಇನ್ನು ನಾವೇನು ಮಾತನಾಡಿದರೂ ಪ್ರಯೋಜನವಿಲ್ಲ. ಮುರಿದ ಮನಸ್ಸು, ಒಡೆದ ಕನ್ನಡಿ ಎರಡೂ ಒಂದೇ ಎಂದು ಕನ್ನಡಿಗೆ ಫ್ರೇಂ ಹಾಕುವ ಸಾಬಿ ಹೇಳ್ತಿದ್ದ. ಹಾಗಾಗಿ ನಮ್ಮಿಬ್ಬರ ನಡುವೆ ರಿಪೇರಿ ಮಾಡಲಾಗದಷ್ಟು ಬಿರುಕು ಉಂಟಾಗಿದೆ. ನಾನು ಹೋಗಿ ಒಂದರ್ಧಗಂಟೆ ಪಾರ್ಕಿನಲ್ಲಿ ಕುಳಿತು ಬರುತ್ತೇನೆ. ನಾನು ಬರುವುದರೊಳಗಾಗಿ ನೀನೂ, ನಿನ್ನ ಸಾಮಾನೂ ಈ ಮನೆಯಿಂದ ಹೊರಟುಹೋಗಿರಬೇಕು! ಅರ್ಥವಾಯಿತಾ?" ಎನ್ನುತ್ತಾ ದಾಪುಗಾಲು ಹಾಕುತ್ತಾ ಹೊರಟುಹೋದ.

ರಾಧೆ ನಿಶ್ಚೇಷ್ಟಿತಳಾಗಿ ನಿಂತುಬಿಟ್ಟಳು. ಅವಳಿಗೆ ದುಃಖವನ್ನು ತಡೆಯಲಾಗಲಿಲ್ಲ. ತಾನು ಹುಟ್ಟಿದಂದಿನಿಂದ ಇದುವರೆವಿಗೂ ಎಷ್ಟೋ ಉತ್ತಮ ದರ್ಜೆಯಲ್ಲಿ ಬದುಕಿದ್ದಳು. ಒಮ್ಮೆಯೂ ತನ್ನಲ್ಲಿ ಯಾರೂ ತಪ್ಪನ್ನು ಕಂಡು ಹಿಡಿದಿರಲಿಲ್ಲ. ಆದರೆ ಈಗ ಸಾತ್ವಿಕರಾವ್ ತಾನು ಮಾಡಿದ ತಪ್ಪಿಗೆ

ಶಿಕ್ಷೆಯನ್ನು ವಿಧಿಸುತ್ತಿದ್ದಾನೆ. ಏನು ಮಾಡಲೂ ತೋಚದೆ ಸುಸ್ತಾಗಿ ಕುರ್ಚಿಯಲ್ಲಿ ಕುಳಿತುಬಿಟ್ಟಳು.

"ಅಯ್ಯೋ ಇದೇನ್ರಿ? ಒಳ್ಳೆದಾಗಲೀ ಅಂತ ಕೇಳಿದ್ರೆ ನೀವು ಮನೇನೇ ಹಾಳು ಮಾಡಿದ್ರಲ್ಲಾ?"

ಸರಸ್ವತಿ ಬ್ರಹ್ಮನ ಮೇಲೆ ತಿರುಗಿಬಿದ್ದಳು.

ಬ್ರಹ್ಮ ಆಶ್ಚರ್ಯದಿಂದ, "ಮನೇ ಹಾಳೇಕಾಯ್ತು? ಏನಾಯ್ತು ಈಗ?" ಏನೂ ಅರ್ಥವಾಗದವನಂತೆ ಕೇಳಿದ.

"ಆ ಸಾತ್ವಿಕರಾವ್‌ನನ್ನು ಅರ್ಜೆಂಟಾಗಿ ಬ್ಯಾಂಕಿನಿಂದ ಮನೆಗೆ ಕರೆಸಿ ರಾಧಳ ಶೀಲ ಹೋಗದಂತೆ ಕಾಪಾಡಿದೆ. ಆದರೆ ಈಗ ಆ ಸಾತ್ವಿಕರಾವ್ ರಾಧಳ ಶೀಲ ಹಾಳಾಯಿತೆಂದು ಅವಳನ್ನೇ, ದೂರಮಾಡುತ್ತಿದ್ದಾನೆ. ಅವರ ಸಂಸಾರ ಪೂರ್ತಿ ನಾಶವಾಯಿತು. ಈಗ ಹೇಗೆ?" ಎಂದು ಕೇಳಿದಳು ನೋವಿನಿಂದ.

ಬ್ರಹ್ಮ ತಲೆ ಕೆರೆದುಕೊಂಡ ಒಂದು ಸಲ.

ಬ್ರಹ್ಮ ಬರಹದ ಪುಸ್ತಕಗಳನ್ನೆಲ್ಲಾ ಒಮ್ಮೆ ತಿರುಗಿಸಿ ನೋಡಿದ ಎಷ್ಟೇ ಶ್ರದ್ಧೆಯಿಂದ ನೋಡಿದರೂ ತಾನು ಯಾರಿಗೆ ಯಾವ ರೀತಿ ಹಣೆ ಬರಹ ಬರೆದಿದ್ದನೆಂದು ಸಿಗುತ್ತಿಲ್ಲ,

"ನೀನು ಸ್ವಲ್ಪ ನೋಡು ಸರಸ್ವತಿ! ಆ ರಾಧಾ ಸಾತ್ವಿಕರಾವ್‌ಗೇ ಹಣೆಬರಹ ಎಲ್ಲಾದರೂ ಇದೆಯೋನೋ?" ಎನ್ನುತ್ತ ಪುಸ್ತಕಗಳನ್ನೆಲ್ಲಾ ಅವಳ ಮುಂದೆತಳ್ಳಿದ. ಸರಸ್ವತಿ ಕೂಡಾ ಬಹಳ ಹೊತ್ತು ಅವನ್ನೆಲ್ಲಾ ತಿರುಗಿಸಿ ಹಾಕಿದಳು. ಆದರೆ ಅವಳಿಗೆ ಸ್ವಲ್ಪವೂ ಅರ್ಥವಾಗಲಿಲ್ಲ.

"ಏನು ಬ್ರಹ್ಮಬರಹ ಬರೆದಿದ್ದೀರ್ರಿ? ಯಾರಿಗೆ ಅರ್ಥ ಆದೀತು? ಎನ್ನುತ್ತಾ ಪಕ್ಕಕ್ಕೆ ತಳ್ಳಿದಳು. ಆಗ ನೆನಪಾಯಿತು ಬ್ರಹ್ಮನಿಗೆ— ತಾನ ಸಾಧಾರಣವಾಗಿ ಸೃಷ್ಟಿ ಮಾಡಿದ ಕೂಡಲೇ ಯಾರ ಹಣೆಬರಹ ಹೇಗಿ ಬೇಕೆಂದು ಊಹಿಸಿ ಅವರ ಹಣೆಯ ಮೇಲೆ ಬರೆದು ಸಹಿ ಮಾಡಿಬಿಡುತ್ತ ನೆಂದು. ಆದರೆ ಈಗ ಸರಸ್ವತಿ ಸೃಷ್ಟಿಸಿದ ಇವರಿಗೆ ಮಾತ್ರ ಹಣೆಬರ

ಬರೆದಿರಲಿಲ್ಲವೆಂದು ನೆನಪಾಯಿತು. ಅವರ ಬದುಕು ಎತ್ತೆಂದರತ್ತ ಎಲಾಸ್ಟಿಕ್ ವಸ್ತುಗಳಂತೆ ತಿರುಗಿಬಿಡುತ್ತವೆ.

ಎಷ್ಟು ಯೋಚಿಸಿದರೂ ಆ ಸಮಸ್ಯೆಯನ್ನು ಹೇಗೆ ಪರಿಹರಿಸಬೇಕೆಂದೇ ಅವನಿಗೆ ಅರ್ಥವಾಗಲಿಲ್ಲ.

"ಒಂದು ಕೆಲಸ ಮಾಡೋಣ ಸರಸ್ವತಿ! ನಾವೇ ಹೋಗಿ ಅವರಿಗೆ ಬುದ್ಧಿ ಹೇಳೋಣ." ಬ್ರಹ್ಮ ಚೆನ್ನಾಗಿ ಯೋಚಿಸಿ ಹೇಳಿದ.

"ಸರಿ–ನಡೆಯಿರಿ" ಅಂದಳು ಸರಸ್ವತಿ.

ಮರುಕ್ಷಣವೇ ಇಬ್ಬರೂ ಸಾತ್ವಿಕರಾವ್ ಮನೆಯಲ್ಲಿ ಪ್ರತ್ಯಕ್ಷವಾದರು. ಸರಿಯಾಗಿ ಅದೇ ಸಮಯದಲ್ಲಿ ಸಾತ್ವಿಕರಾವ್ ಪಾರ್ಕಿನಿಂದ ಮನೆಗೆ ವಾಪಸ್ಸಾಗಿ ರಾಧಾ ಇನ್ನೂ ಮನೆಯಲ್ಲೇ ಇರುವುದನ್ನು ಕಂಡು– "ಮನೆಯಿಂದ ನೀನು ಹೋಗುತ್ತೀಯೋ ನನ್ನನ್ನು ಹೋಗೆನ್ನುತ್ತೀಯೋ ಹೇಳು–" ಎಂದು ಕೇಳುತ್ತಿದ್ದ.

"ನೀವೇ ಹೋಗಿ" ರಾಧಾ ಹೇಳಿದಳು.

ತಾವಿಬ್ಬರೂ ಪ್ರತ್ಯಕ್ಷವಾಗಿದ್ದರೂ ತಮ್ಮೆಡೆಗೆ ಗಮನವನ್ನೇ ಹರಿಸದೆ ತಮ್ಮ ಪಾಡಿಗೆ ತಾವು ಜಗಳ ಆಡಿಕೊಳ್ಳುತ್ತಿದ್ದ ಅವರನ್ನು ಕಂಡು ಬ್ರಹ್ಮನಿಗೆ ಆಶ್ಚರ್ಯವಾಯಿತು.

ಇಬ್ಬರೂ ಸಾತ್ವಿಕರಾವ್–ರಾಧರ ಮಧ್ಯೆ ಬಂದು ನಿಂತರು.

ಸಾತ್ವಿಕರಾವ್ ಅವರೆಡೆಗೆ ಆಶ್ಚರ್ಯದಿಂದ ನೋಡಿದ.

"ಭಕ್ತಾ! ನಿನ್ನ ಹೆಂಡತಿ ರಾಧೆ ಉತ್ತಮ ಪತಿವ್ರತೆಯಪ್ಪಾ!" ಸಿನೆಮಾದಲ್ಲಿ ಹೇಳುವಂತೆ ಹೇಳಿದ ಬ್ರಹ್ಮ.

"ನೀನು ಯಾರು? ಮೊದಲು ಅದನ್ನ ಹೇಳಯ್ಯಾ–" ಕೋಪದಿಂದ ಕೇಳಿದ ಸಾತ್ವಿಕರಾವ್.

"ನನ್ನ ಗುರುತು ಆಗಲಿಲ್ಲವಾ ಭಕ್ತ–ನಾನು ಬ್ರಹ್ಮ"

"ಎಲ್ಲರಿಗೂ ದಸರಾ ಮಾಮೂಲು ಕೊಟ್ಟಾಗಿದೆ. ಹೀಗೆ ಬಣ್ಣ ಬಳಕೊಂಡು ವೇಷಹಾಕಿಕೊಂಡು ಭಿಕ್ಷೆ ಬೇಡೋದನ್ನ ಬಿಟ್ಬಿಡಿ" ಸಿಟ್ಟಿನಿಂದ ಹೇಳಿದ.

"ಮೂರ್ಖ! ನಾನು ನಿಜವಾದ ಬ್ರಹ್ಮ ಕಣಯ್ಯಾ–"

ಸಾತ್ವಿಕರಾವ್‌ಗೆ ಅಷ್ಟು ಸಿಟ್ಟಿನಲ್ಲಿಯೂ ನಗುಬಂತು.

"ಇನ್ನು ನಿನ್ನ ನಟನೆ ಸಾಕು ಮಾಡಯ್ಯಾ! ನೀನ್ಯಾಕೆ ಈಗ ಬಂದಿ ಮಧ್ಯೆ ಅದನ್ನ ಹೇಳು—" ಕಿರುನಗುತ್ತಾ ಹೇಳಿದ.

ಬ್ರಹ್ಮನಿಗೆ ಏನು ಹೇಳಬೇಕೆಂದೇ ತೋಚಲಿಲ್ಲ.

"ನೀನು ಬ್ರಹ್ಮನೇ ಆದರೆ ಯಾವುದಾದರೂ ಪವಾಡವನ್ನು ತೋರಿಸು."

ಬ್ರಹ್ಮ ಒಂದು ಕ್ಷಣ ಕಣ್ಣು ಮುಚ್ಚಿಕೊಂಡು 'ಓಂ' ಎನ್ನುತ್ತಾ ಕೈಯನ್ನು ಮೇಲೆತ್ತಿ ಗಾಳಿಯಲ್ಲಿ ವಿಭೂತಿಯನ್ನು ಓಡಿಯ ತುಂಬಾ ಸೃಷ್ಟಿಸಿದ.

ಅದನ್ನು ಕಂಡ ಸಾತ್ವಿಕರಾವ್ ಬಿದ್ದು ಬಿದ್ದು ನಕ್ಕ.

"ಇದು ಇನ್ನೂ ಚೀಪ್ ಟ್ರಿಕ್ ಗುರು! ನಾನು ಮ್ಯಾಜಿಕ್ ಕಲಿತ ಹೊಸದರಲ್ಲಿ ಇದನ್ನು ಮೊದಲೇ ಕಲಿಸಿಬಿಟ್ಟರು ನನ್ನ ಗುರುಗಳು. ಬೇಕಾದರೆ ನೋಡು ನಾನೂ ಮಾಡುತ್ತೇನೆ" ಎಂದು ಅವನೂ ವಿಭೂತಿಯನ್ನು ಓಡಿಯ ತುಂಬಾ ಸೃಷ್ಟಿಸಿದ.

ಕಂಗಾಲಾದ ಬ್ರಹ್ಮ ಸರಸ್ವತಿಯ ಕಡೆಗೆ ನೋಡಿದ.

"ಹಾಗೇಕೆ ಕಕ್ಕಾಬಿಕ್ಕಿ ಆಗ್ತಿದೀರಿ? ಅವರಿಗೆ ನಿಜವಾಗಿಯೂ ಅನು ಮಾನ ಬರುತ್ತೆ, ಇನ್ನೇನಾದರೂ ಪವಾಡ ಮಾಡಿತೋರಿಸಿ—" ಸಲಹೆ ಕೊಟ್ಟಳು.

ಬ್ರಹ್ಮ ಮತ್ತೆ ಗಾಳಿಯಲ್ಲಿ ಕೈಯಾಡಿಸಿ 'ಓಂ' ಎಂದು ಗುಲಾಬ್ ಜಾಮೂನನ್ನು ಸೃಷ್ಟಿಸಿದ.

ಸಾತ್ವಿಕರಾವ್ ಹಗುರವಾಗಿ ನಗುತ್ತಾ, "ಇದನ್ನು ನಮ್ಮ ಪಿ. ಸಿ. ಸರ್ಕಾರ್ (ಜೂನಿಯರ್) ಕೂಡಾ ಮಾಡುತ್ತಾನೆ."

ಬ್ರಹ್ಮನಿಗೆ ರೋಷ ನುಗ್ಗಿ ಬಂತು.

ಥಕ್ಕನೆ ಒಂದು ಎಲೆಕ್ಟ್ರಾನಿಕ್ ವಾಚನ್ನು ತೆಗೆದುಕೊಟ್ಟ ಶೂನ್ಯದಿಂದ. ಈಸಲ ಸಾತ್ವಿಕರಾವ್‌ನೊಂದಿಗೆ ರಾಧ ಕೂಡಾ ನಕ್ಕಳು.

"ಇದನ್ನು ನಮ್ಮ ಊರಿನ ರಾಮದೇವರ ಗುಡಿಯ ಪಕ್ಕದಲ್ಲಿರುವ ಬಾಬಾ ಕೂಡಾ ಮಾಡ್ತಾನೆ" ಹೇಳಿದಳು ರಾಧ.

ಬ್ರಹ್ಮನಿಗೆ ಹುಚ್ಚು ಹಿಡಿದಂತಾಯಿತು.

"ನಾನು ಕೆಲವು ಪರೀಕ್ಷೆಗಳನ್ನು ಒಡ್ಡುತ್ತೇನೆ, ನೀನು ಅದರಲ್ಲಿ ವಿಜಯ ಸಾಧಿಸಿದರೆ ಆಗ ನೀನು ನಿಜವಾದ ಬ್ರಹ್ಮನೆಂದು ಒಪ್ಪಿಕೊಳ್ಳುತ್ತೇನೆ."

ಬ್ರಹ್ಮ ಸಂತೋಷದಿಂದ ಒಪ್ಪಿದ.

"ನಮ್ಮಣ್ಣನ ಮಗಳಿಗೆ ಯಾವುದಾದರೂ ಒಂದು ಒಳ್ಳೆಯ ಸ್ಕೂಲಿನಲ್ಲಿ ಎಲ್‌ಕೆಜಿ ಸೀಟ್ ಕೊಡಿಸು ನೋಡೋಣ."

"ಇದೊಂದು ಸಾಹಸಾನಾ—" ಎನ್ನುತ್ತಾ ಒಂದು ಕ್ಷಣದಲ್ಲೇ ಮಾಯವಾದ ಬ್ರಹ್ಮ. ಒಂದೆರಡು ಗಂಟೆಗಳ ನಂತರ ಸಪ್ಪೆ ಮುಖ ಹಾಕಿಕೊಂಡು ಪ್ರತ್ಯಕ್ಷವಾದ.

"ಅದೊಂದು ಬಿಟ್ಟು ಇನ್ನೇನಾದರೂ ಹೇಳು" ಸೋಲೊಪ್ಪಿಕೊಂಡ ಬ್ರಹ್ಮ.

"ಹಾಗಾದರೆ ನನ್ನ ಸ್ಕೂಟರ್ ಮೇಲೆ ಬೆಂಗಳೂರಿನ ಮೆಜಸ್ಟಿಕ್‌ನಲ್ಲಿ ಒಂದು ರೌಂಡ್ ಹೋಗಿ ಬಾ ನೋಡೋಣ—"

ಬ್ರಹ್ಮನಿಗೆ ಆಶ್ಚರ್ಯವಾಯಿತು. "ಇಷ್ಟು ಸುಲಭದ ಪರೀಕ್ಷೆಯಾ?" ಎನ್ನುತ್ತಾ ಸಾತ್ವಿಕರಾವ್‌ನಿಂದ ಕೀ ಪಡೆದು ಸ್ಪೀಡಾಗಿ ಹೊರಟ ಸ್ಕೂಟರ್ ಮೇಲೆ ಹತ್ತು ನಿಮಿಷದಲ್ಲೇ ವಾಪಸ್ಸಾದವನ ಮುಖ ಕಳಾಹೀನವಾಗಿತ್ತು.

"ಅಬ್ಬಾ! ಆಟೋದವನು ಹೊಡೆದುಬಿಟ್ಟ," ಎಂದು ಕಾಲನ್ನು ತೋರಿಸಿದ. ಬ್ರಹ್ಮನ ಮುಖ ನೋವಿನಿಂದ ತುಂಬಿತ್ತು.

"ಹಾಗಾದರೆ ಒಂದು ಕೆಲಸ ಮಾಡು. ಸರ್ಕಾರೀ ಆಸ್ಪತ್ರೆಗೆ ಹೋಗಿ ಈ ಗಾಯಕ್ಕೆ ಔಷಧಿ ಹಾಕಿಸಿಕೊಂಡು ಬಾ ನೋಡೋಣ–"

ಆಗಲಿಂದು ಹೋದ ಬ್ರಹ್ಮ ಒಂದೆರಡು ಗಂಟೆಗಳ ಕಾಲ ವಾಪಸ್ಸಾಗದೆ ಇದ್ದುದನ್ನು ಕಂಡ ಸರಸ್ವತಿ ಕಂಗಾಲಾದಳು. ಸಾತ್ವಿಕರಾವ್ ರಾಧರೊಡನೆ ಆಸ್ಪತ್ರೆಗೇ ಓಡಿದಳು. ಅಲ್ಲಿ ಸಾಕಷ್ಟು ಹುಡುಕಾಡಿ, ಶವಾಗಾರದ ಬಳಿ ಬಂದಾಗ ಮುಲುಗಾಟ ಕೇಳಿಸಿತು. ಅತ್ತ ನೋಡಿದರೆ ಹೆಣಗಳ ನಡುವಿನಿಂದ ಬ್ರಹ್ಮ ಕುಂಟುತ್ತಾ ಬರುತ್ತಿದ್ದ.

"ಇನ್ನು ಸಂದೇಹವೇ ಇಲ್ಲ. ನೀವು ನಿಜವಾದ ಬ್ರಹ್ಮನೇ" ಎಂದು ಸಾಷ್ಟಾಂಗ ನಮಸ್ಕಾರ ಮಾಡಿದ ಸಾತ್ವಿಕರಾವ್.

"ಅರೆ! ನಾನು ನಿನ್ನ ಪರೀಕ್ಷೆಗಳಲ್ಲೆಲ್ಲಾ ಫೇಲಾದರೂ...."

"ಹಾಗಲ್ಲ. ಶವಾಗಾರದಿಂದ ತಪ್ಪಿಸಿಕೊಂಡು ಬರಲು ಜನಸಾಮಾನ್ಯರಿಂದ ಸಾಧ್ಯವಿಲ್ಲ ಹಾಗಾಗಿ–" ಅಷ್ಟರಲ್ಲೇ ಬ್ರಹ್ಮ ತಾನು ಬಂದ ಕೆಲಸದ ವಿವರ ನೀಡಿದ. "ನೀನೂ ರಾಧಾ ಆದರ್ಶ ದಂಪತಿಗಳಾಗಿ ಬಾಳಬೇಕು. ಅದಕ್ಕೆ ನಾವು ಪ್ರತ್ಯಕ್ಷವಾಗಿದ್ದೇವೆ" ಎಂದ ಕಿರುನಗುತ್ತಾ.

ಆ ಮಾತನ್ನು ಕೇಳಿದ ಸಾತ್ವಿಕರಾವ್ ಮತ್ತೆ ಸಿಟ್ಟಾದ.

"ಇವಳೊಡನೆ ಸಂಸಾರ ಮಾಡಲು ನನ್ನಿಂದಾಗದು ಸ್ವಾಮಿ-ತಾನು ತಪ್ಪು ಮಾಡಿದಾಗ ತಪ್ಪನ್ನು ಒಪ್ಪಿಯೇಕೊಳ್ಳುವುದಿಲ್ಲ—"

"ಏಕೆ? ನೀವು ಹೇಳಿದ್ದನ್ನೆಲ್ಲಾ ಒಪ್ಪಿಕೊಳ್ಳಬೇಕಾ? ಗಂಡಸರ ಮಾತಿಗೆಲ್ಲಾ 'ಹ್ಞೂಗುಡಲು' ಹೆಂಗಸರೇನೂ ಗುಲಾಮರಲ್ಲ."

"ಮನೇಲಿ ಅಡಿಗೆ ಕೆಲ್ಸ ಮಾಡ್ಕೊಂಡಿರೋ ನಿಂಗೇ ಇಷ್ಟು ಕೊಬ್ಬಿದ್ರೆ—"

ಜಗಳ ಪ್ರಾರಂಭವಾಯಿತು. ಇಬ್ಬರೂ ಸಾಕಷ್ಟು ವಾದಿಸಿಕೊಂಡರು. ತನಗೆ ಸಮಯವಾಗುತ್ತದೆಂದು ಅರಿತ ಬ್ರಹ್ಮ "ನಿಮ್ಮಿಬ್ಬರಿಗೂ ಒಬ್ಬರ ಬಗ್ಗೆ ಇನ್ನೊಬ್ಬರಿಗೆ ನಂಬಿಕೆಯಿಲ್ಲ. ಇಬ್ಬರೂ ದುಡಿಯುತ್ತೀರಿ; ಆಫೀಸಿನಲ್ಲಿ. ಆದರೂ, ಮನೆಯಲ್ಲಿ ಆದರೂ ಕೆಲಸ ಕೆಲಸವೇ. ಇಬ್ಬರೂ ಹೊಂದಿಕೊಂಡು ನಡೆಯಬೇಕು" ಸರಸ್ವತಿಯೂ ಅದಕ್ಕೆ ದನಿಗೂಡಿಸಿದಳು.

"ನೀವಿಬ್ಬರೂ ಒಬ್ಬರನ್ನೊಬ್ಬರು ಅರ್ಥಮಾಡಿಕೊಳ್ಳಬೇಕೆಂದರೂ ನೀವಿಬ್ಬರೂ ಆತ್ಮಗಳನ್ನು ಬದಲಿಸಿಕೊಂಡರೆ ಸಾಕು," ಸರಸ್ವತಿಯ ಮಾತು ಅರ್ಥವಾಗದೆ ಸಾತ್ವಿಕರಾವ್-ರಾಧ ಒಬ್ಬರ ಮುಖ ಒಬ್ಬರು ನೋಡಿಕೊಂಡರು. ಸರಸ್ವತಿ ಕಿರುನಗುತ್ತಲೇ ವಿವರಿಸಿದಳು ರಾಧಳ ಕಡೆ ತಿರುಗಿ.

"ಇಪ್ಪತ್ನಾಲ್ಕು ಗಂಟೆಗಳ ಕಾಲ ನಿಮ್ಮ ಆತ್ಮಗಳನ್ನು ಅದಲು-ಬದಲು ಮಾಡುತ್ತೇವೆ. ಸಾತ್ವಿಕರಾಯನ ಆತ್ಮ ನಿನಗೂ, ನಿನ್ನ ಆತ್ಮವನ್ನು ಸಾತ್ವಿಕರಾವ್‌ಗೂ ಬರುವಂತೆ. ಆಗ ಸಾತ್ವಿಕರಾವ್ ಆಫೀಸಿನಲ್ಲಿ ಹೇಗಿರುತ್ತಾನೆಂದು ನಿನಗೂ, ಮನೆಯಲ್ಲಿ ನೀನು ಹೇಗಿರುತ್ತೀಯೆಂದು ಸಾತ್ವಿಕರಾವ್‌ಗೂ ಅರ್ಥವಾಗುತ್ತದೆ. ಆನಂತರ ನಿಮ್ಮಿಬ್ಬರ ಮಧ್ಯೆ ಬೇಧಭಾವ ಬರುವುದಿಲ್ಲ."

ಈ ಯೋಚನೆ ತುಂಬಾ ಥ್ರಿಲ್ಲಿಂಗ್ ಆಗಿ ಕಂಡಿತು ಸಾತ್ವಿಕರಾವ್‌ಗೆ. "ಓಕೆ. ನನಗೆ ಒಪ್ಪಿಗೆಯಾಯಿತು ಈ ಪ್ಲಾನು" ಅವನು ಹೇಳಿದ.

"ನನಗೂ ಒಪ್ಪಿಗೆ" ರಾಧೆ ಹೇಳಿದಳು.

"ಹಾಗಾದರೆ ಇಬ್ಬರೂ ನನ್ನೆದುರಿಗೆ ಕುಳಿತುಕೊಳ್ಳಿ." ಬ್ರಹ್ಮ ಹೇಳಿದಂತೆ ಇಬ್ಬರೂ ಕುಳಿತರು. ಇಬ್ಬರಿಗೂ ಕಣ್ಣು ಮುಚ್ಚಿಕೊಳ್ಳುವಂತೆ ಸೂಚಿಸಿದ. ಎರಡು ನಿಮಿಷಗಳಲ್ಲಿ ಆತ್ಮಗಳ ಟ್ರಾನ್ಸ್‌ಫರ್ ನಡೆದುಹೋಯಿತು.

"ಇನ್ನು ನೀವು ಕಣ್ಣು ಬಿಡಬಹುದು" ಸರಸ್ವತಿ ಹೇಳಿದ ಕೂಡಲೇ ಕಣ್ಣುಬಿಟ್ಟರು. ಇಬ್ಬರೂ ಕಣ್ಣುಬಿಟ್ಟು ಬೆಚ್ಚಿ ಎದ್ದು ನಿಂತರು. ತನಗೆ ಸೀರೆ, ಬ್ಲೌಸು, ಬ್ರಾಸಿಯರ್ಸ್ ಸ್ತ್ರೀ ಅವಯುವಗಳನ್ನು ಕಂಡು ಸಾತ್ವಿಕರಾವ್ ಗಲಿಬಿಲಿಗೊಂಡ. ಆತ್ಮಗಳ ಬದಲಾವಣೆಯೆಂದರೆ ಇಷ್ಟು ಬದಲಾವಣೆಯಾಗುತ್ತ

ದೆಂದು ಅವನು ಊಹಿಸಿರಲಿಲ್ಲ.

ರಾಧ ಕಿಲಕಿಲನೆ ನಕ್ಕಳು. "ನನಗೆ ಹೇಗೇಗೇ ಆಗ್ತಿದೇರಿ" ನಾಚಿಕೆಯಿಂದ ಮುಖವನ್ನು ಮುಚ್ಚಿಕೊಂಡು ಹೇಳಿದಳು.

"ನಾವಿನ್ನು ಹೊರಡುತ್ತಿದ್ದೇವೆ ಭಕ್ತ! ಇಪ್ಪತ್ನಾಲ್ಕು ಗಂಟೆಗಳ ನಂತರ ಮತ್ತೆ ಅವರ ಆತ್ಮ ಅವರಿಗೆ ಬರುತ್ತದೆ. ಆನಂತರ ನಿಮ್ಮ ಸಂಸಾರ ಸುಖ ವಾಗಿರುತ್ತದೆ," ಬ್ರಹ್ಮ ಹೇಳಿದ.

"ಆದರೆ ಒಂದು ಸಂದೇಹ ಸ್ವಾಮಿ" ರಾಧೆ ಕೇಳಿದಳು.

"ಅದೇನೋ ಹೇಳಮ್ಮಾ—" ಸರಸ್ವತಿಯೇ ಕೇಳಿದಳು.

"ನಮ್ಮ ಮೇಲೆ ಇಷ್ಟೊಂದು ಪ್ರೀತಿ, ಕರುಣೆ ನಿಮಗೆ ಹೇಗೆ ಉಂಟಾ ಯಿತು?"

ಬ್ರಹ್ಮ ಬಾಯಿ ಬಿಡುವುದನ್ನು ಕಂಡ ಸರಸ್ವತಿ ಕೂಡಲೇ ಅವನ ಬಾಯನ್ನು ಬಿಗಿಯಾಗಿ ಮುಚ್ಚಿಬಿಟ್ಟಳು ತನ್ನ ಕೈಗಳಿಂದ.

"ಇದೆಲ್ಲಾ ಲೋಕ ಕಲ್ಯಾಣಕ್ಕಾಗಿ ತಾಯಿ!" ಎನ್ನುತ್ತಾ ಇಬ್ಬರೂ ತಕ್ಷಣವೇ ಅಂತರ್ಧಾನವಾದರು.

ರಾಧಾ ಸಾತ್ವಿಕರಾವ್‌ನ ಬೆನ್ನಿಗೆ ಟಪ್ಪನೆ ಬಡಿದಳು ರೂಢಿಯಂತೆ. ಸಾತ್ವಿಕರಾವ್‌ನ ಶರೀರದಲ್ಲಿದ್ದ ರಾಧಳ ಆತ್ಮ ಕಿಟಾರನೆ ಕಿರುಚಿತು.

"ಅಬ್ಬ! ಏನ್ರೀ ಅಷ್ಟು ಜೋರಾಗಿಯೇ ಹೊಡೆಯೋದು?" ಕಿರುಗೋಪ ಗೊಂಡು ಕೇಳಿದಳು.

"ಬೇಗ ರೆಡೀ ಆಗು! ಆಫೀಸಿಗೆ ತಡವಾಗುತ್ತೆ" ಅಂದಿತು ಸಾತ್ವಿಕರಾವ್‌ನ ಆತ್ಮ. ರಾಧೆ ಕನ್ನಡಿಯ ಬಳಿಗೆ ಹೋಗಿ ತನ್ನ ರೂಪವನ್ನು ನೋಡಿಕೊಂಡು ಕಿಟಾರನೆ ಕಿರುಚಿದಳು ಮತ್ತೊಮ್ಮೆ.

ತಕ್ಷಣವೇ ಆತ್ಮಗಳ ನೆನಪಾಗಿ ತನ್ನ ಷರ್ಟನ್ನು ಬಿಚ್ಚಲುಹೋಗಿ ಭಯ ದಿಂದ ತನ್ನ ಎದೆಯ ಕಡೆಗೆ ನೋಡಿಕೊಂಡಳು. ತಾನು ಗಂಡಸಿನಂತೆಯೇ ಇದ್ದೇನೆಂಬ ವಿಷಯ ನೆನಪಾಗಿ, ಟವೆಲ್ಲನ್ನು ಸುತ್ತಿಕೊಂಡು ಆಲ್ಮೇರಾ ಬಳಿಗೆ ಹೋಗಿ ಆಲ್ಮೇರಾ ತೆಗೆದಳು.

ಅಭ್ಯಾಸದಂತೆ ಚಕ್ಕನೆ ಸೀರೆ, ಲಂಗ, ಜಾಕೆಟ್ಟು, ಬ್ರಾಸಿಯರ್ಸ್‌ಗಳನ್ನು ತೆಗೆದುಕೊಂಡು—ಮತ್ತೆ ಆತ್ಮಗಳ ಅವಾಂತರ ನೆನಪಾಗಿ ಅವನ್ನೆಲ್ಲಾ ಅಲ್ಲಿಯೇ ಇಟ್ಟು ಪ್ಯಾಂಟು, ಷರ್ಟು, ಬನೀನು ಅಂಡರ್‌ವೇರ್‌ಗಳನ್ನು ತೆಗೆದುಕೊಂಡಳು. ಬನೀನನ್ನು ತೊಟ್ಟುಕೊಳ್ಳಲು ಒಂದು ಸಲಕ್ಕೆ ಅವಳಿಂದ ಸಾಧ್ಯವಾಗಲಿಲ್ಲ. ಅದಕ್ಕಿಂತಲೂ ಪ್ಯಾಂಟನ್ನು ತೊಟ್ಟುಕೊಳ್ಳಲು ತುಂಬಾ ಕಷ್ಟಪಟ್ಟಳು.

ಸಾತ್ವಿಕರಾವ್‌ನ ಪರಿಸ್ಥಿತಿ ಅದಕ್ಕಿಂತಲೂ ಅಧ್ವಾನವಾಗಿತ್ತು. ಸ್ನಾನ ಮಾಡಲು ಬಾತ್‌ರೂಮಿಗೆ ಹೋಗಿ ಬಟ್ಟೆ ಬಿಚ್ಚಲು ಸಾಕಷ್ಟು ಪ್ರಯತ್ನ ಮಾಡಿದ. ಕನ್ನಡಿಯಲ್ಲಿ ತನ್ನ ರೂಪವನ್ನು ನೋಡಿಕೊಂಡು ಕಂಗಾಲಾಗಿ, ನಂತರ ನಿಜ ಸಂಗತಿ ನೆನಪಾಗಿ ತನ್ನಲ್ಲೇ ನಕ್ಕು ಸ್ನಾನ ಮುಗಿಸಿ ಹೊರಬಂದ. ರಾಧಾ ಅವನ ನಗ್ನ ಶರೀರವನ್ನು ಕಂಡು ನಾಚಿಕೆಯಿಂದ ಮುಖ ಮುಚ್ಚಿಕೊಂಡಳು. ಅದನ್ನು ಗಮನಿಸಿದ ಸಾತ್ವಿಕರಾವ್ ಮತ್ತೆ ಬಾತ್‌ರೂಮಿಗೆ ಹೋದ. ಅವನ ಟವೆಲ್ ದಾರಿಯಲ್ಲಿ ಜಾರಿ ಕೆಳಗೆ ಬಿದ್ದಿತ್ತು.

ರಾಧಾ ಸ್ಕೂಟರ್ ಸ್ಟಾರ್ಟ್ ಮಾಡಿ ಹಾರನ್ ಹೊಡೆದಳು. ಸಾತ್ವಿಕರಾವ್ ಸೀರೆ ಉಡಲು ಮಾಡಿದ ಪ್ರಯತ್ನ ವಿಫಲವಾಗಿ ಹೇಗೋ ಒಂದು ರೀತಿ ಸುತ್ತಿಕೊಂಡು ಹೊರಬಂದ.

"ಯಾಕೆ? ಹಾರನ್ ಯಾಕೆ ಹೊಡೆದದ್ದು?" ನಾಚಿಕೆಯಿಂದ ಕೇಳಿದ.

ಅವನು ಸೀರೆ ಉಟ್ಟಿದ್ದ ರೀತಿಯನ್ನು ಕಂಡ ರಾಧಾ ಗೊಳ್ಳನೆ ನಕ್ಕಳು. ಒಂದು ಕ್ಷಣ ಸಾತ್ವಿಕರಾವ್ ಸಿಟ್ಟಾದರೂ ಕೂಡಲೇ ರಾಧಾಳ ಕಡೆ ಸೂಕ್ಷ್ಮವಾಗಿ ನೋಡಿ ತಾನೂ ಜೋರಾಗಿ ನಕ್ಕುಬಿಟ್ಟ.

"ಆ ಕೈಗಳಿಗೆ ಬಳೆಗಳು ಯಾಕೆ? ಕಾಲಿಗೆ ಲೇಡೀಸ್ ಚಪ್ಪಲಿ ಹಾಕಿದ್ದೀಯಲ್ಲಾ!"

ರಾಧೆ ನಾಚಿಕೆಯಿಂದ ಚಪ್ಪಲಿ ಬದಲಾಯಿಸಿಕೊಂಡು ಸ್ಕೂಟರ್ ಸ್ಟಾರ್ಟ್ ಮಾಡಿದಳು.

ರಸ್ತೆಯ ಕೊನೆಯ ತಿರುವಿನಲ್ಲಿ ಶಂಕರರಾವ್ ಅಡ್ಡಬಂದ. ರಾಧೆ ತುಂಬಾ ಕಷ್ಟದಿಂದ ಅವನಿಂದ ತಪ್ಪಿಸಿಕೊಂಡು ಹೊರಡಲು ಪ್ರಯತ್ನಿಸಿದರೂ ಅವನ ಕಣ್ಣಿಗೆ ಬಿದ್ದಳು. "ಏಯ್! ಸಾತ್ವಿಕ್ ನಿಲ್ಲಿಸಯ್ಯಾ. ಇವತ್ತು ನಿಂಗೇನು ಹೋಗೋ ಕಾಲ ಬಂತಯ್ಯಾ? ನೋಡಿಯೂ ನೋಡದ ಹಾಗೆ ಹೋಗ್ತಿದ್ದೀಯಲ್ಲಾ —"

ಅವನು ಹಿಂದೆಯೇ ಓಡೋಡಿ ಬರುತ್ತಿರುವುದನ್ನು ಕಂಡು ಸ್ಕೂಟರನ್ನು ನಿಲ್ಲಿಸಿದಳು ರಾಧೆ. ಶಂಕರರಾವ್ ಒದರುತ್ತಲೇ ಬಳಿಗೆ ಬಂದ.

"ಏನೋ! ಏನಾಗಿದೆಯೋ ನಿನಗಿವತ್ತು? ನನ್ನನ್ನು ಇಷ್ಟು ದೂರ ಓಡೋ ಹಾಗೆ ಮಾಡಿದೆಯಲ್ಲಾ ನೋಡು! ಸಾಯಂಕಾಲ ನಿಂಗೇನು ಮಾಡ್ತೇನೀಂತ," ಎನ್ನುತ್ತಾ ರಾಧಳ ಹಿಂದೆಯೇ ಕುಳಿತು ರಾಧಳ ನಡುವನ್ನು ಹಿಡಿದ.

ರಾಧ ಬೆಚ್ಚಿಬಿದ್ದು ಅವನ ಕೈಗೆ ಜೋರಾಗಿ ಹೊಡೆದಳು.

"ನಿಂಗೇನು ಬುದ್ಧಿ ಇದೆಯಾ ಇಲ್ವಾ? ಹೀಗೆ ನಾಚಿಕೆ ಇಲ್ದೆ ನಡುವನ್ನು

ಹಿಡೀತೀಯಲ್ಲಾ—"

"ನಿನ್ನ ನಡುವು ಹಿಡಿದರೆ ಶೀಲಕ್ಕೇನಾದ್ರೂ ಅಪಾಯ ಆಗುತ್ತಾ? ವಿಚಿತ್ರವಾಗಿ ಮಾತಾಡ್ತಿದೀಯಲ್ಲಾ ಇವತ್ತು. ಏನಾಗಿದೆ?" ಎನ್ನುತ್ತಾ ಅವಳ ಮೇಲೆ ಸಂಪೂರ್ಣ ಬಗ್ಗಿ ಅವಳ ಕತ್ತಿನ ಸುತ್ತಲೂ ಕೈ ಹಾಕಿ ಅವಳ ಬೆನ್ನನ್ನು ಚುಂಬಿಸಿದ. ರಾಧಳಿಗೆ ಮೈಯೆಲ್ಲಾ ಉರಿದುಹೋಯಿತು.

ಹಿಂದಕ್ಕೆ ತಿರುಗಿ ಅವನ ಕೆನ್ನೆಗೆ ಬೀಸಿ ಹೊಡೆದಳು. ಶಂಕರರಾವ್ ಬೆಚ್ಚಿಬಿದ್ದ.

"ನಿಂಗೇನು ರೋಗಾ ಬಂತೋ–ಅಯ್ಯೋ ಪಾಪಿ ಇಷ್ಟು ಜೋರಾಗಿ ಹೊಡೆದೆಯಲ್ಲಾ—" ಎನ್ನುತ್ತಾ ಕೆನ್ನೆ ಸವರಿಕೊಂಡ.

"ನಂಗೆ ಇವೆಲ್ಲಾ ಸರೀಬೀಳೋಲ್ಲ ಅಂತ ನಿಂಗೆ ಗೊತ್ತಿಲ್ವಾ?"

"ಇದೇನು ಇವತ್ತು ಒಳ್ಳೆ ಪತಿವ್ರತೆ ಥರ ಮಾತಾಡ್ತಿದ್ದೀಯಲ್ಲಾ. ಒಂದು ವೇಳೆ ನಿಂಗೇ ಗೊತ್ತಿಲ್ದೆ ನಿನ್ನಲ್ಲಿ ಏನಾದರೂ ಸೆಕ್ಸ್ ಬದಲಾವಣೆಯಾಗಿದೆಯಾ ಅಂತ—" ಎನ್ನುತ್ತಾ ಮತ್ತೆ ಅವಳ ನಡುವಿನ ಸುತ್ತಲೂ ಕೈ ಹಾಕಿ ಕುಳಿತ. ಬೆಚ್ಚಿಬಿದ್ದ ರಾಧೆ ಕೂಡಲೇ ಬ್ರೇಕ್ ಹಾಕಿ ಸ್ಕೂಟರನ್ನು ನಿಲ್ಲಿಸಿಬಿಟ್ಟಳು.

"ಏಯ್ ಶಂಕರರಾವ್" ಕಿರುನಗುತ್ತಾ ಕರೆದಳು.

"ಏನೋ?"

"ಸ್ವಲ್ಪ ಕೆಳಗಿಳಿದು ಈ ಸೈಲೆನ್ಸರ್ ನೆಟ್ಟುಗಳು ಲೂಸಾಗಿರೋ ಹಾಗಿವೆ. ಸ್ವಲ್ಪ ಟೈಟ್ ಮಾಡಿಕೊಡ್ತೀಯಾ?"

ಶಂಕರರಾವ್ ಆಗಲೆಂಬಂತೆ ತಲೆ ಆಡಿಸುತ್ತಾ ಕೆಳಗಿಳಿಯುತ್ತಿದ್ದಂತೆಯೇ ಸ್ಕೂಟರನ್ನು ಸ್ಟಾರ್ಟ್ ಮಾಡಿದ ರಾಧಾ ವೇಗವಾಗಿ ಹೊರಟುಹೋದಳು. ಶಂಕರರಾವ್ ನಿರಾಸೆಯಿಂದ ನಿಂತುಬಿಟ್ಟ. ನಂತರ ಸಾತ್ವಿಕರಾವ್‌ನನ್ನು ಬೈದುಕೊಳ್ಳುತ್ತಾ ಬಸ್‌ಸ್ಟ್ಯಾಂಡ್ ಕಡೆಗೆ ಹೆಜ್ಜೆಹಾಕಿದ.

ರಾಧಳಿಗೆ ಅವನು ಸಾತ್ವಿಕರಾವ್‌ನ ಸ್ನೇಹಿತನೆಂದು ಅರ್ಥವಾಯಿತು. ಆಫೀಸಿನಲ್ಲಿ "ಹಲೋ" ಅಂದಳು ಅವನು ಬರುತ್ತಿದ್ದಂತೆಯೇ.

"ಇದೇನೋ! ಸ್ವರ ಹೀಗೆ ಬದಲಾಗಿದೆ—ಹೆಣ್ಣು ಧ್ವನಿ! ತಗೋ ಒಂದು ದಂ ಹೊಡಿ; ಗಂಟಲು ಸರಿ ಹೋಗುತ್ತೆ" ಎನ್ನುತ್ತಾ ಸಿಗರೇಟನ್ನು ಕೊಟ್ಟ. ರಾಧಾ ಕಂಗಾಲಾದಳು.

"ಆ! ಸಿಗರೇಟಾ? ಬೇಡಪ್ಪಾ—" ಭಯದಿಂದ ಹೇಳಿದಳು.

"ಏನು ಇವತ್ತು ಸಖತ್ತಾಗಿ ಪೋಸು ಕೊಡ್ತಿದ್ದೀಯಲ್ಲಾ! ತಗೊಳ್ಳಯ್ಯಾ"

ಎನ್ನುತ್ತಾ ಬಲವಂತದಿಂದ ಸಿಗರೇಟನ್ನು ಅವಳ ಬಾಯಲ್ಲಿರಿಸಿ ಲೈಟರಿನಿಂದ ಅಂಟಿಸಿದ. ರಾಧ ಸಿಗರೇಟನ್ನು ಬಿಸಾಕಿ ಗಲಿಬಿಲಿಯಿಂದ ಅಲ್ಲಿಂದ ಓಡಿ ಹೋಗುತ್ತಿದ್ದಾಗ, ವಿನಾಯಕರಾವ್ ಒಂದೆಯೇ ಓಡಿ ಅವಳ ನಡುವಿನ ಮೇಲೆ ಕೈಹಾಕಿ ನಿಲ್ಲಿಸಿದ. "ಛೀ ! ಬಿಡು" ಕೋಪದಿಂದ ರಾಧ ಹೇಳಿದಳು. ಅವರು ಇನ್ನು ಬಲವಾಗಿ ಹಿಡಿದು ಸಿಗರೇಟು ಸೇದುವಂತೆ ಬಲವಂತ ಪಡಿಸಿದರು.

ರಾಧಾ ನೋವನ್ನು ಸಹಿಸದವಳಂತೆ, "ಅಬ್ಬಾ! ಬಿಡ್ರೀ ಪ್ಲೀಸ್!" ಎಂದು ಬಿಡಿಸಿಕೊಳ್ಳಲು ಪ್ರಯತ್ನಿಸಿದಳು. ಆದರೆ ಅಷ್ಟರಲ್ಲಿ ಮತ್ತೊಮ್ಮೆ ಅವಳ ಬಾಯಿಗೆ ಸಿಗರೇಟನ್ನು ಇಟ್ಟು ಹಚ್ಚಿಸಿಬಿಟ್ಟಿದ್ದರು. ಹೇಗಾದರೂ ಒಂದು ಸಲ ಹೊಗೆ ಬಿಟ್ಟು ಬಿಡೋಣವೆಂದು ರಾಧಾ ಹೊಗೆಯನ್ನು ಎಳೆದುಕೊಳ್ಳುತ್ತಿ ದ್ದಂತೆಯೇ ಕೆಮ್ಮು ಬಂತು. ಕಣ್ಣಿನ ತುಂಬಾ ನೀರು ಸುರಿಯಲು ಪ್ರಾರಂಭ ವಾಯಿತು. ಅದನ್ನು ಕಂಡು ವಿನಾಯಕರಾವ್ ಬಿದ್ದು ಬಿದ್ದು ನಗಲು ಪ್ರಾರಂಭಿಸಿದ.

'ಆಹಾ! ಸಿಗರೇಟನ್ನೇ ಕುಡಿದಿಲ್ಲವೇನೋ ಎಂಬಂತೆ ನಟಿಸುತ್ತಿರುವುದು ನೋಡು!' ಬದುಕಿದೆಯಾ ಬಡ ಜೀವವೆ ಎಂದು ರಾಧಾ ಅಲ್ಲಿಂದ ತನ್ನ ಸೀಟಿನ ಬಳಿಗೆ ಬಳುಕುತ್ತಾ ಹೋಗುತ್ತಿದ್ದಾಗ ಆಫೀಸಿನ ಎಲ್ಲರ ದೃಷ್ಟಿಯೂ ಅವಳ ಕಡೆಗೇ ಇತ್ತು. ಕೆಲವರು ನಗಲು ಪ್ರಾರಂಭಿಸಿದರು. ಅವಳು ತನ್ನ ಸೀಟಿನಲ್ಲಿ ಕುಳಿತುಕೊಳ್ಳುತ್ತಿದ್ದಂತೆಯೇ ಅಟೆಂಡರ್ ಬಂದು ಕರೆದ.

"ಹೆಡ್ ಕ್ಲಾರ್ಕ್ ಕರೀತಿದಾರೆ ಸಾರ್" ಮೇಲೆ ನೋಡುತ್ತಾ ಹೇಳಿದ.

"ಯ....ಯಾಕೆ?" ಸಂಕೋಚದಿಂದ ಕೇಳಿದಳು ರಾಧ.

"ನಿನ್ನೆ ಪುಟಪ್ ಮಾಡಿದ ಫೈಲಿನಲ್ಲಿ ಏನೋ ತಪ್ಪನ್ನು ಮಾಡಿದ್ದೀರಂತೆ"

ರಾಧ ಮೇಲೆದ್ದು, "ನಡೀ ಬರ್ತೀನಿ" ಎಂದು ಅವನ ಹಿಂದೆಯೇ ನಡೆದಳು.

"ಗುಡ್ ಮಾರ್ನಿಂಗ್ ಸಾರ್" ವಿನಯದಿಂದ ಹೇಳಿದಳು.

"ನಿಂಗೇನಾದರೂ ಬುದ್ಧಿ ಕಂಟ್ರೋಲಲ್ಲಿ ಇದೆಯಾ, ಇಲ್ಲವಾ ಎಂದು ತಿಳಿದುಕೊಳ್ಳಲು ಕರೆಸಿದೆ."

ರಾಧ ಬೆಚ್ಚಿಬಿದ್ದಳು. "ಏನು ನಡೆಯಿತು ಸಾರ್?"

ಹೆಡ್ ಕ್ಲಾರ್ಕ್ ಟ್ರೇ ನಿಂದ ಫೈಲ್ ತೆಗೆದು ಅವಳ ಮುಖದ ಮೇಲೆ ಎಸೆದ.

"ವಾಟೀಸ್ ದಿಸ್ ನಾನ್ಸೆನ್ಸ್?"

"ಏನಾಯಿತು ಸಾರ್?" ಕೆಳಗೆ ಬಿದ್ದಿದ್ದ ಫೈಲನ್ನು ಎತ್ತಿ ಕೊಳ್ಳುತ್ತಾ ಕೇಳಿದ.

"ಅದನ್ನು ನಾನೇ ಹೇಳಬೇಕಾ? ಒಂದುಸಲ ಅದನ್ನು ತೆಗೆದು ನೋಡು, ನಾನು ಹಾಕಿದ ಕ್ವೆಯರಿ ಏನು? ನೀನು ಕೊಟ್ಟಿರೋ ಉತ್ತರ ಏನು? ಛೆ! ಛೆ!! ಹೋಪ್ಲೆಸ್ ಆಗ್ಬಿಟ್ಟಿದೆ ನಿನ್ನ ಕೆಲ್ಸ"

"ಸಾರಿ ಸಾರ್! ಈಗಲೇ ನೀವು ಕೇಳಿರುವ ವಿವರಗಳನ್ನೆಲ್ಲಾ ಕೊಡುತ್ತೇನೆ."

"ಹೋಗು, ಬೇಗ ಹೋಗಿ ರೆಡಿ ಮಾಡು."

ರಾಧ ಆ ಫೈಲನ್ನು ತೆಗೆದುಕೊಂಡು ತನ್ನ ಸೀಟಿಗೆ ಬಂದಳು. ಶಂಕರರಾವ್‌ಗೆ ನೈಸಾಗಿ ಮಾತನಾಡಿ ತನ್ನ ಫೈಲಿನಲ್ಲಿರುವ ತಪ್ಪೇನೆಂದು ಕೇಳಿದಳು. ಅದನ್ನು ಪರಿಶೀಲಿಸಿದ ಶಂಕರರಾವ್ "ಎಲ್ಲ ಸರಿಯಾಗಿಯೇ ಇದೆಯಲ್ಲಾ" ಎಂದು, "ತಗೊಂಡು ಹೋಗಿ ಅವನ ಮುಖದ ಮೇಲೆ ಎಸಿ" ಎಂದು ಸಲಹೆ ನೀಡಿದ.

"ಏನೂ ತಪ್ಪಿಲ್ಲ ತಾನೇ?"

ರಾಧ ಧೈರ್ಯದಿಂದ ಹೆಡ್‌ಕ್ಲಾರ್ಕ್ ಬಳಿಗೆ ಹೋಗಿ, ಫೈಲನ್ನು ಬೀಸಿ ಒಗೆದಳು ಅವನ ಮುಖಕ್ಕೆ.

"ಎಲ್ಲಾ ಸರಿಯಾಗಿಯೇ ಇದೆ" ಎರಡು ಕೈಗಳನ್ನು ನಡುವಿನ ಮೇಲಿಟ್ಟು ಕೊಂಡು ಹೇಳಿದಳು ಧೈರ್ಯದಿಂದ.

"ಎಷ್ಟು ಧೈರ್ಯ ನಿನಗೆ? ಫೈಲನ್ನು ನನ್ನ ಮುಖದ ಮೇಲೆ ಎಸೆಯುತ್ತೀಯಲ್ಲಾ?"

"ನೀವು ನನ್ನ ಮುಖಕ್ಕೆ ಎಸೆದಿದ್ದಿರಲ್ಲಾ? ಹಾಗೆನೇ ಇದೂ."

"ನಾನು ನಿನ್ನ ಬಾಸ್—"

"ಎಂಥ ಬಾಸ್? ನಿಯತ್ತಿನ ಬಾಸ್ ಆದರೆ ಹಾಗೆ ಬಿಸಾಕುತ್ತಿರಲಿಲ್ಲ. ನಿಮ್ಮ ಆಟ ಎಲ್ಲಾ ಗೊತ್ತು ಕಂಟ್ರಾಕ್ಟರ್‌ಗಳಿಂದ ಹಣ ಹೊಡೆಯೋ ವಿಷಯ ಈಗಲೇ ಹೆಡ್ ಆಫೀಸಿಗೆ ತಿಳಿಸುತ್ತೇನೆ."

ಹೆಡ್ ಕ್ಲಾರ್ಕ್ ಬೆಚ್ಚಿ ಬಿದ್ದ.

ಬಲವಂತದ ನಗೆ ತಂದುಕೊಂಡು "ತಪ್ಪಾಯ್ತು ಮಾರಾಯಾ! ಏನೋ ಮೂಡ್ ಕೆಟ್ಟಿತ್ತು ಆಗ ಹಾಗೆ ಮಾಡಿದೆ...ಕ್ಷಮಿಸಿ ಬಿಡಪ್ಪಾ" ಎಂದು ಬೇಡಿಕೊಂಡ. ಪಕ್ಕದಲ್ಲಿ ಕುಳಿತಿದ್ದ ಟೈಪಿಸ್ಟ್ ಅಮೃತ ಅವಳನ್ನು ನೋಡಿ ಕಿರು

ನಕ್ಕಳು.

"ಹಾಯ್ ಸಾತ್ವಿಕ್" ಸ್ವೀಟಾಗಿ ಹೇಳಿದಳು.

"ಹಾಯ್" ಅಂದಳು ರಾಧಾ ಮತ್ಸರವನ್ನು ತಡೆದುಕೊಳ್ಳುತ್ತಾ. ಅಮೃತಳ ನಗು, ಆ ವಯ್ಯಾರ ನೋಡಿದರೇನೇ ಅವಳಿಗೆ ಅರ್ಥವಾಗಿಬಿಟ್ಟಿತು. ಸಾತ್ವಿಕ್‌ಗೂ ಅವಳಿಗೂ ತುಂಬಾ ಸ್ನೇಹವಿದೆಯೆಂದು.

"ಏನು ಇವತ್ತು ಅಷ್ಟೊಂದು ಧೈರ್ಯದಿಂದ ಬಾಸ್‌ನ ಹೆದರಿಸಿಬಿಟ್ರಿ? ಮುಂಚೇನೇ ಹೀಗೆ ಮಾಡಿದ್ದಿದ್ರೆ ದಿನಾ ಬೈಗಳನ್ನು ತಿನ್ನಬೇಕಾಗಿರಲಿಲ್ಲ."

"ಇಷ್ಟು ದಿನ ಲಾಂಗ್‌ರೋಪ್ ಕೊಟ್ಟಿದ್ದೆ. ಇವತ್ತು ಅವನ್ನು ಎಳೆದು ಬಿಟ್ಟೆ" ಎಂದು ಅವಳ ಬಳಿಗೆ ಸರಿದು, "ಅದು ಸರಿ ಮುಂದಿನ ಭಾನು ವಾರ ಕೆ.ಆರ್.ಎಸ್.ಗೆ ಹೋಗೋಣವಾ?" ಎಂದು ಕೇಳಿದಳು.

"ಅದೇನು ಸಾತ್ವಿಕ್?" ಆಶ್ಚರ್ಯದಿಂದ ಕೇಳಿದಳು.

"ಅದೇ ಈ ಮುಂಚಿನಂತೆ...." ಅಮೃತಳ ಮುಖದಲ್ಲಿ ನೋಡುತ್ತಾ ಒಂದು ವೇಳೆ ಈ ಮುಂಚೆ ಅಂತಹ ಟ್ರಿಪ್‌ಗಳೇನಾದರೂ ಮಾಡಿದ್ದರೆ ತಿಳಿಯುತ್ತದೆಂದು ಮುಂದುವರೆಸಿದಳು. "ಹಾಯಾಗಿ ನಾವಿಬ್ಬರೇ ಒಂದು ಗೆಸ್ಟ್ ರೂಮಿನಲ್ಲಿ ಪ್ರಣಯ ಲೋಕದಲ್ಲಿ ಸಂಚರಿಸೋಣ...." ಅವಳ ಡೈಲಾಗಿನ್ನೂ ಪೂರ್ತಿಯಾಗುವುದಕ್ಕೆ ಮುಂಚಿತವಾಗಿಯೇ ರಾಧಳ ಕೆನ್ನೆ ಛಳ್ಳೆಂದಿತು.

"ಈಡಿಯಟ್! ಸಹೋದ್ಯೋಗಿ ಅಂತ ಮಾತಾಡಿದ್ರೆ ಕಾಮುಕನಂತೆ ವರ್ತಿಸುತ್ತೀಯಾ? ಮನೆಯಲ್ಲಿ ಅಷ್ಟು ಸುಂದರಿಯಾದ ಹೆಂಡತಿಯನ್ನಿಟ್ಟುಕೊಂಡು ಇದೇನು ರೋಗ ನಿನಗೆ? ಛೀ! ಮೊದಲು ಈ ಗಂಡಸರೇ ಇಷ್ಟು ಒಬ್ಬಳ ಜೊತೆ ನಿಯತ್ತಾಗಿ ಸಂಸಾರ ಮಾಡದೆ ಸಿಕ್ಕಿದ ಹೆಣ್ಣುಗಳ ಜೊತೆಯೆಲ್ಲಾ ಬಾಲ ಆಡಿಸ್ತಾರೆ. ಥು!" ರಾಧ ಅವಳ ಮಾತುಗಳನ್ನು ಸಂತೋಷದಿಂದಲೂ, ಸಂತೃಪ್ತಿಯಿಂದಲೂ ಕೇಳುತ್ತಿದ್ದಳು. ಇಷ್ಟು ದಿನ ಮನಸ್ಸಿನಲ್ಲಿದ್ದ ಅನುಮಾನ ಒಂದೇ ಕ್ಷಣದಲ್ಲಿ ಮಾಯವಾಯಿತು.

"ಅಯಾಮ್ ಸಾರಿ ಅಮೃತ..."

"ಷಟಪ್" ಕೋಪದಿಂದ ಕಿರುಚಿದಳು ಅಮೃತ.

ರಾಧಾ ತನ್ನ ಸೀಟಿನಲ್ಲಿ ಬಂದು ಕುಳಿತಳು. ಕೆಲವು ನಿಮಿಷಗಳ ನಂತರ ಅಮೃತಳೇ ಅವಳ ಬಳಿಗೆ ಬಂದು— "ಕೋಪದಲ್ಲಿ ಸ್ವಲ್ಪ ಅತಿಯಾಗಿಯೇ ವರ್ತಿಸಿದೆ ಸಾತ್ವಿಕ್! ಐಯಾಮ್ ಸಾರಿ! ನಿನಗೆ ಆ ಬಯಕೆ ಇರುವುದರಲ್ಲಿ ತಪ್ಪೇನೂ ಇಲ್ಲ. ಆದರೆ ನನಗದೆಲ್ಲಾ ಇಷ್ಟವಿಲ್ಲ. ಅದನ್ನೇ ನಾನು ನಿನಗೆ ಹೇಳಬಹುದಾಗಿತ್ತು. ಏಕೋ ಒಮ್ಮೆಲೆ ನಿನ್ನಿಂದ ಅಂತಹ ಮಾತನ್ನು

ಕೇಳಿದಾಗ ಬರ್ಸ್ಟ್ ಆಗಿಬಿಟ್ಟೆ; ಇದನ್ನೇ ಇನ್ಯಾರಾದರೂ ಕೇಳಿದ್ದಿದ್ದರೆ ಇನ್ನೂ ಕೋಪ ಬರುತ್ತಿತ್ತು." ರಾಧಳ ಮನಸ್ಸು ಹಗುರವಾಯಿತು.

"ಥ್ಯಾಂಕ್ಯೂ! ನಡೆದದ್ದನ್ನು ಇಬ್ಬರೂ ಮರೆತುಬಿಡೋಣ" ಅಂದಳು ನಗುತ್ತಾ. ಸ್ವಲ್ಪ ಸಮಯದ ನಂತರ ರಾಧಳಿಗೆ ಟಾಯಿಲೆಟ್‌ಗೆ ಹೋಗ ಬೇಕಾದ ಅವಶ್ಯಕತೆ ಬಂತು. ಒಳಗೆ ಹೆಜ್ಜೆ ಇಟ್ಟಳೋ ಇಲ್ಲವೋ 'ಕಿಟಾರ'ನೆ ಕಿರುಚಿದರು. ಅಲ್ಲಿದ್ದವರೆಲ್ಲಾ ಒಳಗಿದ್ದ ಹೆಂಗಸರೆಲ್ಲಾ ಚಿದುರಿಹೋದರು. ರಾಧಳಿಗೇನೂ ಅರ್ಥವಾಗಲಿಲ್ಲ– ಅವರೇಕೆ ಹಾಗೆ ಓಡುತ್ತಿದ್ದಾರೆಂದು. ತಾನೂ ಕಂಗಾಲಾಗಿ ಹೊರಗ ನಡೆದಳು.

ಒಬ್ಬ ದಪ್ಪನೆಯ ಹೆಂಗಸು ಕೋಪದಿಂದ ಮುನ್ನುಗ್ಗಿದಳು.

"ನಾಚಿಕೆ ಇಲ್ವಾ ನಿಂಗೆ? ಲೇಡೀಸ್ ಟಾಯಿಲೆಟ್ಟೊಳಗೆ ಬಂದಿದ್ಯಲ್ಲಾ? ನಿನ್ನನ್ನು ಈಗಲೇ ಪೋಲೀಸಿಗೆ ಕೊಡುತ್ತೇವೆ" ಕಾಳಿಯ ಅವತಾರವೆತ್ತಿ ಗುಡುಗಿದಳು, ಆಗ ಅರ್ಥವಾಯಿತು ರಾಧಳಿಗೆ ತಾನು ಈಗ ಸಾತ್ವಿಕರಾವ್‌ನ ಶರೀರದಲ್ಲಿರುವ ವಿಷಯ ಮರೆತು ಲೇಡೀಸ್ ಟಾಯಿಲೆಟ್ ಒಳಗೆ ಬಂದು ಬಿಟ್ಟಿದ್ದಳು

"ಐಯಾಮ್ ಸಾರಿ! ಏನೋ ಯೋಚಿಸುತ್ತಾ ಅಪ್ಪಿತಪ್ಪಿ ಬಂದು ಬಿಟ್ಟೆ."

"ಎಲ್ಲಾ ಸುಳ್ಳು! ಇವನು ಅತ್ಯಪ್ತ ಕಾಮುಕನಾಗಿಬಿಟ್ಟಿದ್ದಾನೆ. ಆಗಲೇ ನನ್ನನ್ನ ಕೆ.ಆರ್.ಎಸ್‌ಗೆ ಕರೆದ; ನಾನು ಕೆನ್ನೆಗೆ ಚೆನ್ನಾಗಿ ಬಡೆದಿದ್ದೆ. ಈಗ ನಾನು ಟಾಯಿಲೆಟ್‌ಗೆ ಬಂದದ್ದನ್ನು ಕಂಡು ಹಿಂದೆಯೇ ಬಂದಿದ್ದಾನೆ" ಅಮೃತ ಹೇಳಿದಳು

"ಅಯ್ಯೋ! ಅಯ್ಯೋ!! ಒಳಗೆ ನಾವೆಲ್ಲಾ ಇದ್ದುದರಿಂದ ಸರಿ ಹೋಯಿತು. ಇಲ್ಲದಿದ್ದರೆ ನಮ್ಮ ಶೀಲಗಳನ್ನೆಲ್ಲಾ ದೋಚಿಬಿಡುತ್ತಿದ್ದ" ಮತ್ತೊಬ್ಬ ಸುಂದರಿ ಕಿರುಚಿದಳು.

"ಕೂಡಲೇ ಮ್ಯಾನೇಜರ್‌ಗೆ ಕಂಪ್ಲೇಂಟ್ ಕೊಡಿ" ಸಲಹೆ ಕೊಟ್ಟಳು ಮತ್ತೊಬ್ಬಳು.

"ಈ ಸಲಕ್ಕೆ ನನ್ನನ್ನು ಕ್ಷಮಿಸಿಬಿಡಿ" ಎನ್ನುತ್ತಾ ಭಯದಿಂದ ಜೆಂಟ್ಸ್ ಟಾಯಿಲೆಟ್ ಒಳಗೆ ಬಂದುಬಿಟ್ಟಳು ರಾಧ.

ಹೆಂಗಸರೆಲ್ಲಾ ಸ್ವಲ್ಪಹೊತ್ತು ಸಾತ್ವಿಕರಾವ್‌ನ ಬಗ್ಗೆ ಕೆಟ್ಟದಾಗಿ ಮಾತ ನಾಡಿಕೊಂಡು ತಮ್ಮ ತಮ್ಮ ಜಾಗಗಳಲ್ಲಿ ಬಂದು ಕುಳಿತರು.

ರಾಧಾ ಮತ್ತೆ ತನ್ನ ಸೀಟಿಗೆ ಬರುತ್ತಿದ್ದಂತೆಯೇ ಜವಾನ ಅಲ್ಲಿ ನಿಂತು–

"ಮ್ಯಾನೇಜರ್ ಕರೀತಿದ್ದಾರೆ–" ಎಂದ.

"ನನ್ನನ್ನಾ?" ಭಯದಿಂದ ಕೇಳಿದಳು.

"ಹೌದು!"

"ಏಕಂತೆ?"

"ಗೊತ್ತಿಲ್ಲ! ತುಂಬಾ ಸಿಟ್ಟಾಗಿದ್ದಾರೆ."

ರಾಧ ನಿದಾನವಾಗಿ ಮೇಲೆದ್ದು ಮ್ಯಾನೇಜರ್ ಕೋಣೆಗೆ ನಡೆದಳು.

"ಕಮಾನ್ ಸಾತ್ವಿಕರಾವ್! ನಿನ್ನ ಮೇಲೆ ತುಂಬಾ ಕಂಪ್ಲೇಂಟ್ ಬಂದಿದೆ. ಮೊದಲು ಯಾರೋ ಹುಡುಗಿ ಬಂದು ಕೌಂಟರಿನಿಂದ ನಿನ್ನನ್ನೆಳೆದು ಕೆನ್ನೆಗೆ ಹೊಡೆದಿದ್ದಳು. ಸಿನಿಮಾದ ಡಬಲ್ ಆ್ಯಕ್ಷನ್‌ನಂತೆ ಮತ್ತ್ಯಾರೋ ಮಾಡಿದ ಕೆಲಸಕ್ಕೆ ನಿನಗೆ ಶಿಕ್ಷೆಯಾಯಿತೆಂದು ತಪ್ಪಿಸಿಕೊಂಡಿ. ಆಗ ನಿನ್ನ ಮೇಲೆ ಶಿಸ್ತಿನಕ್ರಮ ತೆಗೆದುಕೊಳ್ಳಲಿಲ್ಲ ನಾವು. ಆದರೆ ಇವತ್ತು ಅಸಹ್ಯಕರವಾಗಿ ವರ್ತನೆ ಮಾಡಿದ್ದಿ. ಇದೇ ನಿನಗೆ ಕೊನೆಯ ಎಚ್ಚರಿಕೆ! ಇನ್ನೊಂದು ಸಲ ಇಂತಹ ಕಂಪ್ಲೇಟ್ ಬಂತೂಂದ್ರೆ ನಿನ್ನನ್ನು ರೂರಲ್ ಬ್ರಾಂಚ್‌ಗೆ–ಒಬ್ಬ ಹುಡುಗಿಯೂ ಇಲ್ಲದ ಬ್ರಾಂಚಿಗೆ– ಟ್ರಾನ್ಸ್‌ಫರ್ ಮಾಡ್ತೀನಿ. ಅಂಡರ್‌ಸ್ಟಾಂಡ್?"

ರಾಧ ನೋವಿನಿಂದ ತಲೆ ಆಡಿಸಿದಳು. ತನ್ನಿಂದಾಗಿ ಸಾತ್ವಿಕರಾವ್! ಎಂತಹ ಕೆಟ್ಟ ಹೆಸರು. ಅದು ನೆನಪಾಗುತ್ತಿದ್ದಂತೆಯೇ ಅವನ ಬಗ್ಗೆ ಕರುಣೆ ಮತ್ತು ಪ್ರೇಮ ಉಕ್ಕಿ ಹರಿಯಿತು.

"ಇನ್ನು ನೀನು ಹೋಗಬಹುದು" ಮ್ಯಾನೇಜರ್ ಗುಡುಗಿದ.

ರಾಧಳ ಪರಿಸ್ಥಿತಿಗಿಂತಲೂ ಸಾತ್ವಿಕರಾವ್‌ನ ಪರಿಸ್ಥಿತಿ ಮತ್ತಷ್ಟು ಘೋರವಾಗಿತ್ತು ಮನೆಯಲ್ಲಿ. ಸೀರೆಯುಟ್ಟು ನಡೆಯುವ ಅಭ್ಯಾಸವಿಲ್ಲದಿದ್ದುದರಿಂದ, ಹೊಸಿಲನ್ನು ದಾಟುವಾಗ ಮೂರು ಸಲ ಎಡವಿಬಿದ್ದಿದ್ದ. ಇನ್ನು ಇದು ಸಾಧ್ಯವಿಲ್ಲವೆಂದು ತಿಳಿದು ಸೀರೆಯನ್ನು ಬಿಚ್ಚಿ ಬಿಸಾಕಿ ಲುಂಗಿಯನ್ನು ಉಟ್ಟುಕೊಂಡ.

ಲುಂಗಿಯುಟ್ಟು ಅಡಿಗೆ ಮನೆಗೆ ಹೋಗಿ ಕಾಫಿ ಮಾಡಲು ಪ್ರಾರಂಭಿಸುತ್ತಿದ್ದಂತೆಯೇ ಕೆಲಸದವಳು ಬಂದಳು. ಅವನ ಅವತಾರವನ್ನು ಕಂಡು ಕೆಲಸದವಳು ಭಯಪಟ್ಟಳು.

"ಏನು ಹಾಗೆ ನೋಡ್ತಾ ನಿಂತುಬಿಟ್ಟಿ? ಕೆಲಸಮಾಡು—" ಸಾತ್ವಿಕ ರಾವ್ ಹೇಳಿದ. ಕೆಲಸದವಳು ಹೆದರುತ್ತಲೇ ಒಂದು ಕಣ್ಣಿನಿಂದ ಲುಂಗಿಯೆಡೆಗೆ ನೋಡುತ್ತಾ ಮುಂದುವರೆಸಿದಳು. ಅಷ್ಟರಲ್ಲಿ ಸ್ಟೌ ಮೇಲಿರಿಸಿದ್ದ ಹಾಲು ಉಕ್ಕಿಹೋದುದರಿಂದ ಓಡಿ ಹೋಗಿ ಅದನ್ನು ಇಳಿಸಿ ಬಂದ. ಆ ಗಡಿಬಿಡಿಯಲ್ಲಿ ಲುಂಗಿ ಜಾರಿಬಿದ್ದುದನ್ನು ಅವನು ಗಮನಿಸಲೇ ಇಲ್ಲ. ಅಡಿಗೆ ಮನೆಗೆ ಬಂದ ಕೆಲಸದವಳು ಅವನ ಅಂಡರ್‌ವೇರ್‌ನಲ್ಲಿದ್ದುದನ್ನು ಗಮನಿಸಿ ಕಿಟಾರನೆ ಕಿರುಚಿದಳು. ಬೆಚ್ಚಿಬಿದ್ದು "ಏನು?" ಎಂದು ಕೇಳಿದ ಸಾತ್ವಿಕರಾವ್.

ಅವಳು ಅವನ ಅಂಡರ್‌ವೇರ್ ಕಡೆ ನೋಡುತ್ತಾ, "ನೀವಲ್ಲವೇನೋ ಅಂದುಕೊಂಡಿದ್ದೆ ಅಪ್ಪಾ" ಬಲವಂತದಿಂದ ನಗುತ್ತಾ ಹೇಳಿದಳು. ಸಾತ್ವಿಕ ರಾವ್ ಕೂಡಾ ನಗುತ್ತ, "ಲುಂಗಿಉಟ್ಟುಕೊಂಡರೆ ಹೇಗಿರುತ್ತೇನೋ ನೋಡೋಣ ಅಂತ" ಎಂದು ಹೇಳಿದ.

"ಹೇಗಿದೆಯೇ?" ಕೆಲಸದವಳನ್ನು ಕೇಳಿದ.

"ಚೆನ್ನಾಗೇ ಇದೆ. ಈ ಮಲೆಯಾಳೀ ಸಿನೆಮಾಗಳಲ್ಲಿ ಹುಡುಗಿಯರಿರುತ್ತಾರಲ್ಲಾ ಹಾಗಿದೆ."

ಸಾತ್ವಿಕರಾವ್ ನಕ್ಕುಬಿಟ್ಟ. ತಾನು ಮಾಡಿದ್ದ ಕಾಫಿಯನ್ನು ರುಚಿ ನೋಡಿ ವಾಷ್ ಬೇಸಿನಲ್ಲಿ ವಾಂತಿಮಾಡಿಕೊಂಡ. ಕೆಲಸದವಳು ಹೋದ ಕೂಡಲೇ ಮನೆಯ ಯಜಮಾನ ಬಂದ ಬಾಡಿಗೆ ವಸೂಲಿ ಮಾಡಲು. ಬಾಗಿಲು ತೆರೆಯುತ್ತಿದ್ದಂತೆಯೇ ಅವನ ಅವತಾರ ಕಂಡು ಆ ಮುದುಕನ ಕಣ್ಣುಗಳು ಬಂಡಿ ಚಕ್ರದಂತೆ ಗುಂಡಗಾದವು

ಅವನ ಬಾಯಿಂದ ಜೊಲ್ಲು ಸುರಿಯಲಾರಂಭಿಸಿತು.

"ಅಹ್ಹಹ್ಹಾ....ಇಹ್ಹೀ... ಬೇಡ.... ಬೇಡ.... ಬಾಡಿಗೆ ಬೇಡ..." ಎನ್ನುತ್ತಾ ಕೆಳಗೆ ಬಿದ್ದುಬಿಟ್ಟ. ಸಾತ್ವಿಕರಾವ್ ಅವನನ್ನು ಹೊರಗೆಳೆದು ಬಾಗಿಲನ್ನು ಮುಚ್ಚಿಬಿಟ್ಟ. ಸ್ನಾನ ಮಾಡಿ ಬಾಲ್ಕನಿಯಲ್ಲಿ ಬಂದಾಗ ಒಬ್ಬ ಸ್ಟೂಡೆಂಟ್ ಅವನೆಡೆಗೇ ನೋಡುತ್ತಾ ನಿಂತಿದ್ದ ಎದುರು ಮನೆಯಿಂದ. ಸಾತ್ವಿಕರಾವ್‌ಗೆ ಒಂದು ಅನುಮಾನ ಬಂತು. ಆ ಸ್ಟೂಡೆಂಟ್ ತನ್ನನ್ನು ಹಾಗೇಕೆ ನೋಡುತ್ತಿದ್ದಾನೆ? ಒಂದು ವೇಳೆ ರಾಧಳೇನಾದರೂ ಅವನೊಡನೆ ಪ್ರಣಯ ಕಲಾಪಗಳನ್ನು ನಡೆಸುತ್ತಾಳಾ? ಏನೂ ಇಲ್ಲದಿದ್ದರೆ ಅವನೇಕೆ ಹಾಗೆ ನೋಡುತ್ತಾನೆ. ರಾಧಳಿಗೂ, ಅವನಿಗೆ ಇರುವ ಸಂಬಂಧವನ್ನು ತಿಳಿದುಕೊಳ್ಳಬೇಕಾದರೆ ತಾನೀಗ ಅವನ ಕೋಣೆಗೆ ಹೋಗಬೇಕು. ಕೂಡಲೇ ಮೇಕಪ್ ಮಾಡಿಕೊಂಡು ಅವನ ಕೋಣೆಯ ಕಡೆ ನಡೆದ ಸಾತ್ವಿಕರಾವ್

ಬಾಗಿಲನ್ನು ಬಡಿಯುತ್ತಿದ್ದಂತೆಯೇ ಆ ಹುಡುಗ ಬಂದು ಬಾಗಿಲನ್ನು ತೆರೆದ.

"ಏನಕ್ಕಾ-ಹೀಗೆ ಬಂದಿರಿ? ಮಾರ್ಕೆಟ್‌ನಿಂದ ಏನಾದರೂ ತಂದುಕೊಡ ಬೇಕಾ?"

"ಏನೂ ಇಲ್ಲ. ಸುಮ್ಮನೆ ಬಂದೆ" ಸಾತ್ವಿಕರಾವ್ ಹೇಳಿದ.

"ನೀವು ಮೊನ್ನೆ ನನಗೆ ರಾಖಿ ಕಟ್ಟಿದಾಗ ನಿಮಗೆ ನಾನು ಕೊಡಲು ನನ್ನ ಬಳಿ ಏನೂ ಇರಲಿಲ್ಲ ಅಕ್ಕಾ! ಅದಕ್ಕೆ ಏನು ಮಾಡಿದೆ ಗೊತ್ತಾ? ಪಕ್ಕದ ಮನೆಯವನಿಗೆ ಟ್ಯೂಷನ್ ಮಾಡಲು ಒಪ್ಪಿಸಿ ಇಪ್ಪತ್ತೈದು ರೂ. ಅಡ್ವಾನ್ಸ್ ತೆಗೆದುಕೊಂಡೆ. ತಗೊಳ್ಳಿ ಅಕ್ಕ ನನ್ನ ಪ್ರಸೆಂಟೇಷನ್" ಎನ್ನುತ್ತಾ ಆ ಹಣವನ್ನು ಕೊಡಲು ಬಂದ ಸಾತ್ವಿಕರಾವ್ ಮನಸ್ಸು ಹಿಂಡಿ ದಂತಾಯಿತು. ತಾನೆಷ್ಟು ತಪ್ಪಾಗಿ ತಿಳಿದಿದ್ದೆ?

"ಬೇಡ ತಮ್ಮಾ! ಈ ಹಣ ನಿನ್ನ ಬಳಿಯಲ್ಲಿಯೇ ಇರಲಿ! ಇದು ನನ್ನ ಕಾಣಿಕೆಯೆಂದು ನೀನೇ ಏನಾದರೂ ತೆಗೆದುಕೋ" ಎಂದು ಮನೆಗೆ ವಾಪಸ್ಸು ಬಂದುಬಿಟ್ಟ. ಹಸಿವಾಗುತ್ತಿದ್ದುದರಿಂದ ಅಡಿಗೆ ಮಾಡಲು ಪ್ರಾರಂಭಿಸಿದ. ಅರ್ಧಂಬರ್ಧ ಆದ ಮೇಲೆ ಅದು ಸಾಧ್ಯವಿಲ್ಲವೆಂದರಿತು ಬಚ್ಚಲಿಗೆ ಚಿಲ್ಲಿ ಸೈಕಲ್ ತೆಗೆದುಕೊಂಡು ಹೋಟೆಲ್ ಕಡೆಗೆ ಹೊರಟ. ಅಷ್ಟು ದೂರ ಹೋದ ಮೇಲೆ ಏನೋ ನೆನಪಾಗಿ ಹಿಂದಕ್ಕೆ ತಿರುಗಿ ನೋಡಿದರೆ ಜನವೋ ಜನ. ಸೀರೆಯುಟ್ಟು ಗಂಡಸರ ಸೈಕಲ್‌ನಲ್ಲಿ ಬಂದುದನ್ನು ಗಮನಿಸಿ ಅವರಿಂದ ಹೇಗೋ ತಪ್ಪಿಸಿಕೊಂಡು ಮನೆಗೆ ವಾಪಸ್ಸಾದ.

ಹಸಿವಿನಿಂದ ಪ್ರಾಣಹೋದಂತಾಯಿತು ಅವನಿಗೆ. ನಿತ್ರಾಣನಾಗಿ ಮಂಚದ ಮೇಲೆ ಮಲಗಿದ.

"ರಾಧಾ" ಎನ್ನುತ್ತಾ ಪಕ್ಕದ ಮನೆಯಾಕೆ ಬಾಗಿಲನ್ನು ತಳ್ಳಿಕೊಂಡು ಒಳಗೆ ಬಂದಳು. ಸಾತ್ವಿಕರಾವ್ ಬೆಚ್ಚಿಬಿದ್ದು ಎದ್ದುಕುಳಿತ.

"ಮಲಕ್ಕೊಳ್ಳೇ ಯಾಕೆಎದ್ದೀ?" ಎನ್ನುತ್ತಾ ಅವನನ್ನು ಮತ್ತೆ ಹಾಸಿಗೆಯ ಮೇಲೆ ತಳ್ಳಿ ತಾನೂ ಪಕ್ಕದಲ್ಲೇ ಮಲಗಿಕೊಂಡಳು.

ಸಾತ್ವಿಕರಾವ್‌ನ ಹೃದಯ ಬಡಿತ ತುಂಬಾ ಏರಿತು. ಬೆವರಲು ಪ್ರಾರಂಭಿಸಿದ.

"ರಾಧಾ! ನೆನ್ನೆ ಏನಾಯಿತು ಗೊತ್ತಾ?" ಅವಳು ಮತ್ತಷ್ಟು ಹತ್ತಿರ ಸರಿಯುತ್ತಾ ಕೇಳಿದಳು.

"ಏನು ನಡೆಯಿತು?" ತನ್ನನ್ನು ಒತ್ತರಿಸಿಕೊಂಡು ಮಲಗಿದ್ದವಳನ್ನು ಕೇಳಿದ.

"ರಾಮು ಭಾವ ಬಂದಿದ್ದಾರಲ್ಲಾ? ಅಕ್ಕ ಆಫೀಸಿಗೆ ಹೋದ ಮೇಲೆ ಅವರು ಹೀಗೆ ನನ್ನ ಪಕ್ಕದಲ್ಲಿ ಮಲಗಿಕೊಂಡು–" ನಾಚಿಕೆಯಿಂದ ನಕ್ಕಳು.

"ಆ! ಆ ಮೇಲೆ?" ನಡುಗುತ್ತಿದ್ದ ಧ್ವನಿಯಲ್ಲಿ ಸಾತ್ವಿಕರಾವ್ ಕೇಳಿದ.

"ಹೋದ ಮೇಲೆ ಅವರು ಹೀಗೇ ನನ್ನ ಪಕ್ಕ ಮಲಗಿಕೊಂಡು ನನ್ನ ಮೇಲೆ ಕಾಲು ಹಾಕಿದರೇ!" ಎನ್ನುತ್ತಾ ಸ್ವಾತಿಕರಾವ್‌ನ ಮೇಲೆ ಕಾಲು ಹಾಕಿದಳು. ಸಾತ್ವಿಕರಾವ್ ಒಮ್ಮೆಗೇ ಮೇಲೇಳಲು ಹೋಗಿ ಪಕ್ಕಕ್ಕೆ ಹೊರಳಿದ್ದರಿಂದ ಮಂಚದಿಂದ ಕೆಳಗೆ ಬಿದ್ದ.

"ಅಯ್ಯೋ! ಇದೇನು? ಹಾಗೆ ಬಿದ್ದುಬಿಟ್ರಿ?" ಆಶ್ಚರ್ಯದಿಂದ ಕೇಳಿದಳು ಅವಳು.

"ಏನೂ ಇಲ್ಲ ಬಿಡು" ಎನ್ನುತ್ತಾ ಮೇಲೆದ್ದು ಕುಳಿತ ಸಾತ್ವಿಕರಾವ್.

"ಈಗಲೇ ಏಳಬೇಡ" ಎನ್ನುತ್ತಾ ಸಾತ್ವಿಕರಾವ್‌ನನ್ನು ಬಲವಂತವಾಗಿ ಮಂಚದ ಮೇಲೆ ಮಲಗಿಸಿಕೊಂಡಳು.

"ಆಗೇನಾಯಿತು ಗೊತ್ತಾ?" ಎನ್ನುತ್ತಾ ಸಾತ್ವಿಕರಾವ್‌ನನ್ನು ಸಂಪೂರ್ಣ ತಬ್ಬಿ ಮಲಗಿದ್ದಳು.

ಸಂಜೆ ರಾಧಾ ಬಂದ ಕೂಡಲೇ ಅವಳ ಕೈಹಿಡಿದು, "ಸಾರಿ! ರಾಧಾ ನಿನ್ನ ಬಗ್ಗೆ ತುಂಬಾ ತಪ್ಪಾಗಿ ತಿಳಿದುಕೊಂಡಿದ್ದೆ!"

ನಾನೂ ನಿಮ್ಮ ಆಫೀಸಿನಲ್ಲಿ ಅಷ್ಟೇರೀ. ನಾಳೆ ನೀವು ಆಫೀಸಿನಲ್ಲಿ ಹೇಗೆ ಎದುರಿಸುತ್ತೀರೋ ನನ್ನ ತಪ್ಪಿನ ಫಲ?"

ಇಬ್ಬರೂ ಕೆಲಕ್ಷಣ ಮೌನವಾಗಿದ್ದುಬಿಟ್ಟರು.

"ರಾಧಾ!" ನಿದಾನವಾಗಿ ಕರೆದ ಸಾತ್ವಿಕರಾವ್.

"ಏನ್ರೀ?"

"ಇವತ್ತು ನಂಗೆ ಗೊತ್ತಾಯ್ತು ಕಣೆ ನೀನೆಷ್ಟು ಒಳ್ಳೆಯವಳೂಂತ–" ಕಣ್ಣಿಂದ ಜಾರುತ್ತಿದ್ದ ಹನಿಯನ್ನು ಒರೆಸಿಕೊಳ್ಳುತ್ತಾ ಹೇಳಿದ.

"ನಿಮ್ಮ ಮನಸ್ಸು ಕೂಡಾ ನಂಗೆ ಇವತ್ತೇ ಅರ್ಥವಾಯಿತು. ಅನವಶ್ಯಕವಾಗಿ ನಿಮಗೂ ಆ ಅಮೃತಾಗೂ ಸಂಬಂಧವಿದೆಯೆಂದು ಅನುಮಾನಿಸಿದ್ದೆ. ಅದೆಲ್ಲಾ ಕೇವಲ ನನ್ನ ಭ್ರಮೆಯೆಂದು ಈಗ ತಿಳಿಯುತ್ತಿದೆ."

"ಅಷ್ಟೆ ಅಲ್ಲ ಕಣೆ! ಮನೆಯಲ್ಲಿದ್ದು ನೀನು ನನಗಿಂತಲೂ ಹೆಚ್ಚು ಶ್ರಮಪಡುತ್ತಿದ್ದಿ ಎಂದು ಈಗಲೇ ನನಗೆ ಅರ್ಥವಾದದ್ದು."

"ಅದಕ್ಕೆ ನಾನು ಒಪ್ಪಿಕೊಳ್ಳುವುದಿಲ್ಲ ಬಿಡಿ. ಆಫೀಸಿನಲ್ಲಿ ನೀವೆಷ್ಟು ಕಷ್ಟಪಡುತ್ತೀರ, ಎಷ್ಟು ಜನರ ಕೈಲಿ ಅನ್ನಿಸಿಕೊಳ್ಳುತ್ತೀರಾ ಎಂದು ನನಗೆ ಈಗ ಚೆನ್ನಾಗಿ ತಿಳಿಯಿತು."

"ಇಲ್ಲ ರಾಧ! ನೀನೇ ನನಗಿಂತಲೂ ಹೆಚ್ಚು ಕಷ್ಟಪಡುತ್ತಿರುವುದು."

"ಇಲ್ಲಾರೀ! ನೀವೇ ನನಗಿಂತ ಎಷ್ಟೋ ರೀತಿಯಲ್ಲಿ ಉತ್ತಮರು."

"ನೋನೋ! ನೀನೇ ಉತ್ತಮಳು."

"ನೀವು ದೇವರಿಗೆ ಸಮಾನರು"

"ನೀನು ದೇವತೆ ರಾಧ! ನಾನು ದೇವರಲ್ಲ!"

"ನೀವೇ ನನ್ನ ಪಾಲಿನ ರಾಮ!"

"ಅದೇ ಬೇಡ ಅನ್ನೋದು! ನನ್ನ ಒಂದು ಮಾತನ್ನೂ ಒಪ್ಪಿಕೊಳ್ಳುವುದಿಲ್ಲ ನೀನು."

"ನೀವೇ ನನ್ನ ಎಲ್ಲಾ ಮಾತುಗಳಿಗೂ ಹೀಗೆ ವಿರುದ್ಧ ಮಾತನಾಡುವುದು."

"ನೀವೇ ಮನೆಯಲ್ಲಿ ಶಾಂತಿ ಇಲ್ಲದಂತೆ ಮಾಡುತ್ತಿದ್ದಿ" ಮತ್ತಷ್ಟು ಕೋಪದಿಂದ ಹೇಳಿದ.

"ನಾನಲ್ಲ! ನೀನೇ ಉಗುರಿನಷ್ಟಿದ್ದನ್ನು ಬೆಟ್ಟದಷ್ಟನ್ನಾಗಿ ಮಾಡುತ್ತೀರಿ." ಅಸಹನೆಯಿಂದ ಹೇಳಿದಳು.

"ನಾನಲ್ಲ....ಒಂದು ಸಣ್ಣ ವಿಷಯವನ್ನು ಕೆದಕಿ, ಕೆದಕಿ ಬಿರುಗಾಳಿ ಮಾಡ್ತಿ."

"ಹೌದು ಬಿಡಿ! ನಿಮಗೆ ನಿಮ್ಮ ಆಫೀಸಿನ ಅಮೃತಳ ಮಾತೇ ಸಿಹಿಯಾಗಿರುತ್ತೆ."

"ನಿನಗೆ ಆ ಎದುರ ಮನೆ ಹುಡುಗನೊಡನೆ ಮಾತನಾಡುವುದೇ ಹಿತವೇನೋ?"

"ನನ್ನನ್ನು ಹಾಗೆಲ್ಲಾ ಅಂದರೆ ನಿಮಗೆ ಕಣ್ಣು ಹೋಗುತ್ತೆ."

"ನನ್ನನ್ನಂದರೆ ನಿನ್ನ ಬಾಯಿ ಮಾತು ಹೋಗುತ್ತೆ."

"ಛೀ! ನಿಮ್ಮ ಜೊತೆ ಮಾತಾಡೋದೇ ಮೂರ್ಖತನ!"

"ನಿನ್ನ ಜೊತೆ ವಾದ ಮಾಡ್ತಾ ಇದ್ದೀನಲ್ಲಾ...ನಂಗೆ ಬುದ್ಧಿಯಿಲ್ಲ ಅಷ್ಟೆ!"

"ನಿಮಗೆ ಇಷ್ಟ ಬಂದವಳನ್ನೇ ಕಟ್ಟಿಕೊಳ್ಳಿ ಯಾರೂ ಬೇಡ ಅನ್ಲಿಲ್ಲ."

"ಷಟಪ್!"

"ಯೂ ಷಟಪ್!" ಇಬ್ಬರೂ ಕೋಪದಿಂದ ಒಬ್ಬರೆಡೆಗೆ ಮತ್ತೊಬ್ಬರು ನೋಡಿಕೊಂಡು ಜೋರಾಗಿ ನಕ್ಕುಬಿಟ್ಟರು.

ಅದೇ ಸಮಯಕ್ಕೆ ಸರಿಯಾಗಿ ಗಡಿಯಾರ ಏಳು ಗಂಟೆ ಬಡಿಯಿತು. ಇಬ್ಬರ ಆತ್ಮಗಳೂ ಅವರವರಿಗೆ ಬದಲಾದವು.

"ಅಬ್ಬ! ಇವತ್ತಿನಿಂದ ನಾವು ಹೊಸ ಬದುಕನ್ನು ಪ್ರಾರಂಭಿಸೋಣ ರಾಧ!" ರಾಧಳನ್ನು ತನ್ನ ಎದೆಗೆ ಒರಗಿಸಿಕೊಂಡು ಸಾತ್ವಿಕರಾವ್ ಹೇಳಿದ.

"ಹೌದ್ರೀ....ಇನ್ನು ಮುಂದೆ ನಮ್ಮ ಮಧ್ಯೆ ಯಾವತ್ತೂ ಭೇದ ಬರ ಕೂಡದು. ಇದಕ್ಕೆ ಸಹಾಯ ಮಾಡಿದ ಆ ಸರಸ್ವತಿ–ಬ್ರಹ್ಮರಿಗೆ ನಾವು ಋಣಿ ಗಳಾಗಿರಬೇಕು," ರಾಧ ಅವನ ಎದೆಯ ಮೇಲೆ ತಲೆಯಿರಿಸಿ ಹೇಳಿದಳು.

ಅದೇ ವೇಳೆಗೆ ಸರಿಯಾಗಿ ಅವರ ಮನೆಯ ಮುಂದಿದ್ದ ಗೋಡೆಗೆ ಹೊಸ ಪೋಸ್ಟರ್ ಅಂಟಿಸುತ್ತಿದ್ದರು ಇಬ್ಬರು ಹುಡುಗರು. ರಾಧ, ಸಾತ್ವಿಕರಾವ್ ಮೇಲೆದ್ದು ಕಿಟಕಿಯಿಂದ ಪೋಸ್ಟರನ್ನು ನೋಡಿದರು.

**'ಮೇಡ್ ಫಾರ್ ಈಚ್ ಅದರ್ ಸ್ಪರ್ಧೆ.'**

"ಯೆಸ್ ಬಾಸ್" ಅಂದ ತ್ರಿಬ್ಬಲ್ ಜೀರೋ.

ವೆಂಕಟೇಶ್ವರ್ ಹುಚ್ಚು ಹಿಡಿದವನಂತೆ ಕಿರುಚಿದ—"ಅಯ್ಯೋ ನಿನ್ನ! ಆ ಸಿನೆಮಾ ಭಾಷೇನ ನನ್ಮುಂದೆ ಉಪಯೋಗಿಸ್ಬೇಡ ಅಂತ ಎಷ್ಟು ಸಲ ಬಡ್ಕೊಂಡಿದೀನಿ."

"ಓಕೆ ಬಾಸ್" ವಿನಯದಿಂದ ಹೇಳಿದ ತ್ರಿಬ್ಬಲ್ ಜೀರೋ.

ವೆಂಕಟೇಶ್ವರ್ ಮತ್ತೆ ಅವನೆಡೆಗೆ ಕೋಪದಿಂದ ನೋಡಿ ಏನೂ ಮಾಡ ಲಾರದವನಂತೆ ಸುಮ್ಮನಾದ.

"ಈಗಾಗಲೇ ನಮಗೆ ಇನ್‌ಫಾರ್ಮೇಶನ್ ಬಂದಿದೆ, ಪಾಕಿಸ್ತಾನ

ದವರು ನಮಗೆ ಐದುನೂರು ರೂ. ಕಳಿಸಿದ್ದಾರೆ! ನಾವೀಗ ಹೋಗಿ ಆ ಹಣವನ್ನು ಕಲೆಕ್ಟ್ ಮಾಡಿಕೊಳ್ಳಬೇಕು," ಅವನು ಹೇಳುತ್ತಿದ್ದ.

ಬಷೀರ್, ಟ್ರಿಬ್ಬಲ್ ಜೀರೋ ಸಂತೋಷಪಟ್ಟರು.

"ಆ! ಬಂದುಬಿಟ್ಟಿದೆಯಾ? ಎಲ್ಲಿದೆ ಹಣ?"

"ಷ್–ಜೋರಾಗಿ ಕಿರುಚಬೇಡಿ," ಎನ್ನುತ್ತಾ ಸಿಗರೇಟ್ ಪಾಕೆಟಿನೊಳಗಿಂದ ಸಿಗರೇಟಿನಂತೆ ಸುತ್ತಿದ್ದ ಮ್ಯಾಪನ್ನು ತೆಗೆದು ಬಿಡಿಸಿದ ಬಾಸ್.

"ಹಣವನ್ನೆಲ್ಲಿಟ್ಟಿದ್ದಾರೆಂದು ತಿಳಿದುಕೊಳ್ಳಲು ಇದು ಸೀಕ್ರೆಟ್ ಮ್ಯಾಪ್" ಎಂದು ಅವರಿಗೆ ಮ್ಯಾಪಿನಲ್ಲಿದ್ದ ಸ್ಥಳಗಳ ಬಗ್ಗೆ ವಿವರಿಸಿದ.

"ಯಸ್ ಬಾಸ್" ಅಂದ ಟ್ರಿಬ್ಬಲ್ ಜೀರೋ ಉತ್ಸಾಹದಿಂದ.

"ಇನ್ನೊಂದು ಸಲ ಅದೇ ಮಾತು ಅಂದ್ರೆ ನಿನ್ನ ಮರ್ಡರ್ ಮಾಡಿಬಿಡ್ತೇನೆ" ಅಂದ ವೆಂಕಟೇಶ್ವರ್ ಸಿಟ್ಟಿನಿಂದ. ಸಿಟ್ಟು ಶಮನವಾದ ಮೇಲೆ—

"ಹೇಗೆ ಸಿಗುತ್ತೆ ಅಂತ ಕೇಳಲೇ ಇಲ್ವಲ್ಲಾ?" ಎಂದ.

"ಹೇಗೆ ಸಿಗುತ್ತೆ?" ಬಷೀರ್ ಕೇಳಿದ.

"ಆ ಕಿಟಕಿ ಬಳಿಗೆ ಒಬ್ಬ ವ್ಯಕ್ತಿ ಒಂದು ಪೀಕ್ಯಾಪ್ ಹಾಕಿಕೊಂಡು ಬರುತ್ತಾನೆ. ಅವನೊಡನೆ ನೀವು ಕೋಡ್ ಲಾಂಗ್ವೇಜ್ ಮಾತನಾಡಬೇಕು."

"ಯಸ್ ಬಾಸ್" ಅಂದ ಟ್ರಿಬ್ಬಲ್ ಜೀರೋ.

ವೆಂಕಟೇಶ್ವರ್ ಅವನನ್ನು ಇರಿದು ಬಿಡಲು ಚಾಕು ತೆಗೆಯುವಷ್ಟರಲ್ಲೇ ಬಷೀರ್ ಅಡ್ಡ ಬಂದು– "ನೀವು ಸಮಾಧಾನದಿಂದ ಹೇಳಿ" ಎಂದು ರಿಕ್ವೆಸ್ಟ್ ಮಾಡಿಕೊಂಡ ಮೇಲೆ ಚಾಕುವನ್ನು ಮತ್ತೆ ಒಳಗಿಟ್ಟುಕೊಂಡ.

"ನೀವು ಆ ವ್ಯಕ್ತಿಯನ್ನು ನೋಡಿದ ಕೂಡಲೇ 'ಆಕಾಶಕ್ಕೆ ಕಣ್ಣುಗಳಿರುತ್ತವೆ' ಎನ್ನಬೇಕು. ಅವನು ಪಾಕೀಸ್ತಾನ್ ಏಜೆಂಟ್ ಆದರೆ 'ಗೋಡೆಗಳಿಗೆ ಕಿವಿಗಳಿರುತ್ತವೆ,' ಎನ್ನುತ್ತಾನೆ. ಹಾಗೆಂದ ಕೂಡಲೇ ನೀವು ಅವನ ಬಳಿಗೆ ಹೋಗಿ ಕ್ಯಾಪ್ ಕೇಳಬೇಕು."

"ಅಬ್ಬ ಎಷ್ಟು ಥ್ರಿಲ್ಲಿಂಗಾಗಿದೆ ಗುರೂ!" ಬಷೀರ ಕಿರುಚಿದ.

"ಇನ್ನು ಹೊರಡಿ. ಸರಿಯಾಗಿ ಐದು ಗಂಟೆಗೆಲ್ಲಾ ನೀವಲ್ಲಿರಬೇಕು" ವೆಂಕಟೇಶ್ವರ್ ಹೇಳಿದ.

ಬಷೀರ್, ಟ್ರಿಬ್ಬಲ್ ಜೀರೋ ಸೈಕಲ್‌ಗಳ ಮೇಲೆ ಆಯಾಸಪಡುತ್ತಾ ಆಸ್ಪತ್ರೆಯ ಬಳಿಗೆ ಸೇರಿಕೊಂಡರು. ಸಮಯ ಆಗಲೇ ಐದಾಗಿತ್ತು. ರಸ್ತೆಯೆಲ್ಲಾ ನಿರ್ಮಾನುಷ್ಯವಾಗಿತ್ತು. ಸ್ವಲ್ಪ ಸಮಯದ ನಂತರ ಒಬ್ಬ ದೊಡ್ಡ ಮನುಷ್ಯ ನಡೆಯುತ್ತಾ ಬರುತ್ತಿದ್ದುದು ಕಂಡಿತು.

ಕೂಡಲೇ ಇಬ್ಬರೂ ಅವನ ಬಳಿಗೆ ಓಡಿದರು. ಅವನು ಇವರನ್ನು ಕಂಡು ಸ್ವಲ್ಪ ಭಯಪಟ್ಟ.

"ಆಕಾಶಕ್ಕೆ ಕಣ್ಣಿರುತ್ತವೆ" ಹೇಳಿದ ತ್ರಿಬ್ಬಲ್ ಜೀರೋ.

ಆ ದೊಡ್ಡ ಮನುಷ್ಯ ಒಂದು ಹೆಜ್ಜೆ ಹಿಂದಕ್ಕೆ ಹಾಕಿದ ಭಯದಿಂದ.

"ಆಕಾಶಕ್ಕೆ ಕಣ್ಣಿರುತ್ತವೆ" ಇನ್ನೂ ಸ್ವಲ್ಪ ಗಟ್ಟಿಯಾಗಿ ಹೇಳಿದ ಬಷೀರ್.

ಆ ದೊಡ್ಡ ಮನುಷ್ಯ ಮತ್ತೆರಡು ಹೆಜ್ಜೆಗಳನ್ನು ಹಿಂದಕ್ಕೆ ಹಾಕಿದ.

ಅವನೇನೂ ಮಾತನಾಡದಿದ್ದುದರಿಂದ ಇಬ್ಬರೂ ಒಬ್ಬರ ಮುಖ ಒಬ್ಬರು ನೋಡಿಕೊಳ್ಳತೊಡಗಿದರು.

"ಒಂದು ವೇಳೆ ಅವನು ಕೋಡ್ ವರ್ಡ್ ಮರೆತು ಬಿಟ್ಟಿರಬಹುದು" ಬಷೀರ್ ಹೇಳಿದ.

"ಹಾಗಾದರೆ ನಾವೇ ನೆನಪಿಸೋಣ" ತ್ರಿಬ್ಬಲ್ ಜೀರೋ ಸಲಹೆ ಕೊಟ್ಟ. ಇಬ್ಬರೂ ಮತ್ತೆ ಆ ವ್ಯಕ್ತಿಯ ಬಳಿಗೆ ಬಂದರು.

"ಆಕಾಶಕ್ಕೆ ಕಣ್ಣಿರುತ್ತವೆ. ಗೋಡೆಗೆ ಏನಿರುತ್ತದೆ?" ತ್ರಿಬ್ಬಲ್ ಜೀರೋ ನಗುತ್ತಾ ಕೇಳಿದ.

ಆ ವ್ಯಕ್ತಿ ಮತ್ತೆ ಎರಡು ಹೆಜ್ಜೆ ಹಿಂದಕ್ಕೆ ಹಾಕಿದ. ಭಯದಿಂದ "ಹೌದು" ಅಂದ.

"ಗೋಡೆಗೇನಿರುತ್ತೆ ಹೇಳು?" ತ್ರಿಬ್ಬರ್ ಜೀರೋ ಮತ್ತೆ ಅವನ ಭುಜವನ್ನು ಅಲ್ಲಾಡಿಸುತ್ತ ಕೇಳಿದ.

"ಇಟ್ಟಿಗೆಗಳಿರುತ್ತೆ. ನನ್ನನ್ನು ಬಿಟ್ಟುಬಿಡಿ" ಅವನು ಹೇಳಿದ.

"ಅಷ್ಟು ನೆನಪಿರದಿದ್ದರೆ ನೀನೆಂತ ಏಜೆಂಟಯ್ಯಾ! ಕಿವಿಗಳಿರುತ್ತವೆ, ಕಿವಿಗಳು, ಎಲ್ಲಿ ಹೇಳು ನೋಡೋಣ! ಏನಿರುತ್ತೆ?"

"ಕಿವಿಗಳಿರುತ್ತೆ! ಕಿವಿಗಳು" ಎಂದು ಹಿಂದಕ್ಕೆ ತಿರುಗಿ ಶರವೇಗದಿಂದ ಓಡಿದ. ಅಷ್ಟರಲ್ಲಿ ಗಿಡಗಳ ಹಿಂದಿನಿಂದ ಒಬ್ಬ ವ್ಯಕ್ತಿ ಛೀಶ್ಯಾಪ್‌ನೊಡನೆ ಹೊರಬಂದ. ಅವನು ಇವರ ಮುಂದೆ ಬಂದು ನಿಲ್ಲುತ್ತಿದ್ದಂತೆಯೇ ಇಬ್ಬರೂ ಬೆಚ್ಚಿ ಓಡಲು ಪ್ರಾರಂಭಿಸಿದರು.

"ಏಯ್ ನಿಲ್ರಿ! ಗೋಡೆಗಳಿಗೆ ಕಿವಿಗಳಿರುತ್ತವೆ" ಎಂದು ಕಿರುಚಿದ ಅವನು.

"ಏಯ್! ಅವನೇ ನಮಗೆ ದುಡ್ಡು ಕೊಡೋದು. ನಡಿ" ಬಷೀರ್ ಹೇಳಿದ. ಇಬ್ಬರೂ ಆ ವ್ಯಕ್ತಿಯ ಬಳಿಗೆ ಬಂದರು ಮತ್ತೆ.

"ಪಾಕೀಸ್ಥಾನದಿಂದ ನೆನ್ನೆಯಷ್ಟೇ ನಮಗೆ ಆದೇಶ ಬಂದಿದೆ. ನಿಮಗೆ ಐದುನೂರು ರೂಪಾಯಿ ಅರೇಂಜ್ ಮಾಡಲು..." ಅವನು ಹೇಳಿದ.

"ಯಸ್ ಬಾಸ್" ತ್ರಿಬ್ಬಲ್ ಜೀರೋ ಹೇಳಿದ.

ಇಬ್ಬರೂ ಅವನ ಹಿಂದೆಯೇ ನಡೆದು ಮಾರ್ಕೆಟ್ ಸೇರಿಕೊಂಡರು. ತುಂಬಾ ಇಕ್ಕಟ್ಟಾಗಿದ್ದ ಆ ಸಂದಿಯಿಂದ ಹೊರಟು ಒಂದು ಮನೆಬಾಗಿಲನ್ನು ತಟ್ಟಿದ. ಒಬ್ಬ ಮೀಸೆಗಳ ವ್ಯಕ್ತಿ ಬಾಗಿಲು ತೆರೆದು ಎಲ್ಲರನ್ನೂ ಪರೀಕ್ಷಾತ್ಮಕವಾಗಿ ನೋಡಿದ.

"ಇವರಿಗೇ ಬಾಸ್ ನಾವು ಕ್ಯಾಷ್ ಕೊಡಬೇಕಾಗಿರುವುದು," ಅವನು ಹೇಳಿದ.

"ಯಸ್ ಬಾಸ್" ಅಂದ ತ್ರಿಬ್ಬಲ್ ಜೀರೋ.

"ಸರಿ ತಗೊಂಡು ಹೋಗೆಂದು ಹೇಳು," ಎಂದು ಆಜ್ಞಾಪಿಸಿದ.

ಮೂವರೂ ಒಳಗೆ ನಡೆದರು. ಅಲ್ಲಿ ಒಂದು ದೊಡ್ಡ ಕೋಣೆಯ ತುಂಬ ಗೋಣೀ ಚೀಲಗಳು ತುಂಬಿದ್ದವು.

"ತಗೊಂಡು ಹೋಗಿ...ಏನು ಹಾಗೆ ನೋಡ್ತಿದೀರ?" ಕಿರುಚಿದ ಮೀಸೆಗಳ ವ್ಯಕ್ತಿ.

"ಏನನ್ನು ತೆಗೆದುಕೊಂಡು ಹೋಗುವುದು?" ಬಷೀರ್ ಅನುಮಾನದಿಂದ ಕೇಳಿದ

"ಅದನ್ನೇ! ಆ ಗೋಣೀ ಚೀಲಗಳನ್ನೇ"

ಬಷೀರ್ ಸಂತೋಷದಿಂದ ತ್ರಿಬ್ಬಲ್ ಜೀರೋ ಕಡೆಗೆ ನೋಡಿದ. ಆ ಚೀಲಗಳ ತುಂಬಾ ಕರೆನ್ಸಿ ನೋಟುಗಳಿರಬಹುದು. ಅಪ್ಪಿತಪ್ಪಿ ನಮಗೆ ಒಂದು ಚೀಲದ ತುಂಬಾ ಇರುವ ಕರೆನ್ಸಿ ನೋಟುಗಳನ್ನು ಕೊಡುತ್ತಿದ್ದಾರೇನೋ!" ಎಂದ ಹಿಗ್ಗುತ್ತಾ. ಇಬ್ಬರೂ ಹೋಗಿ ಒಂದು ಗೋಣಿಚೀಲವನ್ನು ಎತ್ತಿಕೊಂಡರು.

"ಒಂದಲ್ಲ ಐವತ್ತು ಚೀಲಗಳನ್ನು ತಗೊಂಡು ಹೋಗಿ!" ಕಿರುಚಿದ ಮೀಸೆಯ ವ್ಯಕ್ತಿ.

ಹಾಗೆಯೇ ಮಾಡಿದ ಬಷೀರ್ ಆತುರದಿಂದ ಒಂದು ಚೀಲವನ್ನು ತೆರೆದು ನೋಡಿದ. ಅದರ ತುಂಬಾ ರದ್ದಿ ಕಾಗದಗಳು!

ಆಶ್ಚರ್ಯದಿಂದ ಮೀಸೆಯ ವ್ಯಕ್ತಿಕಡೆ ನೋಡಿದ. "ಇದೇನು ಬರೀ ಕಸ....ನಮಗೆ ಕ್ಯಾಷ್ ಕೊಡ್ತಿವೀಂತ ಹೇಳಿದ್ದಿ!"

"ಇದನ್ನೆಲ್ಲಾ ಮಾರಿದರೆ ನಿಮಗೆ ಐದುನೂರು ಸಿಗುತ್ತೆ" ಅವನು ಹೇಳಿದ.

"ಅದೇಕೆ? ನಮಗೆ ಕ್ಯಾಷ್ ಯಾಕೆ ಕೊಡುವುದಿಲ್ಲ?"

"ಅದು ಪಾಕೀಸ್ಥಾನ್ ಪಾಲಿಸಿ! ಫಾರಿನ್ ಎಕ್ಸ್‌ಚೇಂಜ್ ನಿಬಂಧನೆಗಳ ಪ್ರಕಾರ ಹೀಗೆ ಕ್ಯಾಷ್ ಏರ್ಪಾಟು ಮಾಡಲು ಪ್ರಾರಂಭಿಸಿದ್ದಾರೆ. ಬೇಗ ತಗೊಂಡು ಹೋಗಿ. ತಡವಾದರೆ ಯಾರಿಗಾದರೂ ಅನುಮಾನ ಬರುತ್ತೆ."

ಬಷೀರ್ ಟ್ರಿಬ್ಬಲ್ ಜೀರೋ ಒಬ್ಬರ ಮುಖ ಒಬ್ಬರು ನೋಡಿಕೊಂಡರು. ಆ ಕಾಗದವನ್ನೆಲ್ಲಾ ಮಾರುವ ವೇಳೆಗೆ ರಾತ್ರಿ ಒಂಭತ್ತಾಯಿತು. ಇಬ್ಬರೂ ನೀರಸವಾಗಿ ಮತ್ತೆ ವೆಂಕಟೇಶ್ವರ್ ಮನೆಗೆ ಸೇರಿಕೊಂಡರು.

"ಹಣ ತಂದಿದ್ದೀರಾ?" ಕೇಳಿದ ಅವನು.

"ಯಸ್ ಬಾಸ್" ಟ್ರಿಬ್ಬಲ್ ಜೀರೋ ಹೇಳಿದ.

ವೆಂಕಟೇಶ್ವರ ಕೈಗೆ ಸಿಕ್ಕಿದ ಕಬ್ಬಿಣದ ಸಲಾಕೆಯೊಂದನ್ನು ತೆಗೆದುಕೊಂಡು ಅವನೆಡೆಗೆ ಬೀಸಿದ. ಅಷ್ಟರಲ್ಲಿ ಅವನು ತಪ್ಪಿಸಿಕೊಂಡ.

"ಕೂಡಲೇ ಇಬ್ಬರೂ ಹೋಗಿ ಆ ಚಂದ್ರಬೋಸ್‌ನನ್ನು ಹಿಡಿದು ತನ್ನಿ–ನಯವಾಗಿಯಾದರೂ, ಭಯವಿಟ್ಟಾದರೂ ಸರಿ. ಆ 'ಯೌವ್ವನದ ಔಷಧಿ' ಈಗಲೇ ಬೇಕು."

"ಯಸ್ ಬಾಸ್" ಎಂದು ಮಿಂಚಿನಂತೆ ಹಾರಿ ದೂರ ನಿಂತ ಟ್ರಿಬ್ಬಲ್ ಜೀರೋ.

"ಅಗತ್ಯಬಿದ್ದರೆ ನಿಮ್ಮ ಹತ್ತಿರ ಹಣವನ್ನು ಖರ್ಚುಮಾಡಿಯಾದರೂ ಅದನ್ನು ಸಂಪಾದಿಸಲೇಬೇಕು."

"ಯಸ್ ಬಾಸ್" ಅಂದ ಟ್ರಿಬ್ಬಲ್ ಜೀರೋ ಅಲ್ಲಿಂದಲೇ.

ವೆಂಕಟೇಶ್ವರ್ ಸಿಟ್ಟನ್ನು ತಡೆಯಲಾರದೆ ಒಂದು ಹಿಡಿ ತನ್ನ ತಲೆ ಗೂದಲನ್ನು ಕಿತ್ತು ಗಾಳಿಯಲ್ಲಿ ಬಿಸಾಕಿದ.

ಟ್ರಿಬ್ಬಲ್ ಜೀರೋ, ಬಷೀರ್ ಸೈಕಲ್ ಮೇಲೆ ಹೊರಟರು ಮತ್ತೆ.

"ನಾವು ಮೊದಲು ನಮ್ಮ ಮುಖಗಳಿಗೆ ಮುಸುಕು ಹಾಕಿಕೊಳ್ಳಬೇಕು! ಇಲ್ಲದಿದ್ದರೆ ಬಾಸ್ ಗುರುತಿಸಿಬಿಡುತ್ತಾನೆ ನನ್ನನ್ನು...." ಎಂದ ಬಷೀರ್.

ಇಬ್ಬರೂ ವಿಗ್‌ಷಾಪಿಗೆ ಹೋದರು. ತಮಗೆ ಹೊಂದುವಂತಹ ಮುಖವಾಡಗಳನ್ನು ಕೊಂಡರು. ಅಲ್ಲಿಂದ ನೇರವಾಗಿ ಚಂದ್ರಬೋಸ್ ಮನೆಗೆ ಹೊರಟರು.

"ನಾನು ಹಿಂದೆ ಇರುತ್ತೇನೆ–ನೀನು ಮುಂದಿರು" ಬಷೀರ್ ಭಯದಿಂದ ಹೇಳಿದ. ಚಂದ್ರಬೋಸ್ ತನ್ನನ್ನೆಲ್ಲಿ ಗುರುತಿಸಿಬಿಡುತ್ತಾನೋ ಎಂದು ಅವನಿಗೆ ಒಂದೇ ಭಯ. ಟ್ರಿಬ್ಬಲ್ ಜೀರೋ ಧೈರ್ಯದಿಂದ ಬಾಗಿಲು ತಟ್ಟಿದ.

ಅದೇ ಸಮಯಕ್ಕೆ ಸರಿಯಾಗಿ ಒಳಗೆ ಚಂದ್ರಬೋಸ್‌ಗೂ, ಲಲಿತಳಿಗೂ ವಿಪರೀತ ವಾಗ್ವಾದ ನಡೆಯುತ್ತಿತ್ತು.

"ಆ ಫಾರ್ಮುಲಾವನ್ನು ಕಮರ್ಷಿಯಲ್ಲಾಗಿ ಮಾರಿಬಿಡ್ರಿ. ಬೇಕಾದಷ್ಟು ಹಣ ಸಿಗುತ್ತೆ. ಎಷ್ಟು ದಿನಾಂತ ನಮಗೆ ಈ ದಾರಿದ್ರ್ಯ?" ಲಲಿತ ಹೇಳುತ್ತಿದ್ದಳು.

"ನೋ! ಅದನ್ನು ನನ್ನ ದೇಶಕ್ಕಾಗಿಯೇ ತಯಾರಿಸಿದ್ದೇನೆ. ನನ್ನ ದೇಶಕ್ಕಾಗಿಯೇ ಅದನ್ನು ಧಾರೆ ಎರೆಯುತ್ತೇನೆ," ಚಂದ್ರಬೋಸ್ ಹೇಳುತ್ತಿದ್ದ.

"ಓ ಹೋ! ಭಾರೀ ದೇಶಪ್ರೇಮಿಗಳು–ನಾಳೆ ಬೆಳಗ್ಗೆ ಒಳಗೆ ನಾನು ಹೇಳ್ದಾಗೆ ಕೇಳದಿದ್ರೆ ನಾನೇ ಅದನ್ನ ತಗೊಂಡು ಯಾವ್ದಾದ್ರೂ ಪ್ರೈವೇಟ್ ಫಾರ್ಮಸೂಟಿಕಲ್ ಕಂಪನೀಗೆ ಮಾರಿಬಿಡ್ತೀನಿ ಅಷ್ಟೆ" ಎಂದಳು.

"ಅಹ್ಹಹ್ಹಾ! ಆ ಫಾರ್ಮುಲಾವನ್ನು ನಾನು ನಿನಗೆ ಹೇಳಿದರೆ ತಾನೇ!"

"ನೆನ್ನೆ ನಿಮ್ಮ ಡೈರೀನ ಹೊಡೆದ್ಹಾಕಿಬಿಟ್ಟಿದೀನಿ. ಈಗ ಆ ಫಾರ್ಮುಲಾ ನನ್ನ ಹತ್ತಿರವೇ ಇದೆ," ಲಲಿತ ಗೆಲುವಿನ ಧಾಟಿಯಲ್ಲಿ ಹೇಳಿದಳು.

ಆ ಮಾತುಗಳನ್ನು ಕೇಳುತ್ತಿದ್ದಂತೆಯೇ ಟ್ರಿಬ್ಬಲ್ ಜೀರೋ, ಬಷೀರ್‌ರ ಮುಖಗಳಲ್ಲಿ ಲೈಟುಗಳು ಬೆಳಗಿದವು.

"ನಡಿ! ಇನ್ನೇಕೆ ತಡ. ಫಾರ್ಮುಲಾ ಅಮ್ಮಾವ್ರ ಹತ್ರಾನೇ ಇದೆಯಂತೆ," ಬಷೀರ್ ಹೇಳಿದ ಸಂಭ್ರಮದಿಂದ.

ಇಬ್ಬರೂ ಬಾಗಿಲು ಮುರಿಯುವಂತೆ ಬಡಿದರು ಒಂದೇ ಸಮನೆ. ಚಂದ್ರಬೋಸ್ ಹೆದರಿ ಬಾಗಿಲು ತೆರೆದ. ಇಬ್ಬರೂ ಮುಖವಾಡಗಳನ್ನು ಧರಿಸಿ ಒಳಗೆ ನಡೆದು–ಕಣ್ಣು ಸರಿಯಾಗಿ ಕಾಣಿಸದಿದ್ದುದರಿಂದ ಕುರ್ಚಿಯೊಂದಕ್ಕೆ ಡಿಕ್ಕಿ ಹೊಡೆದು ಕೆಳಗೆ ಬಿದ್ದು ಮತ್ತೆ ಮೇಲೆದ್ದವರೇ "ಹ್ಹಹ್ಹಹ್ಹಾ!" ಎಂದು ನಕ್ಕರು. "ಮರ್ಯಾದೆಯಿಂದ ಆ ಫಾರ್ಮುಲಾ ನಮಗೆ ಕೊಟ್ಟುಬಿಡು. ಇಲ್ಲದಿದ್ದರೆ ನಿರ್ದಾಕ್ಷಿಣ್ಯವಾಗಿ ಸಾಯಿಸಿಬಿಡುತ್ತೇವೆ" ಎಂದು ಹೆದರಿಸಿದರು.

"ಯಾವ ಫಾರ್ಮುಲಾ?" ಸಿಟ್ಟಿನಿಂದ ಕೇಳಿದ ಚಂದ್ರಬೋಸ್. ಬಷೀರನ ಚಪ್ಪಲಿಯನ್ನು ಗಮನಿಸಿ ಅವನನ್ನು ಗುರುತಿಸಿಬಿಟ್ಟ.

"ಅದೇ! ಯೌವ್ವನವನ್ನು ಮರಳಿಪಡೆಯುವ ಫಾರ್ಮುಲಾ. ಅಹ್ಹಹ್ಹಾ" ಎಂದ ಮತ್ತೆ ನಗಲು ಪ್ರಾರಂಭಿಸಿದ ಟ್ರಿಬ್ಬಲ್ ಜೀರೋ.

"ಹಾಗೆ ನಗಬೇಡ! ಮಕ್ಕಳು ಹೆದರಿಕೊಳ್ಳುತ್ತಾರೆ" ಲಲಿತ ಕೋಪದಿಂದ ಹೇಳಿದಳು.

"ಏಯ್! ನಿದಾನವಾಗಿ ನಗೋ! ಅಮ್ಮಾವ್ರು ಕೋಪ ಮಾಡ್ಕೋತಾರೆ." ಬಷೀರ್ ಹೇಳಿದ.

"ಆ ಫಾರ್ಮುಲಾವನ್ನು ನಾವು ಸತ್ತರೂ ಯಾರಿಗೂ ಕೊಡುವುದಿಲ್ಲ" ಚಂದ್ರಬೋಸ್ ಹೇಳಿದ.

"ನಾನು ಕೊಡ್ತೇನಿ" ತಕ್ಷಣವೇ ಹೇಳಿದಳು ಲಲಿತ.

"ಅಹ್ಹಹ್ಹಾಹ್ಹಾ—ಕೊಡು" ಎಂದ ತ್ರಿಬ್ಬಲ್ ಜೀರೋ ಕೈ ಚಾಚುತ್ತಾ.

"ಹಣ ಕೊಡು! ಕೊಡ್ತೀನಿ" ಲಲಿತ ಹೇಳಿದಳು.

"ಎಷ್ಟು?"

"ಹತ್ತು ಸಾವಿರ—"

ಇಬ್ಬರೂ ಬೆಚ್ಚಿಬಿದ್ದರು. "ಹತ್ತು ಸಾವಿರವಾ! ಅಷ್ಟು ಕ್ಯಾಷ್ ನಮ್ಮ ಜನ್ಮದಲ್ಲೇ ಕಂಡಿಲ್ಲ" ತ್ರಿಬ್ಬಲ್ ಜೀರೋ ಹೇಳಿದ.

"ಬೇಕೆಂದರೆ ನಮ್ಮ ಬಳಿ ಐನೂರಿದೆ," ಬಷೀರ್ ಹೇಳಿದ.

"ಸರಿ ಅಷ್ಟೇ ಕೊಡಿ! ಒಂದು ಸೀರೆಯನ್ನಾದರೂ ಕೊಳ್ಳುತ್ತೇನೆ" ಲಲಿತ ಕೇಳಿದಳು.

ಬಷೀರ್ ಜೇಬಿನಿಂದ ಹಣ ತೆಗೆದು ಅವಳಿಗೆ ಕೊಟ್ಟ. ಅವಳು ಟೇಬಲ್ ಡ್ರಾನಲ್ಲಿ ಇಟ್ಟಿದ್ದ ಡೈರಿತೆಗೆದು ಅದರಲ್ಲೊಂದು ಹಾಳೆಯನ್ನು ಹರಿದು ಅವನಿಗೆ ಕೊಟ್ಟಳು.

"ಲಲಿತಾ! ಬೇಡ ಕಣೇ, ಹಾಗೆ ಫಾರ್ಮುಲಾಗಳನ್ನು ಮಾರಬಾರದು" ಅಂದ ಚಂದ್ರಬೋಸ್.

"ಅಹ್ಹಹ್ಹಾಹ್ಹಾ" ಎಂದು ನಕ್ಕ ತ್ರಿಬ್ಬಲ್ ಜೀರೋ.

"ಬಷೀರ್! ಬೇಡ. ಇಂತಹ ಕೆಲಸ ಮಾಡಬೇಡ" ಚಂದ್ರಬೋಸ್ ಹೇಳಿದ.

"ನಾನು ಬಷೀರಲ್ಲ. ಅಹ್ಹಹ್ಹ" ಎಂದು ತಾನೂ ನಕ್ಕು ಹೊರಗೆ ಓಡಿದ ಬಷೀರ್. ತ್ರಿಬ್ಬಲ್ ಜೀರೋ ಅವನ ಹಿಂದೆಯೇ ಓಡಿ ಸೈಕಲ್ ಹತ್ತಿ ಹೊರಟ.

"ಬಾಸ್! ಫಾರ್ಮುಲಾ ತಂದುಬಿಟ್ಟಿದ್ದೇವೆ" ವೆಂಕಟೇಶ್ವರ್ ಮನೆಗೆ ಹೋಗಿ ಹೇಳಿದರು ಇಬ್ಬರೂ.

"ಹಾಗಾದರೆ ನಡೀರಿ. ಪಾಕೀಸ್ತಾನ್ ಸೀಕ್ರೆಟ್ ಏಜೆಂಟ್ ಬಳಿಗೆ ಹೋಗೋಣ" ವೆಂಕಟೇಶ್ವರ್ ಹೇಳಿದ.

ಮೂವರೂ ಒಂದು ಆಟೋದಲ್ಲಿ ಓಲ್ಡ್ ಸಿಟಿಯ ಮನೆಯೊಂದಕ್ಕೆ

ಬಂದರು. ಕಾಲು ಗಂಟೆಗಳ ಕಾಲ ಸೀಕ್ರೆಟ್ ಕೋಡ್‌ನಲ್ಲಿ ಮಾತನಾಡಿಕೊಂಡ ನಂತರ ಅವರನ್ನು ಒಳಗೆ ಕರೆದೊಯ್ದ ಸೀಕ್ರೆಟ್ ಏಜೆಂಟ್.

"ಆ ಸೈಂಟಿಸ್ಟನ್ನು ಕಿಡ್ನಾಪ್ ಮಾಡಿ ತನ್ನಿರೆಂದು ಹೇಳಿದರೆ ಆ ಫಾರ್ಮುಲಾನ ಮಾತ್ರ ಯಾಕೆ ತಂದ್ರಿ?" ಸಿಟ್ಟಿನಿಂದ ಕೇಳಿದ ಏಜೆಂಟ್.

"ಅವನನ್ನು ಕಿಡ್ನಾಪ್ ಮಾಡಿಕೊಂಡು ಬರಬೇಕೆಂದರೆ ಹಣವಿರಲಿಲ್ಲ ಬಾಸ್."

"ನಮ್ಮ ಹಣ ನಮಗೆ ಕೊಟ್ಟುಬಿಡಿ" ವೆಂಕಟೇಶ್ವರ್ ಕೇಳಿದ.

"ಈಗಲೇನಾ? ಟೆಸ್ಟ್ ಮಾಡಬೇಕಲ್ಲಾ ಇದು ಸರಿಯಾದ ಫಾರ್ಮುಲಾನೋ ಅಲ್ಲವೋ" ಎಂದ ಅವನು.

"ನೀವಿಲ್ಲೇ ಕುಳಿತುಕೊಳ್ಳಿ–ನಮ್ಮ ಸೈಂಟಿಸ್ಟ್ ಟೆಸ್ಟ್ ಮಾಡುತ್ತಾನೆ."

ಐದು ನಿಮಿಷಗಳಲ್ಲಿ ಆ ಫಾರ್ಮುಲಾ ಪ್ರಕಾರ ಒಂದು ಸೀಸೆಯಲ್ಲಿ ವಿವಿಧ ರೀತಿಯ ದ್ರಾವಕಗಳನ್ನು ಬೆರೆಸಿ ತಂದ ಸೀಕ್ರೆಟ್ ಏಜೆಂಟ್.

"ನೀನೇ ಕುಡಿದು ನೋಡು" ಸೀಸೆಯನ್ನು ವೆಂಕಟೇಶ್ವರಗೆ ಕೊಡುತ್ತಾ ಹೇಳಿದ ವೆಂಕಟೇಶ್ವರ್ ಕಣ್ಣು ಮುಚ್ಚಿಕೊಂಡು ಗಟಗಟನೆ ಕುಡಿದುಬಿಟ್ಟ. ಅಷ್ಟೇ ಒಂದೇ ಕ್ಷಣದಲ್ಲಿ ಅವನ ರೂಪುರೇಷೆಗಳು ಬದಲಾದವು. ಎಲ್ಲರೂ ಆಶ್ಚರ್ಯದಿಂದ ನೋಡುತ್ತಿದ್ದಂತೆಯೇ ಸೆಕ್ಸ್ ಬದಲಾವಣೆ ಆಯಿತು. ಲುಂಗಿ, ಬನೀನುಗಳಲ್ಲಿ ಒಬ್ಬ ಸ್ತ್ರೀಯಾಗಿ ಬದಲಾದ.

"ಹ್ಹಾ! ಯೌವ್ವನದ ಫಾರ್ಮುಲಾ ಅಂದು ಕೊಟ್ಟು ನಮಗೆ ಮೋಸ ಮಾಡುತ್ತೀರಾ? ನಿಮ್ಮನ್ನು ಮರ್ಡರ್ ಮಾಡ್ತೀನಿ" ಎನ್ನುತ್ತಾ ಬಂದೂಕು ತೆಗೆದುಕೊಂಡ. ಆದರೆ ಅದರಲ್ಲಿ ಬುಲೆಟ್ಸ್ ತುಂಬುವುದರೊಳಗಾಗಿ ಆರು ಕಿಲೋಮೀಟರ್ ಓಡಿದ್ದರು ಮೂವರೂ.

"... ಮಕ್ಕಳಾ! ಒಂದು ಫಾರ್ಮುಲಾ ತರೋಕೆ ಹೇಳಿದ್ರೆ ಇನ್ನೊಂದು ತರ್ತೀರಾ? ನಿಮ್ಮನ್ನು ನಂಬಿ ಹೀಗಾಗಿಬಿಟ್ಟೆ. ಈಗ ನನ್ನ ಹೆಂಡತಿಗೇನು ಹೇಳಲಿ? ಹೇಗೆ ಸಂಸಾರ ಮಾಡಲಿ?" ಅಳುವನ್ನು ತಡೆಯುತ್ತಾ ಹೇಳಿದ ವೆಂಕಟೇಶ್ವರ್.

"ಡೋಂಟ್ ವರಿ ಬಾಸ್! ಹೇಗಾದರೂ ಸರಿ ನಾವು ಆ ಚಂದ್ರಬೋಸ್‌ನನ್ನು ಕಿಡ್ನಾಪ್ ಮಾಡಿ ತರುತ್ತೇವೆ. ಅವನನ್ನು ಯಾವುದಾದರೂ ದೇಶಕ್ಕೆ ಮಾರಿ ಬಿಟ್ಟು ನಿಮ್ಮನ್ನು ಮತ್ತೆ ಗಂಡಸಾಗುವಂತೆ ಆಪರೇಶನ್ ಮಾಡಿಸುತ್ತೇವೆ," ಎಂದ ಸಮಾಧಾನಗೊಳಿಸಿದ ತ್ರಿಬ್ಬಲ್ ಜೀರೋ. ಮೂವರೂ ವೆಂಕಟೇಶ್ವರ್ ಮನೆಗೆ ಬರುವ ವೇಳೆಗೆ ಮನೆಯ ಮುಂದೆ ಒಂದು ಎ. ಸಿ.

ಕಾರು ಕಂಡಿತು. ಅದರಲ್ಲಿ ಅರಬ್ ಷೇಕ್ ಕುಳಿತಿದ್ದಾನೆ ಗಡ್ಡವನ್ನು ನೀವಿ ಕೊಳ್ಳುತ್ತಾ.

"ನಿಮಗಾಗಿಯೇ ಕಾಯುತ್ತಿದ್ದೇನೆ. ಬನ್ನೀ ನಮ್ಮ ಹೋಟೆಲ್‌ನಲ್ಲಿ ಮಾತನಾಡೋಣ" ಅವನು ಕಾರಿನ ಬಾಗಿಲು ತೆರೆಯುತ್ತಾ ಹೇಳಿದ. ಮೂವರೂ ಅನುಮಾನದಿಂದ ನೋಡಿದರು ಅವನೆಡೆಗೆ.

"ಇಷ್ಟಕ್ಕೆ ಮುಂಚೆ ನಿಮ್ಮ ಸೀಕ್ರೆಟ್ ಏಜೆಂಟ್ ಹೇಳಿದ: ನಿಮ್ಮ ಬಳಿ ಯೌವ್ವನದ ಫಾರ್ಮುಲಾ ಯಾವುದೋ ಇದೆಯೆಂದು ನಮ್ಮ ದೇಶದಲ್ಲಿ ಅಂತಹ ಔಷಧಿಯ ಅವಶ್ಯಕತೆ ತುಂಬಾ ಇದೆ" ಅಂದನವನು.

"ನಿಮ್ಮದು ಯಾವ ದೇಶ?" ಬಷೀರ್ ಕೇಳಿದ.

"ದುಬಾಯಿ ಎಂಬ ದೇಶ. ತುಂಬಾ ಚಿಕ್ಕ ದೇಶ. ಅಲ್ಲಿ ತುಂಬಾ ಜನ ನಿಮ್ಮ ಭಾಷೆಯವರೂ ಇರುವುದರಿಂದ ನನಗೂ ನಿಮ್ಮ ಭಾಷೆ ಚೆನ್ನಾಗಿ ಬರುತ್ತೆ."

"ಆದರೆ ನಿಮಗೇಕೆ ಈ ಯೌವ್ವನದ ಔಷಧಿ?" ತ್ರಿಬ್ಬಲ್ ಜೀರೋ ಕೇಳಿದ.

"ನಮಗೇಕಾ? ಅದಿಲ್ಲದೆ ನಾವೆಷ್ಟು ಅವಸ್ಥೆ ಅನುಭವಿಸುತ್ತಿದ್ದೇವೆ ಗೊತ್ತಾ? ನಮ್ಮ ದೇಶದಲ್ಲಿ ಸ್ವಲ್ಪ ಹಣವಿರುವವರೆಲ್ಲಾ 'ಹಾರಮ್'ಗೆ ಹೋಗಬೇಕಲ್ಲಾ .."

ಅರ್ಥವಾಗದವರಂತೆ ಒಬ್ಬರ ಮುಖ ಒಬ್ಬರು ನೋಡಿಕೊಂಡರು.

"ಅಯ್ಯೋ ಪೆದ್ದಪ್ಪಗಳಿರಾ! ಪ್ರಪಂಚಕ್ಕೆ ತಿಳಿದಿರುವ ವಿಷಯ ನಿಮಗೆ ಗೊತ್ತಿಲ್ಲವಾ? 'ಹಾರಮ್' ಅಂದರೆ ಎಷ್ಟೋ ಜನ ಹೆಂಡತಿಯರಿರುವ ಜಾಗ. ಅನೇಕ ದೇಶಗಳ ಸುಂದರಿಯರನ್ನು ಕೊಂಡು ತಂದು 'ಹಾರಮ್'ನಲ್ಲಿ ಡುವುದು ನಮ್ಮ ಆಚಾರ. ಆದರೆ 'ಹಾರಮ್'ನಲ್ಲಿ ಇಟ್ಟ ನಂತರ ಅವರೊಡನೆ ಎಂಜಾಯ್ ಮಾಡಲು ಶಕ್ತಿ ಇರುವುದಿಲ್ಲ. ಅದಕ್ಕೆ ನಿಮ್ಮ ಬಳಿಯಿರುವ ಯೌವ್ವನದ ಔಷಧಿಗಾಗಿ ಪ್ರಪಂಚವೆಲ್ಲಾ ಸುತ್ತಿ ಇಲ್ಲಿಗೆ ಬಂದಾಗ ನಿಮ್ಮ ಸೈಂಟಿಸ್ಟ್ ಬಳಿ ಅದು ಇರುವುದು ತಿಳಿಯಿತು. ಅದಕ್ಕೇ ಬಂದಿದ್ದೇವೆ. ನಮಗೆ ನೀವು ಆ ಫಾರ್ಮುಲಾ ಮತ್ತು ಸೈಂಟಿಸ್ಟನ್ನು ಮಾರಿದರೆ ಸಾಕಷ್ಟು ಹಣ ಕೊಡುತ್ತೇವೆ. ಈ ಕಾಲು ಗಂಟೆಯ ಕಾಲ ನನ್ನೊಡನೆ ಮಾತನಾಡಿದ್ದಕ್ಕೆ ಇಗೋ ತೆಗೆದುಕೊಳ್ಳಿ ಈ ಐದು ಸಾವಿರ" ಎಂದು ಹಣದ ಒಂದು ಕಂತೆ ಯನ್ನು ಎಸೆದ. ಮೂವರೂ ರಸ್ತೆಯ ಮೇಲೆ ಬಿದ್ದು ಆತುರದಿಂದ ಆ ಹಣ ವನ್ನೆಲ್ಲಾ ಆರಿಸಿಕೊಂಡರು.

"ನಾಳೆ ಇದೇ ವೇಳೆಗೆ ನಿಮ್ಮ ಮನೆಯ ಬಳಿಗೆ ಒಂದು ವ್ಯಾನ್ ಬರುತ್ತದೆ. ನೀವು ಆ ವ್ಯಾನಿನಲ್ಲಿ ನಿಮ್ಮ ಸೈಂಟಿಸ್ಟ್‌ನನ್ನು ಕಿಡ್ನಾಪ್ ಮಾಡಿಕೊಂಡು ರಾಜಸ್ಥಾನ್ ಬಾರ್ಡರ್‌ಗೆ ಬರಬೇಕು. ಅಲ್ಲಿ ನಮ್ಮ ಹೆಲಿಕ್ಯಾಪ್ಟರ್ ನಿಮ್ಮ ವ್ಯಾನಿಗಾಗಿ ಸಿದ್ಧವಾಗಿರುತ್ತದೆ. ನೀವಲ್ಲಿಗೆ ಬರುತ್ತಿದ್ದಂತೆಯೇ ನಿಮಗೆ ಹಣ ಕೊಟ್ಟು, ನಿಮ್ಮ ಸೈಂಟಿಸ್ಟನ್ನು ನಮ್ಮ ಹೆಲಿಕಾಪ್ಟರ್‌ನಲ್ಲಿ ಕರೆದೊಯ್ಯುತ್ತೇವೆ," ಎಂದು ಹೇಳಿದ ಷೇಕ್ ಅವರು ತಾನು ಚೆಲ್ಲಿದ ಹಣವನ್ನು ಪೂರ್ತಿ ಆರಿಸಿಕೊಂಡ ಮೇಲೆ.

"ಹಾಗೇ ಆಗಲೀ" ವೆಂಕಟೇಶ್ವರ್ ಹೇಳಿದ.

"ಇವಳ್ಯಾರು? ಮಧ್ಯದಲ್ಲಿ ಬಾಯಿ ಹಾಕುತ್ತಿದ್ದಾಳೆ?" ಕೋಪದಿಂದ ಕೇಳಿದ ಷೇಕ್. ಇವಳು ನಮ್ಮ ಬಾಸ್ ಸಾರ್! 'ಯಸ್‌ಬಾಸ್' ಅನ್ನುತ್ತಾರಲ್ಲಾ ಅಂತಹ ಬಾಸ್. ಕೆಲವು ಅನಿರೀಕ್ಷಿತ ಪರಿಸ್ಥಿತಿಯಿಂದ ಹೀಗೆ ಸ್ತ್ರೀ ರೂಪದಲ್ಲಿದ್ದಾರೆ. ನಿಜಕ್ಕೂ ಇವಳು ಗಂಡಸೇ! ಹೆಸರು ವೆಂಕಟೇಶ್ವರ್ ಎಂದು" ಬಷೀರ್ ಹೇಳಿದ.

ಷೇಕನ ಕಾರು ಹೊರಟು ಹೋಯಿತು.

ಮೂವರೂ ಹುಚ್ಚು ಕೇಕೆ ಹಾಕಿ ಸಂತೋಷವನ್ನು ತಡೆಯಲಾರದೆ ಕುಣಿದಾಡಲು ಪ್ರಾರಂಭಿಸಿದರು.

ಮಾರನೆಯ ದಿನ ರಾತ್ರಿ ಒಂಭತ್ತು ಗಂಟೆಗೆ ಮತ್ತೆ ಆನಂದರಾವ್ ಚಕ್ಕನೆ ಎದ್ದು ಮಂಚದ ಮೇಲೆ ಕುಳಿತ.

ಜಯಲಕ್ಷ್ಮಿ ಓರೆಗಣ್ಣಿನಿಂದ ಅವನನ್ನು ಗಮನಿಸುತ್ತಲೇ ಇದ್ದಳು. ಜಯಲಕ್ಷ್ಮಿಯ ಕಡೆಗೊಮ್ಮೆ ನೋಡಿ ಮಂಚದಿಂದಿಳಿದು ನಿದಾನವಾಗಿ ನಡೆಯಲು ಪ್ರಾರಂಭಿಸಿದ. ಲಲಿತ ಐದುನೂರು ರೂ. ತೆಗೆದುಕೊಂಡು ಸೀರೆಯನ್ನು ಕೊಳ್ಳಲು ಬಟ್ಟೆ ಅಂಗಡಿಗೆ ಬಂದಳು. ಅರ್ಧ ಗಂಟೆಯ ಕಾಲ ಚೌಕಾಶಿ ಮಾಡಿ ಸೀರೆಯೊಂದನ್ನು ಕೊಂಡು ಹೊರಗೆ ಬರುತ್ತಿದ್ದಂತೆ, ಆ ಪಕ್ಕದಲ್ಲೇ ನಿಂತು ಷೋಕೇಸಿನಲ್ಲಿದ್ದ ಬೊಂಬೆಯನ್ನೇ ತದೇಕ ಚಿತ್ತದಿಂದ ನೋಡುತ್ತಿದ್ದ ಆನಂದರಾವ್‌ನನ್ನು ನೋಡಿದಳು. ಅವಳನ್ನು ಕಂಡ ಕೂಡಲೇ ಸಣ್ಣಗೆ ಶಿಳ್ಳೆ ಹಾಕಿದ ಆನಂದರಾವ್. ಆ ದಿನ ಸ್ವಲ್ಪದರಲ್ಲಿ ಅವಳನ್ನು ಅನುಭವಿಸಲು ವಂಚಿತ

ನಾದುದಕ್ಕೆ ಅವನಿಗೆ ತುಂಬಾ ಬೇಸರವಾಗಿತ್ತು. ತನ್ನ ಸರ್ವೀಸಿನಲ್ಲಿ ತಾನು ಪೆಟ್ಟು ತಿಂದ ಕೇಸ್ ರಾಧಳೊಬ್ಬಳದೇ. ಅಪ್ರಯತ್ನವಾಗಿ ಅವಳ ಹಿಂದೆಯೇ ನಡೆಯಲಾರಂಭಿಸಿದ. ಒಂದು ವೇಳೆ ಅವಳ ಮನೆಯಲ್ಲಿ ಸಾತ್ವಿಕರಾವ್ ಇಲ್ಲದಿದ್ದರೆ ತನ್ನ ಅದೃಷ್ಟ ಖುಲಾಯಿಸಿದಂತೇ. ಆದರೆ ಅವಳು ತನಗೆ ತಿಳಿದಿದ್ದ ಅವಳ ಮನೆ ಕಡೆಯದಲ್ಲದ ಬೇರೊಂದು ರೂಟ್ ಬಸ್ ಹತ್ತಿದ್ದನ್ನು ಗಮನಿಸಿ ಆಶ್ಚರ್ಯಪಟ್ಟ. ಒಂದು ವೇಳೆ ಹೊಸ ಮನೆಗೇನಾದರೂ ಬದಲಾಯಿಸಿದ್ದಾರೇನೋ ಎಂದುಕೊಂಡು ತಾನೂ ಓಡಿ ಅದೇ ಬಸ್ಸನ್ನು ಹತ್ತಿದ. ಅವಳು ಊರಿನ ಕೊನೆಯಲ್ಲಿದ್ದ ಕಾಲೋನಿಯಲ್ಲಿ ಬಸ್ಸಿನಿಂದಿಳಿದು ನಡೆಯುತ್ತಿದ್ದರೆ ಅವನು ಅವಳನ್ನೇ ಫಾಲೋ ಮಾಡಿದ. ಇಂದು ಹೇಗಾದರೂ ಈ ಸೌಂದರ್ಯವನ್ನು ತನ್ನದನ್ನಾಗಿ ಮಾಡಿಕೊಳ್ಳಬೇಕೆಂದು ನಿರ್ಧರಿಸಿದ. ಅವಳು ಒಮ್ಮೆಗೇ ಕಾಲನಿಯ ಒಂದು ಮನೆಯೊಳಗೆ ಪ್ರವೇಶಿಸಿದ್ದನ್ನು ಕಂಡು ಅಲ್ಲೇ ನಿಂತುಬಿಟ್ಟ. ಮನೆಯ ಗೇಟಿಗೆ ನೇಮ್ ಪ್ಲೇಟನ್ನು ಹಾಕಿದ್ದರು. 'ಡಾಕ್ಟರ್ ಸುಭಾಸ್‌ಚಂದ್ರ ಬೋಸ್ ಸೈಂಟಿಸ್ಟ್' ಎಂದಿತ್ತು. ಇದನ್ನು ನೋಡುತ್ತಿದ್ದಂತೆಯೇ ಆನಂದ ರಾವ್‌ಗೆ ಎಲ್ಲಿಲ್ಲದ ಆಶ್ಚರ್ಯ ಉಂಟಾಯಿತು.

ಮೊನ್ನೆಯ ವರೆಗೂ ಬ್ಯಾಂಕಿನಲ್ಲಿ ಕೆಲಸ ಮಾಡುತ್ತಿದ್ದವನು ಇಷ್ಟು ಬೇಗ ಅದು ಹೇಗೆ ಸೈಂಟಿಸ್ಟ್ ಆಗಿಬಿಟ್ಟನೋ ಅವನಿಗೆ ಅರ್ಥವಾಗಲೇ ಇಲ್ಲ. ಅದೇ ಸಮಯಕ್ಕೆ ಸರಿಯಾಗಿ ಇಬ್ಬರು ವಿದ್ಯಾರ್ಥಿಗಳು ಸೈಕಲ್ಲಿನಿಂದಿಳಿದು ಮನೆಯೊಳಗೆ ನಡೆಯುವುದನ್ನು ಗಮನಿಸುತ್ತಾ ನಿಂತುಬಿಟ್ಟ.

ಆ ವಿದ್ಯಾರ್ಥಿಗಳು ಎರಡು ನಿಮಿಷ ಬಾಗಿಲನ್ನು ಬಡಿದ ನಂತರ ಬಾಗಿಲು ತೆರೆದಳು ಲಲಿತ.

"ಮೇಡಮ್! ಇವತ್ತು ಸಾರ್ ಮನೆಗೆ ಬರೋ ಹೊತ್ತಿಗೆ ಹನ್ನೆರಡು ಗಂಟೆ ಆಗುತ್ತಂತ್ತೆ. ಅದನ್ನ ನಿಮಗೆ ಹೇಳೊಂತ ಹೇಳಿದ್ರು. ಲ್ಯಾಬ್‌ನಲ್ಲಿ ಏನೋ ಕೆಲಸವಿದೆಯಂತೆ."

"ನೋಡಿ! ನಿಮ್ಮ ಸಾರ್‌ಗೆ ಹೇಳಿ ಬಿಡಿ. ಸಾಯಂಕಾಲ ಐದು ಗಂಟೆಗೆ ಮನೆಗೆ ಬರದಿದ್ದರೆ ನಾನೇ ಸ್ಕೂಲಿನ ಒಳಗೆ ಬಂದು ಅವರ ಕಾಲು ಮುರಿದು ಮನೆಗೆ ಹೊತ್ತು ತರುತ್ತೇನೆಂದು ಹೇಳಿ ಆ್ಞ!" ಸಿಟ್ಟಿನಿಂದ ಹೇಳಿದಳು.

"ನಾವು ಮನೆಗೆ ಹೋಗುತ್ತಿದ್ದೇವೆ ಮೇಡಂ. ಮತ್ತೆ ಸ್ಕೂಲಿಗೆ ಹೋಗೋಕೆ ಆಗೋಲ್ಲ. ಇನ್ಯಾರಿಗಾದರೂ ನೀವೇ ಹೇಳಿ ಕಳಿಸಿ" ಎಂದು ಅವರು ಹೊರಟು ಹೋದರು. ಲಲಿತ ಸಿಟ್ಟಿನಿಂದ ಬಾಗಿಲನ್ನು ಮುಚ್ಚಿ ಒಳಗೆ ಹೋದಳು. ಆನಂದರಾವ್ ಮತ್ತೆ ಸಂತೋಷದಿಂದ ಶಿಳ್ಳೆ ಹಾಕಿದ. ಇದು

ನಿಜಕ್ಕೂ ಆ ದೇವರು ಕೊಟ್ಟಿರುವ ಅದ್ಭುತಾವಕಾಶ ಹಿಂದಿನ ಸಲ ಮುಂದಾಲೋಚನೆಯಿಲ್ಲದೆ ಹಾಡು ಹಗಲೇ ಮನೆಗೆ ನುಗ್ಗಿ ರಾಧಳ ಗಂಡ ಸಾತ್ವಿಕರಾವ್ ಬ್ಯಾಂಕಿನಿಂದ ಹಠಾತ್ತನೆ ಮನೆಗೆ ಬಂದಿದ್ದರಿಂದ ಪೆಟ್ಟು ತಿಂದಿದ್ದ. ಈಗ ಸ್ಪಷ್ಟವಾಗಿದೆ– ಅತ ರಾತ್ರಿ ಹನ್ನೆರಡರ ತನಕ ಮನೆಗೆ ಬರುವುದಿಲ್ಲವೆಂದು ಸೋ...ತಾನೀಗ ಒಳಗೆ ಸೇರಿಕೊಂಡು ಸ್ವಲ್ಪ ಹೊತ್ತು ಸರಸವಾಡಿ ಮತ್ತೆ ಹಾಸಿಗೆಯ ಮೇಲೆಳೆದುಕೊಂಡು ಹೋದರೆ ತನ್ನ ಬಯಕೆ ತೀರಿದಂತೆಯೇ. ಅಲ್ಲಿಂದ ಬೇಗ ಹೊರಟು ತನ್ನ ಮನೆಯನ್ನು ಸೇರಿಕೊಂಡ ಅವನು. ಜಯಲಕ್ಷ್ಮಿ ಅವನಿಗಾಗಿಯೇ ಎದುರು ನೋಡುತ್ತಿದ್ದಳು.

"ಬನ್ನಿ ಊಟ ಬಡಿಸ್ತೀನಿ" ಆಪ್ಯಾಯತೆಯಿಂದ ಹೇಳಿದಳು.

"ಬಡಿಸಿಬಿಡು" ಅವಳ ಹಿಂದೆಯೇ ಡೈನಿಂಗ್ ರೂಮಿಗೆ ಹೋಗುತ್ತಾ ಹೇಳಿದ.

"ಅದ್ಯಾಕೆ? ಬಟ್ಟೆ ಬದಲಾಯಿಸಿಕೊಳ್ಳಿ" ಆಶ್ಚರ್ಯದಿಂದ ಕೇಳಿದಳು ಜಯಲಕ್ಷ್ಮಿ.

"ಓ! ಅದಾ? ಅದೂ–ನನಗೆ ಅನಿರೀಕ್ಷಿತವಾಗಿ ಒಂದೆಡೆ ಹೋಗ ಬೇಕಾಗಿ ಬಂದಿದೆ ಈಗ. ಇನ್ನೆರಡು ಗಂಟೆಗಳಲ್ಲಿ ಬಂದು ಬಿಡುತ್ತೇನೆ. ಅಂದರೆ ರಾತ್ರಿ ಹನ್ನೆರಡರೊಳಗಾಗಿ ಬಂದು ಬಿಡುತ್ತೇನೆ." ತಡಬಡಿಸುತ್ತಾ ಹೇಳಿದ.

"ಎಲ್ಲಿ ಹೋಗೋ ಕೆಲ್ಸಾನೋ?"

"ಅದೇ–ನಮ್ಮ ಫ್ರೆಂಡ್ ಒಬ್ಬ ನೈಟ್ ಕ್ರಿಕೆಟ್ ನೋಡೋಕೆ ಹೋಗೋಣ ಅಂತ ಹೇಳಿದ್ದ. ಸ್ವಲ್ಪ ಹೊತ್ತು ನೋಡಿ ಬಂದುಬಿಡ್ತೀನಿ."

"ಅಷ್ಟೇನಾ ಅಥವಾ ಹಿಂದಿನ ಸಲದ ಥರ ಆ ಬಾರ್ ಓನರ್ ಶಚೀದೇವಿ–"

"ಛೆ! ಛೆ!! ಹಾಗೆನ್ನಬೇಡವೇ! ಕಣ್ಣು ಹೋಗುತ್ತೆ ಅಷ್ಟೆ! ಅವಳ ವಯಸ್ಸೇನು ನನ್ನ ವಯಸ್ಸೇನು? ಅನುಮಾನ ಪಡೋಕೂ ಒಂದು ಅರ್ಥ ಪರ್ಥ ಇರಬೇಕಪ್ಪಾ."

"ಓಹೋ, ಈ ನಡುವೆ ವಯಸ್ಸುಗಳ ಲೆಕ್ಕಾಚಾರ ಬೇರೆ ನಡೀತಿದೆ ಯೇನೋ! ಇಬ್ಬರೂ ಆ ನೈಟ್ ಕ್ರಿಕೆಟ್ ನೋಡೋಕೆ ಹೋಗ್ತಾಯಿದೀರೋ,– ಇಲ್ಲಾ ಆಡೋಕೆ ಹೋಗ್ತಾಯಿದೀರೋ?" ವ್ಯಂಗ್ಯವಾಗಿ ಕೇಳಿದಳು.

"ಅಬ್ಬಾ! ನೋಡೋದಕ್ಕೆ ಬಿಡೇ. ನಾನೇನು ಅಂತಹ ಸ್ಪೋರ್ಟ್ಸ್– ಮನ್ನೇನು ?" ಸಿಟ್ಟಿನಿಂದ ಕೇಳಿದ. ಇಬ್ಬರೂ ಊಟಕ್ಕೆ ಕುಳಿತರು. ಆಗ

ಬಾಗಿಲು ತಟ್ಟಿದ ಶಬ್ದವಾಯಿತು. ಜಯಲಕ್ಷ್ಮಿ ಚಕ್ಕನೆ ಎದ್ದು ಬಾಗಿಲು ತೆರೆದಳು. ಎದುರಿಗೆ ಶಚೀದೇವಿ ನಿಂತಿದ್ದಳು.

ಅವಳನ್ನು ನೋಡುತ್ತಿದ್ದಂತೆಯೇ ಜಯಲಕ್ಷ್ಮಿಯ ಮುಖ ಕೆಂಪೇರಿತು. ಆ ದಿನ ಕೂಡಾ ಹೀಗೆಯೇ ಬಂದು 'ಸೆಕೆಂಡ್‌ಷೋ'ಗೆ ಹೋಗೋಣವೆಂದು ಆನಂದರಾವ್‌ನನ್ನು ಕೇಳಿದ್ದಳು. ತಾನು ಅಡ್ಡಿ ಪಡಿಸದಿದ್ದರೆ ಅಂದೇ ಇಬ್ಬರೂ ಸ್ವರ್ಗಕ್ಕೇರಿಬಿಡುತ್ತಿದ್ದರು. ಆದರೂ ಮಾರನೆ ದಿನ ರಾತ್ರಿ ಆನಂದ ರಾವ್ ಪ್ಯಾಂಟಿಲ್ಲದೆ ಅರ್ಧರಾತ್ರಿಯ ವೇಳೆ ಮನೆಗೆ ಬಂದಾಗ, ಅದರ ಬಗ್ಗೆ ಕೇಳಿದ್ದಕ್ಕೆ ಯಾರೋ ಟೀವಿ ಪ್ರೊಡಕ್ಷನ್ ಮ್ಯಾನೇಜರ್ ಅರ್ಜೆಂಟಾಗಿ ಷೂಟಿಂಗ್‌ಗೆ ಅದೇ ಪ್ಯಾಂಟ್ ಬೇಕೆಂದು ಕೇಳಿ ತೆಗೆದುಕೊಂಡನೆಂದು ಉತ್ತರಿಸಿದ್ದ. ತಾನು ಆ ಉತ್ತರಕ್ಕೆ ಒಪ್ಪಿರಲಿಲ್ಲವಾದರೂ ಒಪ್ಪಿದವಳಂತೆ ನಟಿಸಿದ್ದಳು. ತನ್ನ ಅನುಮಾನವೇನೆಂದರೆ ಈ ಶಚೀದೇವಿಯೇ ಆನಂದ ರಾವ್‌ನನ್ನು ಮನೆಗೆ ಕರೆದೊಯ್ದು ಏನೋ ವ್ಯವಹಾರ ನಡೆಸಿರುತ್ತಾಳೆಂದು– ಆ ವಿಷಯವೆಲ್ಲಾ ನೆನಪಾಗುತ್ತಿದಂತೆ ಜಯಲಕ್ಷ್ಮಿಯ ಮೈಯ್ಯೆಲ್ಲಾ ಉರಿಯಲಾರಂಭಿಸಿತು.

"ಮತ್ತೆ ಏಕೆ ಬಂದಿ?" ತೀಕ್ಷ್ಣವಾಗಿ ನೋಡುತ್ತಾ ಕೇಳಿದಳು.

ಶಚೀದೇವಿ ತಡಬಡಿಸಿದಳು. ತನಗೇಕೋ ಈ ಭೂಲೋಕದ ವ್ಯವ ಹಾರಗಳೇ ಅರ್ಥವಾಗುತ್ತಿಲ್ಲ. ಆ ದಿನ ಆನಂದರಾವ್‌ನೊಡನೆ ಮಾತನಾಡಲು ಸಿನೆಮಾಗೆ ಎಂದು ಹೇಳಿದ್ದಕ್ಕೆ ಸಾಕಷ್ಟು ರಾಮಾಯಣವಾಗಿತ್ತು. ಹಾಗಾಗಿ ಈ ಸಲ ಸಿನೆಮಾ ಹೆಸರು ಹೇಳದೆ ಯಾವುದೊ ಒಂದು ಕಾರಣ ನೀಡಬೇಕೆಂದು ನಿರ್ಧರಿಸಿದಳು.

"ಆನಂದರಾವ್‌ರೊಡನೆ ಸ್ವಲ್ಪ ಮಾತನಾಡಬೇಕು!" ಅಲ್ಲೇ ನಿಂತು ಹೇಳಿದಳು.

"ಏನು ಮಾತಾಡಬೇಕು?"

"ಅದೇ–ಅದು–ಅಂದರೆ ಸ್ವಲ್ಪ ವೈಯುಕ್ತಿಕವಾದದ್ದು. ಅಂದ್ರೆ ಅಷ್ಟೇನೂ ಪರ್ಸನಲ್ ಅಲ್ಲ....ಸ್ವಲ್ಪ ನಾಲ್ವರ ಮಧ್ಯೆ ಹೇಳೋ ಅಂತಹದ್ದಲ್ಲ. ಅಂದರೆ ಮತ್ತೆ ಇದೂ ಅಲ್ಲ."

"ಮಾತಾಡೋದಿಕ್ಕೆ ಏನಾದ್ರೂ ಇದ್ರೆ ನಾಳೆ ಬೆಳಗ್ಗೆ ಇಲ್ಲಿಗೇ ಬಂದು ಮಾತಾಡು" ಕಠಿಣವಾಗಿ ಹೇಳಿದಳು ಜಯಲಕ್ಷ್ಮಿ.

"ಹ್ಞಾ! ಹ್ಞಾ!! ಹಾಗೇ ಆಗಲಿ ಆದರೆ ಈಗೊಂದರ್ಧ ಗಂಟೆ...."

"ಅರ್ಧಗಂಟೆ....?"

"ಇಬ್ಬರೂ ನೈಟ್ ಕ್ರಿಕೆಟ್ ಮ್ಯಾಚ್ ನೋಡ್ತಾ–"

"ಓಹೋ! ಮತ್ತೆ ನೀವಿಬ್ರೇ ನೈಟ್ ಕ್ರಿಕೆಟ್ ಹೋಗ್ತೀರಂತಾಯ್ತು–" ಸೆರಗನ್ನು ಸೊಂಟಕ್ಕೆ ಬಿಗಿದುಕೊಳ್ಳುತ್ತಾ ಹೇಳಿದಳು.

ಆನಂದರಾವ್ ಎಂಜಲು ಕೈನಲ್ಲೇ ಅಲ್ಲಿಗೆ ಬಂದ.

"ಅಯ್ಯೋ! ಇವರ ಜೊತೆ ಅಲ್ವೇ! ನಮ್ಮ ಫ್ರೆಂಡ್ ಈಶ್ವರರಾವ್ ಜೊತೆ—"

"ಹಾಗಾ! ಮತ್ತೆ ಇವಳೇಕೆ ಬಂದಿದ್ದಾಳೆ?"

"ನಂಗೇನೂ ಗೊತ್ತಿಲಪ್ಪಾ– ನಿನ್ನ ಮೇಲೆ ಆಣೆ ಕಣೆ–"

"ಏನಮ್ಮಾ–ಕ್ರಿಕೆಟ್ ಬೇಕಾ ನಿಂಗೆ? ಅದೂ ರಾತ್ರಿ ಕ್ರಿಕೆಟ್ ಬೇಕಾ? ಅದೂ ಮದುವೆಯಾದ ಗಂಡಸಿನ ಜೊತೆ ಕ್ರಿಕೆಟ್ ಆಡಬೇಕಾ? ಹಾಗಾದರೆ ವಿಕೆಟ್ಟೂ, ಬ್ಯಾಟೂ, ಚೆಂಡು ತರ್ಲಿಲ್ವಾ? ನೀವು ಆಡ್ತಿದ್ದರೆ ನಾನು ವಿಕೆಟ್ ಕೀಪರಂತೆ ನೋಡ್ತಿರಬೇಕಾ? ನಿನ್ನ ಗಂಡ ಬೌಂಡರಿಲೈನಲ್ಲಿ ನಿಂತು ಫೀಲ್ಡ್ ಮಾಡ್ತಿರರ್ತಾನಾ? ನಾಚಿಕೆ ಇಲ್ಲಾ ನಿಂಗೆ? ಇನ್ನೊಂದು ಸಲ ನಮ್ಮನೇಗೆ ಬಂದ್ರೆ ಕಾಲು ಮುರಿದು ಕೈಗೆ ಕೊಟ್ಟು ಬಿಡ್ತೀನಿ ಹುಷಾರು!"

ಶಚೀದೇವಿ ಅವಳ ಕಾಳಿಕಾವತಾರವನ್ನು ಕಂಡು ಹೊರಗೆ ಬಂದು ಬಿಟ್ಟಳು. ಅವಳಿಗೆ ಕಣ್ಣಲ್ಲಿ ನೀರು ಬರಲು ಪ್ರಾರಂಭಿಸಿತು. ತನ್ನ ಬದುಕಿನಲ್ಲಿ ಎಂದೂ ಇಷ್ಟು ಅವಮಾನ ಅನುಭವಿಸಿರಲಿಲ್ಲ. ಒಂದೊಂದು ಸಲ ಅನ್ನಿಸುತ್ತಿರುತ್ತದೆ–ಸರಸ್ವತಿಯೊಡನೆ ಸ್ಪರ್ಧೆ ಬಿಟ್ಟು ದೇವಲೋಕಕ್ಕೆ ಓಡಿ ಹೋಗೋಣವೆಂದು! ಆದರೆ ಹೇಗಾದರೂ 'ಮೇಡ್‌ಫಾರ್ ಈಚ್ ಅದರ್' ಸ್ಪರ್ಧೆಯಲ್ಲಿ ಅವಳು ಸೃಷ್ಟಿಸಿದ್ದ ಸಾತ್ವಿಕರಾವ್–ರಾಧರಿಗೆ ಗೆಲ್ಲಲು ಅವಕಾಶ ಕೊಡದೆ ಅವಳಿಗೆ ಗರ್ವಭಂಗ ಉಂಟುಮಾಡಬೇಕೆಂಬ ಹಠವನ್ನು ಸಾಧಿಸಬೇಕಾದರೆ ಈ ಕಷ್ಟಗಳನ್ನೆಲ್ಲಾ ಎದುರಿಸಲೇಬೇಕು. ಆನಂದರಾಯನನ್ನು ಸ್ಪರ್ಧೆಯ ದಿನ ಹೇಗಾದರೂ ಸಾತ್ವಿಕರಾವ್‌ನ ಸ್ಥಾನದಲ್ಲಿ ಕಳುಹಿಸಿದರೆ ಆಯಿತು. ಈ ವಿಷಯವಾಗಿಯೇ ಮಾತನಾಡಲು ಬಂದಿದ್ದಾಳೆ ತಾನೀಗ. ಮನೆಗೆ ಸೇರಿಕೊಂಡ ಕೂಡಲೇ ಬೆಚ್ಚಗೆ ರಗ್ಗೊಂದನ್ನು ಹೊದ್ದು ಮಲಗಿದ್ದ ಇಂದ್ರನ ಪಕ್ಕದಲ್ಲೇ ಅದೇ ರಗ್ಗಿನಡಿ ಮಲಗಲು ಅದನ್ನು ಸರಿಸುವಾಗ ಮತ್ತೊಂದು ನಗ್ನ ಶರೀರ ಹೊರಗೋಡಿ ಬಂದದನ್ನು ಕಂಡಳು. ಅಷ್ಟೆ! ಇಂದ್ರನ ಕೆನ್ನೆಗಳೆರಡೂ ಶಚೀದೇವಿಯ ಕೈಯಿಂದ ಥಳಥಳಿಸಿತು.

ನಿಜ ಹೇಳ್ತಿದೀನಿ ಜಯಾ! ಅವಳಿಗೂ ನನಗೂ ಎಂತಹ ಸಂಬಂಧವೂ ಇಲ್ಲ. ನಿಜವಾಗಿಯೂ ನೈಟ್ ಕ್ರಿಕೆಟ್‌ಮ್ಯಾಚ್‌ಗೇ ಹೋಗ್ತಿರೋದು ನಾನು. ನನ್ನ ನಂಬು" ಅವಳ ಕೈಗಳೆರಡನ್ನು ಹಿಡಿದು ದೀನನಾಗಿ ಬೇಡಿಕೊಂಡ.

"ಸರಿ–ಮ್ಯಾಚ್‌ಗೆ ಹೋಗ್ತೀರೋ, ಎಲ್ಲೀಗೆ ಹೋಗ್ತೀರೋ ಅಂತ ನಾನೂ ಕಣ್ಣಿಟ್ಟಿರುತ್ತೀನಿ ಹೋಗಿ ಬನ್ನಿ" ಎಂದಳು. ಆನಂದರಾವ್ ಆನಂದದಿಂದ ಎದ್ದು ಐದು ನಿಮಿಷಗಳಲ್ಲಿ ರೆಡಿ ಆಗಿ ಸೆಂಟ್‌ಹಾಕಿಕೊಂಡು ರಸ್ತೆಗೆ ಇಳಿದ. ಖಾಲಿಯಿದ್ದ ಆಟೋವನ್ನು ಕರೆದು 'ಅರ್ಜೆಂಟಾಗಿ ಮುನಿಸಿಪಲ್ ಕಾಲೋನಿಗೆ ಹೋಗು" ಎಂದ. ಹತ್ತು ನಿಮಿಷಗಳಲ್ಲಿ ಆಟೋ ಕಾಲೋನಿ ಸೇರಿತು. ಲಲಿತಳ ಮನೆಯ ಸ್ವಲ್ಪ ದೂರದಲ್ಲಿ ಆಟೋದಿಂದಿಳಿದು, ನಿಶ್ಶಬ್ಧವಾಗಿ ಅವಳ ಮನೆಯ ಬಳಿಗೆ ಬಂದ. ಲಲಿತ ಹಾಲಿನಲ್ಲೇ ಕುಳಿತು ಯಾವುದೋ ಮ್ಯಾಗಜೀನನ್ನು ಓದುತ್ತಿದ್ದಳು. ಪದೇ ಪದೇ ಹೊರಗೆ ನೋಡುತ್ತಿದ್ದಾಳೆ–ಸಾತ್ವಿಕರಾವ್ ಇನ್ನೂ ಬರಲಿಲ್ಲವೆಂದು. ತಾನಿನ್ನು ತಡ ಮಾಡಬಾರದೆಂದು ಮನೆಯೊಳಗೆ ನುಗ್ಗಲು ಯೋಚಿಸಿದ.

ಬೇಗ ಬೇಗನೆ ಮನೆಯೊಳಗೆ ನಡೆದ. ಲಲಿತ ಅವನನ್ನು ನೋಡುತ್ತಿದ್ದಂತೆ ಸಿಟ್ಟಿನಿಂದ ಮುಖ ಊದಿಸಿಕೊಂಡಳು.

"ಮನೆಗೆ ಏಕೆ ಬಂದ್ರಿ? ಹೋಗಿ ಆ ಲ್ಯಾಬ್‌ನಲ್ಲೇ ಮಲಕ್ಕೊಳ್ಳಿ. ಆ ಲ್ಯಾಬ್‌ನಲ್ಲೇ ಎಲ್ಲಾ ಮುಗಿಸಿಕೊಂಡು ಬನ್ನಿ. ನಾನ್ಯಾಕೆ ನನ್ನ ಸಂಸಾರ ಯಾಕೆ?" ಎಂದು ತನ್ನ ಕೈಯಲ್ಲಿದ್ದ ಪುಸ್ತಕವನ್ನು ಅವನ ಮುಖದ ಮೇಲೆ ಹಾಕಿದಳು. ಆನಂದರಾವ್ ಕಿರುನಗೆ ನಕ್ಕು— "ಸಾರೀ ರಾಧ! ಇನ್ನೆಂದೂ ಹೀಗೆ ತಡ ಮಾಡುವುದಿಲ್ಲ. ಪ್ರಾಮಿಸ್ ಮಾಡ್ತಿದೀನಿ. ಆಹಾ! ಈ ಹೊಸ ಸೀರೆಯಲ್ಲಿ ಅದೆಷ್ಟು ಸುಂದರವಾಗಿ ಕಾಣುತ್ತಿದ್ದಿ?" ಅವಳ ಹತ್ತಿರ ಬರುತ್ತಾ ಹೇಳಿದ–ತನ್ನ 'ಫಾರ್ಮುಲಾ ನಂಬರ್ ಟೂ' ಉಪಯೋಗಿಸುತ್ತಾ.

ಅವನು ಊಹಿಸಿದಂತೆಯೆ ಅವಳು ಸ್ವಲ್ಪ ಮೆತ್ತಗಾದಳಾಗಲೀ "ಮತ್ತೆ ಕುಡಿದು ಬಂದಿದೀರಾ?" ಎಂದು ಕೇಳಿದಳು ಅನುಮಾನದಿಂದ.

"ಛೆ! ಛೆ!! ನಾನು ಕುಡಿಯೋದು ಅಂದ್ರೇನು?" ಕಂಗಾಲಾಗಿ ಹೇಳಿದ ಆನಂದರಾವ್.

"ಇಲ್ದಿದ್ರೇನು? ಏನೋ ರಾಧ ಅಂತಿದೀರಿ ಇಷ್ಟು ಹೊತ್ತಿಗೆ ಆತ್ಮಹತ್ಯೆ ಮಾಡಿಕೊಂಡಿರುತ್ತೇನೆಂದು ಮುಂದಿನ ಹೆಂಡತಿಯ ಬಗ್ಗೆ ಕನವರಿಸಿಕೊಳ್ಳುತ್ತಿದ್ದೀರೇನೋ?" ಆನಂದರಾವ್ ಆಶ್ಚರ್ಯಪಟ್ಟ. ಇವಳು ರಾಧಳಲ್ಲವೇ?

ಈಗ ಹತ್ತು ದಿನಗಳ ಹಿಂದೆಯಷ್ಟೆ ಸಾತ್ವಿಕರಾವ್ ವೇಷದಲ್ಲಿ ತಾನು ಅವಳ ಬಳಿಗೆ ಬಂದು ವ್ಯವಹಾರ ಮಾಡಲು ಬಂದಿದ್ದು? ಅಷ್ಟರಲ್ಲೇ ಹೆಸರನ್ನು ಬದಲಾಯಿಸಿಕೊಂಡಿದ್ದಾಳಾ?"

ಕಿರುನಗೆ ಬೀರಿದ ಆನಂದರಾವ್. "ಅದಲ್ಲಾ ರಾಧ ..."

"ಅಗೋ-ಮತ್ತೆ ರಾಧ ಅನ್ನುತ್ತಿದ್ದೀರಿ. ನಿಜ ಹೇಳ್ರಿ...ನಂಗೆ ತಿಳೀದೇ ಇನ್ಯಾವಳನ್ನೋ ಇಟ್ಟುಕೊಂಡಿದಿರೋ ಹೇಗೆ? ಈ ನಡುವೆ ಗಂಡಸರಿಗೆ ಇದೊಂದು ಹಾಳು ಅಭ್ಯಾಸ ಪ್ರಾರಂಭವಾಗಿ ಬಿಟ್ಟಿದೆ." ಆಕ್ರೋಶದಿಂದ ಹೇಳಿದಳು.

"ಛೇ! ಛೇ!! ನಿನ್ನ ಮೇಲಾಣೆ ಸೀತ! ಅಂತಹದ್ದೇನೂ ಇಲ್ಲ" ಆನಂದ ರಾವ್ ಹೇಳಿದ.

"ಆಗೋ! ಮತ್ತೊಂದು ಹೊಸ ಹೆಸರು"

"ಸಾರೀ ರಜನೀ—"

"ಏನ್ರೀ ಇದು? ನಿಜ ಹೇಳಿ ಕುಡಿದು ಬಂದಿದೀರಾ ಹೇಗೆ?"

ಆನಂದರಾವ್ ಇದೇ ಸರಿಯಾದ ಸಮಯವೆಂದು ಅವಳನ್ನು ತನ್ನ ವಿಶಾಲ-ಎದೆಯ ಮೇಲೆ ತಬ್ಬಿಕೊಂಡ. "ಇನ್ನೇಕೆ ನಾವು ಸಮಯವನ್ನು ವ್ಯರ್ಥ ಮಾಡುವುದು-ನಡೀ" ಎನ್ನುತ್ತಾ ಅವಳನ್ನು ಎತ್ತಿಕೊಂಡೇ ಬೆಡ್ ರೂಮಿಗೆ ನಡೆದ. ಲಲಿತ ಆಶ್ಚರ್ಯದಿಂದ ಅವನನ್ನೇ ನೋಡುತ್ತಾ ಇದ್ದು ಬಿಟ್ಟಳು.

ಚಂದ್ರಬೋಸ್ ಒಂದು ದಿನ ಕೂಡಾ ತನ್ನನ್ನು ಹೀಗೆ ಎತ್ತುಕೊಂಡಿರ ಲಿಲ್ಲ. ತನಗೆ ಹೊಸ, ಹೊಸ ಹೆಸರುಗಳನ್ನಿಟ್ಟು ಕರೆಯುವುದು, ಬರುತ್ತಿ ದ್ದಂತೆಯೇ ತಬ್ಬಿ, ಎತ್ತಿಕೊಂಡು ಬರುತ್ತಿರುವುದು ಎಲ್ಲವೂ ಹೊಸದೆನ್ನಿಸಿತು. ಆನಂದರಾವ್ ಅವಳ ಪಕ್ಕದಲ್ಲೇ ಮಂಚದ ಮೇಲೆ ಒರಗಿದ. ಲಲಿತ ಥಕ್ಕನೇ ಎದ್ದು ಕುಳಿತಳು. ಅವನಿಗೇನು ಬೇಕೆಂದು ಅವಳಿಗೆ ಸೂಕ್ಷ್ಮವಾಗಿ ಅರ್ಥ ವಾಗಿ ಹೋಯಿತು.

"ನಡೀರಿ ಮೊದಲು ಊಟ ಮಾಡುವಿರಂತೆ!" ಆಶ್ಚರ್ಯವನ್ನು ಅಡಗಿಸಿ ಕೊಳ್ಳುತ್ತಾ ಹೇಳಿದಳು.

"ಈಗೇನು ಬೇಡ. ನೀನು ನನ್ನ ಪಕ್ಕದಲ್ಲಿದ್ರೆ ಎಲ್ಲಾ ಆದ್ಹಾಗೇ!" ಎಂದು ಅವಳನ್ನು ಸಂಪೂರ್ಣ ತಬ್ಬಿಕೊಂಡು ಎದೆಗೊತ್ತಿಕೊಂಡ.

"ಅಬ್ಬಾ! ಇರ್ರೀ-ಹೊರಗಡೆ ಬಾಗಿಲು ಹಾಕೇ ಇಲ್ಲ." ಎಂದು ಅವನಿಂದ ಬಿಡಿಸಿಕೊಂಡಳು. ಆನಂದರಾವ್ ರಸಭಂಗದಿಂದಲೂ, ಅಸಹನೆಯಿಂದಲೂ

ಮೇಲೆದ್ದು "ಹಾಳಾದ್ದು ಬಾಗಿಲನ್ನ ನಾನೇ ಮುಚ್ಚಿ ಬರ್ತೀನಿ ಇರು" ಎಂದು ಹೊರಬಾಗಿಲಿನ ಬಳಿಗೆ ಬಂದು ಬಾಗಿಲನ್ನು ಮುಚ್ಚಲು ಕೈ ಹಾಕಿದ. ಅಷ್ಟೇ! ಆಗತಾನೇ ವ್ಯಾನಿನಲ್ಲಿ ಬಂದು ಚಂದ್ರಬೋಸ್‌ನನ್ನು ಕಿಡ್ನಾಪ್ ಮಾಡಬೇಕೆಂದು ಸಿದ್ಧರಾಗಿ ಬಂದಿದ್ದ ಬಷೀರ್, ತ್ರಿಬ್ಬಲ್ ಜೀರೋ, ವೆಂಕಟೇಶ್ವರ್ ಅವನ ಮುಖಕ್ಕೆ ಬಟ್ಟೆಯೊಂದನ್ನು ಹಾಕಿ, ಅವನ ಬಾಯಿಯನ್ನು ಬಿಗಿಯಾಗಿ ಮುಚ್ಚಿ ಹಿಡಿದುಕೊಂಡು ಛಕ–ಛಕ ಹೊರಗೆ ಎಳೆದುಕೊಂಡು ಬಂದು ವ್ಯಾನಿನಲ್ಲಿ ಬೀಳಿಸಿದರು.

ಮರುಕ್ಷಣವೇ ವ್ಯಾನು ಗಂಟೆಗೆ ಎಂಬತ್ತು ಕಿಲೋಮೀಟರ್ ವೇಗದಲ್ಲಿ ರಾಜಸ್ತಾನ್ ಬಾರ್ಡರ್ ಕಡೆಗೆ ಹೊರಟಿತು.

"ಇಗೋ–ನಾವು ಹೋಗಬೇಕಾದ ದಾರಿಯ ಮ್ಯಾಪು ನಾನೇ ಸ್ವತಃ ತಯಾರು ಮಾಡಿದ್ದೇನೆ! ಅಹ್ಹಹ್ಹಾ!!" ತ್ರಿಬ್ಬಲ್ ಜೀರೋ ಜಂಬದಿಂದ ಹೇಳಿದ. ಡ್ರೈವರ್ ಅದರಂತೆ ಓಡಿಸಿದ.

ಆಗಷ್ಟೇ ಸೈಕಲ್ಲಿನಿಂದ ಇಳಿದು ಮನೆಯೊಳಗೆ ಬಂದ ಚಂದ್ರಬೋಸ್ ಬಾಗಿಲುಗಳು ತೆರೆದಿರುವುದನ್ನೂ, ಅಲ್ಲಿ ಯಾರೂ ಇಲ್ಲದಿದ್ದುದನ್ನು ಗಮನಿಸಿ ಆಶ್ಚರ್ಯಪಟ್ಟ.

"ಲಲಿತಾ–ಲಲಿತಾ" ಎಂದು ಕೂಗುತ್ತಾ ಬೆಡ್‌ರೂಮಿಗೆ ಬಂದ. ಕತ್ತಲಿದ್ದುದರಿಂದ ತಡವರಿಸುತ್ತ ಬೆಡ್ ಪಕ್ಕದಲ್ಲಿದ್ದ ಸ್ವಿಚ್‌ಗಾಗಿ ಕೈ ಆಡಿಸಿದ ಹಠಾತ್ತನೆ ಲಲಿತಳ ಕೈ ಅವನ ಕೈಯನ್ನು ಹುಡುಕಿ ಹಿಡಿದು ಮಂಚದಮೇಲೆ ಎಳೆದುಕೊಂಡಿತು. ಅನಿರೀಕ್ಷಿತವಾಗಿ ನಡೆದ ಈ ಎಳೆತದಿಂದ ಅವನು ಬ್ಯಾಲೆನ್ಸ್ ತಪ್ಪಿ ಮಂಚದ ಮೇಲೆ ಬಿದ್ದ. ಅವನ ಕೈಗೆ ಲಲಿತಳ ನಗ್ನ ಶರೀರ ತಗುಲಿತು ಬೆಚ್ಚಗೆ.

"ಏನ್ರೀ! ಬಾಗಿಲು ಹಾಕಿ ಬರ್ತೀನಿ ಅಂತ ಹೇಳಿ ಎಷ್ಟು ಹೊತ್ತು ಹೋದ್ರಿ?" ಅವನನ್ನು ತಬ್ಬಿ ಮಲಗುತ್ತಾ ಕೇಳಿದಳು

"ಏನು ಹೇಳ್ತಿದ್ದೀಯೇ? ಇದೇನು ನಿನ್ನ ಅವಸ್ಥೆ ನಂಗೆ ಊಟಾನೂ ಹಾಕದೆ?" ಲಲಿತ ಒಮ್ಮೆಗೇ ಅವನನ್ನು ಪಕ್ಕಕ್ಕೆ ಸರಿಸಿದಳು ಕೋಪದಿಂದ.

"ಇಷ್ಟು ಹೊತ್ತು ಕೇಳಿದ್ರೆ ನೀನು ಪಕ್ಕದಲ್ಲಿದ್ರೆ ಊಟಾನೂ ಬೇಡ

ಏನೂ ಬೇಡ ಅಂತ ಹೇಳಿದೋರು, ಈಗ ಹೀಗೆ ಮಾತಾಡ್ತೀರಲ್ಲಾ?" ನಿಷ್ಠುರವಾಗಿ ಕೇಳಿದಳು.

"ಏನು? ನಾನು ಊಟ ಬೇಡ ಅಂದೆನಾ? ನಾನು ಬರ್ತಿರೋದೇ ಈಗ! ಆಗ್ಲೆ, ಆಗ್ಲೆ ಅಂತಿದ್ದೀಯಲ್ಲಾ?"

ಲಲಿತಳಿಗೆ ಬೇಸರವಾಯಿತು.

"ನಿಮ್ಮಂತಹ ಮರೆಗುಳಿ ಗಂಡಂದಿರೊಡನೆ ಸಂಸಾರ ಮಾಡೋಕೆ ನನ್ನ ಕೈಲಿ ಸಾಧ್ಯವಿಲ್ಲ!" ಕೋಪದಿಂದ ಸೀರೆಯನ್ನು ಉಟ್ಟುಕೊಳ್ಳುತ್ತಾ ಹೇಳಿದಳು.

"ನಿನ್ನಂತಹ ಹುಚ್ಚೀ ಜೊತೇನೂ ಸಂಸಾರ ಮಾಡೋಕೆ ನನ್ನಿಂದ ಆಗೋಲ್ಲ" ಚಂದ್ರಬೋಸ್ ಮತ್ತಷ್ಟು ಕೋಪದಿಂದ ಹೇಳಿದ.

"ಹೌದು! ನಾನೇ ಹುಚ್ಚಿ. ಮಂಚದ ತನಕ ಎತ್ತಿಕೊಂಡು ಬಂದು, ಸೀರೆ ಕಿತ್ತು ಬಿಸಾಕಿ, ಬಾಗಿಲು ಹಾಕಿಬರ್ತೀನೀಂತ ಹೇಳಿ, ಈಗ ಎಲ್ಲಾ ಮರೆತೋರ ತರ, ನಾನ್ಯಾರೋ ಗೊತ್ತೇ ಇಲ್ವೇನೋ ಅನ್ನೋ ರೀತಿ–ಹ್ಞೂ! ನನ್ನ ಕರ್ಮ; ಹಿಂದಿನ ಜನ್ಮದಲ್ಲಿ ಮಾಡಿರೋ ಪಾಪ!" ಅವಳು ಹೇಳಿದಳು ಅಸಹನೆಯಿಂದ.

ಚಂದ್ರಬೋಸ್ ನಿಶ್ಶಕ್ತನಾಗಿ ಕುರ್ಚಿಯಲ್ಲಿ ಕುಸಿದು ಕುಳಿತ.

ಬೆಳಗಾಗುತ್ತಿದ್ದಂತೆಯೇ ಎಚ್ಚರವಾಯಿತು ಟ್ರಿಬ್ಬಲ್ ಜೀರೋಗೆ. ವ್ಯಾನ್ ರಾತ್ರಿಯೆಲ್ಲಾ ವೇಗವಾಗಿ ಪ್ರಯಾಣ ಮಾಡಿತ್ತು. ಹಠಾತ್ತನೆ ದೊಡ್ಡ ಅಲುಗಾಟದಿಂದ ವ್ಯಾನ್ ನಿಂತಿದ್ದರಿಂದ ಬಷೀರ್, ಆನಂದರಾವ್ ಕೂಡಾ ಎಚ್ಚರಗೊಂಡರು.

"ಮಹಾರಾಷ್ಟ್ರವನ್ನು ದಾಟಿ ಬಂದಿದ್ದೇವಾ?" ನಿದ್ರೆಯ ಗುಂಗಿನಲ್ಲೇ ಕೇಳಿದ ಬಷೀರ್.

"ಹೌದು" ಟ್ರಿಬ್ಬಲ್ ಜೀರೋ ಉತ್ತರಿಸಿದ.

ಇಬ್ಬರೂ ಕಣ್ಣುಗಳನ್ನುಜ್ಜಿಕೊಂಡು ವ್ಯಾನಿನಿಂದ ಇಳಿದು ನಿಂತರು. ಒಮ್ಮೆಗೇ ನಿದ್ರೆ ಹಾರಿಹೋಗಿತ್ತು ಎಲ್ಲರಿಗೂ. ಎತ್ತ ನೋಡಿದರೂ ಸಮುದ್ರ–ಬಂದ ದಾರಿಯೊಂದನ್ನು ಬಿಟ್ಟು.

"ಇದಾವ ಸಮುದ್ರ? ನಮ್ಮ ದಾರಿಯಲ್ಲೆಲ್ಲಿತ್ತು ಸಮುದ್ರ?" ಆಶ್ಚರ್ಯದಿಂದ ಕೇಳಿದ ಟ್ರಿಬ್ಬಲ್ ಜೀರೋ. ಹೆದರಿ ಕುಳಿತಿದ್ದ ಡ್ರೈವರ್ ಕಡೆಗೆ

ನೋಡುತ್ತಾ.

"ನಿನ್ನ ತಲೆ! ವ್ಯಾನನ್ನು ಹಿಂದುಮುಂದಾಗಿ ತೋರಿಸಿ ನನ್ನ ಕನ್ಯಾಕುಮಾರೀಗೆ ಬರೋ ಹಾಗೆ ಮಾಡ್ದಿ. ನಮ್ಮ ಪ್ರಾಣತಿಂತೀರಲ್ಲಾ ನೀವು!" ಡ್ರೈವರ್ ಸಿಡುಕುತ್ತಾ ವ್ಯಾನನ್ನು ರಿವರ್ಸ್ ತೆಗೆದುಕೊಂಡ.

ಇಬ್ಬರೂ ಮತ್ತೆ ಆತುರದಿಂದ ವ್ಯಾನ್ ಹತ್ತಿದರು.

"ಅಯ್ಯೋ! ನನ್ನ ಬಿಟ್ಟು ಬಿಡ್ರಪ್ಪೋ. ಇನ್ಯಾವತ್ತೂ ಹೆಂಗಸರ ಸಹವಾಸಕ್ಕೆ ಹೋಗೋದಿಲ್ಲ." ತಾನು ಸೀರೆಗಳ ಹಿಂದೆ ಸುತ್ತುತ್ತಿದ್ದರಿಂದ ತನಗೇ ಶಿಕ್ಷೆ ಎಂದೇ ನಂಬಿದ್ದ ಆನಂದರಾವ್ ಗೋಗರೆದ. ಮುಖ್ಯವಾಗಿ ತಾನು ರಾಧ ಬಳಿಗೆ ಬಂದಿದ್ದಕ್ಕಾಗಿ ರಾಧ, ಸಾತ್ವಿಕರಾವ್ ಇಬ್ಬರೂ ನಾಟಕವಾಡಿ ರೌಡಿಗಳಿಗೆ ತನ್ನನ್ನು ಒಪ್ಪಿಸಿದ್ದಾರೆಂದು ನಿರ್ಧರಿಸಿದ.

ತ್ರಿಬ್ಬಲ್ ಜೀರೋ, ಬಷೀರ್ ಒಬ್ಬರ ಮುಖವನ್ನೊಬ್ಬರು ನೋಡಿಕೊಂಡರು.

"ನಿಜ ಹೇಳ್ತಿದೀನಿ ಸಾರ್! ಇನ್ನು ಸತ್ತರೂ ರಾಧಳ ಸಹವಾಸಕ್ಕೆ ಹೋಗೋದಿಲ್ಲ! ನನ್ನ ಬಿಟ್ಟು ಬಿಡಿ" ಆನಂದರಾವ್ ಬೇಡಿಕೊಂಡ.

ಬಷೀರ್‌ಗೆ ಅನುಮಾನ ಪ್ರಾರಂಭವಾಯಿತು. ಆನಂದರಾವ್ ಸ್ವರ ಅವನಿಗೆ ಹೊಸದಾಗಿ ಕಂಡಿತು. ತಾನು ದಿನವೂ ಕೇಳುವ ಚಂದ್ರಬೋಸ್ ಸ್ವರವಲ್ಲ. ಮೇಲಾಗಿ ಯಾವ ಹೆಂಗಸಿನ ಸಹವಾಸಕ್ಕೂ ಹೋಗುವುದಿಲ್ಲ' ಅಂದರೆ ಇವನಾರೋ ಶೃಂಗಾರ ಪುರುಷನೇ ಇರಬೇಕು.

"ಬಾಸ್" ನಿಧಾನವಾಗಿ ಕರೆದ ವೆಂಕಟೇಶ್ವರನನ್ನು.

"ಏನು?" ಸಿಡುಕಿತು(!) ವೆಂಕಟೇಶ್ವರ್.

"ನಾವು ಕರೆತಂದಿರುವುದು ಚಂದ್ರಬೋಸ್ ಅಲ್ಲವೆಂದು ನನಗೆ ಅನುಮಾನ ಬಾಸ್." ಆ ಮಾತಿನಿಂದ ವೆಂಕಟೇಶ್ವರ್‌ಗೂ ನಿದ್ರೆಯು ಮತ್ತೆಲ್ಲಾ ಇಳಿದು ಹೋಯಿತು.

"ಅಯ್ಯೋ ನನ್ನ ಬಿಟ್ಟುಬಿಡರಪ್ಪಾ! ನಿಜ ಹೇಳ್ತಿದೀನಿ. ಇನ್ನು ಸತ್ರೂ ರಾಧಳ ಸಹವಾಸಕ್ಕೆ ಹೋಗೋದಿಲ್ಲ. ಯಾವ ಹೆಣ್ಣಿನ ಕಡೆಗೂ ನೋಡ್ಲೋಲ್ಲ." ಓರೆಗಣ್ಣಿನಿಂದ ವೆಂಕಟೇಶ್ವರನ ವಿಚಿತ್ರರೂಪವನ್ನು ನೋಡುತ್ತಾ ಹೇಳಿದ ಆನಂದರಾವ್.

"ರಾಧ ಯಾರು?" ಬಷೀರ್ ಅನುಮಾನದಿಂದ ಕೇಳಿದ.

"ಅದೇರೀ! ಈಗ ನೀವು ನನ್ನ ಹಿಡಿದುಕೊಂಡು ಬಂದಿರಲ್ಲಾ—ಆ ಮನೆಯಾಕೆ. ಮಹಾಸುಂದರಿ ಬಿಡಿ. ಅದಕ್ಕೆ ಟೆಂಪ್ಟ್ ಆಗಿಬಿಟ್ಟೆ. ಅವಳ ಗಂಡ

ಸಾತ್ವಿಕರಾವ್ ನಾನೂ ತುಂಬಾ ಹತ್ತಿರದ ಹೋಲಿಕೆಯುವರು ನೋಡಿ ಅದನ್ನು ಉಪಯೋಗ ಮಾಡಿಕೊಳ್ಳೋದಕ್ಕೆ ಅವಳನ್ನು ಅನುಭವಿಸೋಣಾಂತ ಹೋದೆ ಅಷ್ಟೆ ! ನಿಜ ಹೇಳ್ತಿದೀನ್ರಿ ! ನಿಮ್ಮಾಣೆ! ಆಕೆಯನ್ನು ಇನ್ನೆಂದಿಗೂ ನೋಡೋದಿಲ್ಲ—"ಮತ್ತೆ ಓರೆಗಣ್ಣಿನಿಂದ ವೆಂಕಟೇಶ್ವರ್ ಕಡೆಗೆ ನೋಡುತ್ತಾ ಹೇಳಿದ.

"ಏನು ಬಾಸ್ ! ಇವನೇನು ಹೇಳ್ತಿದಾನೆ? ನಂಗೇನೂ ಅರ್ಥವೇ ಆಗ್ತಿಲ್ಲ," ಬಷೀರ್ ವೆಂಕಟೇಶ್ವರ್ ಕಡೆಗೆ ನೋಡುತ್ತಾ ಹೇಳಿದ. ಅದರಿಂದ ವೆಂಕಟೇಶ್ವರ್ ಬಾಸ್ ಎಂದು ಅರ್ಥವಾಯಿತು ಆನಂದರಾವ್‌ಗೆ.

ಥಕ್ಕನೇ ಅವಳ (!) ಕಾಲನ್ನು ಹಿಡಿದು, ಮೃದುವಾಗಿ ಒತ್ತುತ್ತಾ ಮಾತನಾಡಲು ಪ್ರಾರಂಭಿಸಿದ. ಹೀಗೆ ಮಾಡಿದರೆ ಕೆಲವು ಹೆಂಗಸರು ಉಬ್ಬಿ ಹೋಗುತ್ತಾರೆಂದು ಅವನಿಗೆ ಅನುಭವ.

"ನೀವೇ ದಯೆತೋರಿಸಿ ಮೇಡಂ! ಇಷ್ಟು ಸುಂದರವಾದ ನೀವು ಅಷ್ಟೊಂದು ಕಠಿಣವಾಗಿ ನನ್ನನ್ನು ಶಿಕ್ಷಿಸುವುದು ಭಾವ್ಯವಲ್ಲ. ಇನ್ನೆಂದಿಗೂ ಹೆಂಗಸರ ಸಹವಾಸ ಮಾಡುವುದಿಲ್ಲವೆಂದು ಪ್ರಾಮಿಸ್ ಮಾಡ್ತಿದೀನಿ" ಅಂದ.

ಅವನ ಸ್ಪರ್ಶಕ್ಕೆ ವೆಂಕಟೇಶ್ವರನ ಮೈ ರೋಮಾಂಚನಗೊಂಡಿತು.

"ಏಯ್ ಮೊದಲು ಕಾಲು ಬಿಡು" ಬಿಡಿಸಿಕೊಳ್ಳುತ್ತಾ ಹೇಳಿದ.

ಆನಂದರಾವ್ ಕಾಲನ್ನು ಬಿಟ್ಟ.

ಗಂಡಿನ ಸ್ಪರ್ಶದಿಂದ–ಅದೂ ಆನಂದರಾವ್‌ನ ಸ್ಪರ್ಶದಿಂದ ಇಷ್ಟೊಂದು ರೋಮಾಂಚನ ಸಿಗುತ್ತದೆಂದು ವೆಂಕಟೇಶ್ವರನಿಗೆ ಗೊತ್ತಿರಲಿಲ್ಲ. ಅವನು ಇನ್ನೊಂದು ಸಲ ತನ್ನ ಶರೀರವನ್ನು ಹೀಗೆಯೇ ನೇವರಿಸಿದರೆ ಚೆನ್ನಾಗಿತ್ತೆಂದು ಅನ್ನಿಸಿತು.

"ಆ ಮನೆ ಚಂದ್ರಬೋಸ್ ದಯ್ಯಾ! ಸೈಂಟಿಸ್ಟ್! ಅವನ ಹೆಂಡತಿಯ ಹೆಸರು ಲಲಿತ! ರಾಧ ಅಲ್ಲ" ತ್ರಿಬ್ಬಲ್ ಜೀರೋ ಹೇಳಿದ.

"ನೀವು ತಪ್ಪು ತಿಳಿದಿದ್ದೀರಿ! ಆ ಮನೆ ಸಾತ್ವಿಕರಾವ್‌ದು. ಅವನ ಹೆಂಡತಿ ರಾಧಳನ್ನು ನಾನೇ ಕಣ್ಣಾರೆ ಕಂಡು ತಾನೆ ಹೀಗಾದದ್ದು"

"ಸಾತ್ವಿಕರಾವ್ ಯಾರು ?"

"ಬ್ಯಾಂಕಿನಲ್ಲಿ ಕ್ಲರ್ಕ್!"

"ಬಾಯ್ಮುಚ್ಚು ! ಚಂದ್ರಬೋಸ್ ನಮ್ಮ ಸ್ಕೂಲಿನಲ್ಲಿ ಸೈನ್ಸ್ ಟೀಚರ್! ಅವರನ್ನೂ ಅವರ ಹೆಂಡತಿಯನ್ನೂ ನಾನು ಎಷ್ಟೋ ವರ್ಷದಿಂದ ನೋಡ್ತಿದೀನಿ. ಅವರ ಮನೇ ಕೂಡಾ ನಿಶ್ಚಿತವಾಗಿಯೂ ಅದೇ! ಅವರ ಹೆಂಡತಿ ಹೆಸರು ಲಲಿತ, ರಾಧ ಅಲ್ಲ!"

"ರಾಧಾನೇ ಸಾರ್"

"ಅಲ್ಲ ಲಲಿತ!"

"ರಾಧಾನೇ ಸಾರ್!!"

"ಬಾಯ್ಮುಚ್ಚು-ನಿನ್ತಲೆ! ನೀನು ಚಂದ್ರಬೋಸೇ! ಇದೆಲ್ಲಾ ಕಲ್ಪಿತ ಕಥೆ. ನಾಟಕ ಆಡ್ತಿದ್ದೀ ಅಷ್ಟೇ ನೀನು-ನಿನ್ನ ಬಿಟ್ಟು ಬಿಡ್ತೀವಿಂತ" ತ್ರಿಬ್ಬಲ್ ಜೀರೋ ಕೂಗಾಡಿದ.

"ಅಯ್ಯೋ! ಹಾಗೆಲ್ಲಾ ಅನುಮಾನಿಸ ಬೇಡಪ್ಪಾ! ನಂಗೆ ಮೊದಲೇ ನಾಟಕ ಅಂದ್ರೇನೇ ಆಗೋಲ್ಲ."

"ನೋಡು ! ಈ ಗಲಭೆಯೆಲ್ಲಾ ಬೇಡ. ನಾವು ನಿನ್ನೇನೂ ಮಾಡು ವುದಿಲ್ಲವೆಂದು ಆಶ್ವಾಸನೆ ಕೊಡುತ್ತೇವೆ. ನಮಗೆ ಬೇಕಾಗಿರುವುದೊಂದೇ ! ಅದೇನೆಂದರೆ ನೀನು ಅರಬ್ ದೇಶಗಳಲ್ಲಿ ಸ್ವಲ್ಪ ಕಾಲವಿದ್ದು, ಅಲ್ಲಿ ಸೈಂಟಿಸ್ಟ್ ಗಳಿಗೆಲ್ಲಾ ನಿನ್ನ 'ಯೌವ್ವನ'ದ ಔಷಧಿಯ ಬಗ್ಗೆ ತಿಳುವಳಿಕೆ ನೀಡಿ, ಆ ಔಷಧಿ ಯನ್ನು ತಯಾರು ಮಾಡುವ ಹೆವಿ ಇಂಡಸ್ಟ್ರಿಯನ್ನು ಸ್ಥಾಪಿಸಿ ಬರಬೇಕು. ಅದಕ್ಕೆ ಅವರು ನಿನಗೆ ಹೆವಿ ಅಮೌಂಟ್ ಕೊಡುತ್ತಾರೆ." ವೆಂಕಟೇಶ್ವರ್ ತನ್ನ ಹೆಣ್ಣು ರೂಪವನ್ನು ಮರೆತು ಅವನೆಡೆಗೆ ಬಾಗಿ ಹೇಳಿದ. ಆನಂದರಾವ್ ಈ ಅವಕಾಶವನ್ನು ವ್ಯರ್ಥ ಮಾಡಿಕೊಳ್ಳಲಿಲ್ಲ. ಅವನ ಕೈಯ್ಯನ್ನು ಕೂಡಲೇ ತನ್ನ ಕೈಗಳ್ಳೊಳಗೆ ತೆಗೆದುಕೊಂಡು ಸವರುತ್ತಾ ಮಾತನಾಡಿದ.

"ನೀವೆಲ್ಲೋ ಏನೋ ತಪ್ಪಿದ್ದೀರಿ ಮೇಡಂ ! ನೀವು ಹೇಳೋ ಔಷಧಿಯ ಬಗ್ಗೆ ನನಗೇನೂ ಅರ್ಥವಾಗುತ್ತಿಲ್ಲ. ಒಂದು ವೇಳೆ ಅಂತಹ ಔಷಧಿಯೇನಾದರೂ ಇದ್ದರೆ ಅದನ್ನು ನಮಗೇ ಕೊಡಿಸಿ-ನಮ್ಮ ಸ್ನೇಹಿತ ನೊಬ್ಬನಿಗೆ ಮದುವೆಯಾದರೂ ಹೆಂಡತಿಯನ್ನು ಕಂಡರೆ ಓಡುತ್ತಿದ್ದಾನೆ. ಇನ್ನೊಂದು ವಾರ ಗಡುವು ನೀಡಿದ್ದಾಳೆ ಅವನ ಹೆಂಡತಿ. ಅಷ್ಟರಲ್ಲಿ ಅವನು ರಿಪೇರಿ ಆಗದಿದ್ದರೆ ವಿಚ್ಛೇದನ ನೀಡುವುದಾಗಿ ಹೆದರಿಸುತ್ತಿದ್ದಾಳೆ ಅವನ ಹೆಂಡತಿ.

ಬಷೀರ್ ಕಡೆಗೆ ಹುಚ್ಚು ಹಿಡಿದವನಂತೆ ನೋಡಿದ ವೆಂಕಟೇಶ್ವರ್.

ಬಷೀರ್ ತಲೆಕೆರೆದುಕೊಂಡ. "ಬಾಸ್ ನಾವೆಲ್ಲೋ ತಪ್ಪು ಮಾಡುತ್ತಿದ್ದೇ ವೆಂದು ಅನ್ನಿಸುತ್ತಿದೆ ನನಗೆ. ಇವನ್ಯಾರೋ ಚಂದ್ರಬೋಸ್‌ನ ಹೋಲಿಕೆಯಿರುವವ ನಾಗಲೀ ಚಂದ್ರಬೋಸ್ ಅಲ್ಲ. ನಾನು ಚಂದ್ರಬೋಸ್‌ನ ಸ್ವರ, ಮಾತುಗಳನ್ನು ಗುರುತಿಸಬಲ್ಲೆ. ಒಟ್ಟಾಗಿ ಒಂದೇ ಸ್ಕೂಲಿನಲ್ಲಿ ಹದಿನೈದು ವರ್ಷಗಳಿಂದ ಕೆಲಸ ಮಾಡುತ್ತಿದ್ದೇವೆ—"

"ಹಾಗಾದರೆ ಇವನಾರು?"

"ಯಾವೋನೋ ಡೂಪ್ಲಿಕೇಟ್‌ನಂತಿದ್ದಾನೆ—"

"ಹಾಗಾದರೆ ಇವನೇಕೆ ಚಂದ್ರಬೋಸ್‌ನ ಮನೇಲಿದ್ದಾನೆ ?"

"ಅದೇ ನನಗೂ ಅರ್ಥವಾಗುತ್ತಿಲ್ಲ ಬಾಸ್! ಏತಕ್ಕಾದರೂ ಒಳ್ಳೆಯದು-ಹೇಗೂ ನಾವು ಮತ್ತೆ ರಿವರ್ಸ್ ಡೈರೆಕ್ಷನ್‌ನಲ್ಲಿ ಹೋಗಬೇಕಾಗಿದೆಯಲ್ಲಾ ಅದಕ್ಕೇ ಚಂದ್ರಬೋಸ್ ಮನೆಗೆ ಹೋಗಿ ಇವನು ಹೇಳುವ ಮಾತುಗಳು ನಿಜವೋ ಇಲ್ಲವೋ ಎಂದು ತಿಳಿದುಕೊಂಡು ಬರೋಣ ! ಒಂದು ವೇಳೆ ಇವನೇ ಕರೆಕ್ಟಾದರೆ ಇವನನ್ನು ಅಲ್ಲಿಯೇ ಬಿಟ್ಟು ಚಂದ್ರಬೋಸ್‌ನನ್ನು ಎಳೆದು ತರೋಣ. ಏನಂತೀರಿ ಬಾಸ್?" ವೆಂಕಟೇಶ್ವರ್ ಒಂದು ಕ್ಷಣ ಯೋಚಿಸಿದ.

"ನಿನ್ನ ಯೋಚನೆ ಸರಿಯಾಗಿದೆ, ಹಾಗೆಯೇ ಮಾಡೋಣ."

ವ್ಯಾನ್ ಹಿಂದಕ್ಕೆ ಹೊರಟಿತು.

ತಡೆದು ತಡೆದು ಡ್ರೈವರನ ಬಾಯಿಂದ ಹೊರಡುತ್ತಿದ್ದ ಬೈಗಳು ಕರ್ಣ ಕಠೋರವಾಗಿ ಕೇಳಿಸುತ್ತಿತ್ತು. ಮಾರನೆ ದಿನ ಬೆಳಗ್ಗೆ ಮತ್ತೆ ಹೈದರಾಬಾದ್ ಸೇರಿಕೊಂಡಿತು ವ್ಯಾನು. ಬಷೀರ್, ತ್ರಿಬ್ಬಲ್ ಜೀರೋ ಭಿಕ್ಷುಕರಂತೆ ವೇಷ ಮರೆಸಿಕೊಂಡು ಚಂದ್ರಬೋಸ್ ಮನೆ ಬಳಿ ಕಾದುನಿಂತರು. ಸ್ವಲ್ಪ ಸಮಯದ ನಂತರ ಇಬ್ಬರೂ ವಿದ್ಯಾರ್ಥಿಗಳು ಸೈಕಲ್ಲಿನಲ್ಲಿ ಆ ಮನೆಗೆ ಬಂದು ಲಲಿತಳನ್ನು ಹೊರಗೆ ಕರೆದು—"ಮೇಡಮ್! ಮಾಸ್ಟರ್ ಇವತ್ತು ತಡವಾಗಿ ಮನೆಗೆ ಬರುತ್ತಾರೆಂದು ಹೇಳಿದರು. ಸೈನ್ಸ್ ಲ್ಯಾಬಿನಲ್ಲಿ ತುಂಬಾ ಕೆಲಸವಿದೆಯಂತೆ" ಎಂದು ತಿಳಿಸಿದರು.

"ರಾತ್ರಿ ಎಂಟಾದ ನಂತರ ಮನೆಗೆ ಬಂದರೆ ಬಾಗಿಲು ತೆರೆಯುವುದಿಲ್ಲ ವೆಂದು ಹೇಳಿ ನಿಮ್ಮ ಮಾಸ್ಟರಿಗೆ—" ಸಿಟ್ಟಿನಿಂದ ಹೇಳಿದಳು.

ಬಷೀರ್, ತ್ರಿಬ್ಬಲ್ ಜೀರೋ ಆಶ್ಚರ್ಯಪಟ್ಟರು.

"ನಮ್ಮ ಬಳಿ ಇರುವವನು ನಿಜವಾಗಿಯೂ ಡೂಪ್ಲಿಕೇಟ್ ಬಾಸ್." ತ್ರಿಬ್ಬಲ್ ಜೀರೋ ಹೇಳಿದ.

"ಹೌದು ! ಇಬ್ಬರಿಗೂ ಇಷ್ಟೊಂದು ಹತ್ತಿರದ ಹೋಲಿಕೆಯಿದ್ದರೆ ಒಬ್ಬನೇ ತಂದೆ ಎನ್ನಿಸುತ್ತಿದೆ" ಬಷೀರ್ ಹೇಳಿದ.

"ಈಗ ಅವನನ್ನೇನು ಮಾಡೋಣ ?"

"ನಮ್ಮ ಬಾಸ್‌ಗೆ ಹೇಳಿ ಬಿಟ್ಟು ಬಿಡೋಣ."

"ನಡಿ ಹಾಗಾದರೆ."

ಇಬ್ಬರೂ ವೆಂಕಟೇಶ್ವರ್ ಮನೆಗೆ ಬಂದರು. ಆಗಲೇ ಅಲ್ಲಿ ತುಂಬಾ ಜನ ಸೇರಿದ್ದರು.

"ಅಯ್ಯೋ ನನ್ನ ಮಾತು ಸುಳ್ಳಾದರ ಆ ಬಷೀರನ್ನ ತ್ರಿಬ್ಬಲ್ ಜೀರೋನ ಕೇಳಿ–" ಇದನ್ನು ಕಂಡ ಅವರಿಬ್ಬರೂ ಮುಂದೆ ಬಂದರು.

"ಅವರು ಹೇಳ್ತಿರೋದು ನಿಜವೇನಮ್ಮಾ ! ಇದೆಲ್ಲಾ ನಮ್ಮ ಕಣ್ಣೆದುರಿನಲ್ಲೇ ನಡೆಯಿತು," ಬಷೀರ್ ಹೇಳಿದ.

ವೆಂಕಟೇಶ್ವರನ ಹೆಂಡತಿ ಅವನ ಬಳಿಗೆ ಕಿರುನಗೆಯಿಂದ ಬಂದು "ಹಾಗಾ ? ಪಾಪ" ಎಂದಳು ಅನುಕಂಪದಿಂದ

"ಹೌದ್ರೀ ಪಾಪ" ತ್ರಿಬ್ಬಲ್ ಜೀರೋ ದಹೇಳಿ. ಮುಂದಿನ ಕ್ಷಣವೇ ಅವಳು ಬೆಂಕಿಯಾದಳು.

"ಪಾಪಿಗಳಿರಾ ! ನೀವು ಮೂರುಜನ ಸೇರಿ ನನ್ನನ್ನೇ ಹುಚ್ಚಿಯನ್ನಾಗಿ ಮಾಡ್ತಿದೀರ ? ನಾನು ಹತ್ತನೇ ಕ್ಲಾಸಿನವರೆಗೂ ಓದಿದ್ದೀನ್ರೋ! ನಿಮ್ಮ ಹಾಗೆ ಐದನೇ ಕ್ಲಾಸಿಗೇ ಡುಮ್ಕಿ ಹೊಡೆದಿಲ್ಲ. ನಂಗೇ ಮೋಸಮಾಡ್ತೀರ, ಔಷಧಿಗಳ ಹೆಸರು ಹೇಳಿ–" ಎಂದು ಕೈಗೆ ಸಿಕ್ಕಿದ ದೊಣ್ಣೆಯನ್ನು ತೆಗೆದುಕೊಂಡು ಒಬ್ಬೊಬ್ಬರಿಗೆ ಒಂದೊಂದು ಬಿಟ್ಟಳು.

ಮೂವರೂ ಓಡಿ ವ್ಯಾನನ್ನು ಹತ್ತಿಬಿಟ್ಟರು. ವ್ಯಾನ್ ಅಲ್ಲಿಂದ ಹೊರಟು ಚಂದ್ರಬೋಸ್ ಮನೆಯ ಮುಂದೆ ನಿಂತಿತು. ಆಗತಾನೇ ಚಂದ್ರಬೋಸ್ ಸ್ಕೂಲಿಗೆ ಹೊರಟಿದ್ದ. ರಸ್ತೆಯಲ್ಲಿ ವಿಪರೀತ ಜನರಿದ್ದುದರಿಂದ ಅವನನ್ನು ಹೀಗೆ ವ್ಯಾನಿನಲ್ಲಿ ಎತ್ತಿಹಾಕಿಕೊಳ್ಳುವುದೆಂದು ಯೋಚಿಸುತ್ತಾ ಮೂವರೂ ವ್ಯಾನಿನಲ್ಲಿಯೇ ಅವನ ಸ್ಕೂಲಿನ ಬಳಿಗೆ ಬಂದರು.

ಸ್ಕೂಲಿನ ಗೇಟ್ ಬಳಿ ಚಂದ್ರಬೋಸ್‌ನ ಬಳಿ ಬಂದ ತ್ರಿಬ್ಬಲ್ ಜೀರೋ. ಅವನ ಭುಜಕ್ಕೆ ಪಿಸ್ತೂಲನ್ನು ಚುಚ್ಚಿ ಹೇಳಿದ.

"ಮರ್ಯಾದೆಯಿಂದ ವ್ಯಾನ್ ಹತ್ತು"

ಚಂದ್ರಬೋಸ್ ಗಲಿಬಿಲಿಗೊಂಡು, "ಸರಿಯಾಗಿ ಹೇಳು ನನಗೇನೂ

ಅರ್ಥವಾಗುತ್ತಿಲ್ಲ-" ಎಂದು ಹೇಳಿದ.

"ಸ್ವಲ್ಪ ಆ ವ್ಯಾನ್‌ನೊಳಗೆ ಬಂದ್ರೆ ಹೇಳ್ತೀವಿ"

"ಏನು? ವ್ಯಾನಿನಲ್ಲಿ ಏನಿದೆ? ಸ್ಯೆನ್ಸ್ ಎಗ್ಜಿಬಿಷನ್ನಾ?"

"ಹೌದು"

ಚಂದ್ರಬೋಸ್ ವ್ಯಾನ್ ಹತ್ತಿದ ಕೂಡಲೇ ಅವನ ಮುಖವನ್ನು ಕಂಬಳಿಯಿಂದ ಮುಚ್ಚಿ ಹಿಡಿದರು.

"ಏನೋ ಬಷೀರ್! ಇದು ನಿನ್ನ ಕೆಲಸವೇನಾ?" ಕಂಬಳಿಗಿದ್ದ ತೂತಿನಿಂದ ನೋಡುತ್ತಾ ಕೇಳಿದ.

"ಹೌದು ಸಾರ್! ಆ ಸ್ಕೂಲಿನಲ್ಲಿ ಸತ್ತರೂ ಸರಿಯಾಗಿ ಸಂಬಳ ಹೆಚ್ಚಾಗುವುದಿಲ್ಲ. ಅದೂ ಹಾಳಾಗಲೀ ಅಂದರೆ ಟ್ಯೆಮ್‌ಗೆ ಸರಿಯಾಗಿ ಆ ಸಂಬಳಾನೂ ಕೊಡೋದಿಲ್ಲ. ಎಷ್ಟು ವರ್ಷ ಅಂತಹ ಉದ್ಯೋಗವನ್ನು ನಂಬಿಕೊಳ್ಳಲಿ? ಹಾಗಾಗಿ ಪಾರ್ಟ್‌ಟೈಂ ಆಗಿ ಇಂತಹ ಉದ್ಯೋಗವನ್ನು ಹಿಡಿದಿದ್ದೇನೆ."

"ಎಷ್ಟು ದ್ರೋಹ! ನಿನ್ನಂತಹ ದೇಶದ್ರೋಹಿಗಳನ್ನು ಗಲ್ಲಿಗೇರಿಸ ಬೇಕು."

"ನಾನಲ್ಲ ಸಾರ್ ದೇಶದ್ರೋಹಿ! ಕೋಟ್ಯಾಂತರ ರೂ. ಆಸ್ತಿಯನ್ನು ಮಾಡಿಕೊಳ್ಳುತ್ತಿರುವವರು, ಬೋಫೋರ್ಸ್ ಕೇಸಿನಲ್ಲಿ ಐವತ್ತುಕೋಟಿ ಹೊಡೆದವರು-"

"ಸಾಕು ಬಾಯ್ಮುಚ್ಚು" ಕಿರುಚಿದ ಚಂದ್ರಬೋಸ್. "ಈಗ ನನ್ನಿಂದ ನಿಮಗೇನು ಆಗಬೇಕು?"

"ಇನ್ನೇನಿದೆ ಸಾರ್ ಹಿಂದಿನ ಸಲ ನಿಮ್ಮ ಮನೆಗೆ ಬಂದು 'ಯೌವ್ವನದ ಔಷಧಿ' ಕೇಳಿದಾಗ ನಿಮ್ಮ ಹೆಂಡತಿ ಮತ್ಯಾವುದೋ ಕೊಟ್ಟಿದ್ದರು. ನೋಡಿ ಅದರಿಂದ ನಮ್ಮ ಬಾಸ್ ಹೀಗೆ ಹೆಣ್ಣಾಗಿಬಿಟ್ಟರು. ನಮಗೆ ಅರ್ಜೆಂಟಾಗಿ ನಮ್ಮ ಬಾಸ್ ಗಂಡಸಾಗುವಂತೆ ಮಾಡುವ ಔಷಧಿ ಕೊಟ್ಟು, ಆ ನಂತರ ಅರಬ್‌ದೇಶವೊಂದಕ್ಕೆ ನೀವು ಹೋಗಿ ಅಲ್ಲಿ ಒಬ್ಬ ಕೋಟೀಶ್ವರ ಷೇಕ್‌ಗೆ 'ಯೌವ್ವನದ ಔಷಧಿ'ಯನ್ನು ಕೊಟ್ಟುಬಂದರೆ, ನಿಮಗೆ ಆರು ಕೋಟಿ ರೂಪಾಯಿ ಕ್ಯಾಷ್, ಆರು ಮರ್ಸಿಡಿಸ್ ಕಾರುಗಳನ್ನು ಆ ಷೇಕ್ ಕೊಡುತ್ತಾನಂತೆ. ಪೆಟ್ರೋಲ್ ಲೈಫ್‌ಲಾಂಗ್ ಫ್ರೀಯಂತೆ!"

ಚಂದ್ರಬೋಸ್ ಜೋರಾಗಿ ನಕ್ಕುಬಿಟ್ಟ.

"ಅಯ್ಯೋ ಹುಚ್ಚಾ! ಆ ವಿಷಯವನ್ನು ಈಗ ಹೇಳಿದರೆ ಹೇಗೆ?

ಆ ಫಾರ್ಮುಲಾವನ್ನು ಮನೆಯ ಬಳಿಯೇ ಮರೆತು ಬಂದಿದ್ದೇನೆ." ಬುದ್ಧಿವಂತಿಕೆಯಿಂದ ಹೇಳಿದ.

"ಹಾಳಾಗಿ ಹೋಯ್ತಲ್ಲಾ ನಮ್ಮ ಶ್ರಮವೆಲ್ಲಾ! ಡ್ರೈವರ್ ವ್ಯಾನ್ ನಿಲ್ಲಿಸು" ಕಿರುಚಿದ ವೆಂಕಟೇಶ್ವರ್.

"ಸತ್ತರೂ ನಿಲ್ಲಿಸೋಲ್ಲ! ಇಂತಹ ಆತುರಾತುರ ಕಿಡ್ನಾಪಿಂಗನ್ನು ನಾನು ಜನ್ಮದಲ್ಲಿಯೇ ನೋಡಿರಲಿಲ್ಲ" ಮತ್ತಷ್ಟು ವೇಗವನ್ನು ಹೆಚ್ಚಿಸಿದ ಡ್ರೈವರ್.

ಇದನ್ನೆಲಾ ನೋಡುತ್ತಿದ್ದ ಆನಂದರಾವ್ ಗೊಳ್ಳನೆ ನಕ್ಕುಬಿಟ್ಟ. ಅವನನ್ನು ಕಂಡ ಚಂದ್ರಬೋಸ್ ಬೆಚ್ಚಿಬಿದ್ದ. ಅಚ್ಚತನ್ನಂತೆಯೇ ಇರುವ ಆ ವ್ಯಕ್ತಿಯನ್ನು ಗಮನಿಸಿ ಆಶ್ಚರ್ಯಪಟ್ಟ.

"ಏನುಸಾರ್ ಹಾಗೆ ನೋಡ್ತಿದೀರಿ ? ನಮ್ಮಿಬ್ಬರದೂ ಒಂದು ರೂಪವೆಂದಾ? ಈಗ ನಿಮ್ಮನ್ನು ಅರಬ್ ದೇಶಕ್ಕೆ ಕಳುಹಿಸಿ ನನ್ನನು ನಿಮ್ಮ ಮನಯಲ್ಲಿ ನಿಮ್ಮ ಸ್ಥಾನದಲ್ಲಿ ಇರಿಸುತ್ತಿದ್ದಾರೆ........" ನಗುತ್ತಾ ಹೇಳಿದ ಆನಂದರಾವ್.

ಚಂದ್ರಬೋಸ್ ಬೆಚ್ಚಿಬಿದ್ದ.

"ಅಫ್‌ಕೋರ್ಸ್ ನಾನು ಫ್ರೀ ಸರ್ವೀಸ್ ಅಲ್ಲ ಅಂದುಕೊಳ್ಳಿ" ಎಂದು ಲೇಡಿ ವೆಂಕಟೇಶ್ವರ್‌ನನ್ನು ತೋರಿಸುತ್ತಾ "ಅವಳನ್ನು ಬಯಸಿದ್ದೇನೆ. ಆರಾಮವಾಗಿ ನಿಮ್ಮ ಮನೆಯಲ್ಲಿ ನಾವಿರುತ್ತೇವೆ."

"ಥೂ ಪಾಪಿ! ಕೇವಲ ಒಂದು ಹೆಂಗಸಿಗಾಗಿ ಇಂತಹ ಪಾಪ ಮಾಡುತ್ತೀಯಾ? ನಾಚಿಕೆಯಿಲ್ಲವಾ ನಿನಗೆ?" ಚಂದ್ರಬೋಸ್ ಕೇಳಿದ.

"ಅದೇ ನಮ್ಮ ವೀಕ್‌ನೆಸ್ ಗುರು! ಹೆಣ್ಣಿಗಾಗಿ ಎಂತಹ ರಿಸ್ಕನ್ನಾದರೂ ತೆಗೆದುಕೊಳ್ಳಬಲ್ಲೆ" ಚಂದ್ರಬೋಸ್‌ನ ಮುಖ ಬಾಡಿ ಹೋಯಿತು.

"ಹೆಂಗಸರೆಂದರೆ ಅಷ್ಟು ವೀಕ್‌ನೆಸ್ ಇರಕೂಡದು."

"ಹಾಗೆಂದು ನಾನೂ ಸ್ಟೇಟ್‌ಮೆಂಟ್ ಕೊಡಬಲ್ಲೆ ಸಾರ್! ಅದು ಪ್ರಾಕ್ಟಿಕಲ್ ಆಗಿ ಯೋಚಿಸಿದರೆ–ಉಹ್ಞೂ–ಅದು ನಮ್ಮಿಂದ ಸಾಧ್ಯವಿಲ್ಲ ಬಿಡಿ."

ಚಂದ್ರಬೋಸ್ ಮಾತನಾಡಲಿಲ್ಲ. ವ್ಯಾನ್ ಶರವೇಗದಿಂದ ಓಡುತ್ತಿತ್ತು.

"ನಾವೀಗ ಎಲ್ಲಿಗೆ ?" ಬಷೀರ್‌ನನ್ನು ಕೇಳಿದ.

ಅದೇ ಸೀಕ್ರೆಟ್ ಸಾರ್! ಯಾರಿಗೂ ಹೇಳಬಾರದು."

"ನಿಮ್ಮನ್ನು ರಾಜಾಸ್ಥಾನ್ ಮರುಭೂಮಿಯಲ್ಲಿ ಹೆಲಿಕಾಪ್ಟರ್ ಹತ್ತಿ

ಸುವವರೆಗೂ ಈ ವಿಷಯ ಯಾರಿಗೂ ತಿಳಿಯಕೂಡದು" ಟ್ರಿಬ್ಬಲ್ ಜೀರೋ ಹೇಳಿದ.

"ಆದರೆ ಆ ಫಾರ್ಮುಲಾ ಈಗ ನನ್ನ ಬಳಿ ಇಲ್ಲದೆ ನನ್ನನ್ನು ಅರಬ್ ದೇಶಕ್ಕೆ ಕಳುಹಿಸಿದರೆ ತಾನೇ ಏನು ಲಾಭ?"

"ಅಲ್ಲಿ ಹೊಸದಾಗಿ ತಯಾರು ಮಾಡಿ ಸಾರ್ ಆ ಫಾರ್ಮುಲಾ! ನಿಮಗೆ ಐದು ನಿಮಿಷದಲ್ಲಿ ಲ್ಯಾಬರೆಟರಿಯನ್ನು ಸಿದ್ಧಗೊಳಿಸಿ ಬಿಡುತ್ತಾರೆ ಅಲ್ಲಿ." ಬಷೀರ್ ಹೇಳಿದ.

ಚಂದ್ರಬೋಸ್ ಅಸಹನೆಯಿಂದ ತಲೆ ಕೆರೆದುಕೊಂಡ.

ತನಗೀಗ ಎರಡು ಸಮಸ್ಯೆಗಳು ಎದುರಾದವು.

ಈ ಆನಂದರಾವ್ ತನ್ನ ಸ್ಥಾನದಲ್ಲಿ ಮನೆಗೆ ಹೋಗಿ ಲಲಿತಳನ್ನು ನೋಡಿ ಎಂತಹ ಹುಚ್ಚು ವೇಷಗಳನ್ನು ಹಾಕುತ್ತಾನೋ? ಅವನಿಗೆ ಹೆಣ್ಣಿನ ಹುಚ್ಚಿದೆಯೆಂದು ಮೊದಲೇ ತಿಳಿಸಿದ್ದಾನೆ. ಲಲಿತಳಿಗೇನು ಗೊತ್ತು ? ತಾನೆಂದೇ ತಿಳಿದು ಅವನೊಡನೆ ಪ್ರಣಯಕ್ಕೆ ಸಿದ್ಧವಾಗಿಬಿಡುತ್ತಾಳೆ.

ಇನ್ನು ಎರಡನೆ ಸಮಸ್ಯೆ ಏನೆಂದರೆ ತನ್ನನ್ನು ತಾನು ಈ ದುರ್ಮಾರ್ಗಿಗಳಿಂದ ರಕ್ಷಿಸಿಕೊಳ್ಳಬೇಕಾದ್ದು. ಒಮ್ಮೆ ಹೊರದೇಶಕ್ಕೆ ಹೋದರೆ ಆಯಿತು. ಆ ಯೌವ್ವನದ ಔಷಧಿಯ ಫಾರ್ಮುಲಾ ಹೇಳುವ ವರೆಗೂ ತನ್ನನ್ನು ಬಿಡರು. ಆ ನಂತರ ಕೂಡಾ ಅವರು ಬಿಡುವ ಸಂಭವವಿಲ್ಲ. ಅದನ್ನು ಬೇರೆ ದೇಶದವರಿಗೆ ನಾನು ಎಲ್ಲಿ ಹೇಳಿ ಬಿಡುತ್ತೇನೋ ಎಂಬ ಅನುಮಾನದಿಂದ ತನ್ನನ್ನು ಮರ್ಡರ್ ಮಾಡಿ ಬಿಸಾಕಿದರೂ ಆಶ್ಚರ್ಯವಿಲ್ಲ.

ವ್ಯಾನ್ ನಿಂತಿತು-ಊರ ಹೊರಗಿನ ಒಂದು ಹೋಟೆಲಿನ ಬಳಿ.

"ಯಾಕೆ ನಿಲ್ಸಿದ್ದು?" ವೆಂಕಟೇಶ್ವರ್ ಕೇಳಿದ.

"ಊಟಕ್ಕೆ ಸಾರ್!" ಡ್ರೈವರ್ ಹೇಳಿದ.

ಆ ಮೂವರ ಹಿಂದೆ ಆನಂದರಾವ್ ಕೂಡಾ ಇಳಿದ.

"ನೀವೂ ಬನ್ನಿ ಸಾರ್!" ಬಷೀರ್ ಚಂದ್ರಬೋಸ್‌ನನ್ನು ಕರೆದ.

"ಛೀ! ಬಾಯ್ಮುಚ್ಚು. ಅವನನ್ನು ಕೆಳಗಿಳಿಸಿದರೆ ಜೋರಾಗಿ ಕೂಗಿಕೊಳ್ಳಲಿ. ಜನರೆಲ್ಲಾ ಬಂದು ನಮಗೆ ನಾಲ್ಕು ಇಕ್ಕುತ್ತಾರಷ್ಟೆ! ವ್ಯಾನ್‌ಗೇ ಊಟ ಕಳಿಸೋಣ-" ವೆಂಕಟೇಶ್ವರ ಹೇಳಿದ. ವ್ಯಾನಿನ ಬಾಗಿಲುಗಳನ್ನು ಲಾಕ್‌ಮಾಡಿಕೊಂಡು ಎಲ್ಲರೂ ಹೊರಟು ಹೋದರು.

ಚಂದ್ರಬೋಸ್‌ಗೆ ಇದು ಅದ್ಭುತವಾದ ಅವಕಾಶವಾಗಿ ಕಂಡಿತು.

ತನ್ನ ಬ್ಯಾಗಿನಿಂದ ಒಂದು ಕವರ್ ತೆಗೆದು, ಒಂದು ಬಿಳಿಹಾಳೆಯಲ್ಲಿ ಚಕಚಕ ಬರೆದು ಕವರಿನಲ್ಲಿರಿಸಿದ.

"ಲಲಿತಾ! ನನ್ನನ್ನು ಬಷೀರ್ ಗ್ಯಾಂಗಿನವರು ಕಿಡ್ನಾಪ್ ಮಾಡಿದ್ದಾರೆ. ರಾಜಾಸ್ಥಾನ್‌ಗೆ ತೆಗೆದುಕೊಂಡು ಹೋಗುತ್ತಿದ್ದಾರೆ. ನಾನು ಮನೆಯಲ್ಲಿಲ್ಲ ವೆಂಬ ವಿಷಯ ನಿನಗೆ ತಿಳಿಯದಂತೆ ನನ್ನ ಸ್ಥಾನದಲ್ಲಿ ನನ್ನಂತೆಯೇ ಇರುವ ಒಬ್ಬ ಕಳ್ಳ ರಾಸ್ಕಲ್‌ನನ್ನು ನಮ್ಮ ಮನೆಗೆ ಕಳಿಸುತ್ತಿದ್ದಾರೆ ಆ ಪಾಪಿಯನ್ನು ನಿನ್ನ ಬಳಿಗೆ ಸೇರಿಸಬೇಡ. ಅವನಿಂದ ಮುಟ್ಟಿಸಿಕೊಳ್ಳಬೇಡ. ಅವನು ತುಂಬಾ ವಿಧದಲ್ಲಿ ನೀನು ಅವನ ಹೆಂಡತಿಯೆಂದು ಒಪ್ಪಿಸಲು ಪ್ರಯತ್ನಿಸುತ್ತಾನೆ. ಅಷ್ಟೇ ಕೆಲವು ಗುರುತುಗಳನ್ನು ಸಂಗ್ರಹಿಸಿ ನಾನೇ ಅವನೆಂದು ಮೋಸ ಮಾಡುವ ಯೋಜನೆ ಹಾಕಿಕೊಂಡಿದ್ದಾನೆ. ನಾನು ಸಾಧ್ಯವಾದಷ್ಟು ಬೇಗ ಈ ರಾಕ್ಷಸರಿಂದ ತಪ್ಪಿಸಿಕೊಂಡು ಬರಲು ಪ್ರಯತ್ನಿಸುತ್ತೇನೆ—ನಿನ್ನ ಗಂಡ ಚಂದ್ರ ಬೋಸ್–" ಆ ಕವರಿನ ಮೇಲೆ ಅಡ್ರೆಸ್ ಬರೆದು ವ್ಯಾನಿನ ಬಳಿ ಆಡಿಕೊಳ್ಳು ತ್ತಿದ್ದ ಹುಡುಗರಲ್ಲಿ ಒಬ್ಬನನ್ನು ಕರೆದು "ಈ ಕವರನ್ನು ಈ ಅಡ್ರೆಸ್ಸಿಗೆ ತಲುಪಿಸಿ ಬಿಡು. ನಿನಗೆ ಇಪ್ಪತ್ತೈದು ರೂಪಾಯಿ ಕೊಡುತ್ತೇನೆ" ಎಂದು ಹೇಳಿದ.

ಅದರಲ್ಲೊಬ್ಬ ಮುಂದೆ ಬಂದ. ಅವನಿಗೆ ಹಣವನ್ನು ಕವರನ್ನು ಕೊಟ್ಟು ಬೇಗ ಅದನ್ನು ತಲುಪಿಸುವಂತೆ ಹೇಳಿದ.

ಮುಂದಿನ ಕ್ಷಣವೇ ಬಷೀರ್ ಹೋಟೆಲಿನ ಹುಡುಗನೊಡನೆ ಬಂದ. ಆ ಹುಡುಗನ ಕೈಯ್ಯಲ್ಲಿ ಒಂದು ಪ್ಲೇಟ್ ಮೀಲ್ಸ್ ಇತ್ತು.

ಊಟ ಮುಗಿದ ಕೂಡಲೇ ಮೂವರೂ ವ್ಯಾನಿನೊಳಗೆ ಹತ್ತಿದರು.

"ಚಂದ್ರಬೋಸ್! ಈಗ ನಿಮ್ಮ ಬಟ್ಟೆಗಳನ್ನೆಲ್ಲಾ ಆನಂದರಾವ್‌ಗೆ ಕೊಟ್ಟು ಅವರ ಬಟ್ಟೆಗಳನ್ನು ನೀವು ಹಾಕಿಕೊಳ್ಳಿ" ವೆಂಕಟೇಶ್ವರ ಹೇಳಿದ.

"ಏಕೆ?" ಮುಗ್ಧತೆಯಿಂದ ಕೇಳಿದ ಚಂದ್ರಬೋಸ್.

"ನಾವು ಹೇಳಿದಂತೆ ಮಾಡಬೇಕಷ್ಟೆ!" ವೆಂಕಟೇಶ್ವರ್ ಹೇಳಿದ.

"ಹಾಗಾದರೆ ನೀವೆಲ್ಲಾ ವ್ಯಾನಿನಿಂದ ಇಳಿಯಿರಿ! ಇನ್ನೊಬ್ಬರ ಎದುರಿನಲ್ಲಿ ಬಟ್ಟೆ ಬದಲಿಸಿ ಕೊಳ್ಳುವುದೆಂದರೆ ನನಗಾಗುವುದಿಲ್ಲ" ಚಂದ್ರಬೋಸ್ ಹೇಳಿದ. ಅವರು ಹಾಗೇ ಆಗಲೆಂದು ಕೆಳಗಿಳಿದರು.

ಇದೇ ತನಗೆ ಸಿಕ್ಕಿರುವ ಕೊನೆಯ ಅವಕಾಶ, ಈಗ ತಪ್ಪಿಸಿಕೊಳ್ಳದಿದ್ದರೆ ಇನ್ನೆಂದಿಗೂ ಸಾಧ್ಯವಾಗುವುದಿಲ್ಲ.

ಆನಂದರಾವ್ ಬಟ್ಟೆಗಳನ್ನು ಬಿಚ್ಚಿದ.

"ನಿಮ್ಮ ಬಟ್ಟೆಗಳನ್ನು ಕೊಡಿಸಾರ್. ಇನ್ನೂ ಏನನ್ನೊ ಯೋಚಿಸುತ್ತಿದ್ದೀ

ರಲ್ಲಾ? ಓ! ನಿಮ್ಮ ರಾಧಳ ಬಗ್ಗೆನಾ? ಎಂದಿನಿಂದಲೋ ನನಗೆ ರಾಧಳ ಮೇಲೆ ಕಣ್ಣಿದೆ ಸಾರ್. ಇವತ್ತು ನನ್ನ ಕೋರಿಕೆ ಈಡೇರುತ್ತದೆ. ಅಂದ ಹಾಗೆ ನನಗೊಂದು ಅನುಮಾನ ಸಾರ್. ನಿಮ್ಮ ಹೆಸರು ಸಾತ್ವಿಕರಾವ್ ಅಲ್ಲವೇ? ಎಲ್ಲರೂ ಚಂದ್ರಬೋಸ್ ಅನ್ನುತ್ತಿದ್ದಾರಲ್ಲಾ?"

ಚಂದ್ರಬೋಸ್‌ಗೆ ಅವನ ಮಾತುಗಳು ಕೇಳಿಸುತ್ತಿರಲಿಲ್ಲ.

ಅವನಿಗೊಂದು ಅದ್ಭುತವಾದ ಉಪಾಯ ಹೊಳೆಯಿತು. ತನ್ನ ಜೇಬಿನಲ್ಲಿ ಸದಾ ಸಿದ್ಧವಾಗಿರುತ್ತದೆ ಕ್ಲೋರೋಫಾರಂ. ಅದರ ವಾಸನೆ ತೋರಿಸಿದರೆ ಆನಂದರಾವ್ ಎಚ್ಚರ ತಪ್ಪುತ್ತಾನೆ. ತಾನು ಅವನ ಬಟ್ಟೆಗಳನ್ನು ಹಾಕಿಕೊಂಡು ಅವನಂತೆಯೇ ನಟಿಸುತ್ತಾ ಹೊರಟುಹೋಗಿಬಿಡಬೇಕು. ತನ್ನ ಶರ್ಟನ್ನು ಬಿಚ್ಚಿ ಅವನಿಗೆ ಕೊಡುವವನಂತೆ ಮಾಡಿ ಜೇಬಿನಲ್ಲಿದ್ದ ಕ್ಲೋರೋಫಾರಂನ್ನು ತೆಗೆದು ಅವನ ಮೂಗಿಗೆ ಒತ್ತಿದ. ತಕ್ಷಣವೇ ಆನಂದರಾವ್ ಕುಸಿದು ಕುಳಿತ. ಬೇಗಬೇಗನೆ ಅವನಿಗೆ ತನ್ನ ಬಟ್ಟೆಗಳನ್ನೆಲ್ಲಾ ತೊಡಿಸಿದ ಚಂದ್ರಬೋಸ್. ನಂತರ ತನ್ನ ಹೇರ್‌ಸ್ಟೈಲನ್ನು ಆನಂದರಾವ್‌ನಂತೆ ಬಾಚಿಕೊಂಡು, ವ್ಯಾನ್ ಡೋರ್ ತೆಗೆದುಕೊಂಡು ಶಿಳ್ಳೆ ಹಾಕುತ್ತಾ ಹೊರ ಬಂದ.

"ಆ ಸೈಂಟಿಸ್ಟ್‌ನ ಡ್ರೆಸ್‌ನ ಹಾಕಿಕೊಂಡಿದ್ದೇನೆ ಗುರೂ! ಈಗ ಅವನಂತೆಯೇ ಕಾಣುತ್ತಿದ್ದೇನಲ್ಲವಾ?"

"ಸೇಮ್ ಹಾಗೆಯೇ ಇದ್ದಿ! ಇನ್ನು ಆಟೋದಲ್ಲಿ ಹೊರಟುಹೋಗು!" ವೆಂಕಟೇಶ್ವರ್ ಹೇಳಿದ.

ಸಂತೋಷದಿಂದ ಓಡಿದ ಚಂದ್ರಬೋಸ್ ಅಲ್ಲಿ ಬರುತ್ತಿದ್ದ ಆಟೋಹತ್ತಿ ಮನೆಯ ಕಡೆಗೆ ಹೊರಟ.

ಆಗತಾನೇ ಆ ಹುಡುಗರು ಲಲಿತಳಿಗೆ ಅವನ ಕಾಗದವನ್ನು ತಲುಪಿಸಿ ಆಗಿತ್ತು.

ಲಲಿತ ಪ್ರತಿದಿನದಂತೆಯೇ ಅವನ ಕೂಗು ಕೇಳಿಸುತ್ತಿದ್ದಂತೆಯೇ ಸಂತೋಷದಿಂದ ಹೊರಗೆ ಬರಲಿಲ್ಲ. ತುಂಬಾ ಅನುಮಾನದಿಂದ ಅವನೆಡೆಗೆ ನೋಡುತ್ತಾ ಬಂದಳು.

"ಲಲಿತಾ! ಅವರಿಗೆ ಟೋಪಿಹಾಕಿ ಬಂದು ಬಿಟ್ಟೆ. ಕಳ್ಳ ರಾಸ್ಕಲ್‌ಗಳು! ನನ್ನನ್ನು ಕಿಡ್ನಾಪ್ ಮಾಡಿದ ಅವರೇ ಮೋಸಹೋದರು—" ಅವಳೆಡೆಗೆ ಬರುತ್ತಾ ಹೇಳಿದ. ಲಲಿತ ಒಂದೊಂದೇ ಹೆಜ್ಜೆಯನ್ನು ಹಿಂದಕ್ಕಿಡುತ್ತಿದ್ದಳು.

"ನೀನು ಡೂಪ್ಲಿಕೇಟ್ ಅನ್ನೋ ವಿಷಯ ನನಗೆ ಗೊತ್ತು" ಸಿಟ್ಟಿನಿಂದ

ಹೇಳಿದಳು.

"ನಾನು ಡೂಪ್ಲಿಕೇಟಾ?" ಆಶ್ಚರ್ಯದಿಂದ ಕೇಳಿದ ಚಂದ್ರಬೋಸ್.

"ಹೌದು!"

ಚಂದ್ರಬೋಸ್‌ಗೆ ತಾನು ಆ ಹುಡುಗರೊಡನೆ ಕಳುಹಿಸಿದ ಕಾಗದದ ನೆನಪಾಯಿತು.

"ಹ್ಹಹ್ಹಾಹ್ಹಾ! ನಾನು ಬರೆದ ಕಾಗದದ ಬಗ್ಗೆ ಮಾತನಾಡುತ್ತಿದ್ದೀಯಾ? ಅದನ್ನು ಬರೆದ ಮೇಲೆಯೇ ಅವರಿಗೆ ಟೋಪಿಹಾಕಿ ಬಂದದ್ದು!"

"ಹಾಗಾ?"

ಅವಳ ಭುಜದ ಮೇಲೆ ಕೈ ಹಾಕಲು ಹೋದವನಿಗೆ ಬೀಸಿ ಹೊಡೆದಳು.

"ಮುಟ್ಟಿದ್ರೆ ಕಣ್ಣಲ್ಲಿ ಮೆಣಸಿನ ಪುಡಿ ಹಾಕಿಬಿಡ್ತೀನಿ ಎಚ್ಚರಿಕೆ! ದೂರ ಇರು—" ಅವಳು ಕಾಳಿಯಾಗಿದ್ದಳು.

"ಅಯ್ಯೋ! ನಾನು ಲಲಿತಾ–ಡೂಪ್ಲಿಕೇಟ್ ಅಲ್ಲ!"

"ಆ ಮಾತನ್ನು ಅವರು ಬರೆದಿದ್ದಾರೆ–ಹೀಗೆಯೇ ಹೇಳುತ್ತಾನೆಂದು!"

"ಹೋಗಲಿ ನನ್ನ ಸ್ವರವನ್ನು ಗುರುತಿಸಲಾರೆಯಾ?"

"ಹಾಗೆ ಸ್ವರ ಬದಲಾಯಿಸಿ ಇಮಿಟೇಟ್ ಮಾಡುತ್ತಾನೆಂದೂ ಬರೆದಿದ್ದಾರೆ—" ಲಲಿತ ಹೇಳಿದಳು.

"ಅಬ್ಬಾ! ಆ ಕಾಗದದ ವಿಷಯ ಮರೆತುಬಿಡು ಲಲಿತಾ. ನಾನೇ ಚಂದ್ರಬೋಸ್! ನಿನಗೆ ಯಾವ ಋಜುವಾತು ಬೇಕೆಂದರೆ ಅದನ್ನು ತೋರಿಸುತ್ತೇನೆ ಇಗೋ ಬೆನ್ನಿನ ಮೇಲೆ ಮಚ್ಚೆ ಇದೆ ನೋಡು" ಎನ್ನುತ್ತಾ ಷರ್ಟನ್ನು ಬಿಚ್ಚಲು ಹೋದ. ಲಲಿತ ಕಿಟಾರನೆ ಕಿರುಚಿದಳು.

"ಮೊದಲು ಅಂಗಿ ಹಾಕಿಕೊಳ್ಳಿ. ಬೇರೆ ಗಂಡಸರ ನಗ್ನ ಬೆನ್ನನ್ನು ನೋಡಬಾರದೆಂದು ನಮ್ಮಜ್ಜಿ ಯಾವಾಗಲೂ ಹೇಳುತ್ತಿದ್ದಳು.

"ಅಯ್ಯೋ ದೇವರೇ! ಈಗ ನನ್ನ ಗತಿಯೇನಪ್ಪಾ? ಬೇಕಾದರೆ ಸೈನ್ ಮಾಡಿ ತೋರಿಸಲಾ?"

"ರಾತ್ರಿಯಾಗುತ್ತಿದೆ. ನೀವು ಹೊರಗೆ ಹೋದರೆ ನಾನು ಬಾಗಿಲು ಹಾಕಿಕೊಳ್ಳುತ್ತೇನೆ" ಲಲಿತ ಹೇಳಿದಳು. ಮಕ್ಕಳಿಬ್ಬರೂ ಭಯದಿಂದ ನೋಡುತ್ತಿದ್ದರು.

"ಅರೇ ಪಾಪು–ನಾನು ಕಣೋ ನಿಮ್ಮಪ್ಪ" ಚಂದ್ರಬೋಸ್ ಮಕ್ಕಳ ಬಳಿಗೆ ಹೋಗುತ್ತಾ ಹೇಳಿದ.

"ಎಲ್ಲಾ ಸುಳ್ಳು. ನೀನು ಕಳ್ಳ ಅಂತ ಅಮ್ಮ ಆವಾಗಲೇ ಹೇಳಿದ್ದಳು."

"ಇಲ್ಲಪ್ಪಾ! ನಾನೇ ನೋಡಿ...ನಿಮ್ಮಪ್ಪ!"

"ಮೊನ್ನೆ ಒಂದು ಸಿನೆಮಾ ನೋಡಿದೆವು 'ಒಬ್ಬರಾಧೆ ಇಬ್ಬರು ಕೃಷ್ಣರು' ಅದರಲ್ಲೂ ಹೀಗೇ—"

"ಲಲಿತಾ! ನನ್ನನ್ನು ನಂಬೇ....ಪ್ಲೀಜ್!"

"ಮೊದಲು ಹೊರಗೆ ಹೋಗ್ರೀ—ನಂಗೆ ತುಂಬಾ ಭಯವಾಗ್ತಾಯಿದೆ."

"ಲಲಿತಾ! ಇದು ಅನ್ಯಾಯ. ಇಷ್ಟು ವಿಧದಲ್ಲಿ ಹೇಳಿದರೂ ಇನ್ನೂ ನನ್ನನ್ನು ಹೊರಗೆ ಹೋಗೆನ್ನುತ್ತಿದ್ದಿ."

"ಹೀಗೆ ದೀನನಾಗಿ ಕೇಳಿಕೊಂಡು ನಿನ್ನನ್ನು ಮೋಡಿ ಮಾಡುತ್ತಾನೆಂದೂ ಆ ಕಾಗದದಲ್ಲಿ ಬರೆದಿದ್ದಾರೆ" ಅವಳು ದೃಢವಾಗಿ ಹೇಳಿದಳು.

"ಅಂದರೆ ನಾನಿನ್ನು ಬದುಕೆಲ್ಲಾ ಹೊರಗಿದ್ದು ನಕ್ಷತ್ರಗಳನ್ನು ಎಣಿಸುತ್ತಿರಬೇಕಾ?" ಸಿಟ್ಟಿನಿಂದ ಕೇಳಿದ

"ಸದ್ಯಕ್ಕೆ ಅಷ್ಟು ಮಾಡ್ತಿರಿ. ಆ ಪೋಲೀಸ್ ಕಾನ್ಸ್‌ಟೇಬಲ್‌ಗೆ ರಿಪೋರ್ಟ್ ಮಾಡಿದ್ದೇನೆ. ನೀವು ನೀವೇನಾ ಎಂದು ಶೋಧಿಸಿ ಹೇಳುತ್ತಾನೆ. ಅವನ ರಿಪೋರ್ಟ್ ಬಂದು ನೀವೇ ಎಂದು ತೀರ್ಮಾನವಾದ ಮೇಲೆ ನಿಮ್ಮನ್ನು ಒಳಗೆ ಬಿಡುತ್ತೇನೆ—"

"ನಿಜ ಹೇಳ್ತಿದೀನಿ ಲಲಿತಾ. ನಾನು ನಾನೇ."

"ಅಬ್ಬಾ! ಮೊದಲು ಹೊರಗೆ ಹೋಗ್ರೀ" ಎನ್ನುತ್ತಾ ಅವನನ್ನು ಹೊರಗೆ ತಳ್ಳಿ ಬಾಗಿಲು ಮುಚ್ಚಿಬಿಟ್ಟಳು.

ಚಂದ್ರಬೋಸ್ ಆತುರಪಟ್ಟು ಬರೆದ ಆ ಕಾಗದವನ್ನು ಬೈದುಕೊಳ್ಳುತ್ತಾ, ಚಳಿಯಲ್ಲಿ ನಡುಗುತ್ತಾ ಕುಳಿತಿದ್ದ. ಕಾನ್ಸ್‌ಟೇಬಲ್ ಬಂದು ಅವನ ಮುಖಕ್ಕೆ ಟಾರ್ಚ್ ಬೆಳಕು ಬೀರಿದ.

"ಒಬ್ಬನು ಇದ್ದ ಹಾಗೇ ಮತ್ತೊಬ್ಬನು ಇರುವುದು ನಿಜಕ್ಕೂ ತಮಾಷೆಯಾಗಿರುತ್ತೇರಿ. ನೀವು ತ್ರಿಮೂರ್ತಿ ಸಿನೆಮಾ ನೋಡಿದ್ದೀರಾ?"

"ನೋಡಿಲ್ಲ"

"ಹಾಗಾದರೆ ನೋಡಿ ಅದನ್ನ. ಇಷ್ಟಕ್ಕೂ ನೀವು ಚಂದ್ರಬೋಸೇನಾ?"

"ಹೌದೆಂದೇ ಹೇಳ್ತಿದೀನಲ್ಲಾರೀ."

"ಹಾಗಾದರೆ ನಿಮ್ಮ ಹೆಡ್‌ಮಿಸ್ಟ್ರೆಸ್‌ರವರ ನಾಯಿಯ ಹೆಸರೇನೆಂದು ಹೇಳುತ್ತೀರಾ?"

"ಙ್ಞಾ! ಅವರ ನಾಯಿ ಹೆಸರು ನಂಗೆ ಹೇಗೆ ಗೊತ್ತಾಗುತ್ತೇರಿ? ಎಂಥಾ ಪ್ರಶ್ನೆ ಕೇಳ್ತೀರಿ?"

ಇಲ್ಲಿ ಹೀಗೆಯೇ ಇವರಿಬ್ಬರ ನಡುವೆ ಚರ್ಚೆ ನಡೆಯುತ್ತಿದ್ದಾಗ ಅಲ್ಲಿ-ಆನಂದರಾವ್ ಎಚ್ಚರಗೊಂಡ ಕೂಡಲೇ ಕಿಟಾರನೆ ಕಿರುಚಿದ. ಅವನ ಎದುರು ನಿಂತಿದ್ದ ಟ್ರಿಬ್ಬಲ್ ಜೀರೋ, ಬಷೀರ್ ಬೆಚ್ಚಿಬಿದ್ದರು.

"ಹಾಗೇಕೆ ಕಿರುಚಿದ್ದು!" ಟ್ರಿಬ್ಬಲ್ ಜೀರೋ ಗುಡುಗಿದ.

"ಅವನು ನನ್ನ ಮನೆ ಹಾಳು ಮಾಡಿದಾನೆ"

"ಯಾರು?"

"ಅವನೇ! ಆ ಸೈಂಟಿಸ್ಟ್—"

"ಏನು ಮಾಡಿದ?" ನಿರಾಸಕ್ತಿಯಿಂದ ಕೇಳಿದ.

"ನನಗೆ ಎಚ್ಚರ ತಪ್ಪುವಂತೆ ವಾಸನೆ ತೋರಿಸಿ ಓಡಿಹೋಗಿದ್ದಾನೆ—"

ಎಲ್ಲರೂ ಘೊಳ್ಳೆಂದು ನಕ್ಕುಬಿಟ್ಟರು.

"ಅಂದರೆ ನೀನು ಆನಂದರಾವ್ ಎಂದು ನಂಬು ಅಂತೀಯ?"

"ನಂಬೋದೇನ್ರಿ! ನಾನೇ ನಿಜವಾಗಿಯೂ ಆನಂದರಾವ್. ಅವನು ನಮ್ಮನ್ನೆಲ್ಲಾ ಮೋಸಮಾಡಿ ಓಡಿಹೋಗಿದಾನೆ" ಆತುರದಿಂದ ಹೇಳಿದ ಆನಂದ ರಾವ್, ಮತ್ತೆ ಎಲ್ಲರೂ ಜೋರಾಗಿ ನಕ್ಕರು.

"ನೋಡು ಸೈಂಟಿಸ್ಟು! ನಿನ್ನ ಈ ಹುಚ್ಚುಚ್ಚು ವೇಷಗಳೆಲ್ಲಾ ನಮ್ಮ ಹತ್ರ ನಡೆಯೋಲ್ಲ, ಬಾಯ್ಮುಚ್ಚಿಕೊಂಡು ಬಿದ್ದಿರು. ಇನ್ನು ಸ್ವಲ್ಪ ಹೊತ್ತಿನಲ್ಲಿ ನಮ್ಮ ವ್ಯಾನು ಹೆಲಿಕಾಪ್ಟರ್ ಬಳಿಗೆ ಸೇರಿಕೊಳ್ಳುತ್ತದೆ. ಆನಂತರ ನೀನು ಅರಬ್ ದೇಶಕ್ಕೆ, ನಾವು ಹಿಂದಕ್ಕೆ" ಸಂತೋಷದಿಂದ ಹೇಳಿದ ವೆಂಕಟೇಶ್ವರ್.

"ನೀನು ಕ್ಷೇಮವಾಗಿ ವಾಪಸ್ಸು ಬರಬೇಕೆಂದರೆ ನಮ್ಮ ಬಾಸನ್ನು ಮತ್ತೆ ಗಂಡಸನ್ನಾಗಿ ಮಾಡಬೇಕು. ಇಲ್ಲದಿದ್ದರೆ ಶಾಶ್ವತವಾಗಿ ಅಲ್ಲೇ ಇದ್ದು ಬಿಡುತ್ತಿ" ಟ್ರಿಬ್ಬಲ್ ಜೀರೋ ಹೇಳಿದ.

"ಹೌದು ಸಾರ್! ಅಮ್ಮನವರು ಕೊಟ್ಟ ಫಾರ್ಮುಲಾ ಯೌವ್ವನದ ಔಷಧಿಯೆಂದು ತಿಳಿದು ನಮ್ಮ ಬಾಸ್ ನುಂಗಿಬಿಟ್ಟರು. ಈಗ ನೋಡಿದರೆ ಅದು ಸೆಕ್ಸನ್ನೇ ಬದಲಾಯಿಸಿದೆ. ಆದಕ್ಕೆ ಈಗ ನಮ್ಮ ಬಾಸ್ ಮತ್ತೆ ಗಂಡಸಾಗುವ ಫಾರ್ಮುಲಾ ಹೇಳಬೇಕು—"

"ನಾನು ಚಂದ್ರಬೋಸ್ ಅಲ್ಲಪ್ಪಾ! ನಿಮ್ಮೆಲ್ಲರ ಮೇಲೂ ಆಣೆ ಕಣ್ರಪ್ಪಾ! ನಿಜವಾಗಿಯೂ-ಪ್ರಮಾಣಪೂರ್ವಕವಾಗಿ ಹೇಳುತ್ತಿದ್ದೇನೆ. ನಾನು ಆನಂದರಾವ್! ಅವನು ನಮಗೆಲ್ಲರಿಗೂ ಮಂಕುಬೂದಿ ಎರಚಿ ಓಡಿಹೋಗಿದ್ದಾನೆ."

ಎಲ್ಲರೂ ಮತ್ತೆ ಜೋರಾಗಿ ನಕ್ಕುಬಿಟ್ಟರು. ಆನಂದರಾವ್‌ಗೆ ಏನು

ಮಾಡಬೇಕೆಂದೇ ತೋಚಲಿಲ್ಲ. ಆ ಮೇಡಮ್ ವೆಂಕಟೇಶ್ವರ್ ಮೇಲೆ ಮೋಹವುಂಟಾಗಿ ತುಂಬಾ ದಾರುಣವಾದ ಪರಿಸ್ಥಿತಿಗೆ ಸಿಕ್ಕಿಕೊಂಡ. ಜಯಲಕ್ಷ್ಮಿ ಹೇಳುತ್ತಲೇ ಇದ್ದಳು–'ಹಾಗೆ ಕಂಡಕಂಡ ಹೆಂಗಸರ ಹಿಂದೆ ಸುತ್ತುತ್ತಿದ್ದರೆ ಯಾವತ್ತೋ ಒಂದು ದಿನ ಸರಿಯಾದ ಶಾಸ್ತಿ ನಡೆಯುತ್ತದೆಂದು.' ಆ ಶಾಸ್ತಿ ಈಗ ನಡೆಯುತ್ತಿದೆ.

"ಜಯಲಕ್ಷ್ಮಿ! ರಂಭೆಯಂತಹ ನಿನ್ನನ್ನು ಹೆಂಡತಿಯಾಗಿ ಮಾಡಿಕೊಂಡೂ ಇಂತಹ ಕೆಲಸಕ್ಕೆ ಕೈಹಾಕಿದ್ದರಿಂದ ಸರಿಯಾದ ಶಿಕ್ಷೆಯೇ ಆಗಿದೆ" ಎನ್ನುತ್ತಾ ಎಲ್ಲರಿಗೂ ಕೇಳುವಂತೆ ಕೆನ್ನೆಗೆ ಬಡೆದುಕೊಂಡ

ಅದನ್ನು ಕಂಡು ಎಲ್ಲರೂ ನಕ್ಕರು.

ವ್ಯಾನ್ ದೊಡ್ಡ ಅಲುಗಾಟದಿಂದ ನಿಂತಿತು. ಎಲ್ಲರೂ ವ್ಯಾನಿನಿಂದ ಇಳಿದರು. ಎತ್ತ ನೋಡಿದರೂ ಮರುಭೂಮಿ. ಎದುರಿನಲ್ಲಿ ಮಾತ್ರ ಒಂದು ಬಂಗಲೆಯಿತ್ತು. ಮಹಡಿಯ ಮೇಲೆ ಷೇಕ್ ಮುಗುಳ್ನಗುತ್ತಾ ನಿಂತಿದ್ದ.

"ಕರೆತನ್ನಿ–ಕರೆತನ್ನಿ" ಸಂತೋಷದಿಂದ ಹೇಳಿದ ಷೇಕ್; ಆನಂದರಾವ್‌ನನ್ನು ನೋಡಿ. ಷೇಕ್‌ನ ಅತ್ತಿತ್ತ ನಿಂತಿದ್ದ ಆ ಇಬ್ಬರು ಸುಂದರಿಯರನ್ನು ಕಂಡ ಆನಂದರಾವ್ ತಲೆ ಕೆಟ್ಟಿತು.

"ಆಹಾ! ಒಂದು ಸಲ ಈ ಹುಡುಗಿಯರೊಡನೆ ಸುಖಿಸಿದರೆ!" ಎಂದು ಲೊಟ್ಟೆ ಹೊಡೆದ.

ಆ ಬಂಗಲೆಯ ಮುಂದಿದ್ದ ವ್ಯಕ್ತಿ ವಿನಯದಿಂದ ನಮಸ್ಕರಿಸಿ ಗೇಟು ತೆರೆದ. ಎಲ್ಲರೂ ಒಳಗೆ ನಡೆದರು. ಒಳಗೆ ನಡುವಿನ ಸುತ್ತಲೂ ಪಿಸ್ತೂಲನ್ನು ಕಟ್ಟಿಕೊಂಡಿದ್ದ ಗಾರ್ಡ್ ಬಾಗಿಲು ತೆರೆದ. ಎಲ್ಲರೂ ಮೆಟ್ಟಿಲುಹತ್ತಿ ಮಹಡಿಯ ಮೇಲಕ್ಕೆ ಹೋದರು. ಷೇಕ್ ನಾಲ್ವರು ಸುಂದರಿಯರ ನಡುವೆ ಕುಳಿತಿದ್ದ. ಎಲ್ಲರೂ ಅವನ ಶುಶ್ರೂಷೆ ಮಾಡುತ್ತಿದ್ದರು. ಒಬ್ಬಳು ಷೇಕ್‌ಗೆ ವ್ಹಿಸ್ಕಿ ಕುಡಿಸುತ್ತಿದ್ದಳು. ಮತ್ತೊಬ್ಬಳು ಅವನ ಕಾಲನ್ನು ಒತ್ತುತ್ತಿದ್ದಳು. ಇನ್ನೊಬ್ಬಳು ಅವನ ನಡುವನ್ನು ಹಿಸುಕುತ್ತಿದ್ದರೆ, ನಾಲ್ಕನೆಯವಳು ಅವನನ್ನು ತಬ್ಬಿ ಮಲಗಿದ್ದಳು.

ಆ ದೃಶ್ಯವನ್ನು ಕಂಡ ಆನಂದರಾವ್‌ಗೆ ಸಂಪೂರ್ಣವಾಗಿ ಬುದ್ಧಿ ಹೋಯಿತು.

"ಬೇಗ ಆ ಔಷಧಿಯ ಸ್ಯಾಂಪಲ್ ಕೊಡಯ್ಯಾ ಸೈಂಟಿಸ್ಟ್!" ಸಂತೋಷದಿಂದಲೂ ಸಂಭ್ರಮದಿಂದಲೂ ಷೇಕ್ ಕೇಳಿದ.

ಆನಂದರಾವ್‌ನ ಹೃದಯ ಜಲ್ಲೆಂದಿತು.

"ಸ್ಯಾಂಪಲ್ಲಾ? ಯಾವ ಸ್ಯಾಂಪಲ್?" ತಡಬಡಿಸಿದ.

"ಅದೇನಯ್ಯಾ! ಯೌವ್ವನದ ಔಷಧಿ! ಅದಕ್ಕೆ ತಾನೇ ನಿನ್ನನ್ನು ನಮ್ಮ ದೇಶಕ್ಕೆ ಕರೆದೊಯ್ಯುತ್ತಿರುವುದು. ಅದರ ಸ್ಯಾಂಪಲ್ ಸ್ವಲ್ಪ ಕೊಡು. ನೋಡ್ತಿದ್ದಿಯಲ್ಲಾ ನನಗೆಷ್ಟು ಜನ ಹೆಂಡತಿಯರಿದ್ದಾರೆಂದು! ಇವರೆಲ್ಲಾ ಇಂಡಿಯಾದ ಹೆಂಡತಿಯರು! ನಮ್ಮ ದೇಶದಲ್ಲಿ ಇನ್ನೂ ಅಷ್ಟು ಜನರಿದ್ದಾರೆ. ಇಷ್ಟು ಜನರನ್ನು ತೃಪ್ತಿಪಡಿಸುವುದೆಂದರೆ ತಮಾಷೆಯೇ? ಅದಕ್ಕೇ ಎಷ್ಟು ಖರ್ಚಾದರೂ ಸರಿ ಯೌವ್ವನದ ಔಷಧಿ–ಪ್ರಪಂಚದಲ್ಲಿ ಎಲ್ಲೇ ಇದ್ದರೂ ಸಂಪಾದಿಸಬೇಕೆಂದು ತಿರುಗುತ್ತಿರುವಾಗ ನೀನೇ ಸಿಕ್ಕಿದಿ," ಆಪ್ಯಾಯತೆಯಿಂದ ಹೇಳಿದ ಷೇಕ್. ಆನಂದರಾವ್‌ಗೆ ಬಾಯಿ ಮಾತೇ ಹೊರಡಲಿಲ್ಲ.

"ಬೇಗ ಕೊಡಯ್ಯಾ! ಏನು ಯೋಚಿಸ್ತಿದ್ದಿ? ನಿನ್ನ ಫಾರ್ಮುಲಾವನ್ನು ನಾನು ಕೊಂಡು ನಮ್ಮ ದೇಶದಲ್ಲಿ ಫ್ಯಾಕ್ಟರಿ ಇಟ್ಟು ಪ್ರಪಂಚಕ್ಕೆಲ್ಲಾ ಸಪ್ಲೈ ಮಾಡ್ತೀನಿ. ಯೋಚಿಸ್ಬೇಡ ನೀನೂ ಪಾರ್ಟನರ್ ಆಗುವಿಯಂತೆ!"

"ನಾನು ಸೈಂಟಿಸ್ಟ್ ಅಲ್ಲ ಸಾರ್! ನನ್ನ ಹೆಸರು ಆನಂದರಾವ್. ನನಗೆ ಯಾವ ಔಷಧಿಯ ಬಗ್ಗೆಯೂ ಗೊತ್ತಿಲ್ಲ" ಭಯದಿಂದ ಹೇಳಿದ ಆನಂದರಾವ್.

ಷೇಕ್‌ನಕ್ಕು ಹೇಳಿದ. "ಹಾಗೇಕೆ ಭಯಪಡ್ತೀಯಪ್ಪಾ! "ಏಯ್ ಆತನಿಗೆ ಬೇಕಾದಷ್ಟು ಹಣಕೊಡಿ" ಎಂದು ತನ್ನ ಸೇವಕರಿಗೆ ಅಪ್ಪಣೆ ಮಾಡಿದ. ಮರುಕ್ಷಣವೇ ನೂರು ರೂ. ನೋಟುಗಳ ಕೆಲವು ಕಟ್ಟುಗಳನ್ನು ತಂದು ಆನಂದರಾವ್ ಮುಂದೆ ಹಾಕಿದರು.

"ಅದೆಲ್ಲಾ ನಿನಗೇ! ತೆಗೆದುಕೋ!" ಷೇಕ್ ಹೇಳಿದ. ತ್ರಿಬ್ಬಲ್ ಜೀರೋ, ಬಷೀರ್, ವೆಂಕಟೇಶ್ವರ್‌ಗಳಿಗೆ ಕಣ್ಣು ಸುತ್ತಿದಂತಾಯಿತು. ಆ ಹಣವನ್ನು ಕಂಡು ಬೇಗ ಬೇಗನೆ ಆ ಹಣವನ್ನು ತೆಗೆದುಕೊಳ್ಳಲು ಮೂವರೂ ಬಗ್ಗಿದರು. ನೌಕರನೊಬ್ಬ ಕೂಡಲೇ ಕತ್ತಿಯನ್ನು ಝಳಪಿಸುತ್ತಾ ಎಚ್ಚರಿಸಿದ.

"ಮರ್ಯಾದೆಯಿಂದ ಹಿಂದಕ್ಕೆ ಹೋಗಿ. ಅದು ಸೈಂಟಿಸ್ಟಿಗೆ–ನಿಮಗಲ್ಲ" ಮೂವರೂ ಹಿಂದಕ್ಕೆ ಸರಿದರು.

"ಇವಳ್ಯಾರು?" ವೆಂಕಟೇಶ್ವರ್ ಕಡೆಗೆ ನೋಡಿ ಕೇಳಿದ ಷೇಕ್.

ಆ ಪ್ರಶ್ನೆಯನ್ನು ಕೇಳಿದ ಕೂಡಲೇ ಮೂವರೂ ಬೆಚ್ಚಿ ಬಿದ್ದರು.

"ಹೆಣ್ಣಲ್ಲ ಇದು! ಗಂಡೇ! ನಮ್ಮ ಬಾಸ್. ಈ ಸೈಂಟಿಸ್ಟ್‌ನ ಕೆಲಸ," ಷೇಕ್ ಸಂತೋಷದಿಂದ ಚಪ್ಪಾಳೆ ತಟ್ಟಿದ.

"ವಂಡರ್‌ಫುಲ್ ಸೈಂಟಿಸ್ಟ್. ಇಂತಹ ಸೈಂಟಿಸ್ಟ್‌ಗಳೇ ಬೇಕು ನಮಗೆ! ಇವನು ನಮ್ಮ ಪಕ್ಕದಲ್ಲಿದ್ದರೆ ನಮಗಿನ್ನು ಹೆಣ್ಣುಗಳ ಕೊರತೆಯೇ ಇರುವು

ದಿಲ್ಲ," ಸಂತೋಷದಿಂದ ಹೇಳಿದ.

"ಏಯ್! ಇವಳನ್ನು ಕೂಡಾ ಅಂತಃಪುರದೊಳಗೆ ತಳ್ಳಿಬಿಡಿ," ಎಂದ. ಇಬ್ಬರು ಹುಡುಗಿಯರು ಮುಂದೆ ಬಂದು ವೆಂಕಟೇಶ್ವರನನ್ನು ಒಳಗೆ ಎಳೆದೊಯ್ದರು. ವೆಂಕಟೇಶ್ವರ್ ಕಿರುಚುತ್ತಿದ್ದ ಶಬ್ದ ಸ್ವಲ್ಪ ಹೊತ್ತಿನ ನಂತರ ಮೌನವಾಯಿತು. ಆ ದೃಶ್ಯವನ್ನು ಕಂಡು ಎಲ್ಲರೂ ಬೆವೆತರು.

"ಬೇಗ ಬೇಗ ಸೈಂಟಿಸ್ಟ್! ಇನ್ನೂ ತಡವೇಕೆ?" ಕೋಪದಿಂದ ಕೇಳಿದ ಷೇಕ್. ಆನಂದರಾವ್‌ಗೆ ನಡುಕ ಪ್ರಾರಂಭವಾಯಿತು.

"ಅ...ಅದಕ್ಕೆ ತುಂಬಾ ಕೆಮಿಕಲ್ಸ್ ಬೇಕೂರೀ! ನಮ್ಮ ಮನೆಯ ಹತ್ತಿರವಾದರೆ ಅವೆಲ್ಲಾ ಸಿಗುತ್ತೆ."

ಷೇಕ್ ಜೋರಾಗಿ ನಕ್ಕುಬಿಟ್ಟ.

"ಹುಚ್ಚಾ! ಈಗಲೇ ನಿನಗಾಗಿ ಲಕ್ಷಾಂತರ ಖರ್ಚುಮಾಡಿದ್ದೇನೆ. ನಿನಗೆ ಬೇಕಾಗಿರುವ ಲ್ಯಾಬೋರೇಟರಿ ಒಂದು ಅಂಡರ್‌ಗ್ರೌಂಡ್‌ನಲ್ಲಿದೆ. ಹೋಗಿ ಬೇಗ ಔಷಧಿಯನ್ನು ತಯಾರಿಸಿಕೊಂಡು ಬಾ! ಸರಿಯಾಗಿ ಅರ್ಧಗಂಟೆ ಸಮಯ ಕೊಡ್ತೀನಿ."

ಆನಂದರಾವ್‌ನನ್ನು ಕೆಲಸದವರು ಅಂಡರ್‌ಗ್ರೌಂಡಿಗೆ ಕರೆದೊಯ್ದರು. "ನೀವಿಬ್ಬರೂ ವಿಶ್ರಾಂತಿ ತೆಗೆದುಕೊಳ್ಳಿ, ಬೇಕಾದಾಗ ಕರೆಯುತ್ತೇನೆ" ಎಂದು ಹೇಳಿದ ಷೇಕ್. ಅವರಿಬ್ಬರನ್ನು ಒಂದು ಎ. ಸಿ. ರೂಮಿನಲ್ಲಿ ಹಾಕಿ ಬೀಗ ಹಾಕಿದರು. ಲ್ಯಾಬಿನಲ್ಲಿರುವ ಕೆಮಿಕಲ್ಸ್ ನೋಡುತ್ತಿದ್ದರೆ ಆನಂದರಾವ್‌ಗೆ ಎಚ್ಚರ ತಪ್ಪಿದಂತಾಯಿತು. ತಾನು ಮೊದಲ ಸಲ ನೋಡುತ್ತಿದ್ದಾನೆ ಇವನ್ನೆಲ್ಲಾ.

ಅರ್ಧಗಂಟೆ ಹೇಗೆ ಕಳೆಯಿತೆಂದೇ ಅವನಿಗೆ ತಿಳಿಯಲಿಲ್ಲ. ಷೇಕ್ ಬಾಗಿಲು ತೆರೆದುಕೊಂಡು ಒಳಗೆ ಬಂದ.

"ಏನು ಸೈಂಟಿಸ್ಟ್! ಆಯಿತಾ?" ತೀಕ್ಷ್ಣವಾಗಿ ನೋಡುತ್ತಾ ಕೇಳಿದ.

"ನಂಗೆಗೊತ್ತಿಲ್ಲ ಸಾರ್! ದಯವಿಟ್ಟು ನನ್ನನ್ನು ಬಿಟ್ಟುಬಿಡಿ. ನಮ್ಮ ಮನೆಗೆ ಹೋಗಿ ಬಿಡುತ್ತೇನೆ," ಕೈಜೋಡಿಸಿ ಕೇಳಿಕೊಂಡ.

"ನಿನಗೆ ಇನ್ನೂ ಅರ್ಧಗಂಟೆ ಸಮಯ ಕೊಡುತ್ತೇನೆ. ಅಷ್ಟರಲ್ಲಿ ಔಷಧಿ ತಯಾರಿಸಿ ಕೊಡದಿದ್ದರೆ ನಿನ್ನ ಶವ ಇಲ್ಲೇ ಈ ಲ್ಯಾಬಿನಲ್ಲೇ ಉರುಳುತ್ತದೆ. ಎಚ್ಚರಿಕೆ!" ಎಂದು ಹೊರಟು ಹೋದ.

ಆನಂದರಾವ್‌ಗೆ ಕೈಗಳೂ, ಕಾಲುಗಳೂ ನಡುಗಲು ಪ್ರಾರಂಭವಾಯಿತು. ಬೇಗ ಬೇಗನೆ ವಿವಿಧ ರಸಾಯನಿಕಗಳನ್ನು ಬೆರೆಸಿ ಒಂದು ಮಿಶ್ರಣವನ್ನು

ತಯಾರಿಸಿದ. ಕೆಲವೇ ಕ್ಷಣಗಳಲ್ಲಿ ಅದು ಕಪ್ಪಗಾಗಿ ಹೊಗೆ ಉಗುಳಲು ಪ್ರಾರಂಭವಾಯಿತು. ಅದರಲ್ಲಿ ನೀರು ಹೊಯ್ದನಂತರ ಅದು ಮತ್ತೆ ಹಸುರು ಬಣ್ಣವಾಗಿ ಬದಲಾಯಿತು. ನಂತರ ಆ ಹೊಗೆ ಲ್ಯಾಬಿನಲ್ಲೆಲ್ಲಾ ಹರಡಿತು. ಆನಂದರಾವ್‌ಗೆ ಉಸಿರಾಡಲೂ ಆಗಲಿಲ್ಲ.

ಆಗಲೇ ಬಾಗಿಲು ತೆರೆದುಕೊಂಡು ಒಳಗೆ ಬಂದ ಷೇಕ್. ಆ ಹೊಗೆಯನ್ನು ಕಂಡು ಆಶ್ಚರ್ಯಪಟ್ಟ. "ಅಂದರೆ ಆ ಔಷಧಿಯನ್ನು ತಯಾರಿಸಿದೆಯಾ?" ಸಂತೋಷದಿಂದ ಕೇಳಿದ. ಆನಂದರಾವ್ ಭಯದಿಂದ ತಲೆ ಆಡಿಸಿದ.

ಷೇಕ್ ಆ ಮಿಶ್ರಣವನ್ನು ಬಗ್ಗಿ ನೋಡಿದ. ಹೊಗೆಯ ನಡುವೆಯಿದ್ದ ಆ ಹಸಿರು ಔಷಧಿಯನ್ನು ಕಂಡು ಸಂಭ್ರಮಪಟ್ಟ.

ಒಂದು ಚಮಚದಲ್ಲಿ ಅದನ್ನು ತೆಗೆದುಕೊಂಡು ತನ್ನ ಪಕ್ಕದಲ್ಲೇ ನಿಂತಿದ್ದ ಕೆಲಸದವನಿಗೆ ಕೊಟ್ಟ.

"ಮೊದಲು ನೀನು ತಿನ್ನು" ಆಜ್ಞಾಪಿಸುತ್ತ ಹೇಳಿದ. ಕೆಲಸದವನು ಭಯದಿಂದಲೇ ಅದನ್ನು ತೆಗೆದುಕೊಂಡ. ಅದರಿಂದ ಮತ್ತಷ್ಟು ಹೊಗೆ ಬರುತ್ತಿತ್ತು "ತಿನ್ನು" ಗದರಿಸಿದ ಷೇಕ್.

ಭಯದಿಂದ ಕೆಲಸದವನು ಅದನ್ನು ಬಾಯಿಯಲ್ಲಿ ಹಾಕಿಕೊಂಡು ನುಂಗಿದ. ಅಷ್ಟೇ! ಹಾಗೆಯೇ ಕುಸಿದು ಬಿದ್ದ.

ಷೇಕ್ ಆಶ್ಚರ್ಯದಿಂದ ನೋಡತೊಡಗಿದ, ಕೆಲವು ಕ್ಷಣಗಳ ನಂತರ ಎದ್ದು ನಿಂತವನೇ ಆ ವ್ಯಕ್ತಿ ಹುಚ್ಚನಂತೆ ನಗಲು ಪ್ರಾರಂಭಿಸಿದ.

"ಹಾಗೇಕೆ ಮಾಡುತ್ತಿದ್ದಾನೆ?" ಷೇಕ್ ಕೇಳಿದ.

"ಔಷಧಿಯ ರಿಯಾಕ್ಷನ್ ಸಾರ್–" ನಡುಗುತ್ತಾ ಹೇಳಿದ. "ಅದು ಕೆಲಸ ಮಾಡೋಕೆ ಇನ್ನೂ ಸ್ವಲ್ಪ ಹೊತ್ತು ಬೇಕಾಗುತ್ತೆ."

ಷೇಕ್‌ಗೆ ನಂಬಿಕೆ ಬರಲಿಲ್ಲ.

"ಸರಿ! ನಾಳೆ ಬೆಳಗ್ಗೆ ನೋಡೋಣ" ಎಂದು ಮತ್ತೊಬ್ಬ ಕೆಲಸದವನನ್ನು ಕರೆದು "ಇವತ್ತು ರಾತ್ರೀಗೆ ಇವರ ಬಾಸ್ ಇದಾಳಲ್ಲಾ–ಮೇಡಮ್ ವೆಂಕಟೇಶ್ವರ್–ಅವಳನ್ನು ನನ್ನ ಕೋಣೆಗೆ ಕರೆದುಕೊಂಡು ಬಾ," ಎಂದು ಹೇಳಿ ಹೊರಟು ಹೋದ. ಆನಂದರಾವ್‌ನನ್ನು ಒಂದು ಕೋಣೆಯಲ್ಲಿ ಹಾಕಿ ಬೀಗ ಹಾಕಿದರು.

ಆನಂದರಾವ್‌ಗೆ ಅರ್ಥವಾಗಿ ಹೋಯಿತು.

ತಾನು ಈ ರಾತ್ರಿಯೇ ಹೇಗಾದರೂ ಮಾಡಿ ತಪ್ಪಿಸಿಕೊಂಡು ಹೋಗದಿದ್ದರೆ ಷೇಕ್ ತನ್ನ ಪ್ರಾಣ ತೆಗೆಯುವುದು ಗ್ಯಾರಂಟಿ! ಸರಿಯಾಗಿ ರಾತ್ರಿ

ಹನ್ನೆರಡು ಗಂಟೆಗೆ ಮಂಚದಿಂದ ಮೇಲೆದ್ದು ಕುಳಿತ. ಆಗ ಒಂದು ಕಿರು ಚಾಟದ ಧ್ವನಿ ಕೇಳಿಸಿತು. ಅದನ್ನು ಗುರುತಿಸಿದ ಆನಂದರಾವ್. ಅದು ವೆಂಕಟೇಶ್ವರ್‌ದು. ಬಹುಶಃ ಬಲವಂತದಿಂದ ಷೇಕ್‌ನ ಕೋಣೆಗೆ ಅವಳ(ನ)ನ್ನು ತಳ್ಳಿರುತ್ತಾರೆ. ಆ ಕೂಗಿಗೆ ಬೆಚ್ಚಿ ಎದ್ದು ಕುಳಿತವರಲ್ಲಿ ಬಷೀರ್, ತ್ರಿಬ್ಬಲ್ ಜೀರೋ ಕೂಡಾ ಇದ್ದರು.

"ಪರಿಸ್ಥಿತಿ ತುಂಬಾ ಭಯಂಕರವಾಗಿದೆ ಬಾಸ್!" ತ್ರಿಬ್ಬಲ್ ಜೀರೋ ಹೇಳಿದ.

"ನಮ್ಮ ಬಾಸ್ ವೆಂಕಟೇಶ್ವರನನ್ನು ರೇಪ್ ಮಾಡ್ತಿರೋ ಹಾಗಿದೆ ಆ ಷೇಕ್."

"ಹೌದು! ಕೂಡಲೇ ನಾವಿಲ್ಲಿಂದ ತಪ್ಪಿಸಿಕೊಂಡು ಓಡಿಹೋಗದಿದ್ದರೆ ನಮ್ಮನ್ನು ಕೂಡಾ ಸಾಯಿಸಿಬಿಡುತ್ತಾರೆ–"

"ನಮ್ಮನ್ನೇಕೆ ಸಾಯಿಸುತ್ತಾರೆ?"

"ನಾವು ಕರೆತಂದಿರುವುದು ಚಂದ್ರಬೋಸ್ ಅಲ್ಲವೆಂದು ನನಗೀಗ ಅನುಮಾನ ಬಂದಿದೆ."

"ಆ್ಞ! ಅಲ್ಲವಾ?"

"ಅಲ್ಲ"

"ಹೇಗೆ ಗೊತ್ತಾಯಿತು ನಿನಗೆ?"

"ಚೆನ್ನಾಗಿ ಗಮನಿಸಿ ನೋಡಿದೆ ಇಷ್ಟು ಹೊತ್ತು. ಅವನಿಗೆ ತಲೆಯ ಮುಂಬಾಗ ಕೂದಲು ಬೆಳ್ಳಗಾಗಿತ್ತು."

ತ್ರಿಬ್ಬಲ್ ಜೀರೋ ಬೆಚ್ಚಿ ಬಿದ್ದ.

"ಮತ್ತೆ ಪೆಟ್ಟು ತಿಂದೆವು ಬಾಸ್! ಈಗೇನು ಮಾಡೋದು?"

"ಮೊದಲು ಇಲ್ಲಿಂದ ತಪ್ಪಿಸಿಕೊಳ್ಳಬೇಕು–ನಡಿ–ಬಾತ್‌ರೂಮಿನಿಂದ ಎಲ್ಲಾದರೂ ಹೊರಗೆ ದಾರಿತೋರುತ್ತದೇನೋ ನೋಡೋಣ!" ಎಂದ.

ಮೊದಲು ವೆಂಕಟೇಶ್ವರ್ ಆ ಕೋಣೆಯಿಂದ ಹೊರಬಿದ್ದ. ಷೇಕ್ ಪ್ರಣಯವನ್ನು ಪ್ರಾರಂಭಿಸುತ್ತಿದ್ದಂತೆಯೇ ತನಗೂ ಆಸಕ್ತಿಯಿದೆಯೆಂಬಂತೆ ನಟಿಸಿ ಷೇಕ್‌ನ ಮೇಲೆ ಕಂಬಳಿ ಹೊದ್ದಿಸಿ, ಹಗ್ಗಗಳಿಂದ ಅವನನ್ನು ಕಟ್ಟಿ

ಹಾಕಿ ಬಾಗಿಲು ತೆರೆದುಕೊಂಡು ಹೊರಬಂದ. ಬಚ್ಚಿಟ್ಟುಕೊಳ್ಳಲು ಪಕ್ಕದ ಕೋಣೆಯ ಬಾಗಿಲಿನ ಚಿಲಕ ತೆಗೆಯುತ್ತಿದ್ದಂತೆಯೇ ಆನಂದರಾವ್ ಬುಲೆಟ್‌ನಂತೆ ಹೊರಗೋಡಿ ಬಂದ. ಅವನ ಹಿಂದೆಯೇ ಬಾತ್‌ರೂಂ ವೆಂಟಿಲೇಟರ್‌ನಿಂದ ಧುಮುಕಿದ ಬಷೀರ್, ತ್ರಿಬ್ಬಲ್ ಜೀರೋ ಕೂಡಾ ಓಡಲು ಪ್ರಾರಂಭಿಸಿದರು. ವೆಂಕಟೇಶ್ವರ್ ಅವರನ್ನು ಹಿಂಬಾಲಿಸಿದ!

ಗೇಟಿನ ಬಳಿಯಿದ್ದ ಕಾವಲುಗಾರ ಎರಡು ನಿಮಿಷಗಳ ಕಾಲ ಅವರೊಡನೆ ಫೈಟಿಂಗ್ ಮಾಡಿದ ನಂತರ ಕೆಳಗೆಬಿದ್ದು ಅಲಾರಂ ಬೆಲ್ ಬಾರಿಸಿದ.

ಅಷ್ಟೇ! ನಾಲ್ವರು ಕೆಲಸದವರು ಬಿಚ್ಚುಗತ್ತಿಗಳನ್ನು, ಪಿಸ್ತೂಲುಗಳನ್ನು ತೆಗೆದುಕೊಂಡು ಹೊರಬಂದರು. ಅವರ ಹಿಂದೆಯೇ ಷೇಕ್ ಓಡೋಡಿಬಂದ....

"ಹಿಡಿಯಿರಿ ಅವರನ್ನು—ಸಾಯಿಸಿ ಬಿಸಾಕಿ ಬದ್ಮಾಷ್‌ಗಳನ್ನು" ಕಿರುಚಿದ ಜೋರಾಗಿ.

ಆಗಲೇ ತಾವು ಬಂದಿದ್ದ ವ್ಯಾನಿನಲ್ಲಿ ಹತ್ತಿದ್ದರು ಆ ನಾಲ್ವರು. ವ್ಯಾನ್ ಸ್ಟಾರ್ಟ್ ಆದುದನ್ನು ಕಂಡು ಅವರನ್ನು ಫಾಲೋ ಮಾಡಲು ಮತ್ತೊಂದು ಜೀಪಿನಲ್ಲಿ ಅವರನ್ನು ಹಿಂಬಾಲಿಸಿದರು

ಷೇಕ್ ಮತ್ತೊಂದು ಕಾರಿನಲ್ಲಿ ದೊಡ್ಡ ಗನ್ ತೆಗೆದುಕೊಂಡು ಹೊರಟ

ಶಚೀದೇವಿ ಯೋಚನಾಕ್ರಾಂತಳಾಗಿ ಕುಳಿತಿದ್ದಾಳೆ ತನ್ನ ಕೋಣೆಯಲ್ಲಿ. ಬಾರಿನಲ್ಲಿ ಬ್ರೇಕ್‌ಡ್ಯಾನ್ಸ್‌ನ ಮ್ಯೂಜಿಕ್ ಭಯಂಕರವಾಗಿ ಕೇಳುತ್ತಿದೆ. ಇನ್ನು ಕೆಲವೇ ಕ್ಷಣಗಳಲ್ಲಿ 'ಮೇಡ್‌ಫಾರ್ ಈಚ್ ಅದರ್' ಸ್ಪರ್ಧೆಗಳು ಪ್ರಾರಂಭವಾಗಲಿದೆ. ಆ ಸ್ಪರ್ಧೆಗೆ ರಾಧಾ– ಸಾತ್ವಿಕರಾವ್ ಬರದಂತೆ ಮಾಡಿದ ತನ್ನ ಪ್ರಯತ್ನ, ತನ್ನ ಕಷ್ಟಗಳು ವಿಫಲವಾದವು. ಈಗ ಅವರನ್ನು ತಡೆಯಲು ತನ್ನ ಬಳಿ ಯಾವ ಉಪಾಯವೂ ಇಲ್ಲ.

ಏನು ಮಾಡಲೂ ತೋಚುತ್ತಿಲ್ಲ. ಸೋಲಿನಿಂದ ಆಗಬಹುದಾದ ಅವಮಾನವನ್ನು ಹೇಗೆ ಸಹಿಸಬೇಕೋ ಅರ್ಥವಾಗುತ್ತಿಲ್ಲ. ದೇವಲೋಕದಲ್ಲಿ ಎಲ್ಲರ ಮುಂದೆಯೂ ತಾನಿನ್ನು ತಲೆ ಎತ್ತಿಕೊಂಡು ತಿರುಗಲು ಆಗುವುದಿಲ್ಲ. ಯೋಚಿಸುತ್ತಿದ್ದಂತೆಯೇ ಆ ಪರಿಸ್ಥಿತಿ ಮತ್ತಷ್ಟು ಭಯಂಕರವಾಗಿ ಕಾಣುತ್ತಿತ್ತು.

ಸಾತ್ವಿಕರಾವ್–ರಾಧಾರ ಜೋಡಿಯನ್ನು ಸ್ಪರ್ಧೆಗೆ ಹೋಗದಿರುವಂತೆ ತಾನೇನಾದರೂ ಉಪಾಯ ಮಾಡಿದರೂ ಸರಸ್ವತಿ ಅವರನ್ನು ಗಮನಿಸುತ್ತಲೇ ಇರುತ್ತಾಳಾದ್ದರಿಂದ ತನ್ನ ಆಟ ನಡೆಯುವುದಿಲ್ಲ.

ಕೋಣೆಯಿಂದ ಹೊರಬಂದು ನಿಂತಳು ಅವಳು. ಸರಿಯಾಗಿ ಅದೇ ಸಮಯಕ್ಕೆ ರಸ್ತೆಯಲ್ಲಿ ವೇಗವಾಗಿ ಹೋಗುತ್ತಿದ್ದ ವ್ಯಾನಿನಲ್ಲಿ ಆನಂದರಾವ್ ಇರುವುದನ್ನು ಕಂಡಳು. ಹಿಂದೆಯೇ ಮತ್ತೊಂದು ಕಾರಿನಲ್ಲಿ ಕತ್ತಿಗಳೊಡನೆ ಹಿಂಬಾಲಿಸುತ್ತಿದ್ದ ಷೇಕ್‌ನ ಗ್ಯಾಂಗು ಕಂಡಿತು ತಕ್ಷಣವೇ ಅವಳಲ್ಲಿ ಒಂದು ಆಸೆಹುಟ್ಟಿತು.

ಇವರನ್ನೆಲ್ಲಾ 'ಮೇಡ್ ಫಾರ್ ಈಚ್ ಅದರ್' ಸ್ಪರ್ಧೆಗೆ ಕಳುಹಿಸಿದರೆ ಅಲ್ಲಿ, ಸಾತ್ವಿಕರಾವ್—ರಾಧಾ ಜೋಡಿಯಲ್ಲಿ ಕನ್‌ಫ್ಯೂಷನ್ ಸೃಷ್ಟಿಸ ಬಹುದೇನೋ!

ತನ್ನ ಉಪಾಯ ಸಫಲವಾದರೂ, ವಿಫಲವಾದರೂ ಪ್ರಯತ್ನಿಸು ವುದರಲ್ಲಿ ತಪ್ಪೇನೂ ಇಲ್ಲವಲ್ಲಾ. ಇದು ಕೊನೆಯ ಪ್ರಯತ್ನ. ಒಮ್ಮೆಗೆ ಚಿಮ್ಮಿದ ಉತ್ಸಾಹದೊಡನೆ ಕೋಣೆಯಿಂದ ಹೊರಬಿದ್ದಳು.

ಮರುಕ್ಷಣವೇ ವ್ಯಾನಿನ ಪಕ್ಕಕ್ಕೆ ಬಂದಿದ್ದಳು ಅವಳು.

ಅದೇ ಸಮಯಕ್ಕೆ ಸರಿಯಾಗಿ ವ್ಯಾನನ್ನು ಪಕ್ಕದ ಬೀದಿಗೆ ತಿರುಗಿಸಲು ಹೋದ ಆನಂದರಾವ್. ಆ ಬೀದಿಗೆ ಹೋದರೆ ಅವರಿಂದ ತಪ್ಪಿಸಿಕೊಳ್ಳಬಹುದು. ಹಾಗಾಗಿ ಪಕ್ಕದ ಮತ್ತೊಂದು ರಸ್ತೆಯ ಮೇಲಿದ್ದ 'ರಸ್ತೆರಿಪೇರಿ' ಎಂಬ ಬೋರ್ಡನ್ನು ತಂದು ಆ ಬೀದಿಗೆ ಅಡ್ಡವಾಗಿಟ್ಟಳು. ಹಾಗಾಗಿ ಆನಂದರಾವ್ ತನ್ನ ವ್ಯಾನನ್ನು ತಿರುಗಿಸಲೇಬೇಕಾಯಿತು.

ಆದರೆ ಹಿಂಬಾಲಿಸುತ್ತಿದ್ದ ವ್ಯಾನು ತೀರ ಸಮೀಪಕ್ಕೆ ಬಂದಿತ್ತು. ಯಾವ ಕ್ಷಣದಲ್ಲಾದರೂ ಅದರಿಂದ ಹೊರಬರಲಿರುವ ಬುಲೆಟ್ ವ್ಯಾನಿಗೆ ತಗುಲ ಬಹುದು. ವ್ಯಾನ್ ಹತ್ತಿರದ ಸರ್ಕಲನ್ನು ದಾಟುತ್ತಿದ್ದಂತೆಯೇ ಶಚೀದೇವಿ ಟ್ರಾಫಿಕ್ ಲೈಟನ್ನು ಕೆಂಪಾಗಿ ಪರಿವರ್ತಿಸಿಬಿಟ್ಟಳು. ಅವನ್ನೆಲ್ಲಾ ತಪ್ಪಿಸಿ ಕೊಂಡು ಬರುವುದರೊಳಗಾಗಿ ವ್ಯಾನ್ ಹತ್ತಿರ ಬಂದು ಬಿಟ್ಟಿತು.

ಆದರೆ ಅಲ್ಲೇ ಹಠಾತ್ತನೆ ಇಂಜಿನ್ ನಿಂತುಬಿಟ್ಟಿತು. ಆನಂದರಾವ್‌ಗೆ ಪೆಟ್ರೋಲ್ ಮುಗಿದುಹೋಗಿದೆಯೆಂದು ಅರಿವಾಯಿತು. ಕೂಡಲೇ ಕೆಳಗೆ ಹಾರಿ ಓಡಲುಪ್ರಾರಂಭಿಸಿದ. ಬಷೀರ್, ವೆಂಕಟೇಶ್ವರ್, ತ್ರಿಬ್ಬಲ್ ಜೀರೋ ಕೂಡಾ ಅವನ ಹಿಂದೆಯೇ ಓಡಲು ಪ್ರಾರಂಭಿಸಿದರು. ಅವರನ್ನೆಲ್ಲಾ ಹೇಗಾ ದರೂ ರಕ್ಷಿಸದಿದ್ದರೆ ಅವರನ್ನು ಸಾಯಿಸಿಬಿಡುತ್ತಾರೆಂದು ಶಚೀದೇವಿಗೆ ಅರ್ಥ

ವಾಯಿತು. ಮರುಕ್ಷಣವೇ ಕಾರಿನ ಸ್ಟೀರಿಂಗ್ ಕಿತ್ತುಬಂದು ಆ ಗ್ಯಾಂಗ್ ಲೀಡರ್‌ನ ಕೈಗೆ ಬಂತು.

ಹಾಗಾಗಿ ಕಾರು ರಸ್ತೆಯ ಪಕ್ಕದಲ್ಲಿದ್ದ ಹಣ್ಣಿನ ಅಂಗಡಿಯೊಳಗೆ ನುಗ್ಗಿ ನಿಂತು ಬಿಟ್ಟಿತು. ತುಂಬಾ ಕಷ್ಟದಿಂದ ಬಾಗಿಲನ್ನು ತೆರೆದುಕೊಂಡು ಅವರೆಲ್ಲಾ ಆನಂದರಾವ್ ಗ್ಯಾಂಗ್‌ಕಡೆಗೆ ಓಡಿದರು. ಹಣ್ಣಿನ ವ್ಯಾಪಾರಿಗಳೆಲ್ಲಾ ಒಂದಾಗಿ, ಹಣ್ಣು ಕೊಯ್ಯುವ ಚಾಕುವನ್ನು ಹಿಡಿದು ಅವರ ಹಿಂದೆ ಬಿದ್ದರು.

ಆ ದೃಶ್ಯವನ್ನು ಗಮನಿಸಿದ ಷೇಕ್ ಗಾಬರಿಯಾಗಿ, ಅವರನ್ನು ಸಮಾಧಾನಗೊಳಿಸಲು ತನ್ನ ಕಾರಿನಿಂದಲೇ ಹಲವು ನೋಟುಗಳನ್ನು ಗಾಳಿಯಲ್ಲಿ ಎಸೆದ. ಅದನ್ನು ಕಂಡ ಜನ ಹುಚ್ಚರಾದಂತೆ ಆ ಹಣವನ್ನು ಆರಿಸಿಕೊಳ್ಳ ತೊಡಗಿದರು. ಹಾಗಾಗಿ ರಸ್ತೆಯ ಮೇಲೆ ಸಂಚರಿಸುತ್ತಿದ್ದ ವಾಹನಗಳು ಎಲ್ಲೆಂದರಲ್ಲಿ ನಿಂತವು. ವಿಷಯವನ್ನು ತಿಳಿದ ಪೋಲೀಸರು ಹಣವನ್ನು ಹಾಗೆ ಎಸೆದದ್ದಕ್ಕೆ ಷೇಕ್‌ನನ್ನು ಹಿಡಿಯಲು ಜೀಪಿನಲ್ಲಿ ಹಿಂಬಾಲಿಸಿದರು.

ಶಚೀದೇವಿಗೆ ಈ ದೃಶ್ಯ ತುಂಬಾ ಖುಷಿ ಕೊಟ್ಟಿತು.

ಆನಂದರಾವ್ ಆಯಾಸದಿಂದ ಓಡುತ್ತಿದ್ದ.

ದೂರದಲ್ಲಿ ಬಣ್ಣಬಣ್ಣದ ಲೈಟುಗಳ ಬೆಳಕಿನಲ್ಲಿ,ಬಣ್ಣಬಣ್ಣದ ಸೀರೆಗಳನ್ನುಟ್ಟು ಕೊಂಡು ಬರುತ್ತಿದ್ದ ಯುವತಿಯರನ್ನು ಕಂಡ ಆನಂದರಾವ್ ಹಾಗೆಯೇ ನಿಂತುಬಿಟ್ಟ. ಆ ಗುಂಪಿನಲ್ಲಿ ತಾನು ಸೇರಿಕೊಂಡುಬಿಟ್ಟರೆ ಯಾರ ಕೈಗೂ ಸಿಗುವ ಸಾಧ್ಯತೆಗಳಿಲ್ಲ. ಅದೇ ವೇಗದಿಂದ ಗೇಟಿನೊಳಗೆ ನುಗ್ಗಿ ಪ್ರಾಂಗಣ ದೊಳಗೆ ಓಡಿದ. ಗೇಟ್‌ಬಳಿ ಎಂಟ್ರಿಫೀ ವಸೂಲಿ ಮಾಡುತ್ತಿದ್ದ ವಾಲಂಟಿಯರ್‌ಗಳು ಅವನ ವೇಗಕ್ಕೆ ಕೆಳಗೆ ಬಿದ್ದು ಮತ್ತೆ ಮೇಲೆದ್ದವರೇ 'ರೀ ಮಿಸ್ಟರ್ ಟಿಕೆಟ್ ತಗೋಬೇಕು!' ಎಂದು ಕಿರುಚಿದರು. ಅವರು ಹಾಗೇ ಕಿರುಚುತ್ತಿರುವಾಗಲೇ ಬಷೀರ್, ತ್ರಿಬ್ಬಲ್ ಜೀರೋ, ವೆಂಕಟೇಶ್ವರ್ ಕೂಡಾ ನುಗ್ಗಿದ್ದರು. ಅದರ ಹಿಂದೆಯೇ ಷೇಕ್‌ನ ಕಾರು ನುಗ್ಗಿತು.

"ಏಯ್! ಕಾರನ್ನು ಹೊರಗೆ ಪಾರ್ಕ್‌ಮಾಡಬೇಕು! ನಿಲ್ಸು" ಎಂದು ಹೇಳುತ್ತಿದ್ದಂತೆಯೇ ಷೇಕ್ ತನ್ನ ಪಕ್ಕದಲ್ಲಿರಿಸಿಕೊಂಡಿದ್ದ ಹಣದ ಕಂತೆಯನ್ನು ಅವರೆಡೆಗೆ ಬಿಸುಟು, ಮತ್ತಷ್ಟು ವೇಗವಾಗಿ ಮುಂದಕ್ಕೆ ಹೋದ. ಅದರ ಹಿಂದೆಯೇ ಪೋಲೀಸ್ ಜೀಪ್ ನುಗ್ಗಿತು.

ಆಗ ಒಂದು ಗಂಟೆಯಾಗಿತ್ತು 'ಮೇಡ್ ಫಾರ್ ಈಚ್ ಅದರ್ ಸ್ಪರ್ಧೆ' ಪ್ರಾರಂಭವಾಗಿ. ವಿಶಾಲವಾದ ಆ ಹೂವಿನ ತೋಟದಲ್ಲಿ ಕೆಲವು ನೂರಾರು ಜೋಡಿಗಳು ನಯನಾನಂದಕರವಾಗಿ ವಿಹರಿಸುತ್ತಿದ್ದರು. ಸ್ಪರ್ಧೆಯಲ್ಲಿ ಗೆಲ್ಲುವ ಜೋಡಿಗೆ ವಿಮಾನದಲ್ಲಿ ಪ್ರಪಂಚ ಯಾತ್ರೆ, ಒಂದು ಟಯೋಟಾ ಕಾರು, ಒಂದು ಲಕ್ಷ ರೂ. ಕ್ಯಾಷ್ ಬಹುಮಾನವಾಗಿ ಸಿಗಲಿದೆ. ಈಸಲ ಪ್ರಖ್ಯಾತ ಬಟ್ಟೆ ಕಂಪನಿಯವರು, ಸಿಗರೇಟ್ ಕಂಪನಿಯವರು ಮತ್ತು ಲಿಕ್ಕರ್ ಕಂಪನಿಯವರು ಈ ಕಾರ್ಯಕ್ರಮಕ್ಕೆ ಪ್ರಾಯೋಜಕರಾದ್ದರಿಂದ ತುಂಬಾ ಸಂಭ್ರಮದಿಂದ ನಡೆಯುತ್ತಿತ್ತು. ಬಿಟ್ಟಿ ಸಿಗರೇಟ್ ಸೇದುತ್ತಾ, ಕೂಲ್ ಡ್ರಿಂಕ್ಸ್ ಕುಡಿಯುತ್ತಾ ಎಲ್ಲಾ ಜೋಡಿಗಳೂ ಗೆಲುವಿನ ಕನಸನ್ನು ಕಾಣುತ್ತಿದ್ದರು. ಜಡ್ಜ್‌ಗಳು ತಮ್ಮ ಐಡೆಂಟಿಟಿ ತಿಳಿಯದಂತೆ ಅವರಲ್ಲಿ ಬೆರೆತು ಎಲ್ಲರನ್ನೂ ಗಮನಿಸುತ್ತಾ ಮೆಚ್ಚಿಗೆಯಾದ ಜೋಡಿಗಳಿಗೆ ಮಾರ್ಕ್ಸ್ ಹಾಕುತ್ತಿದ್ದರು ರಹಸ್ಯವಾಗಿ.

"ಇನ್ನೂ ಸ್ವಲ್ಪ ಹತ್ತಿರ ಬಂದು ನಿಂತುಕೋ! ಇಲ್ಲದಿದ್ದರೆ ಹೆಚ್ಚು ಅಂಕ ಸಿಗುವುದಿಲ್ಲ" ಚಂದ್ರಬೋಸ್ ತನ್ನ ಹೆಂಡತಿ ಲಲಿತಳಿಗೆ ಹೇಳುತ್ತಿದ್ದ. ಲಲಿತ ಸಿಟ್ಟಿನಿಂದ ಅವನನ್ನು ತಳ್ಳಿದಳು.

"ಕೊನೆ ಸಲ ಹೇಳ್ತಿದೀನಿ–ಭುಜದ ಮೇಲೆ ಕೈಹಾಕಿದಿರೆಂದರೆ ಮರ್ಯಾದೆ ಕಳೆದುಬಿಡ್ತೀನಿ" ಹಠ ಹಿಡಿದು ಹೇಳಿದಳು.

"ಇನ್ನೂ ನನ್ನನ್ನು ನಂಬದಿದ್ದರೆ ಹೇಗೆ? ನಾನೇ ಚಂದ್ರಬೋಸ್! ನಿಜ!" ದೀನನಾಗಿ ಬೇಡಿದ ಚಂದ್ರಬೋಸ್.

"ನಾನು ನಂಬುವುದಿಲ್ಲಾರೀ! ಮುಳ್ಳು ಎಲೆಯ ಮೇಲೆ ಬಿದ್ದರೂ, ಎಲೆ ಮುಳ್ಳಿನ ಮೇಲೆ ಬಿದ್ದರೂ ಎಲೆಗೇ ತೊಂದರೆಯೆಂದು ನಮ್ಮಜ್ಜಿ ಹೇಳ್ತಿರ್ತಾರೆ–"

"ನಮ್ಮ ಮಧ್ಯೆ ಇನ್ನೂ ಎಲೆ–ಮುಳ್ಳು ನ್ಯಾಯ ಏಕೆ? ಮದುವೆಯಾಗಿ ಮಕ್ಕಳು ಕೂಡಾ ಆಗಿದಾವೆ–ಮರೆತುಬಿಟ್ಟೆಯಾ?" ಬೇಸರದಿಂದ ಹೇಳಿದ.

"ಆದರೂ 'ಮುಳ್ಳು ಮುಳ್ಳೆ! ಎಲೆ ಎಲೆಯೇ' ಎಂದು ನಮ್ಮಜ್ಜಿ ಹೇಳ್ತಿರ್ತಾರೆ–"ಚಂದ್ರಬೋಸ್‌ಗೆ ಮೈಯ್ಯೆಲ್ಲಾ ಉರಿಯಿತು.

"ಹಾಗಾದರೆ ಬೆಳಗ್ಗೆ ನನ್ನ ತೊಡೆಯ ಮೇಲಿನ ಮಚ್ಚೆಯನ್ನು ತೋರಿಸೆಂದು ಏಕೆ ಕೇಳಿದಿ?"

"ಏನೋ ಈ ಸ್ಪರ್ಧೆಯ ಮೇಲಿನ ಆಸೆಗೆ–ನಿನ್ನನ್ನು ನಮ್ಮವರ ಬದಲು ಕರೆತರೋಣ ಎಂದಷ್ಟೆ! ಈಗ ನಮ್ಮವರಿಗೆ ದ್ರೋಹ ಮಾಡ್ತಿದೀನೇನೋ

ಅನ್ನಿಸ್ತಿದೆ." "ಅಯ್ಯೋ! ನಿನಗೆ ಹೇಗೆ ಹೇಳಬೇಕೋ ನನಗರ್ಥವಾಗ್ತಿಲ್ಲ ಲಲಿತಾ!" ತಲೆಯ ಕೂದಲನ್ನು ಕಿತ್ತುಕೊಳ್ಳುತ್ತಾ ಹೇಳಿದ ಚಂದ್ರಬೋಸ್.

"ನಿನ್ನ ಹೇಗೆ ನಂಬಬೇಕೋ ನಂಗೂ ಅರ್ಥ ಆಗ್ತಾಯಿಲ್ಲ–" ಲಲಿತ ಹೇಳಿದಳು.

"ಇನ್ನೊಂದ ಸಲ ನಂಬಿಕೆ ಬಗ್ಗೆ ಮಾತಾಡಿದ್ರೆ ಹಲ್ಲುದುರಿಸಿ ಬಿಡ್ತೀನಿ," ಕೋಪದಿಂದ ಹೇಳಿದ.

"ಏನು? ಹಲ್ಲುದುರಿಸ್ತೀರಾ? ಒಬ್ಬ ಹೆಂಗ್ಸಿಗೆ ಹಾಗೆ ಹೇಳೋಕೆ ನಿಮ್ಗೆ ನಾಚ್ಕೆ ಆಗೋಲ್ವಾ?" ರೋಷದಿಂದ ಹೇಳಿದಳು.

ಅವಳು ಹಾಗೆ ಕಿರುಚಿದ ಕೂಡಲೇ ಸುತ್ತಮುತ್ತಲಿದ್ದವರೆಲ್ಲಾ ಒಮ್ಮೆಗೇ ಅವರ ಸುತ್ತಲೂ ಗುಂಪುಗೂಡಿದರು. ಅದನ್ನು ಕಂಡ ಚಂದ್ರಬೋಸ್‌ನ ಮುಖ ನಾಚಿಕೆಯಿಂದ ಕೆಂಪಾಯಿತು.

"ಬಾಯ್ಮುಚ್ಚು ಊರ್ಗೆಲ್ಲಾ ಕೇಳೋ ಹಾಗೆ ಕಿರುಚುತ್ತೀಯಲ್ಲಾ ನಿಮ್ಮ-ಮ್ಮನ ಬಾಯಿ ಬಂದಿದೆ ಸಿಂಗೂನೂ–"ರೊಚ್ಚಿಗೆದ್ದು ಹೇಳಿದ.

"ಏನು? ನಮ್ಮಮ್ಮನ ಬಾಯಿ ಜೋರಾ? ನಿಮ್ಮಮ್ಮನ ಬಾಯಿಗಿಂತ ಜೋರೇನಲ್ಲಾ ಬಿಡಿ ನಮ್ಮಮ್ಮನ ಬಾಯಿ."

"ಅವಕ್ಕೇ ಪಾಪ–ನಿಮ್ಮಪ್ಪ ದೇಶಾಂತರ ಹೋಗಿದ್ದು"—

"ನಿಮ್ಮಮ್ಮನ ಬಾಯಿಗೆ ಹೆದರೀನೇ ನಿಮ್ಮಪ್ಪ ಹಾರ್ಟ್‌ಫೈಲ್ ಆಗಿ—"

"ಮೊದಲು ನಿಮ್ಮ ವಂಶಾನೇ ರಾಕ್ಷಸೀವಂಶ! ಅದಕ್ಕೆ ನಿಮ್ಮತಾತ ನಾಟಕಗಳಲ್ಲಿ ರಾವಣಾಸುರನ ವೇಷ ಹಾಕ್ತಿದ್ದು!"

"ಹಾಕಿದರೂ ನಿಮ್ಮಣ್ಣನ ರೀತಿ ಜನರ ತಲೆ ಕೆಡಿಸ್ಲಿಲ್ಲ ಬಿಡು!"

"ನಮ್ಮಣ್ಣನ ಆಕ್ಟಿಂಗ್‌ನಿಂದ ಯಾರಿಗೂ ತಲೆಕೆಟ್ಟಿಲ್ಲ ಬಿಡಿ."

"ಹಾಗಾ! ದಿವಾನೂ ಕೆಲವು ಲಕ್ಷ ಜನ ಟೀವೀಲಿ ನಿಮ್ಮಣ್ಣನ ಮುಸುಡಿ ನೋಡೀ ನೋಡಿ ಹುಚ್ಚರಾಗಿದ್ದಾರಂತೆ!"

"ಅವನ ಆ್ಯಕ್ಟಿಂಗ್ ಹೊಗಳಿ ಎಷ್ಟೊಂದು ಜನ ಕಾಗದ ಬರೆದಿದಾರೆ ಗೊತ್ತಾ?"

"ಅವೆಲ್ಲಾ ಹುಚ್ಚಾಸ್ಪತ್ರೆಯಿಂದ ಬಿಡು."

ಬರಬರುತ್ತಾ ಅವರ ಸಂಭಾಷಣೆ ಒಳ್ಳೆ ರಸವತ್ತಾಗಿ ಬದಲಾಗುತ್ತಿದ್ದಂತೆ ಜನರ ಗುಂಪು ಮತ್ತಷ್ಟು ಹೆಚ್ಚಾಯಿತು. ಅದನ್ನು ಕಂಡು ಜಡ್ಜ್‌ಗಳು ಕೂಡಾ ಏನೋ ನಡೆಯುತ್ತಿದೆಯೆಂದು ನೋಡಲು ಬಂದರು. ಕೆಲವು ನಿಮಿಷಗಳ ನಂತರ ಅವರು ಅಂಕಗಳನ್ನು ಹಾಕಿಕೊಂಡು ಹೊರಟು ಹೋದರು.

"ಅನವಶ್ಯಕವಾಗಿ ಒಳ್ಳೇ ಛಾನ್ಸ್ ಕಳೆದುಕೊಂಡು ಬಿಟ್ರಿ" ಒಬ್ಬಾತ ಹೇಳಿದ ಚಂದ್ರಬೋಸ್‌ನನ್ನು ಕಂಡು ಅನುಕಂಪದಿಂದ.

"ಜಡ್ಜ್‌ಗಳು ಇಂತಹವನ್ನೇ ಗಮನಿಸಿ ಆ ಜೋಡಿಯನ್ನು ಅನರ್ಹರನ್ನಾಗಿ ಮಾಡುತ್ತಾರೆ. ಮೇಡ್ ಫಾರ್ ಈಚ್ ಅದರ್ ಅಂದರೆ ಒಬ್ಬರಿಗಾಗಿ ಒಬ್ಬರು ಹುಟ್ಟಿದಂತೆ, ಬದುಕುತ್ತಿದ್ದಂತೆ ಕಾಣಿಸಬೇಕೇ ವಿನಹ ಹೀಗೆ ಫೈಟಿಂಗ್‌ಗಳು, ಬೈಗಳು, ಶಾಪಗಳು ಹಾಕಿಕೊಂಡರೆ ಹೇಗೆ?" ಎಂದ ಆತ.

"ಛೀ! ನಿನ್ನ ಹತ್ತಿರ ಮಾತಾಡೋದು ನಂದೇ ತಪ್ಪು" ಕರ್ಚೀಫಿನಿಂದ ಕಣ್ಣೀರೊರೆಸಿಕೊಳ್ಳುತ್ತಾ ಹೇಳಿದಳು.

"ನಿನ್ನಂಥ ತಲೆ ಕೆಟ್ಟ ಹೆಣ್ಣನ್ನ ಮದುವೆ ಆದ್ನಲ್ಲಾ ನಂಗೆ ಬುದ್ಧಿಯಿಲ್ಲ ಅಷ್ಟೇ" ಅವನು ಗೊಣಗಿದ.

ಹಠಾತ್ತನೆ ಹೇಳಿದಳು ಲಲಿತ: "ನೀನು ನನ್ನ ಮದುವೆ ಯಾವಾಗ ಆದಿ? ಇನ್ನೊಂದು ಸಲ ನೀನು ನನ್ನ ಹೆಂಡ್ತಿ ಅಂದ್ರೆ ಮರ್ಯಾದೆ ಇರೋಲ್ಲ." ಚಂದ್ರಬೋಸ್ ಮತ್ತೊಮ್ಮೆ ತಲೆಗೂದಲನ್ನು ಕಿತ್ತುಕೊಂಡು "ಛ್ಛ..." ಅಂದುಕೊಂಡು ದೂರದಲ್ಲಿದ್ದ ಒಂದು ಕುರ್ಚಿಯ ಮೇಲೆ ಕುಳಿತ.

ಸರಸ್ವತಿ-ಬ್ರಹ್ಮರು ಆತುರದಿಂದ ನೋಡುತ್ತಿದ್ದಾರೆ–ದೂರದಲ್ಲಿ ನಿಂತು ಕೂಲ್‌ಡ್ರಿಂಕ್ಸ್ ಕುಡಿಯುತ್ತಿದ್ದ ರಾಧಾ-ಸಾತ್ವಿಕರಾವ್ ಕಡೆಗೆ. 'ಅವರಿಬ್ಬರದೇ ಅಲ್ಲ, ಅಲ್ಲಿದ್ದವರೆಲ್ಲರ ದೃಷ್ಟಿಯೂ ಅವರಿಬ್ಬರ ಮೇಲೆಯೇ ಇತ್ತು. ಅವರಿಬ್ಬರೇ ಮೇಡ್ ಫಾರ್ ಈಚ್ ಅದರ್ ಸ್ಪರ್ಧೆಯಲ್ಲಿ ಗೆಲ್ಲುತ್ತಾರೆಂದು ಎಲ್ಲರಿಗೂ ಅನ್ನಿಸುತ್ತಿದೆ. ಅವರಿಬ್ಬರ ನಡುವೆಯಿದ್ದ ಪ್ರೇಮ, ಸಲಿಗೆ, ಹತ್ತಿರತನ ಎಲ್ಲಾ ಸ್ಪಷ್ಟವಾಗಿ ಅವರ ಗೆಲುವನ್ನು ಸೂಚಿಸುತ್ತಿದೆ.

"ನಾನೀಗಲೇ ಹೋಗಿ ಇನ್ನೊಂದು ಡ್ರೆಸ್ಸನ್ನು ಹಾಕಿಕೊಂಡು ಬರ್ತೀನಿ ರಾಧಾ!" ಸಾತ್ವಿಕರಾವ್ ಹೇಳಿದ.

ರಾಧಾ ಮನೋಹರವಾಗಿ ನಕ್ಕಳು. "ಈ ಸ್ಪರ್ಧೆಯಲ್ಲಿ ಹೇಗಾದರೂ ಗೆಲ್ಲಬೇಕೆಂದು ತಾನೇ ನಿಮ್ಮ ಗುರಿ?" ಅವಳು ಕೇಳಿದಳು.

"ಹೌದು ರಾಧಾ! ಈ ಮಿಡಲ್‌ಕ್ಲಾಸ್ ಲೈಫ್‌ನಿಂದ ಸಾಕಷ್ಟು ಸುಸ್ತಾಗಿದ್ದೀವಿ. ಈ ಸ್ಪರ್ಧೆಯಲ್ಲಿ ಗೆದ್ದರೆ–" ಆಸೆಯಿಂದ ಹೇಳಿದ ಅವನು.

ರಾಧಾ ಮತ್ತೆ ನಕ್ಕಳು

"ಇಲ್ಲಿಗೆ ಬಂದವರೆಲ್ಲಾ ನಮ್ಮಂತೆಯೇ ಆಸೆಗಳನ್ನಿರಿಸಿಕೊಂಡು ಬಂದಿರುತ್ತಾರಲ್ಲವಾ–"

"ನಿಜ! ಈ ಸ್ವಲ್ಪ ಹೊತ್ತಾದರೂ ಊಹಾ ಪ್ರಪಂಚದಲ್ಲಿ ತೇಲಾಡೋಣ," ಎನ್ನುತ್ತಾ ಮೇಕಪ್‌ರೂಮ್ ಕಡೆಗೆ ನಡೆದ.

ಆನಂದರಾವ್ ಆಯಾಸದಿಂದ ಓಡಿಬಂದ. ತನಗೆ ಸಮೀಪದಲ್ಲಿಯೇ ಒಂದು ಸುಂದರವಾದ ಹೂವಿನ ಛಾವಣಿ ಕೆಳಗೆ ಅಜಂತಾ ಸುಂದರಿಯಂತೆ ನಿಂತು ಕೂಲ್‌ಡ್ರಿಂಕ್ಸ್ ಕುಡಿಯುತ್ತಿದ್ದ ಲಲಿತ ಕಂಡಳು. ಲಲಿತಳನ್ನು ನೋಡಿ ರಾಧಾ ಅಂದುಕೊಂಡ. ತನ್ನನ್ನು ಹಿಂಬಾಲಿಸುತ್ತಿರುವ ಗ್ಯಾಂಗಿನಿಂದ ತಪ್ಪಿಸಿಕೊಳ್ಳಬೇಕೆಂದರೆ ತಾನು ಮತ್ತೆ ಸಾತ್ವಿಕರಾವ್‌ನಂತೆ ನಟಿಸಿ ರಾಧಾಳ ಪಕ್ಕದಲ್ಲಿ ಕುಳಿತುಕೊಳ್ಳಬೇಕು. ಅದೊಂದೇ ಉಳಿದ ದಾರಿಯೆನ್ನಿಸಿತು ಅವನಿಗೆ.

ಕೂಡಲೇ ಓಡುವುದನ್ನು ನಿಲ್ಲಿಸಿ ಗಂಭೀರವಾಗಿ ನಡೆಯುತ್ತಾ ಲಲಿತಳಬಳಿಗೆ ಬಂದು ಅವಳಿಗೆದುರಾಗಿ ಕುರ್ಚಿಯಲ್ಲಿ ಕುಳಿತು ಕಿರುನಗೆ ತೂರಿದ ಆನಂದರಾವ್. ಅವನ ಮಣ್ಣು ತುಂಬಿದ ಡ್ರೆಸ್ಸನ್ನು, ನೀಟಾಗಿರದ ಅವತಾರವನ್ನು ನೋಡಿ ಲಲಿತಳಿಗೆ ಆಶ್ಚರ್ಯವಾಯಿತು.

"ಅಷ್ಟರಲ್ಲೇ ಏನಾಯ್ತು? ಎಲ್ಲಾದರೂ ಬಿದ್ದೆಯಾ?" ಕುತೂಹಲದಿಂದ ಕೇಳಿದಳು

ಆನಂದರಾವ್ ಅವಳ ಮಾತಿನಿಂದ ಆಶ್ಚರ್ಯಚಕಿತನಾದ.

"ಬಾತ್‌ರೂಮಿನಲ್ಲಿ ಜಾರಿಬಿದ್ದೆ" ಎಚ್ಚರಗೊಂಡವನಂತೆ ಹೇಳಿದ.

"ಅಯ್ಯೋ! ಪೆಟ್ಟೇನೂ ಬಿದ್ದಿಲ್ಲ ತಾನೇ?" ಆಪ್ಯಾಯತೆಯಿಂದ ಕೇಳಿದಳು.

"ಇಲ್ಲಾ–" ಆನಂದರಾವ್ ಹೇಳಿದ. ಅವನು ನೋಡುತ್ತಿದ್ದಂತೆಯೇ ಪೇಕನ ಗ್ಯಾಂಗಿನವರು ಗುಂಪಿನ ಮಧ್ಯೆ ಚಾಕುಗಳನ್ನು ಹಿಡಿದು ಬರುತ್ತಿದ್ದರು. ಎದುರಿಗೆ ಲಲಿತಳ ಪಕ್ಕದಲ್ಲಿ ಆನಂದರಾವ್ ಕಾಣುತ್ತಿದ್ದಂತೆಯೇ ಚಕ್ಕನೇ ಅವರು ನಿಂತುಬಿಟ್ಟರು. ಆನಂದರಾವ್ ಅವರನ್ನು ಗಮನಿಸದವನಂತೆ ಲಲಿತಳ ಪಕ್ಕಕ್ಕೆ ಮತ್ತಷ್ಟು ಸರಿದ.

"ಈ ಸ್ಪರ್ಧೆಯಲ್ಲಿ ನಾವು ತಪ್ಪದೇ ಗೆಲ್ಲುತ್ತೇವೆಂಬ ನಂಬಿಕೆ ನನಗಿದೆ ರಾಧಾ" ಪ್ರೀತಿಯಿಂದ ಹೇಳಿದ. ರಾಧಾಳ ಹೆಸರು ಕೇಳುತ್ತಿದ್ದಂತೆ ಲಲಿತ ಸಿಟ್ಟಾದಳು.

"ಮತ್ತೆ ರಾಧಾ ಅಂತಿದ್ದೀಯಲ್ಲ–" ಎಂದು ನಾಲಿಗೆ ಕಚ್ಚಿಕೊಂಡಳು ಅವನು ಹಂಡ್ರೆಡ್ ಪರ್ಸೆಂಟ್ ತನ್ನ ಗಂಡ ಚಂದ್ರಬೋಸೇ ಸರಿ. ಇಲ್ಲದಿದ್ದರೆ ಈ ಹೆಸರನ್ನು ಕನವರಿಸಿಕೊಳ್ಳುತ್ತಿರಲಿಲ್ಲ. ಆದರೂ ತನಗೆ ಪೂರ್ತಿ ನಂಬಿಕೆ ಬರದೆ ಅವನನ್ನು ಗಂಡನನ್ನಾಗಿ ಸ್ವೀಕರಿಸಲಾರಳು.

"ನಿಜ ಹೇಳ್ರೀ! ಆ ರಾಧಾ ಯಾರು?" ಎಂದು ದಬಾಯಿಸಿದಳು.

"ಇವನು ನಮ್ಮ ಸೈಂಟಿಸ್ಟ್ ಅಲ್ಲ ಬಾಸ್! ಅವನು ಇಂತಹುದೇ ರೂಪ ಹೊಂದಿರುವ ಮತ್ತೊಬ್ಬ" ಗ್ಯಾಂಗಿನಲ್ಲೊಬ್ಬ ಹೇಳಿದ. ಎಲ್ಲರೂ ಅಲ್ಲಿಂದ ಮುಂದಕ್ಕೆ ಹೊರಟು ಹೋದರು ಮತ್ತೆ ಹುಡುಕಾಟವನ್ನು ಮುಂದುವರೆಸಲು. ಆಗ ತಾನೇ ಡ್ರೆಸ್ ಬದಲಾಯಿಸಿಕೊಂಡು ಮೇಕಪ್‌ರೂಮಿನಿಂದ ಹೊರಬರುತ್ತಿದ್ದ ಸಾತ್ವಿಕರಾವ್‌ನನ್ನು ನೋಡುತ್ತಿದ್ದಂತೆ ಆ ಗ್ಯಾಂಗ್‌ನವರು ಚಕ್ಕನೆ ನಿಂತು ಸಂತೋಷದಿಂದ ಶಿಳ್ಳೆ ಹಾಕುತ್ತಾ ಸನ್ನೆ ಮಾಡಿಕೊಂಡು ಒಮ್ಮೆಗೇ ದಾಳಿ ಮಾಡಿ ಅವನನ್ನು ಬಿಗಿಯಾಗಿ ಹಿಡಿದುಕೊಂಡರು.

"ನಮಗೇ ಟೋಪಿ ಹಾಕಿ ಓಡಿಹೋಗ್ತಿಯೇನೋ ಸಾಲೇ! ನಡೀ ಹೊರಗೆ" ಅವನನ್ನು ತಳ್ಳಿಕೊಂಡು ಹೊರಬರುತ್ತಾ ಹೇಳಿದರು. ಸಾತ್ವಿಕರಾವ್ ಗಾಭರಿಯಿಂದ ಕೇಳುತ್ತಿದ್ದ ಪ್ರಶ್ನೆಗಳನ್ನು ಕೇಳಿಸಿಕೊಳ್ಳಲೇ ಇಲ್ಲ ಅವರು.

ಜಯಲಕ್ಷ್ಮಿ ಮನೆಯಲ್ಲಿ ಚಿಂತಾಕ್ರಾಂತಳಾಗಿ ಕುಳಿತಿದ್ದಳು. ಆನಂದರಾವ್ ಮನೆಗೆ ಬರದೆ ಆಗಲೇ ಮೂರು ದಿನಗಳಾಗಿತ್ತು. ಅವನು ಕಾಣದಿದ್ದುದಕ್ಕೆ ಅವಳು ಮಾನಸಿಕವಾಗಿ ಕುಗ್ಗಿಹೋಗಿದ್ದಳು. ತಾನು ತುಂಬಾ ಶೀಲವಂತಳಾಗಿ ವರ್ತಿಸಿದ್ದು ಅವನಿಗೆ ಬೇಸರ ಹುಟ್ಟಿಸಿರಬಹುದೆಂದುಕೊಂಡಳು. ತಾನು ಒಂದು ನಿರ್ಧಾರಕ್ಕೆ ಬರಲಾಗುತ್ತಿಲ್ಲ ಅವನು ದಿನಕ್ಕೊಂದು ಹುಡುಗಿಯ ಹಿಂದೆ ಸುತ್ತುತ್ತಿದ್ದರೆ ತಾನು ಹೇಗೆ ಸುಮ್ಮನಿರುವುದು? ಎಷ್ಟು ಪ್ರಯತ್ನಿಸಿದರೂ ತನ್ನ ಮನಸ್ಸು ಅದಕ್ಕೆ ಒಪ್ಪಿಗೆ ಕೊಡುವುದಿಲ್ಲ. ಒಂದು ವೇಳೆ ತಾನು ಮನಸ್ಸನ್ನೂ, ತನ್ನ ಸಿದ್ಧಾಂತವನ್ನೂ ಸಾಯಿಸಿಕೊಳ್ಳೋಣವೆಂದರೆ, ಅವನು

ತನ್ನ ಶರೀರವನ್ನು ಮುಟ್ಟುವುದೇ ತನಗೆ ಇಷ್ಟವಿಲ್ಲ. ಅವನೊಡನೆ ತನ್ನ ಶರೀರ ಕೂಡಾ ಮೈಲಿಗೆಯಾಗಿ ಬಿಡುತ್ತೆ ಎಂಬ ಭಯ. ಅದಕ್ಕೇ ಅವನನ್ನು ಬದಲಾಯಿಸಲು ಯತ್ನಿಸುತ್ತಿದ್ದಳು. ಅವನು ಬದಲಾಗುತ್ತಾನೆಂಬ ನಂಬಿಕೆ ದಿನ ದಿನಕ್ಕೂ ಕಡಿಮೆಯಾಗಿ ತನಗೆ ಈ ಬದುಕಿನ ಬಗ್ಗೆಯೇ ದಿನದಿನಕ್ಕೂ ವಿರಕ್ತಿ ಹೆಚ್ಚಾಗುತ್ತಿದೆ.

"ಆಂಟೀ! ಆನಂದರಾವ್ ಅಂಕಲ್ 'ಮೇಡ್ ಫಾರ್ ಈಚ್ ಅದರ್' ಸ್ಪರ್ಧೆಯಲ್ಲಿದ್ದುದನ್ನು ನೋಡಿದೆ" ಎನ್ನುತ್ತಾ ಒಳಗೆ ಬಂದವಳು ಪಕ್ಕದ ಮನೆಯ ಯುವತಿ ಜಯಲಕ್ಷ್ಮಿ ಸಂತೋಷದಿಂದ ಎದ್ದು ನಿಂತಳು.

"ನಿಜವಾಗಿಯೂ?" ನಂಬದವಳಂತೆ ಕೇಳಿದಳು.

"ಹೌದು ಆಂಟಿ! ನಾನೂ ಕಾಲೇಜಿನಿಂದ ಬರುತ್ತಾ ನೋಡಿದೆ. ಒಳಗೆ ಓಡಿ ಹೋದರು."

"ಆ! ಹಾಗಾ? ನಾನೀಗಲೇ ಅಲ್ಲಿಗೆ ಹೋದರೆ ಸಿಗುತ್ತಾರಾ?"

"ಓ! ಸಿಗುತ್ತಾರೆ ಅಂಟೀ! ಬೇಗ ಹೋಗಿ."

ಜಯಲಕ್ಷ್ಮಿ ಹತ್ತು ನಿಮಿಷದಲ್ಲೇ ರೆಡಿ ಆಗಿ ಆಟೋದಲ್ಲಿ ಹೊರಟಳು.

ಚಂದ್ರಬೋಸ್ ಸ್ವಲ್ಪಹೊತ್ತು ಒಂಟಿಯಾಗಿ ಕಾರಂಜಿ ಬಳಿಯೇ ಕುಳಿತುಬಿಟ್ಟ. ಲಲಿತಳ ವರ್ತನೆ ಅವನಿಗೆ ಹುಚ್ಚುಹಿಡಿಸಿತ್ತು. ತಾನೆಷ್ಟು ಸಮಾಧಾನಪಡಿಸಿದರೂ ಎಷ್ಟು ಸಾಕ್ಷಿಗಳನ್ನು ಕಳಿಸಿದರೂ ಇನ್ನೂ ತನ್ನನ್ನು ನಂಬುತ್ತಿಲ್ಲವಲ್ಲ ಅವಳು. ತನಗೆ ತುಂಬಾ ಅವಮಾನ ಮಾಡುತ್ತಿದ್ದಾಳೆ. ಈ ರೀತಿ ಸಂಸಾರ ಮಾಡುವುದಕ್ಕಿಂತಲೂ ವಿಚ್ಛೇದನ ಪಡೆಯುವುದೇ ಸರಿ. ಇದನ್ನೇ ಅವಳಿಗೆ ತಿಳಿಸಬೇಕೆಂದು ನಿರ್ಧರಿಸಿ ನಾಲ್ಕು ಹೆಜ್ಜೆ ಹಾಕುವ ವೇಳೆಗೆ ರಾಧಾ ಎದುರಿಗೆ ಬಂದಳು. ಡ್ರೆಸ್ ಬದಲಾಯಿಸಿಕೊಂಡು ಬರುತ್ತೇನೆಂದು ಹೇಳಿಹೋದ ಸಾತ್ವಿಕರಾವ್ ಎಷ್ಟು ಹೊತ್ತಾದರೂ ಹಿಂತಿರುಗಿ ಬರದಿದ್ದುದ-ರಿಂದ ಬೇಸರಪಟ್ಟುಕೊಂಡು ಅವನನ್ನು ಹುಡುಕುತ್ತಾ ಬಂದಿದ್ದಳು. ಕಾರಂಜಿ ಬಳಿ ಕುಳಿತಿದ್ದ ಚಂದ್ರಬೋಸ್‌ನನ್ನು ಕಂಡು ಅವನೇ ಸಾತ್ವಿಕರಾವ್ ಎಂದು ಕೊಂಡು ಕೋಪದಿಂದ ಅವನ ಬಳಿಗೆ ನಡೆದಳು. "ಡ್ರೆಸ್ ಬದಲಾಯಿಸಿ ಕೊಳ್ಳುವುದಕ್ಕೆ ಇಷ್ಟು ಹೊತ್ತು?" ಎಂದು ಅವನ ಡ್ರೆಸ್ ಕಡೆಗೆ ಅಸಂತೃಪ್ತಿ

ಯಿಂದ ನೋಡುತ್ತಾ ಕೇಳಿದಳು. ಚಂದ್ರಬೋಸ್‌ಗೆ ಅವಳ ಮಾತಿನ ಅರ್ಥ ವಾಗಲಿಲ್ಲ.

"ಡ್ರೆಸ್ ಬದಲಾಯಿಸುವುದಾ?" ಗಲಿಬಿಲಿಯಿಂದ ಕೇಳಿದ.

"ಹೌದ್ರೀ! ಈಗತಾನೇ ಡ್ರೆಸ್ ಬದಲಾಯಿಸಿಕೊಂಡು ಬರುತ್ತೇನೆಂದು ಹೇಳಿದಿರಿ. ಆದರೆ ಈ ಡ್ರೆಸ್ ನನಗೆ ಸ್ವಲ್ಪವೂ ಹಿಡಿಸಲಿಲ್ಲರೀ! ತುಂಬಾ ಹಳೇಮಾಡಲ್" ಅವನ ಕೋಟಿನ ಮೇಲಿದ್ದ ಧೂಳನ್ನು ಹೊಡೆಯುತ್ತಾ ಹೇಳಿದಳು.

ಬೆಳಗ್ಗೆ ನೀನೇತಾನೆ ಈ ಡ್ರೆಸ್ ಚೆನ್ನಾಗಿದೆಯೆಂದುಕೊಟ್ಟಿದ್ದು?" ಆಶ್ಚರ್ಯದಿಂದ ಕೇಳಿದ ಚಂದ್ರಬೋಸ್..

"ಏನು ನಾನು ಕೊಟ್ಟದ್ದಾ? ನಿಮಗೆ ಇಂಥ ಡ್ರೆಸ್ಸೇ ಇರಲಿಲ್ಲವಲ್ರೀ?" ಚಂದ್ರಬೋಸ್‌ಗೆ ಮತ್ತೆ ಕೋಪ ಬಂದರೂ ಸಹಿಸಿಕೊಂಡ. "ನಿನಗೊಂದು ವಿಷಯವನ್ನು ಹೇಳೋಣವೆಂದುಕೊಂಡಿದ್ದೇನೆ ಲಲಿತ!" ಸೀರಿಯಸ್ಸಾಗಿ ಹೇಳಿದ.

"ಏನು?"

"ನಾವಿಬ್ಬರೂ ವಿಚ್ಛೇದನ ಪಡೆಯುವುದು ಕ್ಷೇಮ. ಹೀಗೆ ಸದಾ ಜಗಳದ ಜೀವನ ನಡೆಸುವುದಕ್ಕಿಂತಲೂ, ಹೆಂಡತಿ ಮನೆಯಲ್ಲಿದ್ದರೂ ಒಂಟಿಯಾಗಿ ವರಾಂಡದಲ್ಲಿ ಮಲಗುವುದಕ್ಕಿಂತಲೂ ವಿಚ್ಛೇದನವೇ ವಾಸಿಯೆಂದು ತೀರ್ಮಾನಿಸಿದ್ದೇನೆ–"

ರಾಧಾಳಿಗೆ ನಗುವನ್ನು ತಡೆಯಲಾಗಲಿಲ್ಲ.

"ಯಾವ ಸಿನೆಮಾದು ಈ ಡೈಲಾಗು?" ಅವನ ಭುಜದ ಮೇಲೆ ಒರಗಿ ಕೇಳಿದಳು.

"ಎಂಥ ಸಿನೆಮಾ?" ಅರ್ಥವಾಗದವನಂತೆ ಕೇಳಿದ. ಅವನ ಶರೀರವೆಲ್ಲಾ ರೋಮಾಂಚನಗೊಂಡಿತು. ತುಂಬಾದಿನಗಳಿಂದ ವರಾಂಡದಲ್ಲಿ ಮಲಗಿದ ನಂತರ ಮೊದಲ ಸ್ಪರ್ಶ ಇದು. ಲಲಿತಳಲ್ಲಿ ಇಷ್ಟು ಬೇಗ ಇಂತಹ ಬದಲಾವಣೆ ಹೇಗೆ ಬಂತೋ ತಿಳಿಯುತ್ತಿಲ್ಲ. ತನ್ನ ಸ್ಪರ್ಶವೇ ಬೇಡವೆಂದು ಹಾರಾಡಿದ್ದವಳು ತಾನಾಗೇ ಹೀಗೆ ಬಂದು ಭುಜಕ್ಕೊರಗುತ್ತಿರುವುದು ಅವನಿಗೆ ಅರ್ಥವೇ ಆಗಲಿಲ್ಲ.

"ಇಷ್ಟುದಿನ ಹೀಗೇಕೆ ನನ್ನನ್ನು ಇನ್ಸಲ್ಟ್ ಮಾಡಿದಿ?" ಚಂದ್ರಬೋಸ್ ಕೇಳಿದ. ರಾಧಾ ಅವನ ಕೆನ್ನೆಯ ಮೇಲೆ ತನ್ನ ಬೆರಳುಗಳಿಂದ ಮೃದುವಾಗಿ ಸ್ಪರ್ಶಿಸಿದಳು.

ಚಂದ್ರಬೋಸ್ ಸಂಪೂರ್ಣ ಕರಗಿಹೋದ.

"ನೀವು ಆಗಾಗ ತುಂಬಾ ತಮಾಷೆ ಮಾಡ್ತಿರ್ತೀರಿ. ಲಲಿತ ಎಂದು ಕರೆಯುವುದು, ಯಾವುದ್ಯಾವುದೋ ಸೈನ್ಸ್ ಬಗ್ಗೆ ಮಾತನಾಡುವುದು–"

ಚಂದ್ರಬೋಸ್‌ಗೆ ಆಶ್ಚರ್ಯವಾಯಿತು. ಏನೇ ಆದರೂ ಅವಳ ಮಾತಿಗೆ ಅಷ್ಟು ಗಮನಕೊಡದೆ "ಅಯ್ ಲವ್ ಯೂ"– ಅವಳ ಕೈ ಹಿಡಿದು ಕೊಂಡು ಹೇಳಿದ.

"ಆಯ್ ಟೂ ಲವ್ ಯು" ರಾಧಾ ಪ್ರತಿಕ್ರಿಯಿಸಿದಳು.

ಇಬ್ಬರೂ ಅಲ್ಲೇ ಖಾಲಿಯಿದ್ದ ಎರಡು ಚೇರ್‌ಗಳ ಮೇಲೆ ಕುಳಿತು ಕೂಲ್‌ಡ್ರಿಂಕ್ಸ್ ಕುಡಿಯತೊಡಗಿದರು.

ಜಯಲಕ್ಷ್ಮಿ ಬೇಗಬೇಗನೆ ನಡೆಯುತ್ತಾ ಕಿಕ್ಕಿರಿದು ತುಂಬಿದ್ದ 'ಮೇಡ್ ಫಾರ್ ಈಚ್ ಅದರ್'' ಜೋಡಿಗಳನ್ನು ತಳ್ಳಿಕೊಂಡು ಆನಂದರಾವ್‌ನನ್ನು ಹುಡುಕತೊಡಗಿದಳು. ಹತ್ತು ನಿಮಿಷಗಳು ಹುಡುಕಿದ ನಂತರ ಅವನು ಕಾಣಿಸಿದ. ಅವನ ಪಕ್ಕದಲ್ಲೇ ಇದ್ದ ರಾಧಾಳನ್ನು ನೋಡುತ್ತಿದ್ದಂತೆಯೇ ಜಯಲಕ್ಷ್ಮಿಗೆ ಹೋದ ಪ್ರಾಣ ಬಂದಂತಾಯಿತು. ಓಟದಲ್ಲೇ ಅವರ ಬಳಿಗೆ ಬಂದಳು. ಆನಂದರಾವ್ ಅವಳನ್ನು ನೋಡುತ್ತಿದ್ದಂತೆಯೇ ಬೆಚ್ಚಿಬಿದ್ದ. ಆದರೆ ಕೂಡಲೇ ಚೇತರಿಸಿಕೊಂಡು ಅವಳನ್ನು ಗಮನಿಸದವನಂತೆ ನೋಟ ವನ್ನು ಬದಲಿಸಲು ಪ್ರಯತ್ನಿಸಿದ.

"ಎಲ್ಲಿ ಹೋಗಿಬಿಟ್ಟಿದ್ದಿರೀ ಇಷ್ಟು ದಿನ?" ಜಯಲಕ್ಷ್ಮಿ ಆನಂದರಾವ್ ನನ್ನು ಕೇಳಿದಳು. ಅವನ ಪ್ರಶ್ನೆಗೆ ಆನಂದರಾವ್ ಆಶ್ಚರ್ಯವನ್ನು ಪ್ರಕಟಿ ಸಿದ. ಲಲಿತಳಿಗೇನೂ ಅರ್ಥವಾಗಲಿಲ್ಲ.

"ನಿಮ್ಮನ್ನೇರ್ರೀ ಕೇಳ್ತಿರೋದು, ಮನೇಗ ಬರದೆ ಎಲ್ಲೆಲ್ಲಿ ಸುತ್ತಿದ್ದೀರಿ?" ಮತ್ತೆ ಕೇಳಿದಳು. ಆನಂದರಾವ್‌ಗೆ ಒಂದುಕಡೆ ಭಯ ಪ್ರಾರಂಭವಾಯಿತು. ನಿಜ ಹೇಳಿದರೆ ರಾಧಾ ಮತ್ತೆ ತನ್ನ ಕೆನ್ನೆಗೆ ಬಡಿಯುವುದರಲ್ಲಿ ಸಂಶಯವಿಲ್ಲ.

"ನೀವು ಯಾರನ್ನೋ ಅಂದುಕೊಂಡು ತಪ್ಪು ತಿಳಿದಿದ್ದಿ" ಅಂವ ಸ್ವರ ವನ್ನು ಸ್ವಲ್ಪ ಬದಲಿಸಿ. ಜಯಲಕ್ಷ್ಮಿಗೆ ಷಾಕ್ ತಗುಲಿದಂತಾಯಿತು. ತನ್ನ

ಗಂಡನಿಗೂ ರಾಧಳ ಗಂಡನಿಗೂ ತುಂಬಾ ಹೋಲಿಕೆಯಿದೆಯೆಂದು ತಿಳಿದಿದ್ದಳಾದರೂ, ಇವನು ತನ್ನ ಗಂಡನೇ ಎಂದು ಅವಳಿಗೆ ಅನ್ನಿಸಿತ್ತು.

"ಏನ್ರೀ ಹಾಗೆ ಮಾತಾಡ್ತಿದ್ದೀರಿ? ನಾನು ನಿಮ್ಮನ್ನ ಅಷ್ಟು ಮಾತ್ರ ಗುರುತಿಸೋಲ್ವ? ರಾಧಾ! ಇವರೆಲ್ಲಿ ಸಿಕ್ಕಿದ್ರು ನಿಂಗೆ? ಇದು ಎರಡನೆ ಸಲ ನೀನು ನನಗೆ ಸಹಾಯ ಮಾಡುತ್ತಿರುವುದು" ಅಂದಳು. ಲಲಿತ ಆಶ್ಚರ್ಯದಿಂದ ನೋಡಿದಳು. ನೀವು ನಿಜವಾಗಿಯೂ ತಪ್ಪು ತಿಳಿಯುತ್ತಿದ್ದೀರಿ. ನನ್ನ ಹೆಸರು ರಾಧಾ ಅಲ್ಲ! ಲಲಿತ. ನಾನು ನಿಮ್ಮನ್ನು ನೋಡುತ್ತಿರುವುದು ಇದೇ ಮೊದಲ ಸಲ. ಹಾಗಾಗಿ ಇವಕ್ಕೆ ಮುಂಚೆ ನಿಮಗೆಂದೂ ನಾನು ಸಹಾಯ ಮಾಡಿಲ್ಲವಲ್ಲ–" ಅವಳು ಹೇಳಿದಳು. ಅಷ್ಟರಲ್ಲಿ ಜಯಲಕ್ಷ್ಮಿ ಕೆಂಡವಾಗಿದ್ದಳು.

ಅವನು ಆನಂದರಾವ್, ಅವಳು ರಾಧಾ ಎಂದು ಚೆನ್ನಾಗಿ ತಿಳಿಯುತ್ತಿದೆ. ಒಂದು ವೇಳೆ ಅವನು ಆನಂದರಾವ್ ಆಗದಿದ್ದರೂ, ಅವಳು ಮಾತ್ರ ಖಚಿತವಾಗಿಯೂ ರಾಧಳೇ ಎಂಬುದರಲ್ಲಿ ಸಂಶಯವಿಲ್ಲ. ಅವನು ಕೂಡಾ ತನ್ನನ್ನು ಗುರುತಿಸದಂತೆ ನಟಿಸುತ್ತಿದ್ದಾನೆ. ಅವಳಿಗೆ ತುಂಬಾ ಅವಮಾನವಾದಂತಾಯಿತು. ಹಠಾತ್ತನೇ ಅವಳಿಗೆ ಒಂದು ಆಲೋಚನೆ ಬರುತ್ತಿದ್ದಂತೆಯೇ ಅವಳ ಎದೆ ಝಲ್ಲೆಂದಿತು.

ಮೊದಲು ರಾಧಾ–ಆನಂದರಾವ್ ಪ್ರೀತಿಸಿಕೊಂಡಿದ್ದರು. ಆದರೆ ನಂತರ ತಾನೂ ಆನಂದರಾವ್ ಪ್ರೀತಿಸಿಕೊಂಡಿದ್ದೆವು. ಈಗ ನೋಡಿದರೆ ಮತ್ತೆ ಆನಂದರಾವ್ ರಾಧಳ ಕಡೆಗೇ ವಾಲುತ್ತಿದ್ದಾನೆ. ಆಗ ರಾಧಳೇ ನಾಟಕವಾಡಿ ತಮ್ಮಿಬ್ಬರಿಗೂ ಮದುವೆ ಮಾಡಿಸಿದ್ದಳು. ಈಗ ಅವಳೇ...!

ತನ್ನನ್ನು ದೂರ ತಳ್ಳಲು ಇಂತಹ ನಾಟಕವಾಡುತ್ತಿದ್ದಾರೇನೋ ಇಬ್ಬರೂ ಒಳಗೊಳಗೇ ವ್ಯವಹಾರ ಮಾಡಿಕೊಂಡು ಈಗಲೇ 'ಮೇಡ್ ಫಾರ್ ಈಚ್ ಅದರ್ ಸ್ಪರ್ಧೆ'ಗೆ ಗಂಡ ಹೆಂಡತಿಯರಂತೆ ಬಂದಿದ್ದಾರೆ.

ಜಯಲಕ್ಷ್ಮಿಯ ಕಣ್ಣಲ್ಲಿ ನೀರು ಸುರಿಯಲು ಆರಂಭವಾಯಿತು.

"ನನ್ನನ್ನು ದೂರಮಾಡಲೇ ನೀವಿಬ್ಬರೂ ಹೀಗೆ ನಾಟಕವಾಡುತ್ತಿದ್ದೀರೆಂದು ನನಗೆ ಗೊತ್ತು. ಆದರೆ ಇಷ್ಟು ದಿನ ನನ್ನೊಡನೆ ಸಂಸಾರ ಮಾಡಿದ ನಂತರವೂ ನನ್ನ ಮನಸ್ಸನ್ನು ಅರ್ಥಮಾಡಿಕೊಳ್ಳದೆ ಹೋದೆಯಲ್ಲ ಆನಂದ–ರಾವ್! ನಾನೀಗಲೂ ನಿಮ್ಮ ದಾರಿಗೆ ಅಡ್ಡಿ ಬರುವುದಿಲ್ಲ. ನೀವಿಬ್ಬರೇ ಸುಖವಾಗಿರಿ! ನಿಮ್ಮಿಂದ ಶಾಶ್ವತವಾಗಿ ದೂರಹೋಗಿ ಬಿಡುತ್ತೇನೆ," ಎಂದು ಅಲ್ಲಿಂದ ಹೊರಟಳು ಕಣ್ಣೀರೊರೆಸಿಕೊಳ್ಳುತ್ತಾ.

ಆನಂದರಾವ್‌ಗೆ ಭಯವಾಯಿತು–ಅವಳು ಎಲ್ಲಿ ಆತ್ಮಹತ್ಯೆ ಮಾಡಿ–ಕೊಳ್ಳುತ್ತಾಳೋ ಎಂದು.

'ಜಯಾ' ಎಂದು ಕೂಗಲು ಹೋದ. ಆಗಲೇ ವೇಗವಾಗಿ ಬಂದ ಷೇಕನ ಕಾರು ಅವನ ಮುಂದೆ ನಿಂತಿತು. ಷೇಕ್ ಕನ್ನಡಿಯನ್ನು ಮೇಲಕ್ಕೆತ್ತಿ ತನ್ನೆ–ಡೆಗೆ ನೋಡುತ್ತಿದ್ದಾನೆ.

ಆನಂದರಾವ್ ಥಕ್ಕನೇ ರಾಧಳ ಭುಜದ ಮೇಲೆ ಕೈಹಾಕಿ ಅಲ್ಲಿಂದ ಮುಂದಕ್ಕೆ ನಡೆದ. ಷೇಕ್ ಸ್ವಲ್ಪ ಹೊತ್ತು ಅನುಮಾನದಿಂದ ನೋಡಿದ. ಆದರೆ ಅಷ್ಟರಲ್ಲಿ ಹಿಂದಿನಿಂದ ಪೋಲೀಸ್ ಜೀಪ್ ಬಂದದ್ದರಿಂದ ಅವನು ಹೊರಟು ಹೋದ.

ಸಾತ್ವಿಕರಾವ್‌ನನ್ನು ಬಲವಂತದಿಂದ ಎಳೆದುಕೊಂಡು ಹೋಗುತ್ತಿದ್ದ ಷೇಕ್‌ನ ಗ್ಯಾಂಗ್‌ಗೆ ಎದುರಾಗಿ ಅಂಗಡಿಯವರೆಲ್ಲಾ ಚಾಕು–ಚೂರಿಗಳೊಡನೆ ಬಂದರು. ಅದನ್ನು ಕಂಡು ಸಾತ್ವಿಕರಾವ್‌ನನ್ನು ಬಿಟ್ಟು ಅವರೊಡನೆ ಜಗಳ–ಕಾದಾಟಕ್ಕೆ ಪ್ರಾರಂಭಿಸಿದರು. ಅದನ್ನು ಕಂಡ ಜನರೆಲ್ಲಾ ಚೆಲ್ಲಾಪಿಲ್ಲಿಯಾದರು.

ಅದೇ ಸಮಯವನ್ನು ಸದುಪಯೋಗಪಡಿಸಿಕೊಂಡ ಸಾತ್ವಿಕರಾವ್ ಅವರಿಂದ ತಪ್ಪಿಸಿಕೊಂಡು ರಾಧಳ ಬಳಿಗೆ ಓಡೋಡಿ ಬಂದ. ರಾಧಾ ತನ್ನನ್ನೇ ಹೋಲುತ್ತಿದ್ದ ಮತ್ತೊಬ್ಬ ವ್ಯಕ್ತಿಯೊಡನೆ ಸಂತೋಷದಿಂದ ಮಾತನಾಡು–ತ್ತಿರುವುದನ್ನು ಕಂಡ. ಅವನನ್ನು ನೋಡಿ ರಾಧಳೊಟ್ಟಿಗೆ ಚಂದ್ರಬೋಸ್ ಕೂಡಾ ಆಶ್ಚರ್ಯಪಟ್ಟರು.

"ಯಾರು ನೀನು?" ಕೋಪದಿಂದ ಸಾತ್ವಿಕರಾವ್ ಕೇಳಿದ.

"ನೀನ್ಯಾರು?" ಚಂದ್ರಬೋಸ್ ಕೂಡಾ ಹಾಗೆಯೇ ಕೇಳಿದ.

"ರಾಧಾ! ಅವನೊಡನೆ ನಿನ್ನದೇನು ಮಾತು?"ಸಾತ್ವಿಕರಾವ್ ಕಿರುಚಿದ.

"ನೀವು....ನೀವು" ರಾಧಾ ಅನುಮಾನದಿಂದ ಕೇಳಿದಳು.

"ಇವಳು ರಾಧಾ ಅಲ್ಲ! ನನ್ನ ಹೆಂಡತಿ ಲಲಿತ"ಚಂದ್ರಬೋಸ್ ಹೇಳಿದ.

"ಷಟಪ್! ಇವಳು ನನ್ನ ಹೆಂಡತಿ ರಾಧಾ" ಸಾತ್ವಿಕರಾವ್ ಹೇಳಿದ.

ಇಬ್ಬರೂ ಕಾಲರ್‌ಗಳನ್ನು ಹಿಡಿದುಕೊಂಡರು.

"ಮರ್ಯಾದೆಯಾಗಿ ಇಲ್ಲಿಂದ ಹೋಗ್ತೀಯೋ ಇಲ್ವೋ?" ಸಾತ್ವಿಕರಾವ್ ಹೇಳಿದ.

"ನಾನೂ ಅದನ್ನೇ ಕೇಳುತ್ತಿದ್ದೇನೆ" ಚಂದ್ರಬೋಸ್ ಹೇಳಿದ.

ಅದೇ ಸಮಯಕ್ಕೆ ಸರಿಯಾಗಿ ಷೇಕ್ ತನ್ನ ಕಾರಿನಲ್ಲಿ ಅಲ್ಲಿಗೆ ಬಂದು, ಪಿಸ್ತೂಲು ತೆಗೆದುಕೊಂಡು ಕಾರಿನಿಂದಿಳಿದ. ಇಬ್ಬರೂ ಒಂದೇ ರೀತಿ ಕಾಣು-ತ್ತಿರುವುದನ್ನು ಕಂಡು ಬೆರಗಾಗಿ ನಿಂತುಬಿಟ್ಟ.

"ನಿಜ ಹೇಳಿ! ನಿಮ್ಮಲ್ಲಿ ಚಂದ್ರಬೋಸ್ ಯಾರು?" ಕರ್ಕಶವಾಗಿ ಕೇಳಿದ

"ನಾನೇ! ಯಾಕೆ? ನನ್ನಿಂದ ನಿನಗೇನಾಗಬೇಕು?"

ಅಷ್ಟರಲ್ಲಿ ಅಲ್ಲಿಗೆ ಪೋಲೀಸರು ಬಂದಿದ್ದರಿಂದ ಷೇಕ್ ತನ್ನ ಗ್ಯಾಂಗಿ ನೊಡನೆ ಓಡಿದ. ಆಗ ಅಲ್ಲಿಗೆ ಬಂದ ಆನಂದರಾವ್ ಲಲಿತರನ್ನು ಕಂಡು ಸಾತ್ವಿಕರಾವ್ ಚಂದ್ರಬೋಸ್ ಆಶ್ಚರ್ಯಪಟ್ಟರು.

"ರಾಧಾ? ಯಾರಿದು?" ಕೋಪದಿಂದಲೂ ಆಶ್ಚರ್ಯದಿಂದಲೂ ಕೇಳಿದ ಸಾತ್ವಿಕರಾವ್. ಲಲಿತ ಬೆಚ್ಚಿಬಿದ್ದಳು. ಅವರಿಬ್ಬರು ಕೂಡಾ ತನ್ನ ಗಂಡ ನಂತೆಯೇ ಕಂಡದ್ದರಿಂದ ಬೆರಗಾಗಿ ನೋಡಿದಳು. ಎಲ್ಲಾ ಕನ್-ಫ್ಯೂಷನ್!

"ನನ್ನ ಹೆಸರು ರಾಧಾ ಅಲ್ಲ, ನಿನ್ಯಾರು?"

ಚಂದ್ರಬೋಸ್ ಬೆಚ್ಚಿ ಬಿದ್ದ.

"ಹಾಗೆ ಹೇಳು! ಇವಳು ನನ್ನ ಹೆಂಡತಿ ಲಲಿತ" ಚಂದ್ರಬೋಸ್ ಹೇಳಿದ.

"ಅಲ್ಲ. ನನ್ನ ಹೆಂಡತಿ ರಾಧಾ"

"ಅಲ್ಲ. ನನ್ನ ಹೆಂಡತಿ"

ಇಬ್ಬರೂ ಮತ್ತೆ ಒಬ್ಬರ ಕಾಲರನ್ನು ಒಬ್ಬರು ಹಿಡಿದು ಎಳೆದಾಡ ತೊಡಗಿದರು. ಅವರಿಬ್ಬರಲ್ಲೇ ತನ್ನ ಗಂಡ ಇದ್ದಾನೆಂದು ಅರ್ಥಮಾಡಿಕೊಂಡ ಲಲಿತ ಚಕ್ಕನೇ ಆನಂದರಾವ್‌ನ ಕಾಲರ್ ಹಿಡಿದಳು.

"ನಿಜ ಹೇಳು! ನೀನ್ಯಾರು" ತೀಕ್ಷ್ಣವಾಗಿ ಕೇಳಿದಳು. "ನಮ್ಮವರ ಜಾಗ ದಲ್ಲಿ ಡೂಪ್ಲಿಕೇಟಾಗಿ ನಾಟಕ ಆಡುತ್ತಿರುವವನಲ್ಲವೇ?"

ಆನಂದರಾವ್‌ಗೆ ಇನ್ನು ಸಹಿಸಲಾಗಲಿಲ್ಲ. ಒಮ್ಮೆಗೇ ಅವಳ ಕೈಯಿಂದ ಬಿಡಿಸಿಕೊಂಡು ಓಡಲು ಪ್ರಾರಂಭಿಸಿದ. ಒಂದು ಮೂಲೆಯಲ್ಲಿ ನಿಂತಿದ್ದ ರಾಧಾಳ ಬಳಿ ನಿಂತುಬಿಟ್ಟ.

ಆಗ ಅವನಿಗೆ ಚೆನ್ನಾಗಿ ಅರ್ಥವಾಯಿತು–ರಾಧಳಂತಹ ಸ್ತ್ರೀ ಮತ್ತೊಬ್ಬ

ಳಿದ್ದಾಳೆಂದೂ ಅವಳ ಹೆಸರು ಲಲಿತಳೆಂದೂ ಅವಳ ಗಂಡ ಕೂಡಾ ಥೇಟ್ ತನ್ನಂತೆಯೇ ಇದ್ದಾನೆಂದೂ.

"ರಾಧ! ಹಾಗೆಯೇ ಆ ಗಿಡಗಳ ಒಳಿ ಕುಳಿತುಕೊಳ್ಳೋಣ ಬಾ," ಎಂದು ಕರೆದ. ಅವರು ನಾಲ್ಕು ಹೆಜ್ಜೆ ಹಾಕಿದ್ದರೋ ಇಲ್ಲವೋ ಷೇಕ್‌ನ ಗ್ಯಾಂಗ್ ಮತ್ತೆ ಓಡೋಡಿ ಬಂತು ಅವರಿಗೆ ಎದುರಾಗಿ ವೆಂಕಟೇಶ್ವರ್, ತ್ರಿಬ್ಬಲ್ ಜೀರೋ, ಒಫೀರ್ ಬರುತ್ತಿದ್ದುದನ್ನು ಕಂಡ ಷೇಕ್ ವೆಂಕಟೇಶ್ವರನನ್ನು ಕಾರಿನಲ್ಲಿ ಹಾಕಿಕೊಂಡು ವೇಗವಾಗಿ ಕಾರಿನಲ್ಲಿ ಹೊರಟು ಹೋದ.

ಅದೇ ವೇಳೆಗೆ ಸರಿಯಾಗಿ ಜಡ್ಜ್‌ಗಳು ಸ್ಟೇಜಿನ ಮೇಲೆ ಬಂದು ಫಲಿತಾಂಶವನ್ನು ಪ್ರಕಟಿಸಿದರು.

"ಎಲ್ಲಾ ಜೋಡಿಗಳಿಗೂ ಹಾಕಿರುವ ಅಂಶಗಳನ್ನು ಪರಿಶೀಲಿಸಿದ ನಂತರ ಚಂದ್ರಬೋಸ್-ಲಲಿತರ ಜೋಡಿ 'ಮೇಡ್ ಫಾರ್... ಈಚ್ ಅದರ್' ಸ್ಪರ್ಧೆಯಲ್ಲಿ ಜಯಗಳಿಸಿದ್ದಾರೆಂದು ತಿಳಿಸಲು ಸಂತೋಷಿಸುತ್ತೇವೆ."

ಸರಸ್ವತಿ–ಬ್ರಹ್ಮ ಆಶ್ಚರ್ಯಪಟ್ಟರು.

"ಮೇಡ್‌ಫಾರ್‌ಈಚ್‌ಅದರ್" ಅಂದರೆ ನಮ್ಮ ದೃಷ್ಟಿಯಲ್ಲಿ ಇಬ್ಬರೂ ಒಬ್ಬರ ಬಗ್ಗೆ ಮತ್ತೊಬ್ಬರು ಪ್ರೀತಿ ಹೊಂದಿರಬೇಕೇ ವಿನಹ ಹಾಗೆ ನಟಿಸುವುದಲ್ಲ. ನಿಜವಾದ ಜೋಡಿ ಹೇಗಿರುತ್ತಾರೋ ಅಂತಹವರನ್ನೇ ಹುಡುಕಿದೆವು ನಾವು. ಆ ಸುಗುಣಗಳೆಲ್ಲಾ ಲಲಿತ–ಚಂದ್ರಬೋಸರಲ್ಲಿ ನಮಗೆ ಕಂಡಿತು. ಏಕೆಂದರೆ ಅವರು ಈ ಅಂಗಳದಲ್ಲಿ ಕಾಲಿಟ್ಟ ಕೂಡಲೇ ಪ್ರತಿಯೊಂದು ವಿಷಯಕ್ಕೂ ಜಗಳವಾಡುತ್ತಿದ್ದರು. ಅಷ್ಟೇ ಅಲ್ಲ–ಜಗಳವಾದ ಮರುನಿಮಿಷವೇ ಅದನ್ನು ಮರೆತು ಸಂತೋಷದಿಂದ ನಗುತ್ತಾ ಮಾತನಾಡಿಕೊಳ್ಳುತ್ತಿದ್ದರು."

ಚಪ್ಪಾಳೆಗಳ ಸುರಿಮಳೆಯಾಯಿತು

ಲಲಿತ–ಚಂದ್ರಬೋಸರು ವೇದಿಕೆಯ ಮೇಲೆ ಬಂದು ಎಲ್ಲರಿಗೂ ನಮಸ್ಕರಿಸಿದರು. ಶಚೀದೇವಿಯ ಮುಖ ಬಾಡಿಹೋಯಿತು.

"ಇದಕ್ಕೆಲ್ಲಾ ನೀವೇ ಕಾರಣ" ಪಕ್ಕದಲ್ಲಿದ್ದ ಇಂದ್ರನಿಗೆ ಹೇಳಿದಳು.

"ನಾನೇನು ಮಾಡಿದೆನೇ?" ಗಾಬರಿಯಾಗಿ ಕೇಳಿದ ಇಂದ್ರ.

"ಹೌದು ಮತ್ತೆ! ಮೊದಲೇ ನೀವು ನನಗೆ ಹೇಳಬೇಕಾಗಿತ್ತು. ಈರ್ಷೆ ಎಂಬುದು ಯಾರಿಗಾದರೂ ನಷ್ಟವನ್ನುಂಟು ಮಾಡುತ್ತದೆಂದು" ಮೂತಿ ಊದಿಸಿಕೊಂಡು ಹೇಳಿದಳು.

"ನನಗೇನು ಅರ್ಥವಾಗುತ್ತಿಲ್ಲ. ಈಗೇನು ನಷ್ಟವಾಗಿದೆಯೆಂದು

ಅಳ್ತಿದ್ದಿ? ಚಂದ್ರಬೋಸ್–ಲಲಿತ ನಾವು ಗೆಲ್ಲಿಸಿದ ಜೋಡಿತಾನೇ?" ಪೆದ್ದು ಪೆದ್ದಾಗಿ ಹೇಳಿದ ಇಂದ್ರ.

ಶಚೀದೇವಿಗಿನ್ನು ಕೋಪ ತಡೆಯಲಾಗಲಿಲ್ಲ. ಅವನ ಕೆನ್ನೆ ಛಳ್ಳೆಂದಿತು. ಮರುಕ್ಷಣವೇ ಅವಳು ಮಾಯವಾದಳು. ಇಂದ್ರ ಸಂತೋಷದಿಂದ ಉಬ್ಬಿ ಹೋದ.

"ಸದ್ಯ! ಇಷ್ಟುದಿನಕ್ಕಾದರೂ ಅವಳು ತವರಿಗೆ ಹೋದಳಲ್ಲಾ! ಇನ್ನು ಮಜವೇ ಮಜಾ" ಕೆನ್ನೆ ಸವರಿಕೊಳ್ಳುತ್ತಾ ಹೇಳಿದ.

ಇದನ್ನೆಲ್ಲಾ ಗಮನಿಸುತ್ತಿದ್ದ ಬ್ರಹ್ಮ, ಸರಸ್ವತಿಯನ್ನು ಕಂಡು ಕಿರುನಗೆ ಬೀರಿದ.

"ನೋಡಿದೆಯಾ ತಾನೊಂದು ಬಗೆದರೆ ದೈವವೊಂದು ಬಗೆಯುತ್ತದೆಂದು- ನೀನೇನೋ ಸಾತ್ವಿಕರಾವ್–ರಾಧರನ್ನು ಸ್ಪರ್ಧೆಗೆ ತಯಾರು ಮಾಡಿದರೆ ಲಲಿತ ಚಂದ್ರಬೋಸರು ಗೆದ್ದರು," ಎಂದ.

ಸರಸ್ವತಿ ನಾಚಿಕೆಯಿಂದ ತಲೆತಗ್ಗಿಸಿಕೊಂಡಳು.

"ಹೌದು! ನನಗೂ ಗರ್ವಭಂಗವಾಗಿದೆ," ಪಶ್ಚಾತ್ತಾಪದಿಂದ ಹೇಳಿದಳು.

"ನಿನ್ನ ಈ ಗರ್ವದಿಂದ, ಶಚೀದೇವಿಯ ಈರ್ಷೆಯಿಂದ ಅದೆಷ್ಟು ತೊಂದರೆಗಳು ನಡೆದು ಹೋಗಿವೆಯೋ? ಎಷ್ಟುಜನ ಕಷ್ಟಗಳನ್ನು ಎದುರಿಸುತ್ತಾರೋ ನೋಡು! ಅದಕ್ಕೆ ಹೆಂಗಸರಿಗೆ ದೊಡ್ಡಸ್ತಿಕೆ ಕೊಡಬಾರದು ಅಂತ ಹೇಳೋದು," ಸರಸ್ವತಿ ಆಕ್ರೋಶದಿಂದ ಬ್ರಹ್ಮನೆಡೆಗೆ ನೋಡಿ ಮಾಯವಾದಳು.

"ಮತ್ತೆ ಪ್ರಾರಂಭವಾಯಿತು ಇವರ ಸಿಟ್ಟು–ರೋಷಕ್ಕೆ" ಎಂದುಕೊಂಡ ಬ್ರಹ್ಮ ಅವಳ ಹಿಂದೆಯೇ ಮಾಯವಾದ.

ಆನಂದರಾವ್ ಸುಸ್ತಾಗಿ ಮನೆ ಸೇರಿದ. ಮನೆಯೊಳಗೆ ಕಾಲಿಡುತ್ತಿದ್ದಂತೆಯೇ ಪಕ್ಕದ ಮನೆಯವಳು ಓಡೋಡಿ ಬಂದಳು.

"ಅಂಕಲ್! ಜಯಲಕ್ಷ್ಮಿ ಆಂಟಿ ಆತ್ಮಹತ್ಯೆ ಮಾಡಿಕೊಳ್ಳಲು ಪ್ರಯತ್ನಿಸಿದಳು ಅಂಕಲ್– ಸೀರಿಯಸ್ಸಾಗಿ, ಆಸ್ಪತ್ರೆಗೆ ತಗೊಂಡ್ಹೋಗಿದಾರೆ."

ಆನಂದರಾವ್‌ಗೆ ಷಾಕ್ ಆಯಿತು. ಅವನ ಕಣ್ಣಲ್ಲಿ ಅಪ್ರಯತ್ನವಾಗಿಯೇ ನೀರು ಬಂತು. ಕೂಡಲೇ ಆಸ್ಪತ್ರೆಯೆಡೆಗೆ ಓಡಿದ. ತಾನು ತುಂಬಾ ಪಾಪ ಮಾಡಿದ್ದಾನೆ. ಆದರೆ ಅದಕ್ಕೆ ತನ್ನ ಜಯಲಕ್ಷ್ಮಿ ಬಲಿಯಾಗಕೂಡದು.

ಜಯಲಕ್ಷ್ಮಿ ಹಾಸಿಗೆಯ ಮೇಲೆ ಕಣ್ಮುಚ್ಚಿ ಮಲಗಿದ್ದಾಳೆ. ಅವಳನ್ನು ನೋಡುತ್ತಿದ್ದಂತೆ ಅವನ ಮನಸ್ಸೆಲ್ಲಾ ಪಶ್ಚಾತ್ತಾಪದಿಂದ ತುಂಬಿಹೋಗಿತ್ತು.

"ಜಯಾ! ನಾನೀಗ ಪೂರ್ತಿ ಬದಲಾಗಿದ್ದೇನೆ ಜಯಾ! ನಿಜ ಹೇಳ್ತಿದೇನಿ. ಇನ್ನು ಜನ್ಮದಲ್ಲಿ ಮತ್ತೊಬ್ಬ ಹುಡುಗಿಯ ಮುಖ ನೋಡುವುದಿಲ್ಲ. ನಿನ್ನನ್ನು ಹೂವಿನ ಮೇಲಿರಿಸಿ ನೋಡಿಕೊಳ್ಳುತ್ತೇನೆ," ಕಣ್ಣೀರನ್ನು ಒರೆಸಿಕೊಂಡು ಹೇಳಿದ.

ಜಯಲಕ್ಷ್ಮಿ ನಿಧಾನವಾಗಿ ಕಣ್ತೆರೆದು ಅವನೆಡೆಗೆ ನೋಡಿದಳು ಸಂತೋಷದಿಂದ.

"ನಿಜವಾಗಿಯೂ?" ನಂಬದವಳಂತೆ ಕೇಳಿದಳು.

"ನಿಜ ಜಯಾ! ಪ್ರಾಮಿಸ್– ನನ್ನ ಮೇಲಾಣೆ, ನಿನ್ನ ಮೇಲಾಣೆ– ಇದುವರೆಗೂ ಕಂಡ ನರ್ಸ್ ಮೇಲಾಣೆ—"

"ಹಾಗಾದರೆ ನಾನು ಬದುಕಬೇಕೆಂದೆನಿಸಿದೇರಿ ಈಗ!– ಉತ್ಸಾಹದಿಂದ ಹೇಳಿದಳು.

"ಡಾಕ್ಟರ್ ಹೇಳಿದಾರೆ ಜಯ. ನಿಂಗೇನೂ ಆಗೋಲ್ಲ ಅಂತ"

ಜಯಲಕ್ಷ್ಮಿ ಸಂತೃಪ್ತಿಯಿಂದ ಕಣ್ಣು ಮುಚ್ಚಿದಳು. ಆ ಮಾರನೆ ದಿನದ ವರೆಗೂ ಅಲ್ಲೇ ಕುಳಿತು ಅವಳ ಶುಶ್ರೂಷೆ ಮಾಡಿದ.

"ಡಾಕ್ಟರ್! ನನ್ನ ಹೆಂಡತಿಗೆ ಡಿಸ್ಚಾರ್ಜ್ ಮಾಡಿ ಅವಳನ್ನು ಎಚ್ಚರಿಕೆ

ಯಿಂದ ನೋಡಿಕೊಳ್ಳುತ್ತೇನೆ. ನೋಡಲು ಬಂದ ಡಾಕ್ಟರೊಡನೆ ಹೇಳಿದ. ಡಾಕ್ಟರ್ ನಗುತ್ತಾ ಒಪ್ಪಿಗೆ ನೀಡಿದರು.

ಜಯಳೊಡನೆ ಹೊರಟು ಇನ್ನೇನು ಆಸ್ಪತ್ರೆಯ ಗೇಟಿನ ಬಳಿ ಬರಬೇಕು ಅಂದಾಗ ಯಾರನ್ನೋ ಕಂಡು ಹಠಾತ್ತನೆ ನಿಂತ ಆನಂದರಾವ್ ಜಯಲಕ್ಷ್ಮಿಗೆ ಹೇಳಿದ.

"ಒಂದು ನಿಮಿಷ ಇಲ್ಲೇ ನಿಂತಿರು ಜಯ! ಬಂದ್ಬಿಟ್ಟೆ" ಎನ್ನುತ್ತಾ ಕಾರಿಡಾರಿನಲ್ಲಿ ಓಡಿದ.

ಐದು ನಿಮಿಷವಾದರೂ ಅವನು ಹೊರಬರದಿದ್ದುದರಿಂದ ತಾನೇ ನಿಧಾನವಾಗಿ ಅತ್ತ ಕಡೆ ಹೋದಳು.

ಕಾರಿಡಾರಿನ ಒಂದು ಮೂಲೆಯಲ್ಲಿ ನರ್ಸೊಬ್ಬಳನ್ನು ಚುಂಬಿಸುತ್ತಾ ಇದ್ದ ಆನಂದರಾವ್ ಕಂಡ.

ಜಯಲಕ್ಷ್ಮಿ ನಿಶ್ಚೇಷ್ಟಿತಳಾಗಿ ನಿಂತುಬಿಟ್ಟಳು. ಆನಂದರಾವ್ ಕಂಗಾಲಾಗಿ ನರ್ಸನ್ನು ಬಿಟ್ಟು ಜಯಲಕ್ಷ್ಮಿಯೊಡನೆ ಹೊರಬಂದು. ಆಟೋ ಹತ್ತಿದರು ಜಯಲಕ್ಷ್ಮಿಯ ಕಣ್ಣಲ್ಲಿ ಒಂದೇ ಸಮನೆ ಕಣ್ಣೀರು ಸುರಿಸುತ್ತಿದ್ದಳು.

"ಮತ್ತೇನೂ ಇಲ್ಲ ಜಯಾ! ಪಾಪ ಆ ನರ್ಸ್‌ನ ಕಣ್ಣಲ್ಲಿ ದೂಳು ಬಿದ್ದಿತ್ತಂತೆ, ಅದನ್ನ ಊದ್ತಿದ್ದೆ. ಅಷ್ಟರಲ್ಲಿ ನೀನು ಬಂದು ಬಿಟ್ಟೆ–ಹ್ಹಿಹ್ಹಿ!" ದೀನನಾಗಿ ಹೇಳಿದ. ಜಯಲಕ್ಷ್ಮಿ ಮಾತನಾಡಲಿಲ್ಲ. ಮೌನವಾಗಿ ತನ್ನ ಕೈಯ್ಯನ್ನು ರಸ್ತೆಯ ಪಕ್ಕದಲ್ಲಿದ್ದ ಮೈದಾನದ ಕಡೆಗೆ ತೋರಿಸಿ ಅತ್ತ ನೋಡು ವಂತೆ ಸನ್ನೆಮಾಡಿದಳು. ಆನಂದರಾವ್ ಅತ್ತ ನೋಡಿದ ಆತುರದಿಂದ–ಕುತೂಹಲದಿಂದ. ನಾಲ್ವರು ಹುಡುಗರು ಒಂದು ನಾಯಿಮರಿಯ ಬಾಲವನ್ನು ನೆಟ್ಟಗೆ ಮಾಡಲು ಅದಕ್ಕೆ ಒಂದು ಡಬ್ಬಿ ಕಟ್ಟುತ್ತಿದ್ದರು.

## ಸಾಹಿತ್ಯ ಪ್ರಕಾಶನದ ಪ್ರಕಟನೆಗಳು

### ಯಂಡಮೂರಿ ವೀರೇಂದ್ರನಾಥ (ಅನು: ಸರಿತಾ ಜ್ಞಾನಾನಂದ)

| | |
|---|---|
| ಕರಿಗಂಬಳಿಯಲ್ಲಿ ಮಿಡಿನಾಗ | 15-00 |
| ಅಷ್ಟಾವಕ್ರ-I | 20-00 |
| ಅಷ್ಟಾವಕ್ರ-II | 20-00 |
| ಮರಣ ಮೃದಂಗ | 40-00 |
| ಸ್ವರ ಬೇತಾಳ | 21-00 |
| ರಾಕ್ಷಸ | 36-00 |
| ಬೇಡ ಕೃಷ್ಣ ರಂಗಿನಾಟ (ಅನು: ರಾಜಾ ಚೆಂಡೂರ) | 20-00 |

### ಕೆ. ಟಿ. ಗಟ್ಟಿ

| | |
|---|---|
| ಅಭಿಚಾರ | 20-00 |
| ಸುಖಾಂತ | 12-00 |
| ಕರ್ಮಣ್ಯೇವಾಧಿಕಾರಸ್ತೇ | 14-00 |
| ಅಬ್ರಾಹ್ಮಣ | 26-00 |

### ವಿ. ಸ. ಖಾಂಡೇಕರ್ (ಅನು: ಸುಶೀಲಾ ಕೊಪ್ಪರ್)

| | |
|---|---|
| ಅಶ್ರು | 32-00 |

### ಸುದರ್ಶನ ದೇಸಾಯಿ

| | |
|---|---|
| ಎಂಟೆದೆ ಬಂಟ | 26-00 |
| ವಿಚಿತ್ರ ಅಪರಾಧಿ | 10-00 |

### ಶಂ. ಬಾ. ಜೋಶಿ

| | |
|---|---|
| ಮಹಾರಾಷ್ಟ್ರದ ಮೂಲ | 8-00 |
| ಕಣ್ಮರೆಯಾದ ಕನ್ನಡ | 12-00 |
| ಸಾಂಸ್ಕೃತಿಕ ಮೂಲದಲ್ಲಿನ ತಾತ್ತ್ವಿಕ ಚಿಂತನಗಳು | 6-00 |

### ಜನಪ್ರಿಯ ಕೃತಿ

| | |
|---|---|
| ಸುಂದರ ರಾಮಾಯಣ | 24-00 |